ಭಾನುವಾರ, ಜೂನ್ 29, 2025 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕಾಮಗಾರಿ ಶೀಘ್ರ ಪೂರ್ಣ

ಅಯೋಧ್ಯೆಯ ರಾಮ ಮಂದಿರದ ಕಾಮಗಾರಿಯು ಜುಲೈ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ

ಮಂದಾನ ಶತಕ ಸೊಬಗು

ನಾಟಿಂಗ್‌ಹ್ಯಾಮ್‌ನಲ್ಲಿ ಶನಿವಾರ ನಡೆದ ಮೊದಲ ಟಿ20 ಮಹಿಳಾ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಸ್ಮೃತಿ ಮಂದಾನ (112 ರನ್) ಅವರು ಇಂಗ್ಲೆಂಡ್ ಎದುರು ಶತಕ ದಾಖಲಿಸಿದರು

YESHWANTHPUR

RERA No: PRM/KA/RERA/1251/309/PR/110625/007817, available at website: http://rera.karnataka.gov.in.

Lavish 3 & 4 BHK residences starting at ₹3.33 Cr*

Excellent Connectivity | Exquisite Sky Level Amenities | Perennial Green Views | Infinity Pool

SCAN TO KNOW MORE

CREDAI BENGALURU

8506044773 / 8506044677

Godrej | PROPERTIES

The Project is Registered as "GODREJ TIARA" with RERA No: PRM/KA/RERA/1251/309/PR/110625/007817, available at website: http://rera.karnataka.gov.in.Site Address: GODREJ TIARA, MUNICIPAL NO : 8/9(OLD NO. 4,5,6,7,8,9 & 12), CTS NO.473 & 474, TUMKUR MAIN ROAD, CTS NO.473 & 474, TUMKUR MAIN ROAD, WARD NO.38, PID NO.11-50-8/9, BANGALORE, BENGALURU NORTH, BENGALURU URBAN, KARNATAKA - 560022. The images contain artist's impression for representative purpose only. The Sale is subject to terms of Application Form and Agreement for Sale. All specifications of the unit shall be as per the final agreement between the Parties. Recipients are advised to apprise themselves of the necessary and relevant information of the project prior to making any purchase decisions. The official website of Godrej Properties Ltd. is www.godrejproperties.com. Please do not rely on the information provided on any other website. *T&C apply

ಪ್ರತಿಭಟನೆ
ಯುದ್ಧ ಮತ್ತು ಸೇನಾ ಸಂಘರ್ಷ ವಿರೋಧಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಯಿತು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಾಣಿ ರಕ್ಷಣೆ
ಕಳ್ಳಸಾಗಣೆಯಾಗುತ್ತಿದ್ದ ಅಳಿಲು ಕೋತಿಯನ್ನು ತಿರುಚ್ಚಿರಪಳ್ಳಿ ವಿಮಾನ ನಿಲ್ದಾಣದಲ್ಲಿ ರಕ್ಷಿಸಲಾಯಿತು

ಹಿಂದುಳಿದವರ ಏಳಿಗೆ ಸಹಿಸದ ಕಾಂಗ್ರೆಸ್ 5
ಕರುಳ ಕೂಗಿಗೆ ಅಮೆರಿಕದಿಂದ ಸ್ಪಂದನ 7

ಸೋರುವ ಕೊಠಡಿಯಲ್ಲೇ ಕಲಿಕೆ!

ತುರ್ತು ದುರಸ್ತಿಗೆ ಕಾದಿರುವ 21,255 ಶಾಲಾ ಕೊಠಡಿಗಳು, ಬೇಕಿದೆ ಅನುದಾನ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ‘ಈ ಶಾಲಾ ಕಟ್ಟಡ ನಾಲ್ಕು ದಶಕಗಳಷ್ಟು ಹಳೆಯದ್ದು. ಮಳೆ ಬಂದರೆ ಗೋಡೆಯಿಂದ ನೀರು ಒಳಗಿಳಿಯುತ್ತದೆ. ಕಿಟಕಿಗಳು ಹಳೆಯದಾಗಿದ್ದು, ಜೋರು ಮಳೆಯಾದರೆ ತರಗತಿಯೊಳಕ್ಕೆ ನೀರು ಸಿಡಿಯುತ್ತದೆ. ಅಡುಗೆ ಕೋಣೆಯೂ ಶಿಥಿಲವಾಗಿದೆ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಕಟ್ಟಡವೇ ಇಲ್ಲ’

–ಸರ್ಕಾರಿ ಶಾಲೆಯ ದುಸ್ಥಿತಿ ಕುರಿತು ದಕ್ಷಿಣ ಕನ್ನಡ ಜಿಲ್ಲೆಯ ಕಸಬಾ ಬೆಂಗ್ರೆ ಗ್ರಾಮಸ್ಥರಾದ ತಯ್ಯುಬ್ ಬೆಂಗ್ರೆ ಅವರ ಹತಾಶೆಯ ನುಡಿಗಳಿವು.

ಕಲಬುರಗಿ ನಗರದ ಎಂ.ಎಸ್.ಕೆ. ಮಿಲ್ ಕಟ್ಟಡದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ–2ಕ್ಕೆ ಬನ್ನಿ. ಅಲ್ಲಿನ ಪೋಷಕರ ಸಂಕಟದ ಮಾತು ಕೇಳಿ: ‘ಗೋಡೆಗಳು ಸುಣ್ಣ– ಬಣ್ಣ ಕಾಣದೆ ಬಿರುಕು ಬಿಟ್ಟಿವೆ. ಚಾವಣಿ, ಕಿಟಕಿಗಳು ಕಿತ್ತು ಹೋಗಿವೆ, ಸಣ್ಣ ಮಳೆ ಬಿದ್ದರೂ ತೊಟ್ಟಿಕ್ಕುತ್ತವೆ. ಕೆಸರು ಗದ್ದೆಯಂತಹ ರಸ್ತೆಯನ್ನು ದಾಟಿಕೊಂಡೇ ಶಾಲೆಗೆ ಹೋಗಬೇಕಾದ ಸ್ಥಿತಿ ಮಕ್ಕಳದ್ದು..’

‘ಕೊಠಡಿಗಳು ಸೋರುತ್ತಿದ್ದು, ತರಗತಿ ನಡೆಸಲು ಸಾಧ್ಯವಾಗುತ್ತಿಲ್ಲ. ಚಾವಣಿ ಶಿಥಿಲವಾಗಿರುವುದರಿಂದ, ಪಕ್ಕದ ಕೊಠಡಿಯ ಕಟ್ಟೆಯ ಮೇಲೆ ಕೂರಿಸಿ ಪಾಠ ಮಾಡುತ್ತಿದ್ದೇವೆ’ ಎನ್ನುತ್ತಾರೆ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಚೀಲಾಪುರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರು.

ಚಾಮರಾಜನಗರ ತಾಲ್ಲೂಕಿನ ನಾಗವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶತಮಾನ ಪೂರೈಸಿರುವ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಎರಡು ಕೊಠಡಿಗಳು ಕುಸಿಯುವ ಸ್ಥಿತಿಯಲ್ಲಿವೆ. 1ರಿಂದ 7ನೇ ತರಗತಿವರೆಗೂ 22 ವಿದ್ಯಾರ್ಥಿಗಳಿದ್ದು, ಎರಡು ಕೊಠಡಿಗಳಲ್ಲಿ ಏಳು ತರಗತಿಗಳ ಮಕ್ಕಳಿಗೆ ಪಾಠ ನಡೆಯುತ್ತಿದೆ.

ಮುಂಗಾರು ಮಳೆ ಆರಂಭವಾಗುತ್ತಿದ್ದಂತೆ ರಾಜ್ಯದಾದ್ಯಂತ ಇರುವ ಸರ್ಕಾರಿ ಶಾಲಾ ಕೊಠಡಿಗಳ ನಿಜ ಬಣ್ಣ ಹೀಗೆ ಬಯಲಾಗಿದೆ. ಹಲವು ಕಟ್ಟಡಗಳು ಸುರಕ್ಷಿತವಲ್ಲ ಎಂಬ ವಿಚಾರವು ಕಳವಳ ಮೂಡಿಸಿದ್ದು, ಮೂಲಸೌಕರ್ಯಗಳ ಕೊರತೆಯೂ ಕಾಡುತ್ತಿದೆ.

ಮಳೆ ನೀರಿಗೆ ತೋಯ್ದು ಗೋಡೆಗಳು ಬಣ್ಣ ಕಳೆದುಕೊಂಡು ಬಿರುಕು ಬಿಟ್ಟಿವೆ, ಚಾವಣಿಗಳ ಸಿಮೆಂಟ್ ಉದುರಿ ಹೋಗಿದೆ.

6

ಒಳನೋಟ

ಶಾಲಾ ಕೊಠಡಿಗಳ ದುರಸ್ತಿಗೆ ಅನುದಾನದ ವಿವರ (₹ಕೋಟಿಗಳಲ್ಲಿ)

ವರ್ಷ	ಶಾಲೆಗಳ ಸಂಖ್ಯೆ	ಬಿಡುಗಡೆ ಆದ ಅನುದಾನ
2021–22	520	₹ 19.47
2022–23	1878	₹ 48.50
2023–24	2162	₹ 70.00
ಒಟ್ಟು	4558	₹ 137.97

ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲ್ಲೂಕಿನ ಮೇದಿನಿ ಗ್ರಾಮದ ಕಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ಶಿಥಿಲಗೊಂಡಿರುವುದು

ಉತ್ತರ ಕರ್ನಾಟಕ: ಸಾವಿರಾರು ಕೊಠಡಿ ಶಿಥಿಲ

ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿರುವ ಸಾವಿರಾರು ಶಾಲಾ ಕೊಠಡಿಗಳು ಮಳೆಯಿಂದ ಶಿಥಿಲಗೊಂಡಿದ್ದು, ಮಕ್ಕಳ ಕಲಿಕೆಗೆ ತೊಡಕಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ 1,400 ಕೊಠಡಿಗಳು ದುರಸ್ತಿಗೆ ಕಾದಿವೆ. ಭಾರಿ ಮಳೆ ಮತ್ತು ಬಿರುಗಾಳಿಯಿಂದ ಯರಗಟ್ಟಿ ತಾಲ್ಲೂಕಿನ ಗುಡುಮಕೇರಿಯ ಸರ್ಕಾರಿ ಪ್ರಾಥಮಿಕ ಶಾಲೆಯ ಮೂರು ಕೊಠಡಿಗಳ ಚಾವಣಿ, ಚನ್ನಮ್ಮನ ತಾಲ್ಲೂಕಿನ ಕಾದರವಳ್ಳಿ, ದೇಮಟ್ಟಿ ಮತ್ತು ದೇವಗಾಂವ ಶಾಲೆಗಳ ಚಾವಣಿಯ ತಗಡಿನ ಶೀಟು ಹಾರಿ ಹೋಗಿವೆ. ರಾಮದುರ್ಗ ತಾಲ್ಲೂಕಿನ ನರಸಾಪುರ, ಬನ್ನೂರ, ಶಿವಪೇಟೆಯ ಶಾಲೆಗಳಲ್ಲೂ ಅವಾಂತರ ಸೃಷ್ಟಿಯಾಗಿವೆ.

ಬಳ್ಳಾರಿಯಲ್ಲಿ 769 ಶಾಲಾ ಕೊಠಡಿಗಳು ದುಸ್ಥಿತಿಯಲ್ಲಿವೆ. ಹಾವೇರಿ ಜಿಲ್ಲೆಯ 137 ಪ್ರಾಥಮಿಕ ಶಾಲೆಗಳ 229 ಕೊಠಡಿಗಳು ಶಿಥಿಲಗೊಂಡಿವೆ.

‘ಬದಲಾವಣೆಗೆ ಸೂಚನೆ ಇಲ್ಲ’

ರಾಜ್ಯ ಕಾಂಗ್ರೆಸ್‌ನಲ್ಲಿ ಸದ್ಯ ಸೆಪ್ಟೆಂಬರ್ ‘ಕ್ರಾಂತಿ’ಯದ್ದೇ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸೆಪ್ಟೆಂಬರ್ ನಂತರ ಕ್ರಾಂತಿ ಆಗಲಿದೆ’ ಎಂಬ ಸಹಕಾರ ಸಚಿವ ಕೆ.ಎನ್. ರಾಜಣ್ಣನವರ ಹೇಳಿಕೆ ರಾಜ್ಯ ಕಾಂಗ್ರೆಸ್‌ನಲ್ಲಿ ನಾನಾ ಚರ್ಚೆಗೆ ಕಾರಣವಾಗಿರುವ ಬೆನ್ನಲ್ಲೆ, ಮುಖ್ಯಮಂತ್ರಿ ಬದಲಾವಣೆಯ ವದಂತಿಗಳಿಗೆ ರೆಕ್ಕೆಪುಕ್ಕ ಬಂದಿದೆ.

ಯತೀಂದ್ರ

ಈ ಊಹಾಪೋಹಗಳ ಬೆನ್ನಲ್ಲೆ ಪ್ರತಿಕ್ರಿಯಿಸಿರುವ ವಿಧಾನ ಪರಿಷತ್ತಿನ ಸದಸ್ಯ ಡಾ. ಯತೀಂದ್ರ, ‘ಸಿದ್ದರಾಮಯ್ಯ ಅವರಿಗೆ ಹೈಕಮಾಂಡ್ ಮತ್ತು ಶಾಸಕರ ಬೆಂಬಲವಿದೆ. ಯಾವುದೇ ಬದಲಾವಣೆಯ ಸೂಚನೆ ಹೈಕಮಾಂಡ್‌ನಿಂದ ಬಂದಿಲ್ಲ’ ಎಂದಿದ್ದಾರೆ.

‘ಕೆಲವು ಗುಂಪುಗಳು ಮುಖ್ಯಮಂತ್ರಿ ಬದಲಾಗಬೇಕೆಂಬ ಆಕಾಂಕ್ಷೆಯನ್ನು ಹೊಂದಿವೆ. ಹೀಗಾಗಿ, ಕೆಲವರು ಊಹಾಪೋಹಗಳನ್ನು ಹರಡುತ್ತಲೇ ಇದ್ದಾರೆ. ಆ ಗುಂಪು ಯಾವುದು ಎನ್ನುವುದು ನನಗೆ ಗೊತ್ತಿಲ್ಲ’ ಎಂದೂ ಯತೀಂದ್ರ ಹೇಳಿದರು.

‘ರಾಜಣ್ಣ ಅವರ ಹೇಳಿಕೆ ಬಗ್ಗೆ ಅವರನ್ನೇ ಕೇಳಬೇಕು. ಸರ್ಕಾರ ಸುಸೂತ್ರವಾಗಿ ನಡೆಯುತ್ತಿದೆ. ಬದಲಾವಣೆ ಬಗ್ಗೆ ಹೈಕಮಾಂಡ್ ಯಾವುದೇ ಸೂಚನೆ ಕೊಟ್ಟಿಲ್ಲ. ಹೀಗಾಗಿ, ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಐದು ವರ್ಷ ಪೂರ್ಣಗೊಳಿಸುತ್ತಾರೆ’ ಎಂದು ಹೇಳಿದರು.

7

‘ನನಗೇನು ತಾಕೀತು ಮಾಡಲು ಸಾಧ್ಯ?’

‘ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ಇದೇ 30ರಂದು ರಾಜ್ಯಕ್ಕೆ ಬರುತ್ತಿದ್ದು, ಅವರು ನನಗೇನು ತಾಕೀತು ಮಾಡುತ್ತಾರೆ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಪ್ರಶ್ನಿಸಿದರು.

‘ಬಹಿರಂಗವಾಗಿ ಮಾತನಾಡದಂತೆ ಹೈಕಮಾಂಡ್ ಸೂಚನೆ ಕೊಟ್ಟಿದೆಯೇ’ ಎಂಬ ಪ್ರಶ್ನೆಗೆ ತುಮಕೂರಿನಲ್ಲಿ ಪ್ರತಿಕ್ರಿಯಿಸಿದ ರಾಜಣ್ಣ, ‘ಪಕ್ಷದ ನಾಯಕರ ಜತೆಗೆ ಸುರ್ಜೇವಾಲಾ ಚರ್ಚಿಸುತ್ತಾರೆ. ಆದರೆ, ನನಗೇನು ತಾಕೀತು ಮಾಡಲು ಸಾಧ್ಯ?’ ಎಂದರು. 7

ಕುತೂಹಲ ಮೂಡಿಸಿದ ಪರಮೇಶ್ವರ ನಡೆ

ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಗೃಹ ಸಚಿವ ಜಿ. ಪರಮೇಶ್ವರ ಅವರು ರಹಸ್ಯ ಚರ್ಚೆ ನಡೆಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಸಿದ್ದರಾಮಯ್ಯ ಅವರನ್ನು ‘ಕಾವೇರಿ’ ನಿವಾಸದಲ್ಲಿ ಗುರುವಾರ ತಡ ರಾತ್ರಿ ಭೇಟಿ ಮಾಡಿ ಸುಮಾರು ಒಂದೂವರೆ ಗಂಟೆಗೂ ಹೆಚ್ಚು ಹೊತ್ತು ಪರಮೇಶ್ವರ ಚರ್ಚೆ ನಡೆಸಿದ್ದರು.

7

ಸಚಿವ ರಾಜಣ್ಣ ಯಾವ ಅರ್ಥದಲ್ಲಿ ಹೇಳಿದ್ದಾರೊ. ಅದು ಅವರ ಅಭಿಪ್ರಾಯ ಅಷ್ಟೆ. ಅವರ ಹೇಳಿಕೆಯನ್ನು ನಿರ್ಲಕ್ಷಿಸಿ ಎಂದು ಹೇಳಿದ್ದೇನೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಚಿವ ಕೆ.ಎನ್.ರಾಜಣ್ಣ ನೀಡಿರುವ ‘ಸೆಪ್ಟೆಂಬರ್ ನಂತರ ಕ್ರಾಂತಿ’ ಹೇಳಿಕೆಯ ಬಗ್ಗೆ ಮುಖ್ಯಮಂತ್ರಿ ಮತ್ತು ರಾಜಣ್ಣ ಅವರನ್ನೇ ಕೇಳಿ. ಈ ಮಾತನ್ನು ನಾನು ಒಪ್ಪುವುದಿಲ್ಲ
ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

₹1.37 ಕೋಟಿ ನಗದು ಜಪ್ತಿ

ಸೀಟು ಬ್ಲಾಕಿಂಗ್: ಹಣ ಅಕ್ರಮ ವರ್ಗಾವಣೆ ಸಂಬಂಧ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ಖಾಸಗಿ ಎಂಜಿನಿಯರಿಂಗ್ ಕಾಲೇಜಿನ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ನಡೆಸಿದ ಶೋಧ ಕಾರ್ಯ ವೇಳೆ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

2024–25ನೇ ಸಾಲಿನ ಸಿಇಟಿಯಲ್ಲಿ ಸರ್ಕಾರಿ ಕೋಟಾದಡಿ ಈ ಕಾಲೇಜುಗಳಿಗೆ ಹಂಚಿಕೆಯಾಗಿದ್ದ ಎಂಜಿನಿಯರಿಂಗ್ ಸೀಟುಗಳನ್ನು ಹೆಚ್ಚಿನ ದರಕ್ಕೆ ಮಾರಾಟ ಮಾಡಿಕೊಂಡಿದ್ದಾರೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಪೊಲೀಸರಿಗೆ ದೂರು ನೀಡಿತ್ತು.

ಈ ಪ್ರಕರಣದಲ್ಲಿ ಪ್ರತ್ಯೇಕ ದೂರು ದಾಖಲಿಸಿಕೊಂಡಿದ್ದ ಇ.ಡಿ. ಜೂನ್ 25 ಮತ್ತು 26ರಂದು ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಆಕಾಶ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಕಾಲೇಜು ಮತ್ತು ನ್ಯೂ ಹೊರೈಜಾನ್ ಕಾಲೇಜು ಆಫ್ ಎಂಜಿನಿಯರಿಂಗ್‌ನ ಕಚೇರಿಗಳು ಸೇರಿ ನಗರದ 17 ಕಡೆ ಶೋಧಕಾರ್ಯ ನಡೆಸಿತ್ತು. ಈ ವೇಳೆ ಡಿಜಿಟಲ್ ಸಾಕ್ಷ್ಯಗಳು, ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಮಹತ್ವದ ದಾಖಲೆಗಳು, ಅಂದಾಜು ₹1.37 ಕೋಟಿ ನಗದು ಪತ್ತೆಯಾಗಿದ್ದು, ಎಲ್ಲವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಇ.ಡಿ. ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಗರಣದಲ್ಲಿ ಮಧ್ಯವರ್ತಿಗಳು ಹಾಗೂ ಶಿಕ್ಷಣ ಸಂಸ್ಥೆಗಳು ಭಾಗಿಯಾಗಿವೆ. ಖಾಸಗಿ ಸಂಸ್ಥೆಗಳಲ್ಲಿ ಬೇಡಿಕೆಯಿರುವ ವೃತ್ತಿಶಿಕ್ಷಣ ಕೋರ್ಸ್‌ಗಳ ಪ್ರವೇಶದ ವೇಳೆ ಹಣದ ವಹಿವಾಟು ನಡೆದಿರುವ ಬಗ್ಗೆ ದಾಖಲೆಗಳು ಪತ್ತೆಯಾಗಿವೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.

ಸಾವಿರಾರು ಸೀಟುಗಳ ಬ್ಲಾಕಿಂಗ್ ಸುಳಿವು

‘ಸೀಟ್ ಬ್ಲಾಕಿಂಗ್ ಹಲವು ವರ್ಷಗಳಿಂದ ನಡೆಯುತ್ತಿರುವ ಬಗ್ಗೆ ಅನುಮಾನವಿದ್ದು, ನಾಲ್ಕು ವರ್ಷಗಳ ದಾಖಲಾತಿ ವಿವರಗಳನ್ನು ಕಲೆ ಹಾಕಲಾಗಿದೆ. ಕೆಇಎಯಿಂದಲೂ ಸರ್ಕಾರಿ ಕೋಟಾದ ಸೀಟುಗಳ ವಿವರ ಪಡೆದುಕೊಂಡಿದ್ದು, ಕಾಲೇಜಿನ ದಾಖಲಾತಿಗಳನ್ನು ತಾಳೆ ನೋಡಲಾಗುತ್ತಿದೆ. ಈ ನಾಲ್ಕು ವರ್ಷದಲ್ಲೂ ಸಾವಿರಾರು ಸೀಟುಗಳನ್ನು, ಸೀಟ್ ಬ್ಲಾಕಿಂಗ್ ಮೂಲಕ ಮಾರಾಟ ಮಾಡಿರುವ ಸುಳಿವು ದೊರೆತಿದೆ’ ಎಂದು ಇ.ಡಿ ಮೂಲಗಳು ಖಚಿತಪಡಿಸಿವೆ.

ನಂದಿನಿ ‘ಬ್ರ್ಯಾಂಡ್ ಮೌಲ್ಯ’ ವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಡನ್‌ನ ಪ್ರತಿಷ್ಠಿತ ‘ಬ್ರ್ಯಾಂಡ್ ಫೈನಾನ್ಸ್’ ಕಂಪನಿ 2025ನೇ ಸಾಲಿನ ‘ಬ್ರ್ಯಾಂಡ್ ಮೌಲ್ಯಮಾಪನ’ದ ರ್‍ಯಾಂಕ್ ಪಟ್ಟಿ ಬಿಡುಗಡೆ ಮಾಡಿದ್ದು, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಒಕ್ಕೂಟದ (ಕೆಎಂಎಫ್) ‘ನಂದಿನಿ’, ಭಾರತೀಯ ಬ್ರ್ಯಾಂಡ್ ಉತ್ಪನ್ನಗಳಲ್ಲಿ 38ನೇ ಸ್ಥಾನಕ್ಕೆ ಏರಿದೆ.

ಭಾರತದ 100 ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ‘ನಂದಿನಿ’ ಕಳೆದ ವರ್ಷ 43ನೇ ಸ್ಥಾನದಲ್ಲಿತ್ತು. ಈ ಸಾಲಿನಲ್ಲಿ ಕೆಎಂಎಫ್‌ನ ಒಟ್ಟು ಮೌಲ್ಯ ₹ 9,009.65 ಕೋಟಿಗೆ (1,079 ಮಿಲಿಯನ್ ಡಾಲರ್) ಮುಟ್ಟಿದೆ.

ಆಹಾರ ಮತ್ತು ಪಾನೀಯ ವಿಭಾಗದಲ್ಲಿ ಭಾರತೀಯ ಬ್ರ್ಯಾಂಡ್‌ಗಳಲ್ಲಿ ನಂದಿನಿ ನಾಲ್ಕನೇ ಸ್ಥಾನವನ್ನು ಉಳಿಸಿಕೊಂಡಿದೆ. ಪ್ರಮುಖ ಬ್ರ್ಯಾಂಡ್‌ಗಳಾದ ಅಮುಲ್, ಮದರ್ ಡೇರಿ, ಬ್ರಿಟಾನಿಯಾ ಕಂಪನಿಗಳು ಕ್ರಮವಾಗಿ ಒಂದು, ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ಡಾಬರ್ ಕಂಪನಿ, ನಂದಿನಿಯ ನಂತರ ಸ್ಥಾನದಲ್ಲಿದೆ.

‘ಈ ಮನ್ನಣೆಗೆ ಕಾರಣರಾದ ನಮ್ಮ ಪ್ರಿಯ ಗ್ರಾಹಕರಿಗೆ, ನಿಷ್ಠಾವಂತ ಹಾಲು ಉತ್ಪಾದಕರಿಗೆ, ವಿಶ್ವಾಸಾರ್ಹ ಪಾಲುದಾರರಿಗೆ ಮತ್ತು ಸಮರ್ಪಿತ ತಂಡಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ’ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

ಕೆಎಂಎಫ್, ನಂದಿನಿ ಬ್ರ್ಯಾಂಡ್‌ನಲ್ಲಿ 150ಕ್ಕೂ ಹೆಚ್ಚು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ. ಇದೇ ವರ್ಷ ವಿಶ್ವ ಹಾಲು ದಿನದಂದು (ಜೂನ್ 1), ಸ್ಲೈಸ್ ಕೇಕ್, ಮಫಿನ್ಸ್ ಹಾಗೂ ಬಾರ್ ಕೇಕ್ ಎಂಬ ಮೂರು ಮಾದರಿಯ 18 ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ಬಾರಿ 11 ದಿನ ದಸರಾ ಆಚರಣೆ

ಬೆಂಗಳೂರು: ‘ಈ ಬಾರಿ 11 ದಿನ ದಸರಾ ಆಚರಣೆ ನಡೆಯಲಿದೆ.

ವಿಜೃಂಭಣೆಯ ರಭಸದಲ್ಲಿ ಅನಗತ್ಯವಾಗಿ ಹಣ ಖರ್ಚು ಮಾಡುವುದು ವೈಭವ ಅಲ್ಲ. ಜನರ, ಪ್ರವಾಸಿಗರ ಸುರಕ್ಷತೆ ಮತ್ತು ಅನುಕೂಲಕ್ಕೆ ಆದ್ಯತೆ ನೀಡಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ವಿವರ 5

ಚಿನಕುರುಳಿ
ಪ್ರಕಾಶ್ ಶೆಟ್ಟಿ

ನಿಮ್ಹಾನ್ಸ್‌ಗೆ ಪಾಲಿಟ್ರಾಮಾ ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ನಿಮ್ಹಾನ್ಸ್‌ನ ಬೆಂಗಳೂರು ಉತ್ತರ ಕ್ಯಾಂಪಸ್‌ನಲ್ಲಿ (ಕ್ಯಾಲಸನಹಳ್ಳಿ) ಸ್ಥಾಪಿಸಲು ಉದ್ದೇಶಿಸಿರುವ 300 ಹಾಸಿಗೆಗಳ ಸಾಮರ್ಥ್ಯದ ಪಾಲಿಟ್ರಾಮಾ ಕೇಂದ್ರ ಹಾಗೂ ಸ್ನಾತಕೋತ್ತರ ಕೇಂದ್ರದ ಪ್ರಸ್ತಾವಕ್ಕೆ ಕೇಂದ್ರ ಹಣಕಾಸು ಸಚಿವಾಲಯ ಶುಕ್ರವಾರ ಅನುಮೋದನೆ ನೀಡಿದೆ.

ಈ ಯೋಜನೆಯ ಒಟ್ಟು ವೆಚ್ಚ ₹498 ಕೋಟಿ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅನುಮೋದನೆ ಇನ್ನಷ್ಟೇ ಸಿಗಬೇಕಿದೆ. 30 ತಿಂಗಳಲ್ಲಿ ಈ ಕ್ಯಾಂಪಸ್ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಜಗದೀಶ ಶೆಟ್ಟರ್ ಅವರು ಮುಖ್ಯಮಂತ್ರಿಯಾಗಿದ್ದಾಗ ಈ ಕೇಂದ್ರ ಸ್ಥಾಪನೆಗೆ ಬೇಕಿರುವ ಜಮೀನು ಮಂಜೂರು ಮಾಡಿದ್ದರು.

ಈ ಕೇಂದ್ರಕ್ಕೆ ಶೀಘ್ರ ಅನುಮೋದನೆ ನೀಡಬೇಕು ಎಂದು ಒತ್ತಾಯಿಸಿ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್. ಮಂಜುನಾಥ್ ಅವರು ಹಣಕಾಸು ಸಚಿವಾಲಯಕ್ಕೆ ಒಂದು ವರ್ಷದಿಂದ ಒತ್ತಡ ಹೇರಿದ್ದರು. ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಿದ್ದ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ, ಈ ಯೋಜನೆಗೆ ಶೀಘ್ರ ಅನುಮೋದನೆ ನೀಡುವಂತೆ ಒತ್ತಾಯಿಸಿದ್ದರು. ಕೇಂದ್ರಕ್ಕೆ ಅನುಮೋದನೆ ಸಿಗುವಲ್ಲಿ ಹಣಕಾಸು ಇಲಾಖೆಯ ಕಾರ್ಯದರ್ಶಿ ಅಜಯ್ ಸೇಠ್ ಅವರ ಪಾತ್ರ ಮಹತ್ವದ್ದು. ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ ಸೇಠ್ ಅವರು ಈ ತಿಂಗಳಾಂತ್ಯದಲ್ಲಿ ಸೇವೆಯಿಂದ ನಿವೃತ್ತರಾಗಲಿದ್ದಾರೆ.

‘ನಿಮ್ಹಾನ್ಸ್ ಆರಂಭವಾದಾಗ ಪ್ರತಿದಿನ ಅಲ್ಲಿಗೆ ಬರುವ ರೋಗಿಗಳ ಸಂಖ್ಯೆ 250ರಷ್ಟು ಇತ್ತು. ಆದರೆ, ಈಗ ಆ ಸಂಖ್ಯೆ 2,500ಕ್ಕಿಂತಲೂ ಹೆಚ್ಚು. ದೇಶದಲ್ಲಿ ಸಂಭವಿಸುವ ಸಾವುಗಳಿಗೆ ರಸ್ತೆ ಅಪಘಾತವು ಐದನೇ ಅತಿದೊಡ್ಡ ಕಾರಣವಾಗಿದೆ. ಲಕ್ಷಾಂತರ ಜನರು ರಸ್ತೆ ಅಪಘಾತಗಳಲ್ಲಿ ಸಾಯುತ್ತಿದ್ದಾರೆ. ಅಪಘಾತಗಳಲ್ಲಿ ತೀವ್ರವಾಗಿ ಗಾಯಗೊಂಡವರಿಗೆ ‘ಗೋಲ್ಡನ್ ಅವರ್’ನಲ್ಲಿ ಚಿಕಿತ್ಸೆ ನೀಡಿದರಷ್ಟೇ ಅವರನ್ನು ಉಳಿಸಿಕೊಳ್ಳಲು ಸಾಧ್ಯ. ಆದರೆ, ಜಾಗದ ಕೊರತೆ ಮತ್ತು ಪಾಲಿಟ್ರಾಮಾ ಕೇಂದ್ರ ಇಲ್ಲದೇ ಇರುವುದರಿಂದ ಹಲವು ರೋಗಿಗಳನ್ನು ಬೇರೆ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆ. ಇದೀಗ, ಕೇಂದ್ರ ಸ್ಥಾಪನೆಗೆ ಒಪ್ಪಿಗೆ ಸಿಕ್ಕಿದೆ. ಬೆಂಗಳೂರು ಸುತ್ತಮುತ್ತಲಿನ ಅಪಘಾತಕ್ಕೀಡಾದವರಿಗೆ ಜೀವ ಉಳಿಸುವ ಮತ್ತು ತುರ್ತು ಆರೈಕೆ ಒದಗಿಸುವಲ್ಲಿ ಇದು ಮಹತ್ವದ ಹೆಜ್ಜೆ’ ಎಂದು ಮಂಜುನಾಥ್ ಬಣ್ಣಿಸಿದ್ದಾರೆ.

ಮಲೆ ಮಹದೇಶ್ವರ ವನ್ಯಜೀವಿ ವಿಭಾಗ: ತಮಿಳುನಾಡು ಜಾನುವಾರು ಹಾವಳಿ

ಹುಲಿ ಜೀವಕ್ಕೆ ‘ಸಗಣಿ’ ಮಾಫಿಯಾ ಕುತ್ತು

• ಬಾಲಚಂದ್ರ ಎಚ್.

ಚಾಮರಾಜನಗರ: ‘ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಐದು ಹುಲಿಗಳ ಅಸಹಜ ಸಾವಿಗೆ ತಮಿಳುನಾಡು ಜಾನುವಾರು ಮಾಲೀಕರ ‘ಸಗಣಿ ಮಾಫಿಯಾ’ ಪರೋಕ್ಷ ಕಾರಣವಾಯಿತೇ’ ಎಂಬ ಅನುಮಾನ ದಟ್ಟವಾಗಿದೆ.

ವಿಷ ಹಾಕಿದ್ದ ಜಾನುವಾರು ಕಳೇಬರ ತಿಂದು ಹುಲಿಗಳು ಮೃತಪಟ್ಟಿವೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿರುವ ಬೆನ್ನಲ್ಲೇ, ರಾಜ್ಯದಲ್ಲಿ ತಮಿಳುನಾಡು ಜಾನುವಾರು ಹಾವಳಿಯ ವಿಚಾರ ಮುನ್ನೆಲೆಗೆ ಬಂದಿದೆ.

ಮಹದೇಶ್ವರ ಬೆಟ್ಟದ ತಪ್ಪಲಿನಲ್ಲಿರುವವರಿಗೆ ದಶಕಗಳಿಂದಲೂ ಜಾನುವಾರು ಸಾಕಣೆಯೇ ಪ್ರಮುಖ ವೃತ್ತಿ. ಸ್ವಂತ ಜಾನುವಾರು ಹೊಂದಿರುವವರೂ ವಿರಳ. ಬಹುತೇಕರು ತಮಿಳುನಾಡಿನ ಜಾನುವಾರುಗಳನ್ನು ಮೇಯಿಸುತ್ತಿದ್ದಾರೆ.

‘ತಮಿಳುನಾಡಿನ ಸಾವಿರಾರು ಹಸುಗಳನ್ನು ನಿಯಮಬಾಹಿರವಾಗಿ ಕಾಡಿನೊಳಗೆ ಮೇಯಿಸಲು ನುಗ್ಗಿಸುತ್ತಿರುವುದಿಂದ ಮಾನವ–ಪ್ರಾಣಿ ಸಂಘರ್ಷ ಹೆಚ್ಚಾಗುತ್ತಿದೆ’ ಎಂದು ಅರಣ್ಯಾಧಿಕಾರಿಯೊಬ್ಬರು ತಿಳಿಸಿದರು.

7

ಮುಖ್ಯಾಂಶಗಳು

- ಗಡಿಯಲ್ಲಿ ಚೆಕ್‌ಪೋಸ್ಟ್ ಕೊರತೆ
- ಪಾಲಾರ್ ನದಿ ದಾಟಿ ಬರುವ ತಮಿಳುನಾಡು ದನಗಳು
- ಜನಪ್ರತಿನಿಧಿಗಳು, ಸ್ಥಳೀಯರ ಬೆಂಬಲ ಆರೋಪ

ಮೂವರು ಆರೋಪಿಗಳ ಬಂಧನ

ಹನೂರು (ಚಾಮರಾಜನಗರ ಜಿಲ್ಲೆ): ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಐದು ಹುಲಿಗಳಿಗೆ ವಿಷಪ್ರಾಶನ ಮಾಡಿ ಕೊಂದ ಆರೋಪದ ಮೇಲೆ ತಾಲ್ಲೂಕಿನ ಕೊಪ್ಪ ಗ್ರಾಮದ ಮಾದುರಾಜು, ನಾಗರಾಜು ಹಾಗೂ ಹಳೆಗೌಡನದೊಡ್ಡಿಯ ಕೋನಪ್ಪ ಎಂಬುವರನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ನೆರವು ನೀಡಿರುವ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳಿಗೆ 2 ದಿನ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಕೊಲೆಗೆ ಕಾರಣ: ಕೋನಪ್ಪ ಅವರಿಗೆ ಸೇರಿದ ಹಸು ಈಚೆಗೆ ಅರಣ್ಯದೊಳಗೆ ಮೇಯುವಾಗ ಹುಲಿ ದಾಳಿ ನಡೆಸಿ ಕೊಂದು ಹಾಕಿದೆ. ಇದರಿಂದ ಸಿಟ್ಟಿಗೆದ್ದು ಪ್ರತೀಕಾರ ತೀರಿಸಿಕೊಳ್ಳಲು ನಾಗರಾಜು, ಮಾದುರಾಜು ಜೊತೆಗೂಡಿ ಹುಲಿ ತಿಂದು ಬಿಟ್ಟಿದ್ದ ಜಾನುವಾರು ಕಳೇಬರಕ್ಕೆ ವಿಷ ಹಾಕಿದ್ದಾನೆ. ಬಾಕಿ ವೇತನ ಬಿಡುಗಡೆ ಮಾಡುವಂತೆ ಆಗ್ರಹಿಸಿ ವಾಚರ್‌ಗಳು ಕೊಳ್ಳೇಗಾಲದ ಡಿಸಿಎಫ್ ಕಚೇರಿ ಮುಂದೆ ಪ್ರತಿಭಟನೆಗೆ ತೆರಳಿದ್ದಾಗ, ಅರಣ್ಯದೊಳಗೆ ಯಾರೂ ಬೀಟ್‌ನಲ್ಲಿ ಇಲ್ಲದಿರುವ ಸಮಯ ನೋಡಿಕೊಂಡು ಈ ಕೃತ್ಯ ಎಸಗಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಬದಲಾವಣೆ: ಹುಲಿಗಳ ಅಸಹಜ ಸಾವಿನ ಕುರಿತು ತನಿಖೆಗೆ ರಚಿಸಲಾಗಿದ್ದ 6 ಮಂದಿಯ ಉನ್ನತ ಮಟ್ಟದ ತನಿಖಾ ಸಮಿತಿಯಲ್ಲಿ ಬದಲಾವಣೆ ಮಾಡಲಾಗಿದೆ. ಎಪಿಸಿಸಿಎಫ್ ಕುಮಾರ್ ಪುಷ್ಕರ್ ಅಧ್ಯಕ್ಷತೆಯಲ್ಲಿ ತಂಡ ರಚಿಸಲಾಗಿದೆ. ಎಪಿಸಿಸಿಎಫ್ ಶ್ರೀನಿವಾಸುಲು, ಸಿಸಿಎಫ್ ಟಿ.ಹೀರಾಲಾಲ್, ಎಸ್‌ಟಿಸಿಎ ಪ್ರತಿನಿಧಿ, ಮೈಸೂರು ಮೃಗಾಲಯದ ಪಶುಪಾಲನಾ ಅಧಿಕಾರಿ, ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ತನಿಖಾ ತಂಡದಲ್ಲಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

ವೇತನವಿಲ್ಲದೆ ತ್ಯಾಜ್ಯ ಸಂಗ್ರಹ ಸಿಬ್ಬಂದಿ ಪರದಾಟ

ಜಿಎಸ್‌ಟಿ, 4ಜಿ ವಿನಾಯಿತಿ ಗೊಂದಲ: ಬಿಲ್ ಪಾವತಿಗೆ ಬಿಎಸ್‌ಡಬ್ಲ್ಯುಎಂಎಲ್– ಗುತ್ತಿಗೆದಾರರ ನಡುವೆ ಜಗ್ಗಾಟ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ, ಬಿಎಸ್‌ಡಬ್ಲ್ಯುಎಂಎಲ್ ಹಾಗೂ ತ್ಯಾಜ್ಯ ಸಂಗ್ರಹ–ಸಾಗಣೆ ಗುತ್ತಿಗೆದಾರರ ನಡುವಿನ ಹಗ್ಗಜಗ್ಗಾಟದಲ್ಲಿ ಮನೆಗಳಿಂದ ಕಸ ಸಂಗ್ರಹಿಸುವವರಿಗೆ ಆರು ತಿಂಗಳಿಂದ ವೇತನ ಇಲ್ಲದಂತಾಗಿದೆ.

ಪ್ರಥಮ ಹಂತದಲ್ಲಿ ತ್ಯಾಜ್ಯ ಸಂಗ್ರಹ, ಸಾಗಣೆ ಮತ್ತು ವಿಲೇವಾರಿ ಗುತ್ತಿಗೆದಾರರಿಗೆ 2025ರ ಜನವರಿಯಿಂದ ಬಿಲ್ ಪಾವತಿಯಾಗಿಲ್ಲ. ಇದರಿಂದ ಗುತ್ತಿಗೆದಾರರು ನೇಮಿಸಿಕೊಂಡಿರುವ ಮನೆಗಳಿಂದ ತ್ಯಾಜ್ಯ ಸಂಗ್ರಹಿಸುವ ಆಟೊ ಚಾಲಕರು, ಸಹಾಯಕರು, ಲೋಡರ್‌ಗಳಿಗೆ ವೇತನ ಸಿಗುತ್ತಿಲ್ಲ. ಕೆಲವು ಗುತ್ತಿಗೆದಾರರು ಅಲ್ಪಸ್ವಲ್ಪ ನೀಡುತ್ತಿದ್ದರೂ, ಬಹುತೇಕರು ಆರು ತಿಂಗಳಿಂದಲೂ ಸಂಕಷ್ಟಕ್ಕೊಳಗಾಗಿದ್ದಾರೆ.

'ಬಿಬಿಎಂಪಿಯಿಂದ 'ಸಪ್ಲೈ ಆರ್ಡರ್' ಪಡೆದ ಗುತ್ತಿಗೆದಾರರಿಗೆ ಬಿಎಸ್‌ಡಬ್ಲ್ಯುಎಂಎಲ್‌ನಿಂದ ಬಿಲ್ ಪಾವತಿಯಾದರೆ ಜಿಎಸ್‌ಟಿ ಪಾವತಿಸಬೇಕಾಗುತ್ತದೆ. ಇದು ನಮಗೆ ಹೊರೆಯಾಗುತ್ತದೆ. ಬಿಬಿಎಂಪಿಯಿಂದಲೇ ಹಣ ಪಾವತಿಸಿ. ಬಿಎಸ್‌ಡಬ್ಲ್ಯುಎಂಎಲ್ ಬಿಲ್ ಪಾವತಿಸಿದರೆ, ಜಿಎಸ್‌ಟಿ ಅನ್ವಯವಾಗುವುದಿಲ್ಲ, 4ಜಿ ವಿನಾಯಿತಿ ಸಿಗುತ್ತದೆ ಎಂಬುದನ್ನು ಆದೇಶದಲ್ಲಿ ಸ್ಪಷ್ಟಪಡಿಸಿ ಎಂದು ಗುತ್ತಿಗೆದಾರರು 2024ರ ನವೆಂಬರ್‌ನಿಂದಲೂ ಒತ್ತಾಯಿಸುತ್ತಲೇ ಬಂದಿದ್ದಾರೆ. ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಇಂದಿಗೂ ಸ್ಪಷ್ಟ ತೀರ್ಮಾನ ಕೈಗೊಂಡಿಲ್ಲ' ಎಂದು ಆರೋಪಿಸಲಾಗಿದೆ.

'ಸರ್ಕಾರಿ ಪ್ರಾಧಿಕಾರಕ್ಕೆ ಮತ್ತು ಜಿಎಸ್‌ಟಿ ಅನ್ವಯವಾಗುವುದಿಲ್ಲ. ಬಿಎಸ್‌ಡಬ್ಲ್ಯುಎಂಎಲ್ ಷೇರುದಾರರ ರಚನೆಯಾಗಿದ್ದು, ಇದನ್ನು ಮಾರ್ಪಡಿಸಿದರೆ ಜಿಎಸ್‌ಟಿ ವಿನಾಯಿತಿ ಲಭ್ಯವಾಗುತ್ತದೆ. ಬಿಎಸ್‌ಡಬ್ಲ್ಯುಎಂಎಲ್‌ಗೆ ಗುತ್ತಿಗೆದಾರರು ನೀಡಿರುವ ಬಿಲ್‌ನಲ್ಲಿ 'ತೆರಿಗೆ ಅನ್ವಯವಾದರೆ ಅದನ್ನು ಸಂಬಂಧಿಸಿದ ಪ್ರಾಧಿಕಾರ ಪಾವತಿಸಬೇಕು' ಎಂದು ಪತ್ರ ವಿಧಿಸಿದ್ದಾರೆ. ಇದು ಪ್ರಸ್ತುತ ಮಾದರಿಯಲ್ಲಿ ಇಲ್ಲ. ಬಿಎಸ್‌ಡಬ್ಲ್ಯುಎಂಎಲ್‌ನಲ್ಲಿ 'ಇದು ಅನ್ವಯವಾಗುವುದಿಲ್ಲ' ಎಂದು ತೆರಿಗೆ ಲೆಕ್ಕಪರಿಶೋಧಕರು ಅಭಿಪ್ರಾಯ ನೀಡಿದ್ದಾರೆ.

'ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಬಿಎಸ್‌ಡಬ್ಲ್ಯುಎಂಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ ರಾವ್ ಹಾಗೂ ಗುತ್ತಿಗೆದಾರರೊಂದಿಗೆ ಕೆಲವು ಸಭೆಗಳು ನಡೆದು, ಜಿಎಸ್‌ಟಿಯಿಂದ ವಿನಾಯಿತಿ ನೀಡಿರುವಂತೆ ಗುತ್ತಿಗೆದಾರರಿಗೆ ನೀಡಬೇಕಾದ ಆದೇಶದಲ್ಲಿ ತಿಳಿಸಲಾಗುತ್ತದೆ ಎಂಬ ಭರವಸೆ ದೊರೆತಿತ್ತು. ಆದರೆ, ಮತ್ತೆ 2024ರ ಡಿಸೆಂಬರ್ ಆದೇಶವನ್ನೇ ನಮೂದಿಸಿದ್ದು, ಜಿಎಸ್‌ಟಿ ಅನ್ವಯವಾಗುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿಲ್ಲ' ಎಂದು ಗುತ್ತಿಗೆದಾರರು ಆರೋಪಿಸಿದರು.

ತ್ಯಾಜ್ಯ ವಿಲೇವಾರಿಗೆ ಸರಬರಾಜು ಆದೇಶ ನೀಡಿರುವ ಬಿಬಿಎಂಪಿಯಿಂದ ಬಿಎಸ್‌ಡಬ್ಲ್ಯುಎಂಎಲ್‌ಗೆ ಬಿಲ್ ಪಾವತಿಯ ಜವಾಬ್ದಾರಿಯನ್ನು ನಿವಾರಿಸಿಲ್ಲ. ಹೀಗಾಗಿ, ಮನೆಗಳಿಂದ ತ್ಯಾಜ್ಯ ಸಂಗ್ರಹಿಸುವವರು ವೇತನವಿಲ್ಲದೆ ಸಂಕಷ್ಟದಲ್ಲಿದ್ದಾರೆ.

'ಕೆಲ ಅಧಿಕಾರಿಗಳಿಂದ ಗೊಂದಲ'

'ತ್ಯಾಜ್ಯ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಯನ್ನು ಅಗತ್ಯ ಸಿಬ್ಬಂದಿ ಮತ್ತು ವಾಹನಗಳೊಂದಿಗೆ ಮಾಡಲು ಸೇವಾದಾರ ಗುತ್ತಿಗೆದಾರರಿಗೆ ಪಾಲಿಕೆಯಿಂದ ನಮಗೆ ಸರಬರಾಜು ಆದೇಶ ನೀಡಲಾಗಿದೆ. ಬಿಬಿಎಂಪಿ ಬದಲು ಬಿಎಸ್‌ಡಬ್ಲ್ಯುಎಂಎಲ್‌ನಿಂದ ಬಿಲ್ ಪಾವತಿಸಿದರೆ 'ತ್ರಿ ಪಾರ್ಟಿ'ಯಿಂದ ಹಣ ಪಡೆದುಕೊಂಡಂತಾಗುತ್ತದೆ. ಇದಕ್ಕೆ ಜಿಎಸ್‌ಟಿ ಅನ್ವಯವಾಗುತ್ತದೆ. 'ಇದು ಅನ್ವಯವಾಗುವುದಿಲ್ಲ ಎಂದು ಆದೇಶ ಹೊರಡಿಸಿ ಎಂದು ನಾವು ಆರು ತಿಂಗಳಿಂದ ಮನವಿ ಮಾಡಿಕೊಂಡರೂ ಕೆಲ ಅಧಿಕಾರಿಗಳಿಂದ ಗೊಂದಲ ಮುಂದುವರಿದಿದೆ. ಮಹೇಶ್ವರರಾವ್ ಅವರು ನಮ್ಮ ಮನವಿಗೆ ಸ್ಪಂದಿಸಿದ್ದಾರೆ, ಕೆಲ ಅಧಿಕಾರಿಗಳು ಅದನ್ನು ಅನುಷ್ಠಾನ ಮಾಡುತ್ತಿಲ್ಲ' ಎಂದು ಬೆಂಗಳೂರು ಮಹಾನಗರ ಸ್ವಚ್ಛತೆ ವಾಹನಗಳು ಮಾಲೀಕರು–ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ದೂರಿದರು.

'ಈಗಾಗಲೇ ಸೇವಾ ಶುಲ್ಕ ಎಂದು ಗುತ್ತಿಗೆದಾರರ ಮೇಲೆ ಹೊರೆ ಬಿದ್ದು, ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಬಿಬಿಎಂಪಿಯಿಂದ ಆದೇಶ ಪಡೆದು ಬಿಎಸ್‌ಡಬ್ಲ್ಯುಎಂಎಲ್‌ನಿಂದ ಬಿಲ್ ತೆಗೆದುಕೊಂಡರೆ ಜಿಎಸ್‌ಟಿ ಹಾಗೂ ಸೇವಾ ಶುಲ್ಕವೂ ಅನ್ವಯವಾಗುತ್ತದೆ. ಈ ಬಗ್ಗೆ ತೆರಿಗೆ ಲೆಕ್ಕ ಪರಿಶೋಧಕರು, ಅಂತರಿಕ ಲೆಕ್ಕ ಪರಿಶೋಧಕರು ಅಭಿಪ್ರಾಯ ತಿಳಿಸಿದ್ದರೂ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಗುತ್ತಿಗೆದಾರರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

ಮುಖ್ಯಾಂಶಗಳು

- ಗುತ್ತಿಗೆದಾರರಿಗೆ ಬಿಬಿಎಂಪಿ ನೀಡಿರುವ ಸರಬರಾಜು ಆದೇಶ
- ಬಿಎಸ್‌ಡಬ್ಲ್ಯುಎಂಎಲ್ ಬಿಲ್ ಪಾವತಿಸಿದರೆ ವಿನಾಯಿತಿಗೆ ಕಂಟಕ
- ಆರು ತಿಂಗಳಿನಿಂದ ಹಗ್ಗ–ಜಗ್ಗಾಟ



ಸಮಸ್ಯೆ ಬಗೆಹರಿಸಿದ್ದೇವೆ: ಹರೀಶ್

'ಘನ ತ್ಯಾಜ್ಯ ವಿಲೇವಾರಿ, ಸಂಗ್ರಹಣೆ ಮತ್ತು ಸಾಗಣೆ ಕುರಿತ ಬಿಲ್‌ಗಳನ್ನು ಬಿಎಸ್‌ಡಬ್ಲ್ಯುಎಂಎಲ್‌ನಿಂದಲೇ 2025ರ ಜನವರಿಯಿಂದ ಪಾವತಿಸಲು ನಿರ್ಧರಿಸಲಾಗಿದೆ. ತಿಂಗಳಿಗೆ ₹55.93 ಕೋಟಿಯಂತೆ ₹167.79 ಕೋಟಿ ಅನುದಾನ ಮತ್ತು ಪ್ಲಾಂಟ್‌ಗಳ ಕಾರ್ಯಾಚರಣೆ–ನಿರ್ವಹಣೆಗೆ ಬಿಲ್ ಪಾವತಿಸಲು ₹40 ಕೋಟಿ ಬಿಡುಗಡೆ ಮಾಡಲಾಗಿದೆ. ಆದರೆ, ಗುತ್ತಿಗೆದಾರರು ಬಿಲ್ ನೀಡುತ್ತಿಲ್ಲ, ಅವರು ಹೇಳಿದಂತೆ, ಸ್ಥಳೀಯ ವಿಭಾಗಗಳಿಗೆ ಆದೇಶವನ್ನು ನೀಡಿ, ಅಧಿಸೂಚನೆಯಂತೆ ಘನತ್ಯಾಜ್ಯ ನಿರ್ವಹಣೆಗೆ ಜಿಎಸ್‌ಟಿ ವಿನಾಯಿತಿ ಇರುತ್ತದೆ. ಬಿಎಸ್‌ಡಬ್ಲ್ಯುಎಂಎಲ್ ಆದೇಶದಂತೆ (ಎಂಡಿ–548/2024-25) ಬಿಲ್ ಸಲ್ಲಿಸಲು ಹೇಳಲಾಗಿದೆ. ಆದರೆ ಅವರು ಬಿಲ್ ನೀಡುತ್ತಿಲ್ಲ' ಎಂದು ಬಿಎಸ್‌ಡಬ್ಲ್ಯುಎಂಎಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಕೆ. ಹರೀಶ್ ಕುಮಾರ್ ತಿಳಿಸಿದರು.

ಪರಿಶೀಲಿಸುವೆ: 'ಗುತ್ತಿಗೆದಾರರೊಂದಿಗೆ ಸಭೆ ನಡೆಸಿ ಅದಕ್ಕೆ ಅನುಗುಣವಾಗಿ ಆದೇಶ ನೀಡುವಂತೆ ಜೂನ್ 26ರಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅದರಲ್ಲಿಯೂ ಸಮಸ್ಯೆ ಇದೆ ಎಂದು ಗುತ್ತಿಗೆದಾರರು ಹೇಳುತ್ತಿದ್ದಾರೆ, ಸೋಮವಾರ ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ' ಎಂದು ಬಿಎಸ್‌ಡಬ್ಲ್ಯುಎಂಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ ರಾವ್ ಹೇಳಿದರು.

'ನೇರವಾಗಿ ವೇತನ ಪಾವತಿಸಿ'

'ಬಿಬಿಎಂಪಿ, ಬಿಎಸ್‌ಡಬ್ಲ್ಯುಎಂಎಲ್ ಹಾಗೂ ಗುತ್ತಿಗೆದಾರರ ನಡುವಿನ ಸಮಸ್ಯೆಯಿಂದ ನಗರದಲ್ಲಿ ಮನೆಗಳಿಂದ ತ್ಯಾಜ್ಯ ಸಂಗ್ರಹಿಸುವ ಆಟೊ ಚಾಲಕರು, ಸಹಾಯಕರು, ಲೋಡರ್‌ಗಳಿಗೆ ವೇತನ ಸಿಗುತ್ತಿಲ್ಲ. ಗುತ್ತಿಗೆದಾರರಿಗೆ ಹಣ ಬಾರದಿದ್ದರೆ ಅವರು ಹೇಗೆ ಕೊಡುತ್ತಾರೆ. ಆದ್ದರಿಂದ ನಮಗೆಲ್ಲ ಬಿಬಿಎಂಪಿಯಿಂದ ನೇರ ವೇತನ ಪದ್ಧತಿಯನ್ನು ಜಾರಿಗೆ ತರಬೇಕು' ಎಂದು ಕಾರ್ಮಿಕ ಸಂರಕ್ಷಣಾ ಟ್ರೇಡ್ ಯೂನಿಯನ್ ಅಧ್ಯಕ್ಷ ತ್ಯಾಗರಾಜ್ ಆಗ್ರಹಿಸಿದರು.

ಸುದ್ದಿ 2 ನಿಮಿಷ

ಅಧಿಕ ದರ: ಆಟೊಗಳ ಮೇಲೆ ಕ್ರಮ– ಸಾರಿಗೆ ಸಚಿವ ಸೂಚನೆ

ಬೆಂಗಳೂರು: 'ಆಟೊಗಳಲ್ಲಿ ಅಧಿಕ ದರ ವಸೂಲಿ ಮಾಡುತ್ತಿದ್ದರೆ ಕ್ರಮ ಕೈಗೊಳ್ಳಿ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಸಾರಿಗೆ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ನಗರದಲ್ಲಿ ಸರ್ಕಾರ ನಿಗದಿತ ದರಕ್ಕಿಂತಲೂ ಹೆಚ್ಚು ವಸೂಲಿ ಮಾಡುತ್ತಿರುವ ಆ್ಯಪ್ ಆಧರಿತ ಆಟೊ, ಇತರ ಆಟೊ ಚಾಲಕರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ರ್‍ಯಾಪಿಡೊ, ಓಲಾ ಮುಂತಾದ ಆ್ಯಪ್‌ಗಳಲ್ಲಿ ವಿಪರೀತ ಪ್ರಯಾಣದರ ತೆಗೆದುಕೊಳ್ಳುತ್ತಿರುವ ಬಗ್ಗೆ ಪ್ರಯಾಣಿಕರು ಮೊಬೈಲ್ ಸ್ಕ್ರೀನ್‌ಶಾಟ್ ಕಳುಹಿಸುತ್ತಿದ್ದಾರೆ. ಈ ರೀತಿ ಹಗಲು ದರೋಡೆ ಮಾಡುವುದು ಅಕ್ಷಮ್ಯ. ಹೆಚ್ಚಿನ ದರ ಬೇಡಿಕೆ ಇಡುವುದು, ಪ್ರಯಾಣಿಕರು ಒಪ್ಪದೇ ಇದ್ದರೆ ಪ್ರಯಾಣ ರದ್ದುಗೊಳಿಸುವ ನಡೆದರೆ ಅಂಥ ಆಟೊಗಳ ಪರ್ಮಿಟ್ ರದ್ದು ಮಾಡುವುದರ ಜೊತೆಗೆ ತಪ್ಪಿತಸ್ಥ ಆಟೊ ಚಾಲಕರು/ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಇಂದಿನಿಂದ ಕ್ರಮ: 'ಆಟೊಗಳಲ್ಲಿ ಅಧಿಕ ದರ ಕುರಿತು ಅಧಿಕೃತವಾಗಿ ದೂರುಗಳು ಬಂದಿಲ್ಲ. ಆರ್‌ಟಿಒಗಳ ಜೊತೆ ಆಂತರಿಕ ಸಭೆ ನಡೆಸಲಾಗುವುದು. ತಪಾಸಣೆ ನಡೆಸಿ ಅಧಿಕ ದರ ವಸೂಲಿ ಮಾಡುವವರ ಮೇಲೆ ಕ್ರಮಕ್ಕೆ ಸೂಚಿಸಲಾಗುವುದು' ಎಂದು ಸಾರಿಗೆ ಇಲಾಖೆ ಅಪರ ಆಯುಕ್ತ ಎ.ಎಂ. ಯೋಗೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಕನ್ನಡ ಸಂಘದ ಕಚೇರಿ ಉಳಿಸುವಂತೆ ಮನವಿ

ಬೆಂಗಳೂರು: ಕೋರಮಂಗಲದ ಕೇಂದ್ರೀಯ ಸದನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕನ್ನಡ ಸಂಘದ ಕಚೇರಿಯನ್ನು ಅಲ್ಲಿಯೇ ಉಳಿಸುವಂತೆ ಸಂಘದ ನಿಯೋಗವು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ನಗರದಲ್ಲಿ ಶನಿವಾರ ಮನವಿ ಸಲ್ಲಿಸಿತು.

ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಮನು ಬಳಿಗಾರ್, ಕನ್ನಡ ಪರ ಹೋರಾಟಗಾರರಾದ ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ, ಕೇಂದ್ರೀಯ ಸದನ ಕನ್ನಡ ಸಂಘದ ಅಧ್ಯಕ್ಷ ಮ. ಚಂದ್ರಶೇಖರ್ ಅವರನ್ನು ಒಳಗೊಂಡ ನಿಯೋಗವು ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ, ಈ ಬಗ್ಗೆ ಸಚಿವರಿಗೆ ಮನವರಿಕೆ ಮಾಡಿಸಿತು.

'ಕೇಂದ್ರೀಯ ಸದನದ 8ನೇ ಮಹಡಿಯಲ್ಲಿ ಸಂಘದ ಕಚೇರಿಯಿದ್ದು, ಎರಡು ದಶಕಗಳಿಂದ ರಚನಾತ್ಮಕ ಕನ್ನಡ ಕೆಲಸ ಮಾಡುತ್ತಿದೆ. ಈಗ ಬಂದಿರುವ ಕನ್ನಡೇತರ ಅಧಿಕಾರಿಗಳು ಸಂಘವು ಅನಧಿಕೃತವಾಗಿ ಕಚೇರಿ ಆಕ್ರಮಿಸಿಕೊಂಡಿದೆ ಎಂದು ಆದೇಶ ಪತ್ರನೀಡಿ, ಕಚೇರಿ ತೆರವುಗೊಳಿಸಿದ್ದಾರೆ. ಕಚೇರಿಯಲ್ಲಿದ್ದ ವಸ್ತುಗಳನ್ನು ಪಡಸಾಲೆಗೆ ಹಾಕಿದ್ದಾರೆ. ಈ ಕಚೇರಿಯನ್ನು ಅಲ್ಲಿಯೇ ಉಳಿಸಿಕೊಡಬೇಕು' ಎಂದು ಕೋರಿದರು.

ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಎಚ್.ಡಿ. ಕುಮಾರಸ್ವಾಮಿ, 'ಕೇಂದ್ರ ನಗರಾಭಿವೃದ್ಧಿ ಸಚಿವರೊಂದಿಗೆ ಮಾತನಾಡಿ, ಸಂಘದಕಚೇರಿ ಉಳಿಸಿಕೊಡಲಾಗುವುದು' ಎಂದು ಭರವಸೆ ನೀಡಿದರು.

ನೈರುತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂಖ್ಯೆ ಎಚ್‌ಇ–ಟಿಆರ್‌ಡಿ–2025–26–ಒಟಿ–12 ದಿನಾಂಕ 24.06.2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದಲ್ಲಿ ಪಕ್ಷಿಗಳ ಹಾವಳಿ ತಪ್ಪಿಸಲು ಟ್ರಾಕ್ಷನ್ ಅಳವಡಿಕೆಗಳಲ್ಲಿ ಅಧಿಕ ಸಾಂದ್ರತೆಯ ಪಾಲಿಥಿಲೀನ್ ಜಾಲರಿ ಮತ್ತು ಟ್ರಾಕ್ಷನ್ ಅಳವಡಿಕೆ ರಚನೆಗಳ ಮೇಲೆ ಕೋತಿಗಳು ಹತ್ತುವುದನ್ನು ತಡೆಯಲು ಮುಳ್ಳುತಂತಿ ವ್ಯವಸ್ಥೆ.	ರೂ. 1,35,47,000.00/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23–07–2025 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ ಟ್ರಾಕ್ಷನ್ ವಿತರಣೆ/ ಹುಬ್ಬಳ್ಳಿ
ಪಿಯುಬಿ/232/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26
ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ. Y/E.29/2025-26/15
ದಿನಾಂಕ: 19.06.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
(ಮರು ಟೆಂಡರು) ಕೃಷ್ಣರಾಜ ನಗರ ರೈಲ್ವೆ ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ – 01 ರಲ್ಲಿ ಸ್ಥಾಪಿಸಲಾದ ಮೆ. ಕಾಮಾಯಿ ಮಾದರಿಯ ಲಿಫ್ಟ್‌ಗೆ 05 ವರ್ಷಗಳ ಅವಧಿಗೆ ಸಮಗ್ರವಾದ ವಾರ್ಷಿಕ ನಿರ್ವಹಣಾ ಒಪ್ಪಂದ (ಸಿಎಎಂಸಿ).	ರೂ. 4,23,813/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11.07.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಸಾಮಾನ್ಯ/ಮೈಸೂರು
PUB/225/AAF/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRRLY

ನೈರುತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂಖ್ಯೆ: ಅಧಿಸೂಚನೆ ಸಂಖ್ಯೆ. ಎಸ್ ಡಬ್ಲ್ಯೂಆರ್–ಆರ್‌ಎಸ್‌ಪಿ–ಎಲ್‌ಸಿ–ಡಿಪಿಆರ್–01
ದಿನಾಂಕ: 23.06.2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಸುರಂಗಮಾರ್ಗದೊಂದಿಗೆ ರಸ್ತೆ ಮೆಲ್ಸೇತುವೆ/ರಸ್ತೆ ಕೆಳ ಸೇತುವೆಗಳನ್ನು ನಿರ್ಮಿಸುವ ಮೂಲಕ 90 ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದುಹಾಕಲು ವಿಸ್ತೃತ ಯೋಜನಾ ವರದಿ ತಯಾರಿ (ಡಿಪಿಆರ್), ಅಂದಾಜು ವೆಚ್ಚ ಮತ್ತು ಪರಿಕಲ್ಪನಾ ಯೋಜನೆ, ಕಾರ್ಯಸಾಧ್ಯತಾ ಅಧ್ಯಯನ	ರೂ.4,65,70,570/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23–07–2025 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಉಪ ಮುಖ್ಯ ಎಂಜಿನಿಯರ್, ರಸ್ತೆ ಮೆಲ್ಸೇತುವೆಗಳು, ಹುಬ್ಬಳ್ಳಿ
ಪಿಯುಬಿ/227/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26
ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | SWRRLY

ನೈರುತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂಖ್ಯೆ : ಎಚ್‌ಇ–ಟಿಆರ್‌ಡಿ–2025–26–ಒಟಿ–09 ದಿನಾಂಕ 24.06.2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಗಳಿಗೆ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಕಾರನ್‌ಜೋಲ್, ದೂಧ್‌ಸಾಗರ್ ಮತ್ತು ಸೋನಲಿಯುಮ್ ನಿಲ್ದಾಣಗಳಲ್ಲಿ ಹಳೆಯ ಸಿಗ್ನಲಿಂಗ್ ಕೇಂದ್ರಗಳ ಬದಲಾವಣೆಗಾಗಿ ಅಕ್ಸಿಲರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸುವುದು.	ರೂ.70,79,635.00/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23–07–2025 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಎಂಜಿನಿಯರ್/ಟ್ರಾಕ್ಷನ್ ವಿತರಣೆ, ಹುಬ್ಬಳ್ಳಿ
ಪಿಯುಬಿ/230/ಎಎಡಿ 360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26
ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ
ಅರ್ಜಿ ಅಧಿಸೂಚನೆ ಸಂ.: 210/Halts/DBS Halt/2025/SBC Division
ದಿನಾಂಕ: 19.06.2025
ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗೆ ಸಹಿ ಮಾಡಿದವರು, ಡಾಬಸ್‌ಪೇಟೆ (ಡಿಬಿಎಸ್) ರೈಲು ನಿಲ್ದಾಣ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುವ ವಿದ್ಯಾವಂತ ನಿರುದ್ಯೋಗಿ ವ್ಯಕ್ತಿಗಳಿಂದ ಐದು (05) ವರ್ಷಗಳ ಅವಧಿಗೆ ಅಥವಾ ನಿಲ್ದಾಣವನ್ನು ಉನ್ನತೀಕರಣಗೊಳಿಸುವವರೆಗೆ ಯಾವುದು ಮೊದಲೇ ಅದರಂತೆ ಕಮಿಷನ್ ಆಧಾರದ ಮೇಲೆ ಕಾಯ್ದಿರಿಸದ ಟಿಕೆಟ್‌ಗಳನ್ನು ವಿತರಿಸುವ ಸಲುವಾಗಿ ಹಾಲ್ಟ್ ಏಜೆಂಟ್‌ಗಳ ನೇಮಕಾತಿಗಾಗಿ ಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸುತ್ತಾರೆ.

ಕ್ರ.ಸಂ.	ನಿಲ್ದಾಣದ ಹೆಸರು	ವಿಭಾಗ	ಕಾರ್ಯಾರಂಭಗೊಳಿಸುವ ದಿನಾಂಕ
1.	ಡಾಬಸ್‌ಪೇಟೆ (ಡಿಬಿಎಸ್)	ಯಶವಂತಪುರ	ದಿನಾಂಕವನ್ನು ಆಡಳಿತ ಮಂಡಳಿಯಿಂದ ಸೂಚಿಸಲಾಗುವುದು

ಅರ್ಜಿಗಳನ್ನು ಸಲ್ಲಿಸಬೇಕಾದ ದಿನಾಂಕ ಮತ್ತು ಸಮಯ: 14.07.2025 ರಂದು 10:00 ರಿಂದ 16:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು
PUB/223/AAF/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRRLY

ಸಿಬ್ಬಂದಿ ನೇಮಕಾತಿ ಆಯೋಗ
ಕರ್ನಾಟಕ–ಕೇರಳ ವಲಯ, ಬೆಂಗಳೂರು
ಸಂಯೋಜಿತ ಉನ್ನತ ಮಾಧ್ಯಮಿಕ (10+2) ಹಂತದ ಪರೀಕ್ಷೆಗಳು, 2025
ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ), ಪರ್ಸನಲ್ ಮತ್ತು ತರಬೇತಿ ಇಲಾಖೆ, ಭಾರತ ಸರ್ಕಾರ ಇವರು, ಭಾರತ ಸರ್ಕಾರದ ವಿವಿಧ ಸಚಿವಾಲಯಗಳಲ್ಲಿ / ಇಲಾಖೆಗಳಲ್ಲಿ / ಕಚೇರಿಗಳಲ್ಲಿರುವ ಸಿ ವೃಂದದ ಸುಮಾರು 3131 ಎಲ್‌ಡಿಸಿ/ಜೆಎಸ್‌ಎ ಮತ್ತು ಡಿಇಒ ತಾತ್ಕಾಲಿಕ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ವೇತನ ಹಂತ	ವೇತನ ಹಂತ 2 ರಿಂದ 5 (7ನೇ ಸಿಪಿಸಿ ಪ್ರಕಾರ) (ವಿಭಿನ್ನ ಹುದ್ದೆಗಳಿಗೆ)
ವಯೋಮಿತಿ	18 ರಿಂದ 27 ವರ್ಷ (ವಿಭಿನ್ನ ಹುದ್ದೆಗಳಿಗೆ)
ಶುಲ್ಕ	ರೂ. 100/– (ಮಹಿಳೆ/ ಎಸ್‌ಸಿ/ ಎಸ್‌ಟಿ/ ಇಎಸ್‌ಎಂ/ ಪಿಡಬ್ಲ್ಯುಬಿಡಿ ಅಭ್ಯರ್ಥಿಗಳಿಗೆ)
ಅಗತ್ಯ ವಿದ್ಯಾರ್ಹತೆಗಳು	ಅಂಗೀಕೃತ ಮಂಡಳಿಯ 12ನೇ ತರಗತಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ. ವಿಭಿನ್ನ ಹುದ್ದೆಗಳ ಅಗತ್ಯ ವಿದ್ಯಾರ್ಹತೆಗಳ ವಿವರಗಳಿಗಾಗಿ, ದಿನಾಂಕ 23.06.2025ರ ಸಿಬ್ಬಂದಿ ನೇಮಕಾತಿ ಆಯೋಗದ ಪ್ರಕಟಣೆಯ ಪ್ಯಾರಾ 8 ಪರಿಶೀಲಿಸಿರಿ.
ಅರ್ಜಿ ದಿನಾಂಕಗಳು/ ವಿಧಾನ	23.06.2025 ರಿಂದ 23.06.2025 (23:00) ರವರೆಗೆ ಸಿಬ್ಬಂದಿ ನೇಮಕಾತಿ ಆಯೋಗದ https://ssc.gov.in ವೆಬ್‌ಸೈಟ್ ಅಥವಾ mySSC ಆಂಡ್ರಾಯ್ಡ್ ಫೋನ್‌ಗಳ ತಂತ್ರಾಂಶದ ಮುಖಾಂತರ ಮಾತ್ರ ಆನ್‌ಲೈನ್ ವಿಧಾನದಲ್ಲಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು, ದಿನಾಂಕ 23.06.2025ರ ವಿವರವಾದ ಜಾಹೀರಾತನ್ನು https://ssc.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಿರಿ.
CBC 32203/11/0004/2526

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸಿದ್ದ ರೈತ ಸಂತೆ

ಗಮನ ಸೆಳೆದ ಮಾವು, ಹಲಸಿನ ಕೇಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾವು ಮತ್ತು ಹಲಸಿನಿಂದ ತಯಾರಿಸಲಾದ ಅಲಂಕಾರಿಕ ಕೇಕ್‌ಗಳು, ತೆಂಗಿನ ಗರಿಯಿಂದ ತಯಾರಿಸಿದ ಟೋಪಿ, ರಾಗಿಯಿಂದ ಪಾಪ್‌ಕಾರ್ನ್ ತಯಾರಿಸುವ ಯಂತ್ರ, ಅಲಂಕಾರಿಕ ಮೀನುಗಳು ಸೇರಿದಂತೆ ಮೌಲ್ಯವರ್ಧಿತ ಉತ್ಪನ್ನಗಳು ಸಾರ್ವಜನಿಕರನ್ನು ಸೆಳೆದವು.

ಇದು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಶನಿವಾರ ಆಯೋಜಿಸಿದ್ದ ರೈತ ಸಂತೆಯಲ್ಲಿ ಕಂಡು ಬಂದ ದೃಶ್ಯಗಳು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನ ಸಂಸ್ಥೆಯ ಅಡಿಯಲ್ಲಿ 36 ವಿದ್ಯಾರ್ಥಿಗಳು 120ಕ್ಕೂ ಹೆಚ್ಚು ವಿವಿಧ ನವೀನ ಉತ್ಪನ್ನಗಳನ್ನು ತಯಾರಿಸಿ, ರೈತ ಸಂತೆಯಲ್ಲಿ ಮಾರಾಟ ಮಾಡಿದರು. ಇವುಗಳಲ್ಲಿ ಪ್ರಮುಖವಾಗಿ ಓರಿಯೋ ಬ್ರೌನಿ, ಕ್ಯಾರೆಟ್ ಕೇಕ್, ಬಾಳೆ ಹಣ್ಣಿನ ಕೇಕ್, ವೈವಿಧ್ಯಮಯ ಬಿಸ್ಕತ್ತು, ಮಿಲೇಟ್ ಕೇಕ್, ಗ್ಲೂಟನ್ ಫ್ರೀ ಬಿಸ್ಕತ್ತು, ಓಟ್ಸ್ ಬಿಸ್ಕತ್ತು, ಮೊಟ್ಟೆರಹಿತ ವಿವಿಧ ಕೇಕ್‌ಗಳು, ತೆಂಗಿನ ಬನ್‌ಗಳು ಇದ್ದವು. ಸಾರ್ವಜನಿಕರು ಖರೀದಿಸುತ್ತಿದ್ದರು.

ಕೊಯ್ಲೋತ್ತರ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಯೋಜನೆಯ ಅಡಿಯಲ್ಲಿ ಸಿರಿಧಾನ್ಯಗಳಿಂದ ಹರಳು ಮಾಡುವ ಯಂತ್ರ, ಮುಸುಕಿನ ಜೋಳದ ತೆನೆಗಳಿಂದ ಕಾಳು ಬಿಡಿಸುವ ಯಂತ್ರ ಮತ್ತು ಹರಳು ಹೊಟ್ಟು ತೆಗೆಯುವ ಯಂತ್ರಗಳು ಗ್ರಾಹಕರ ಆಕರ್ಷಣೆಯಾಗಿದ್ದವು.

ಅಲಂಕಾರಿಕ ಮೀನುಗಳಾದ ಗಪ್ಪಿ, ಗೋಲ್ಡ್ ಫಿಶ್, ಕಪ್ಪು ಎಂಜೆಲ್, ಪ್ಲಾಟೆ, ಮೋಲಿ, ಕೊಟ್ಟಿಬಾಲ ಮತ್ತು ಅದರ ಆಹಾರ ಪದಾರ್ಥಗಳಿರುವ ಮಳಿಗೆಗಳು ಪ್ರದರ್ಶನದ ಆಕರ್ಷಣೀಯ ಕೇಂದ್ರವಾಗಿತ್ತು.

ಮಹಿಳಾ ಸ್ವಸಹಾಯ ಸಂಘದಿಂದ ವಿವಿಧ ಮೌಲ್ಯವರ್ಧಿತ ಪದಾರ್ಥಗಳಾದ ನುಗ್ಗೆ ಸೊಪ್ಪಿನ ಚಟ್ನಿಪುಡಿ, ಹಲಸು–ಮಾವು ಮತ್ತು ಬೆಟ್ಟದ ನೆಲ್ಲಿ ಜಾಮ್, ಹಲಸಿನ ಉಪ್ಪಿನಕಾಯಿ, ಬೆಲ್ಲಕಾಯಿ ತೊಕ್ಕು, ಬಾಳೆ ಹೂವಿನ ತೊಕ್ಕು ಸೇರಿದಂತೆ ಹಲವಾರು ಪದಾರ್ಥಗಳು ಪ್ರದರ್ಶನ ಮತ್ತು ಮಾರಾಟ ನಡೆಯಿತು.

ನಗರ ಪ್ರದೇಶದ ಮಕ್ಕಳು ಎತ್ತಿನ ಬಂಡಿಯ ಸವಾರಿ ಮಾಡಿದರು. ಸಂತೆಯ ಅಂಗಳದಲ್ಲಿ ವಿವಿಧ ಜಾನುವಾರುಗಳು ನೋಡುಗರನ್ನು ಗಮನ ಸೆಳೆಯುತ್ತಿದ್ದವು.

ಬೆಂಗಳೂರು ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ವಿವಿಧ ಸಸ್ಯಾಭಿವೃದ್ಧಿ ಸಾಮಗ್ರಿಗಳು, ಪ್ರಮುಖವಾಗಿ ತೋಟಗಾರಿಕಾ ಬೆಳೆಗಳಾದ ಹಣ್ಣುಗಳಾದ ಮಾವು, ನೇರಳೆ, ಹಲಸು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರಗಳು ಕೃಷಿ ಯಂತ್ರೋಪಕರಣಗಳು ಖರೀದಿಗೆ ಅವಕಾಶ ನೀಡಲಾಗಿತ್ತು.

ರೈತ ಸಂತೆಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ಉದ್ಘಾಟಿಸಿದರು.

ಮುಖ್ಯಾಂಶಗಳು

- 36 ವಿದ್ಯಾರ್ಥಿಗಳಿಂದ 120ಕ್ಕೂ ಹೆಚ್ಚು ನವೀನ ಉತ್ಪನ್ನಗಳ ಪ್ರದರ್ಶನ
- ವಿವಿಧ ಕೃಷಿ ಪೂರಕ ತಂತ್ರಜ್ಞಾನ, ಪರಿಕರಗಳ ಅನಾವರಣ

ಮಕ್ಕಳು ಎತ್ತಿನ ಬಂಡಿಯಲ್ಲಿ ಸವಾರಿ ಮಾಡಿದರು

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಹೆಣ್ಣೂರು ರಸ್ತೆಯ 66/11 ಕೆ.ವಿ. ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣೆ ಕೈಗೊಳ್ಳುವ ಕಾರಣ ಇದೇ 30ರಂದು ಬೆಳಿಗ್ಗೆ 11ರಿಂದ ಸಂಜೆ 4 ಗಂಟೆಯವರೆಗೆ ನಗರದ ಕೆಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಹೆಣ್ಣೂರು ಬಂಡೆ, ಸಮುದ್ರಿಕಾ ಎನ್‌ಕ್ಲೇವ್, ಗ್ರೇಸ್ ಗಾರ್ಡನ್, ಕ್ರಿಸ್ತು ಜಯಂತಿ ಕಾಲೇಜ್, ಕೆ. ನಾರಾಯಣಪುರ, ಆಶಾ ಟೌನ್‌ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್‌ಶಿಪ್, ಕೆ.ನಾರಾಯಣಪುರ ಕ್ರಾಸ್, ಪಟೇಲ್ ರಾಮಯ್ಯ ಲೇಔಟ್, ಅಂಜನಪ್ಪ ಲೇಔಟ್, ಬೈರತಿ ಕ್ರಾಸ್, ಬೈರತಿ ಹಳ್ಳಿ, ಎವರ್ ಗ್ರೀನ್ ಲೇಔಟ್, ಕನಕಶ್ರೀ ಲೇಔಟ್, ಗೆದ್ದಲಹಳ್ಳಿ, ಬ್ಲೆಸ್ಸಿಂಗ್ ಗಾರ್ಡನ್, ಮಂತ್ರಿಅಪಾರ್ಟ್‌ಮೆಂಟ್, ಹಿರೇಮಠ ಲೇಔಟ್, ಟ್ರಿನಿಟಿ ಫಾರ್ಚೂನ್, ಮೈಕಲ್ ಸ್ಕೂಲ್, ವಡ್ಡರಪಾಳ್ಯ, ಅನುಗ್ರಹ ಲೇಔಟ್, ಕಾವೇರಿ ಲೇಔಟ್, ದೊಡ್ಡಗುಬ್ಬಿ ಕ್ರಾಸ್, ಕುವೆಂಪು ಲೇಔಟ್, ಸಂಗಮ್ ಎನ್‌ಕ್ಲೇವ್, ತಿಮ್ಮೇಗೌಡ ಲೇಔಟ್, ಮಂಜುನಾಥ್ ನಗರ, ಅಗರ ಗ್ರಾಮ, ಪಟಾಲಮ್ಮ ದೇವಸ್ಥಾನ, ಹೊಸ ಮಿಲೇನಿಯಮ್ ಶಾಲೆ, ಲಕ್ಕಮ್ಮ ಲೇಔಟ್, ಪ್ರಕಾಶ್ ಗಾರ್ಡನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ನಗರದಲ್ಲಿ ಇಂದು

ಬೃಹತ್ ಇ-ಖಾತಾ ಮೇಳಕ್ಕೆ ಚಾಲನೆ: ಡಿ.ಕೆ.ಶಿವಕುಮಾರ್, ಕೃಷ್ಣ ಬೈರೇಗೌಡ, ಆಯೋಜನೆ: ಕಂದಾಯ ಇಲಾಖೆ, ಸ್ಥಳ: ಸಹಕಾರನಗರ ಮೈದಾನ, ಕೋಡಿಗೆಹಳ್ಳಿ, ಬೆಳಿಗ್ಗೆ 8ರಿಂದ (ವೇದಿಕೆ ಕಾರ್ಯಕ್ರಮ ಬೆಳಿಗ್ಗೆ 11ಕ್ಕೆ)

ವಾರ್ಷಿಕ ಮಹಿಳಾ ಮತ್ತು ಮಕ್ಕಳ ಕ್ರೀಡಾಕೂಟ-2025: ಉದ್ಘಾಟಕೆ: ಕೆ. ರಂಗಣ್ಣ, ಅತಿಥಿಗಳು: ಚಂದ್ರಕಾಂತ್ ಭಂಡಾರೆ, ರಾಜೇಶ್ವರಿ ಶ್ರೀನಿವಾಸ ವಾಂಜರೆ, ಅಧ್ಯಕ್ಷತೆ: ಜಲಜಾ ಸವ್ವಾಸೇರೆ, ಆಯೋಜನೆ: ಸಂಯುಕ್ತ ಸ್ವಕುಳಸಾಳಿ ಮಹಿಳಾ ಮಂಡಳಿ ಚಾರಿಟಬಲ್ ಟ್ರಸ್ಟ್, ಸ್ಥಳ: ಪಾಂಚಜನ್ಯ ವಿದ್ಯಾಪೀಠ, ಕೆಎಚ್‌ಬಿ ಕಾಲೊನಿ, ಬಸವೇಶ್ವರನಗರ, ಬೆಳಿಗ್ಗೆ 9

ರಜತ ಸಂಭ್ರಮ-2025, ಗೀತ ಗಾಯನ, ಸ್ಮರಣ ಸಂಚಿಕೆ ಅನಾವರಣ, ಗೌರವ ಅಭಿವಂದನೆ: ಅತಿಥಿಗಳು: ಎಸ್.ಎಸ್. ನಾಗಾನಂದ, ರಾಘವೇಂದ್ರ ಗಣಪತಿ, ಎ.ಎಂ. ಚಂದ್ರಶೇಖರ, ಗಾಯತ್ರಿ ಕೇಶವ್, ಆಯೋಜನೆ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 9.30

'ನುಡಿ ಸಂಭ್ರಮ-2025' ರಾಜ್ಯಮಟ್ಟದ ತೃತೀಯ ವಾರ್ಷಿಕ ಸಮಾವೇಶ: ಅತಿಥಿ: ಕಬ್ಬಿನಾಲೆ ವಸಂತ ಭಾರದ್ವಾಜ್, ಅಧ್ಯಕ್ಷತೆ: ಶ್ಯಾಮ್ ಸುಂದರ್, 'ನುಡಿಹೆಜ್ಜೆ ಇ-ಹೊತ್ತಿಗೆ ಬಿಡುಗಡೆ: ಧನಂಜಯ ಜೀವಾಳ, ಪ್ರಾಸ್ತಾವಿಕ ನುಡಿ: ವೇಣು ಕುಮಾರ್, 'ನುಡಿಭೂಷಣ' ಪ್ರಶಸ್ತಿ ಸ್ವೀಕರಿಸುವವರು: ಅನಸೂಯ ಸಿದ್ಧರಾಮ, ಉದಯ ದತ್ತಾತ್ರೇಯ ರಾವ್ ಪಾಟೀಲ, ತ.ನಾ. ಶಿವಕುಮಾರ್, ಆಯೋಜನೆ: ನುಡಿತೋರಣ, ಸ್ಥಳ: ಅಕ್ಕ ಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

'ವಿಎಸ್‌ಕೆ ಮಾಧ್ಯಮ' ಪ್ರಶಸ್ತಿ ಪ್ರದಾನ: ಅತಿಥಿಗಳು: ಸುಧೀರ್, ವಿ. ಶ್ರೀಧರ್, ಪ್ರಶಸ್ತಿ ಸ್ವೀಕರಿಸುವವರು: ರವಿ ಹೆಗಡೆ, ಕೆ.ಎಸ್. ಜಯಲಕ್ಷ್ಮಿ, ರಾಮು ಪಾಟೀಲ್, ಹರಿಪ್ರಸಾದ್ ಎ., ರಾಧಾಕೃಷ್ಣ ಕಲ್ಚಾರ್, ಮುಮ್ತಾಜ್ ಅಬ್ದುಲ್ ನೆಲ್ಯಡ್ಕ, ಆಯೋಜನೆ: ವಿಶ್ವ ಸಂವಾದ ಕೇಂದ್ರ, ಸ್ಥಳ: ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ಪ್ರೊ. ಗೋವಿಂದ ಜಾಲಿಹಾಳ್ ದತ್ತಿ 'ಭಕ್ತಿಗೀತೆಗಳ ಗಾಯನ ಸ್ಪರ್ಧೆ, ಬಹುಮಾನ ವಿತರಣೆ': ಉದ್ಘಾಟನೆ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಮಿಲಿಂದ್ ಜಿ. ಜಾಲಿಹಾಳ್, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

'2024-2025ನೇ ಸಾಲಿನ ವಿದ್ಯಾರ್ಥಿವೇತನ ವಿತರಣಾ ಸಮಾರಂಭ: ಉದ್ಘಾಟನೆ: ಜಿ.ಎಚ್.ನಾಗರಾಜ್, ಟಿ. ನರಸಿಂಹಸ್ವಾಮಿ ಅವರ 'ಸತ್ಯದ ಬೆಳಕು' ಪುಸ್ತಕ ಬಿಡುಗಡೆ, ಅಧ್ಯಕ್ಷತೆ: ಎಂ.ನಾಗರಾಜ್, ಅತಿಥಿ: ಟಿ. ಶಿವಕುಮಾರ್, ಆಯೋಜನೆ: ಬೆಂಗಳೂರು ಈಡಿಗರ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳ ಸಂಘ, ಸ್ಥಳ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 10.30

'ಜರಗನಹಳ್ಳಿ ಶಿವಶಂಕರ್ ನುಡಿಸಿರಿ ಸಾಹಿತ್ಯ ಪ್ರಶಸ್ತಿ' ಪ್ರದಾನ: ಟಿ.ಎಸ್. ನಾಗಾಭರಣ, ಪ್ರಶಸ್ತಿ ಸ್ವೀಕರಿಸುವವರು: ಮಾಸ್ಕೇರಿ ಎಂ.ಕೆ. ನಾಯಕ, ಅತಿಥಿಗಳು: ರಾ.ನಂ. ಚಂದ್ರಶೇಖರ, ಸರ್ವಮಂಗಳಾ ಅರಳಿಮಟ್ಟಿ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಕರ್ನಾಟಕ ವಿಕಾಸ ರಂಗ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಟಿ.ಎಸ್. ನಾಗಾಭರಣ,

ಪರೇಷ್ಟಿ ನೃತ್ಯ ಪ್ರದರ್ಶನ: ಆಯೋಜನೆ: ಶುಭಂ ಎ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಮೇಡೈ, ಕೋರಮಂಗಲ, ಬೆಳಿಗ್ಗೆ 11

ಪ್ರೊ.ಎಸ್.ಚಂದ್ರಶೇಖರ್-75 ಅಭಿನಂದನಾ ಸಮಾರಂಭ, 'ಚಂದ್ರಶಿಖರ' ಅಭಿನಂದನಾ ಗ್ರಂಥ ಬಿಡುಗಡೆ: ಉದ್ಘಾಟನೆ: ಅಗ್ರಹಾರ ಕೃಷ್ಣಮೂರ್ತಿ, ಅಧ್ಯಕ್ಷತೆ: ಪುಟ್ಟಣ್ಣ, ಗ್ರಂಥ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅತಿಥಿಗಳು: ಕೆ.ವಿ. ನಾರಾಯಣ, ಎಚ್.ಎ. ರಂಗನಾಥ, ರಾಮಚಂದ್ರೇಗೌಡ ಎಂ., ಅಶ್ವತ್ಥನಾರಾಯಣ, ಆರ್. ಕಾವಲಮ್ಮ, ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ: ಪ್ರೊ.ಎಸ್. ಚಂದ್ರಶೇಖರ್ ಅಭಿನಂದನಾ ಸಮಿತಿ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಮಧ್ಯಾಹ್ನ 2

ಬರಗೂರು ರಾಮಚಂದ್ರಪ್ಪ

'ಪರಂಪರಾ' ಸಂಗೀತ ಕಛೇರಿ: ಹಿರಣ್ಮಯೀ ಎಸ್., ಸಮೀರ್ ಕುಲಕರ್ಣಿ, ದಿವ್ಯಾ ಶೆಣೈ, ಓಂಕಾರನಾಥ್ ಹವಾಲ್ದಾರ್, ನಾಗರಾಜರಾವ್ ಹವಾಲ್ದಾರ್, ಆಯೋಜನೆ: ಓಂಕಾರನಾಥ ಹವಾಲ್ದಾರ್ ಮ್ಯೂಸಿಕ್ ಅಕಾಡೆಮಿ, ಸ್ಥಳ: ನಾದಶ್ರೀ ಆರ್ಟ್ ಸ್ಪೇಸ್, ಮಧ್ಯಾಹ್ನ 2.30

ಹಾಸ್ಯ ಕಚಗುಳಿ, ಸಂಗೀತ ಕಛೇರಿ: ಅತಿಥಿಗಳು: ಬಿ.ವಿ. ಕೃಷ್ಣ, ಉಷಾ, ಅಧ್ಯಕ್ಷತೆ: ಎನ್. ಶ್ರೀನಿವಾಸಮೂರ್ತಿ, ಆಯೋಜನೆ: ಭಾರತೀಯ ಕರ್ನಾಟಕ ಸಂಘ, ಸ್ಥಳ: ಕಬಿನಿ ಸಭಾಂಗಣ, ಮೂರನೇ ಮಹಡಿ, ಇಂದಿರಾನಗರ ಕ್ಲಬ್, ಸಂಜೆ 4

ಉಷಾ ಬಸಪ್ಪ ಅವರಿಗೆ ನೃತ್ಯಾಭಿನಂದನೆ: ಉದ್ಘಾಟನೆ: ಕೆ.ಎ. ದಯಾನಂದ, ಅಭಿನಂದಿಸುವವರು: ಶುಭ ಧನಂಜಯ, ಅತಿಥಿಗಳು: ಕಾ.ತ. ಚಿಕ್ಕಣ್ಣ, ಕೆ.ಎಂ. ಕುಸುಮಾ, ಎಸ್.ವಿ. ಗಿರಧರ್, ಆಯೋಜನೆ: ಸಂಭ್ರಮ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ: ನಿರ್ದೇಶನ: ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 5

'ಯೋಗ ರತ್ನ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ವಚನಾನಂದ ಸ್ವಾಮೀಜಿ, ಉಪಸ್ಥಿತಿ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಸಂತೋಷ್ ಎಸ್. ಲಾಡ್, ಆಯೋಜನೆ: ಶ್ವಾಸಯೋಗ ಸಂಸ್ಥೆ, ಸಂತೋಷ್ ಲಾಡ್ ಫೌಂಡೇಷನ್, ಸ್ಥಳ: ದಿ ಗ್ರ್ಯಾಂಡ್ ಕ್ಯಾಸಲ್, ಗೇಟ್ ಸಂಖ್ಯೆ 6, ಅರಮನೆ ಮೈದಾನ, ಸಂಜೆ 5

ರೋಟರಿ ಡಿಸ್ಟ್ರಿಕ್ಟ್ 3192 ಪದಗ್ರಹಣ ಸಮಾರಂಭ: ಎಲಿಜಬೆತ್ ಚೆರಿಯನ್, ಕೆ.ಪಿ. ನಾಗೇಶ್, ಮನೋಜ್ ದೇಸಾಯಿ, ಎನ್.ಎಸ್. ಮಹಾದೇವ ಪ್ರಸಾದ್, ಆಯೋಜನೆ: ರೋಟರಿ ಡಿಸ್ಟ್ರಿಕ್ಟ್ 3192, ಸ್ಥಳ: ತಾಜ್ ಯಶವಂತಪುರ, ಸಂಜೆ 5ರಿಂದ

ಬಸವ ಜಯಂತಿ, ನಾಲ್ಕನೇ ವಾರ್ಷಿಕೋತ್ಸವ: ಸಾನ್ನಿಧ್ಯ: ಬಸವಾನಂದ ಸ್ವಾಮೀಜಿ, ಅಧ್ಯಕ್ಷತೆ: ರಾಜಶೇಖರಯ್ಯ ಸಿ.ಎಂ., ಅತಿಥಿ: ಪ್ರಿಯದರ್ಶಿನಿ ಈಶ್ವರ ಸಾಣಿಕೊಪ್ಪ, ಸನ್ಮಾನಿತರು: ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ಆಯೋಜನೆ: ಬಸವ ವೇದಿಕೆ ವಿಶ್ವಪ್ರಿಯನಗರ, ಸ್ಥಳ: ಎಸ್.ಎಸ್. ಕನ್ವೆನ್ಷನ್ ಹಾಲ್, ಬೇಗೂರು, ಸಂಜೆ 5.30

'ಶರ್ಮಿಷ್ಠೆ' ಏಕವ್ಯಕ್ತಿ ರಂಗ ಪ್ರದರ್ಶನ: ಪ್ರಸ್ತುತಿ: ಉಮಾಶ್ರೀ, ರಚನೆ: ಬೇಲೂರು ರಘುನಂದನ್, ನಿರ್ದೇಶನ: ಚಿದಂಬರರಾವ್ ಜಂಬೆ, ಆಯೋಜನೆ: ರಂಗಸಂಪದ, ಸ್ಥಳ: ರಂಗಶಂಕರ ಜೆ.ಪಿ. ನಗರ, ಮಧ್ಯಾಹ್ನ 3.30ಕ್ಕೆ, ಸಂಜೆ 7.30ಕ್ಕೆ

ಉಮಾಶ್ರೀ

ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ವಾಚನ ಗಾಯನ, ನರ್ತನ ನಮನ: ಅತಿಥಿಗಳು: ಶಿವರಾಜ ತಂಗಡಗಿ, ಎಂ.ವಿ. ವೆಂಕಟೇಶ್, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.10

ಅಮೋಘ ಸಂಗೀತ ಕಛೇರಿ: ದ್ವಂದ್ವ ಪಿಟೀಲು ವಾದನ: ಮೈಸೂರು ನಾಗರಾಜ್, ಮೈಸೂರು ಮಂಜುನಾಥ್, ಮೃದಂಗ: ಪತ್ರಿ ಸತೀಶ್ ಕುಮಾರ್, ಘಟ: ಗಿರಿಧರ್ ಉಡುಪ, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸುಪ್ರಿತಾ, ಅತಿಥಿಗಳು: ಶ್ರುತಿ ಎನ್. ಮೂರ್ತಿ, ರತ್ನಾ ಸುಪ್ರಿಯಾ ಶ್ರೀಧರನ್, ವೈ.ಕೆ. ಸಂಧ್ಯಾ ಶರ್ಮಾ, ಸ್ಥಳ: ವಿವೇಕ ಸಭಾಂಗಣ, ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 5.30

'ಸೇವಂತಿ ಪ್ರಸಂಗ' ನಾಟಕ ಪ್ರದರ್ಶನ: ರಚನೆ: ಜಯಂತ್ ಕಾಯ್ಕಿಣಿ, ನಿರ್ದೇಶನ: ವಿಜಯ್ ಕಶ್ಯಪ್ ಕೆ.ಎಸ್., ಆಯೋಜನೆ: ರಂಗರಸಧಾರೆ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 7

'ಸಾವಿತ್ರಿಬಾಯಿ ಫುಲೆ' ಏಕವ್ಯಕ್ತಿ ರಂಗ ಪ್ರಸ್ತುತಿ: ಶೈಲಜಾ ಪ್ರಕಾಶ್ ಎ.ಎಸ್., ರಚನೆ: ಡಿ.ಎಸ್. ಚೌಗಲೆ, ಆಯೋಜನೆ: ಕೆ.ವಿ. ಸುಬ್ಬಣ್ಣ ರಂಗ ಸಮೂಹದ ರಂಗಮಂದಿರ, ಟೀಚರ್ಸ್ ಕಾಲೊನಿ, ವಸುಧಾ ಭವನ, ದಯಾನಂದ್ ಸಾಗರ್ ಕಾಲೇಜಿನ ಹತ್ತಿರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

tifr HBCSE
ಹೋಮಿ ಭಾಭಾ ವಿಜ್ಞಾನ ಶಿಕ್ಷಣ ಕೇಂದ್ರ
ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ
ಇಂಡಿಯನ್ ಒಲಿಂಪಿಯಾಡ್ ಕ್ವಾಲಿಫಾಯರ್ ಇನ್ ಮ್ಯಾಥೆಮ್ಯಾಟಿಕ್ಸ್ (ಐಒಕ್ಯೂಎಂ) 2025-26
ಇಂಡಿಯನ್ ಒಲಿಂಪಿಯಾಡ್ ಕ್ವಾಲಿಫಾಯರ್ ಇನ್ ಮ್ಯಾಥೆಮ್ಯಾಟಿಕ್ಸ್ (ಐಒಕ್ಯೂಎಂ) 2025–26 ರಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಎಲ್ಲಾ ವಿದ್ಯಾರ್ಥಿಗಳು, ಸೆಪ್ಟಂಬರ್ 7, 2025 ರಂದು ಕೈಗೊಳ್ಳಲಾಗುವ ಇಂಡಿಯನ್ ಒಲಿಂಪಿಯಾಡ್ ಕ್ವಾಲಿಫಾಯರ್ ಎಕ್ಸಾಮಿನೇಶನ್ ಇನ್ ಮ್ಯಾಥೆಮ್ಯಾಟಿಕ್ಸ್ (ಐಒಕ್ಯೂಎಂ) ಪರೀಕ್ಷೆಯನ್ನು ಕಡ್ಡಾಯವಾಗಿ ಎದುರಿಸತಕ್ಕದ್ದು. 2026ರ ಇಂಟರ್‌ನ್ಯಾಷನಲ್ ಮ್ಯಾಥೆಮ್ಯಾಟಿಕಲ್ ಒಲಿಂಪಿಯಾಡ್ (ಐಎಂಒ) ಮತ್ತು ಯುರೋಪಿಯನ್ ಗರ್ಲ್ಸ್ ಮ್ಯಾಥೆಮ್ಯಾಟಿಕಲ್ ಒಲಿಂಪಿಯಾಡ್ (ಇಜಿಎಂಒ) 2027ರಲ್ಲಿ ಭಾರತೀಯ ತಂಡದ ಒಬ್ಬ ಅಧಿಕೃತ ಸದಸ್ಯರಾಗಿ ಪಾಲ್ಗೊಳ್ಳಲು ಐಒಕ್ಯೂಎಂ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಮೊದಲ ಹೆಜ್ಜೆಯಾಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ಮತ್ತು ನೋಂದಣಿ ಲಿಂಕ್‌ಗಾಗಿ ಭೇಟಿ ಕೊಡಿ: https://olymiads.hbcse.tifr.res.in ಮತ್ತು https://www.mtai.org.in/
ಆಯಾ ಕೇಂದ್ರಗಳಲ್ಲಿ ನೇರವಾಗಿ ನೋಂದಣಿ ಮಾಡಿಕೊಳ್ಳಬಹುದು. ಪರ್ಯಾಯವಾಗಿ, 1ನೇ ಜುಲೈ 2025ರ ಬಳಿಕ https://ioqmexam.in/ ನಲ್ಲಿ ಕೂಡ ನೋಂದಣಿ ಮಾಡಿಕೊಳ್ಳಬಹುದು. ಕೊನೆಯ ದಿನಾಂಕ: 26ನೇ ಜುಲೈ 2025.
CBC 48143/12/0003/2526

ಒತ್ತುವರಿ ತೆರವು ಖಂಡಿಸಿ ಪ್ರತಿಭಟನೆ

ದಿನ್ನೂರು ಗ್ರಾಮಸ್ಥರು ಹಾಗೂ ವಿವಿಧ ರೈತ, ದಲಿತ ಸಂಘಟನೆಗಳ ಕಾರ್ಯಕರ್ತರು ಒತ್ತುವರಿ ತೆರವು ಖಂಡಿಸಿ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಅರಣ್ಯ ಇಲಾಖೆ ಅಧಿಕಾರಿಗಳು ಕೈಗೊಂಡಿರುವ ಅರಣ್ಯ ಭೂಮಿ ಒತ್ತುವರಿ ತೆರವು ಕಾರ್ಯಾಚರಣೆಯ ವಿರುದ್ಧ ಮಹದೇವಪುರ ಕ್ಷೇತ್ರದ ದಿನ್ನೂರು ಗ್ರಾಮಸ್ಥರು ಹಾಗೂ ವಿವಿಧ ರೈತ, ದಲಿತ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

‘ಅಧಿಕಾರಿಗಳು ನೋಟಿಸ್ ನೀಡದೆ ಅರಣ್ಯ ಭೂಮಿ ಎಂದು ಕೃಷಿ ಜಮೀನುಗಳನ್ನು ಪೊಲೀಸರ ರಕ್ಷಣೆಯಲ್ಲಿ ಜೆಸಿಬಿ ಬಳಸಿ ಕಸಿಯಲು ಮುಂದಾಗಿದ್ದಾರೆ’ ಎಂದು ಗ್ರಾಮಸ್ಥರು ಕಿಡಿಕಾರಿದರು.

‘ಜಿಲ್ಲಾಧಿಕಾರಿಯಾಗಿದ್ದ ಲಿಂಗಯ್ಯ ಅವರು ಕಾಡುಗೋಡಿ ಸಾಮೂಹಿಕ ಸಹಕಾರ ಸಂಘದ ಮೂಲಕ ದಲಿತ ಕುಟುಂಬಗಳಿಗೆ ತಲಾ 3-4 ಎಕರೆಯಂತೆ ಜಮೀನು ಮಂಜೂರು ಮಾಡಿದ್ದರು. ಈಗ ಜಮೀನಿನ ಮೌಲ್ಯ ಹೆಚ್ಚಾಗಿರುವುದರಿಂದ ಒತ್ತುವರಿ ನೆಪದಲ್ಲಿ ಭೂಮಿ ಕಸಿದುಕೊಂಡು ಭೂ ಮಾಫಿಯಾಗೆ ನೀಡಲು ಹುನ್ನಾರ ನಡೆಸಲಾಗಿದೆ’ ಎಂದು ಸಾಮಾಜಿಕ ಹೋರಾಟಗಾರ ಎಂ.ಆರ್. ರಫೀಕ್ ದೂರಿದರು.

‘ಮೂರು ತಲೆಮಾರುಗಳಿಂದ ಆಧಾರವಾಗಿರುವ ಕೃಷಿ ಭೂಮಿಯನ್ನು ಕಿತ್ತುಕೊಳ್ಳಲು ಹುನ್ನಾರ ನಡೆಸಲಾಗಿದೆ’ ಎಂದು ಸ್ಥಳೀಯ ಡಿಎಸ್‌ಎಸ್ ರಾಜು ಆಕ್ರೋಶ ವ್ಯಕ್ತಪಡಿಸಿದರು.

‘ನಿಷ್ಪಕ್ಷಪಾತ ತನಿಖೆ ನಡೆಸಲು ವಿಫಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೋಷಿತ ಸಮುದಾಯಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ’ ಎಂದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಆರೋಪಿಸಿದರು.

ಪಿಯುಸಿಎಲ್, ಎಐಎಲ್‌ಎಜೆ ಮತ್ತು ಎಪಿಸಿಆರ್ ಸಹಯೋಗದಲ್ಲಿ ಸಿದ್ದಪಡಿಸಿದ್ದ ಮೊಹಮ್ಮದ್ ಅಶ್ರಫ್ ಅವರ ಗುಂಪು ಹತ್ಯೆಯ ಕುರಿತು ಸತ್ಯಶೋಧನಾ ವರದಿಯನ್ನು ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿ, ಅವರು ಮಾತನಾಡಿದರು.

‘ಅಶ್ರಫ್ ಮತ್ತು ಕತ್ತರಘಟ್ಟದ ದಲಿತರ ಯುವಕನ ಹತ್ಯೆ ಪ್ರಕರಣಗಳಲ್ಲಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಸಂತ್ರಸ್ತರ ಕುಟುಂಬಗಳನ್ನು ಭೇಟಿ ಮಾಡದಿರುವುದು ಸರಿಯಲ್ಲ. ದಕ್ಷಿಣ ಕನ್ನಡದಲ್ಲಿ ದಶಕಗಳಿಂದ ಸೌಹಾರ್ದ ಮತ್ತು ಮಾನವೀಯತೆಗೆ ಧಕ್ಕೆ ಆಗುತ್ತಿದೆ. ಅಶ್ರಫ್ ಅವರ ಸಹೋದರ ಜಬ್ಬಾರ್ ಹೇಳಿದಂತೆ ಇದು ಕೊನೆಯ ಗುಂಪು ಹತ್ಯೆಯಾಗಬೇಕು ಎಂದು ಹೇಳಿದರು.

ವಿಶ್ವಸಂಸ್ಥೆಯ ವರ್ಣಭೇದ ನೀತಿ ಸದಸ್ಯೆ ಮತ್ತು ಮಾನವ ಹಕ್ಕುಗಳ ಹೋರಾಟಗಾರ್ತಿ ಕೆ.ಪಿ. ಅಶ್ವಿನಿ, ‘ಎಲ್ಲ ರೀತಿಯ ಜನಾಂಗೀಯ ತಾರತಮ್ಯಗಳ ನಿರ್ಮೂಲನೆಗೆ ಸಂಬಂಧಿಸಿದ ಒಪ್ಪಂದಗಳಿಗೆ ಭಾರತ ಸಹಿ ಹಾಕಿದೆ. ಇಂತಹ ಹಿಂಸೆಗೆ ಕಡಿವಾಣ ಹಾಕಬೇಕು’ ಎಂದರು.

ಆಲ್ ಇಂಡಿಯಾ ಅಸೋಸಿಯೇಷನ್ ಫಾರ್ ಜಸ್ಟೀಸ್‌ನ ಅಧ್ಯಕ್ಷೆ ಮೈತ್ರೇಯಿ ಕೃಷ್ಣನ್ ಅವರು, ‘ಮೊಹಮ್ಮದ್ ಅಶ್ರಫ್ ಅವರ ಗುಂಪು ಹತ್ಯೆಯನ್ನು 2018ರಲ್ಲಿ ತಹಸೀನ್ ಪೂನಾವಾಲಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪಿನ ಹಿನ್ನೆಲೆಯಲ್ಲಿ ವಿವರಿಸಿದರು’

ವಕೀಲ ವಿನಯ್ ಶ್ರೀನಿವಾಸ್, ಮೊಹಮ್ಮದ್ ಹಯ್ಯಾನ್ ಜಬ್ಬಾರ್ ಸುದ್ದಿಗೋಷ್ಠಿಯಲ್ಲಿದ್ದರು.

ರೈನ್‌ಬೋ ಹಬ್ಬದಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಆಗ್ರಹ

‘ವಸತಿ ಸೌಲಭ್ಯ, ಆರ್ಥಿಕ ಬೆಂಬಲ ನೀಡಿ’

ಕಾರ್ಯಕ್ರಮದಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಸಂವಿಧಾನದ ಪೀಠಿಕೆ ವಾಚಿಸಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.ಮಹಿಳಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಬಾಬು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ನಾವು, ಬದುಕಿನ ಅನಿವಾರ್ಯತೆಗೆ ಭಿಕ್ಷಾಟನೆಯನ್ನು ಅವಲಂಬಿಸಿದ್ದೇವೆ. ಎಲ್ಲರಂತೆ ಜೀವನ ಸಾಗಿಸಲು ವಸತಿ, ಆರ್ಥಿಕ ಬೆಂಬಲ ಸೇರಿ ವಿವಿಧ ಸೌಲಭ್ಯಗಳನ್ನು ಒದಗಿಸಬೇಕು’ ಎಂದು ಲಿಂಗತ್ವ ಅಲ್ಪಸಂಖ್ಯಾತರು ಸರ್ಕಾರವನ್ನು ಆಗ್ರಹಿಸಿದರು.

ಸಂಗಮ ಸ್ವಯಂ ಸೇವಾ ಸಂಸ್ಥೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರೈನ್‌ಬೋ ಹಬ್ಬದಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಒಂದೆಡೆ ಸೇರಿ, ಸಮುದಾಯದವರ ಸಮಸ್ಯೆಗಳ ಬಗ್ಗೆ ಸಮಾಲೋಚನೆ ನಡೆಸಿದರು.

ಸಭೆಯಲ್ಲಿ ಸಮುದಾಯದ ವಿವಿಧ ಬೇಡಿಕೆಗಳ ಬಗ್ಗೆ ಹಕ್ಕೊತ್ತಾಯ ಮಂಡಿಸಿದ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕಿ ನಿಶಾ ಗೂಳೂರು, ‘ಚುನಾವಣೆಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ನಿರ್ಣಾಯಕರಲ್ಲ ಎಂಬ ಕಾರಣಕ್ಕೆ ಈ ಸಮುದಾಯವನ್ನು ಜನಪ್ರತಿನಿಧಿಗಳು ಕಡೆಗಣಿಸುತ್ತಾ ಬಂದಿದ್ದಾರೆ. ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರವು ನಿಗಮ ರಚಿಸಿ, ವಾರ್ಷಿಕ ₹200 ಕೋಟಿ ಮೀಸಲಿಡಬೇಕು. ವಸತಿ ರಹಿತ ಲಿಂಗತ್ವ ಅಲ್ಪಸಂಖ್ಯಾತರಿಗೆ ವಸತಿ ಸೌಲಭ್ಯ ಒದಗಿಸಬೇಕು’ ಎಂದು ಹೇಳಿದರು.

‘ಸರ್ಕಾರಿ ಉದ್ಯೋಗಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಶೇ 1 ರಷ್ಟು ಮೀಸಲಾತಿ ನೀಡಲಾಗಿದೆ. ಆದರೆ, ಪೊಲೀಸ್ ಸೇರಿ ವಿವಿಧ ಇಲಾಖೆಗಳಲ್ಲಿ ತರಬೇತಿ ಕೊರತೆ ಕಾರಣ ಉದ್ಯೋಗ ಪಡೆಯಲು ಸಾಧ್ಯವಾಗುತ್ತಿಲ್ಲ. ಅಗತ್ಯವಿರುವ ತರಬೇತಿಯನ್ನು ಒದಗಿಸಬೇಕು. ಉದ್ಯಮಶೀಲತೆಯಲ್ಲಿ ಯಶಸ್ವಿಯಾಗಲು ತಲಾ ₹ 2 ಲಕ್ಷ ಆರ್ಥಿಕ ನೆರವು ಒದಗಿಸಬೇಕು. ಮಾನವ ಹಕ್ಕುಗಳನ್ನು ರಕ್ಷಿಸಲು ಆಯೋಗವನ್ನು ಸ್ಥಾಪಿಸಬೇಕು’ ಎಂದು ಒತ್ತಾಯಿಸಿದರು.

‘ಲಿಂಗ ಪರಿವರ್ತನೆ ಶಸ್ತ್ರಚಿಕಿತ್ಸೆ ಸೌಲಭ್ಯ ಮತ್ತು ಶಸ್ತ್ರಚಿಕಿತ್ಸೆಯ ನಂತರ ಆರೈಕೆಗೆ ಹಣಕಾಸಿನ ನೆರವು ನೀಡಬೇಕು. ವಿವಿಧ ಆರೋಗ್ಯ ವಿಮಾ ಯೋಜನೆಗಳಲ್ಲಿ ಲಿಂಗ ಪರಿವರ್ತನೆ ಪ್ರಕ್ರಿಯೆ ಸೇರಿಸಬೇಕು. ಎಲ್ಲ ಲಿಂಗತ್ವ ಅಲ್ಪಸಂಖ್ಯಾತರಿಗೆ ಪಡಿತರ ಚೀಟಿಯನ್ನು ನೀಡಬೇಕು. ಸರ್ಕಾರಿ ಕಡತಗಳಲ್ಲಿ ‘ಮಂಗಳಮುಖಿ’ ಪದವನ್ನು ಕೈಬಿಟ್ಟು, ‘ಲಿಂಗತ್ವ ಅಲ್ಪಸಂಖ್ಯಾತರು’ ಎಂದೇ ಬಳಸಬೇಕು’ ಎಂದು ಆಗ್ರಹಿಸಿದರು.

ಮನೆ ಸಿಗುತ್ತಿಲ್ಲ: ಲಿಂಗತ್ವ ಅಲ್ಪಸಂಖ್ಯಾತೆ ಹಾಗೂ ಸಾಮಾಜಿಕ ಕಾರ್ಯಕರ್ತೆ ಅನಿ ಮಂಗಳೂರು, ‘ನಮ್ಮ ಸಮುದಾಯದವರನ್ನು ನೋಡುವ ದೃಷ್ಟಿ ಬೇರೆಯಿದೆ. ಸಮುದಾಯದವರಿಗೆ ಮನೆಗಳು ಬಾಡಿಗೆಗೆ ಸಿಗುತ್ತಿಲ್ಲ. ಯಾರೂ ಕೆಲಸ ನೀಡುತ್ತಿಲ್ಲ’ ಎಂದರು.

ಇದಕ್ಕೂ ಮೊದಲು ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳನ್ನು ಒಪ್ಪಿಕೊಂಡ ಪೋಷಕರಿಗೆ ಮತ್ತು ಶೇ 1 ರಷ್ಟು ಮೀಸಲಾತಿ ಅಡಿಯಲ್ಲಿ ಸರ್ಕಾರಿ ಉದ್ಯೋಗ ಪಡೆದ ಸಿದ್ದಪ್ಪ ಹುಕ್ಕೇರಿ ಅವರನ್ನು ಸನ್ಮಾನಿಸಲಾಯಿತು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಮುಖ್ಯಾಂಶಗಳು

- ಸಮುದಾಯದ ಪ್ರಗತಿಗೆ ನಿಗಮ ಸ್ಥಾಪಿಸಿ
- ಲಿಂಗತ್ವ ಅಲ್ಪಸಂಖ್ಯಾತರಿಗೆ ಪಡಿತರ ಚೀಟಿ ನೀಡಲಿ
- ಲಿಂಗತ್ವ ಅಲ್ಪಸಂಖ್ಯಾತರು ಎಂದೇ ಬಳಸಬೇಕು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call:9964627255

Banashankari

"AVAILABLE WANTED BDA Sites Banashankari 6TH Stg,Anjanapura Vishweshwaraiah Lyt 50x80 40x60 30x40 20x30,Value Properties Call Raju:9901315949, 9731814437

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishveswaraiah Layout. 9945724472.

NORTH FACING 40'x70' 'A' khata site for sale in BSK 6th stage, adjacent to 11th block, price 10000/ sqft slightly negotiable. Contact:- 9845380312

SRINIVASNAGAR, 30X50, East facing site 40' Road, Prime location 19,000/- Sft. E-Katha, clear document -9845000299

AVAILABLE BANSHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

BANASHANKARI 5TH Stage 30x40 N/F Mantri Alphyne Apartment Back Side Near Pattalamma Temple: 9241082155/ 9448531837

BTM Layout

SALE 30X45 'A' Khata_Site East Facing Guru_Raghavendra Layout BTM 1st Stage Rs.27000/- Psqft Call:9739393607

COURSES WE OFFER

- Diploma in Pharmacy
- Bachelors in Pharmacy
- Master of Pharmacy
- Pharm D
- Ph. D

WHY US

- ✅ Modern Labs & Advanced Research Facilities
- ✅ Expert Faculty with Industry Partnerships
- ✅ 100% Placement & Internship Support
- ✅ Merit-Based Scholarships Available
- Practical Learning | Career-Ready Training

SCAN FORREGISTRATION

AFFLIATIONS & RECOGNITIONS

Contact Us
7019425622 www.nargund.edu.in nargundcop@gmail.com

SALE / RENT / LEASE

COMMERCIAL PROPERTY for Sale / Rent / Lease in Seshadripuram, Bengaluru, measuring 1780 Sq.Ft. with constructed Building thereon comprising of Five Floors, each floor measuring 1780 Sq.Ft. constructed with mortar, Old No.3/1, then 1/4, New No.4/1 situated at Railway, Approach Road, Seshadripuram, Ward No.27, PID No.27-70-4/1, Bengaluru

CONTACT: Sri. SHARAD KUMAR
Mob: +91 8050050542

SALE
CHAMRAJPET
COMMERCIAL BUILDING
18,000 SFT,
RENTAL INCOME 7 LACS
SALE PRICE 12 CRORES
Call: 96322-37557 / 96069-47557

Basavanagudi

SITE FOR Sale 30x48 East South Corner Clear Title property @ Sannidhi Road Basavanagudi Contact:7892586674/ 9343742082

Basaweshwaranagar

SALE SITE 1600 SQFT A KHATHA WITH EASTHI READY FOR REGISTRATION CLEAR TITLES 1 CRORE 90 LAKHS ONLY 9035883017

Kanakapura Road

30X40 N/E_CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

KEMPEGOWDA LAYOUT, Commercial/Residential BDA Site for Sale 20x30, 30x40, 40x60, 50x80 Contact Kumar 9945119449

Nagarabhavi

NAGARABHAVI NEAR BDA Complex 30x40 East Facing on 40 Feet Road @ 19200/- Negotiable: 9964971895

SITE SALE, North Facing 40x60 Sqft, Behind Namooru Tindi, Nagarbhavi, No Brokers/ No Agents: 9448377834

Vishweshwariah Layout

"40X60 WEST_FACEING Residential Site`for`sale Vishveswaraiah Layout 3rd Block 40`feet wide Road near 100`Feet Road, 15`Minutes drive`to`Metro. 9880031654"

BDA-SITE FOR-SALE 30x40 East Facing at Sir.M Vishveswaraiya Layout 1st & 3rd Block Good Location Call:7676900174 6363496142

"50X80 EAST FACING SITE 60 FEET ROAD 6TH BLOCK VISHVESHWARAIH LAYOUT [PROPOSED BDA COMPLEX]- 9845143579"

COMMERCIAL BDA SITE SALE 40x60 N/F Vishveswaraiah Layout 1st Block, 100ft Road,Contact: 9742681666 9886634578

COMMERCIAL SITE Sale SMV Layout, 50x80 West Face 100_Feet Road, Opposite BDA Complex Call: 9986869996.

DIRECT OWNER NO.134, EF 30x40 ARUNACHALAM LAYOUT Adjacentto Vishveswaraiah Layout 1st-Block 9500/- 8496030007/ 8310885235

Mysore

SALE 40x60 site East facing muda Katha Rs. 1.2cr, Serious inquiries only. #8762018445 (Brokers Excuse)

Hegganahalli

SITE SALE 160x100ft In Hegganahalli Cross Bangalore A Katha Borewell Brick wall Fenced: 9900287834/ 9448377834

Srirampura

SALE 30X100, 1st cross, North facing, Site, Single owner, 2 mins from metro, 17000/sqft PH:9739732433

House

Banashankari

BANASHANKARI 6TH Stage_7th Block 20x30,`Ground and First`floor 2 BHK 2_unit House 30'Road Prime_location 1,20,00,000/-, 9845000299

Jayanagar

JAYANAGAR_'T' block and around Area`2000, 2200, 2,400`sqft. South, North,West old houses `Genuine Buyers`only Suraj Realtors- 9845232711

J P Nagar

SALE 40X60, With old House J.P.Nagar 2nd Phase Excellent Location 40feet Wide Road Contact: 9066399102

J.P.NAGAR_1ST Phase, 45x60 with houses 30,000/- Sft. South, 9th Phase 40x60 corner 15,000/- (Agents Excuse) 9845144365

SALE 50X80 With old House Dollars Colony, J.P.Nagar 4th Phase, Excellent Location Contact: 9066399102

Magadi Road

KAMAKSHIPALYA 15X50 sqft. 5 Floor Building, for SALE, 3.5 years Old, 8 Houses + One Shop, East Facing, 'A' Khata, Rental Income 51,000. 98452-88310

Nagarabhavi

THE PROPERTY Bearing no. 306, Shree Hari Nilaya, 10th Main Road, Nagarabhavi 2nd Stage, NGEF Layout, Bengaluru-560072 is for sale. (M):- 9844601456.

Flat

Banashankari

"LUXURY NEW_FLATS 3BHK Banashankari 2nd Stage near K.R.Road for more details. 9845286505"

Padmanabha Nagar

BRAND NEW 2 BHK (SBA 1129) Apartment For Sale @ Brigade Komarla Heights. Contact: 7019888028

Uttarahalli

4BHK NEW Flats Sale, Ready to move, Cauvery, Carparking, Lift, Vaasthu, Maruthi Layout. Rs.1.10.Cr. Call: 6360501159, 9945224058.

Agricultural Land

Nelamangala

10 ACRE Agriculture Land Available Near Nelamangala Contact: 99161 19936

Commercial Building

Out-Station

Commercial Land

Devanahalli

2 ACRE Commercial Land Available Near Highway at Devanahalli Contact: 9916119936

Out-Station

SALEM UDAYAPATY byepass opposite to udayapaty EB power station 14000.sq.feet Corner Commercial Land`with a 110 feet Frontage for`sale, suitable`to construct Hotels,Marriage Halls petrol`bunk Apartments, Hospitals. Cell:9943168099

Commerical

Kanakapura Road

6000 SQ.FEET Commercial conversation sites available for small scale industries in Harohalli, Kanakapura road (only five sites available) site facing North each site 6000 sq.feet. 8618082021

Vishweshwariah Layout

BDA COMMERCIAL 40X60 Sale KLE Law College Circle South SMV 5th-Block 80ft Road: 9945694783/ 9980433004

Industrial & Factory

General

WE_HAVE BUYERS for KIADB allotted sites with Industriesand warehouse. We also have Buyers for closed, sick Industries. Rahul9845739789.

Mysore Road

INDUSTRIAL CONVERTED LAND AVILABLE FOR SALE AREA 10000SQFT TO 20000 SQFT TO 1ACRE AT KUMBALGODU INDAREA MYSORE ROAD MOB:6366378787.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

***WE-FIX* LEAKING** ROOF,_TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

REAL ESTATE BUYING

Commerical

South

WANTED RENT Fetching Property Commercial/PG/ Residential,around 2cr,Rent >1.3 Lakhs/ Month Contact 91130 70146 South Bangalore

Sites

Anjanapura

WANTED BDA Sites Anjanapura BSK 6th Stage JPNagar 8th 9th Phase Royal Park Contact: 9880776950

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

KEY FEATURES of our Health Plan — niva Bupa Health Insurance

- Unlimited Refilling of Sum Assured at No Extra Cost.
- Hyper Tension and Diabetes Covered from Day 1
- Travel Insurance Included

For New policy or Desire to Port to Niva Bupa
Kindly Contact:
Advisor Reena : +91 99453 55172

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

RENTAL INCOME: 6 Lakhs G+4 floors each flr 3500 sft, 4th floor available for Rent **Near Metro cash & carry**. Ph: 98440 60642, 94803 33257

600 SQFT Office Space available for lease at Diagonal Road, V.V Puram, Bangalore-04. Phone. No:- 9535220072, 9535346069.

SHOP FOR RENT WOOD PRESSED OIL WITH 10KV ELECTRICITY AVAILABLE FOR RENT. CONTACT: 6361374600, 9110893903

Flats

KORAMANGALA SEMI Furnished One Bedroom Studio Flat For Rent. Suitable For Single Person Contact: 9916763727

AVAILABLE FOR rent semi furnished 5 BHK flat with private garden of 830 sft in Brigade Vintage, Basavanagudi, expected rent 1,40,000 including maintenance, call 9845380312

Industrial And Factory

FOR RENT: 2.5 ACRES Land available at **Hosur Main road, Bommasandra Industrial area.** Contact: 98440 60642, 94803 33257

RENT : Bar and Restaurant with attached Rooms. 2nd & 3rd floor, each floor 7500 sft **@ Bommasandra.** Ph: 98440 60642, 94803 33257

General

FOR RENT : 15 Hectares Warehouse, **Dabaspet to STRR ring road,** Suitable Warehouse & Industrial. Ph: 98440 60642, 94803 33257

ಸಂಕ್ಷಿಪ್ತ ಸುದ್ದಿ

ನಾಪತ್ತೆಯಾದವರ ಮಾಹಿತಿ ಸಂಗ್ರಹ

ಬೆಂಗಳೂರು: ಬೇಗೂರಿನ ಎಂ.ಎನ್. ಕ್ರೆಡೆನ್ಸ್ ಫ್ಲೋರಾ ಅಪಾರ್ಟ್‌ಮೆಂಟ್‌ನ ಇಂಗು ಗುಂಡಿಯಲ್ಲಿ ಮನುಷ್ಯನ ಅಸ್ಥಿಪಂಜರ ಪತ್ತೆಯಾದ ಹಿನ್ನೆಲೆಯಲ್ಲಿ ಬೇಗೂರು ಠಾಣೆ ಸೇರಿದಂತೆ ಸುತ್ತಮುತ್ತಲ ಠಾಣೆಗಳ ವ್ಯಾಪ್ತಿಯಲ್ಲಿ 2012ರಿಂದ ದಾಖಲಾಗಿರುವ ನಾಪತ್ತೆ ಪ್ರಕರಣಗಳ ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಜೂನ್ 16ರಂದು ಪತ್ತೆಯಾಗಿದ್ದ ಅಸ್ಥಿಪಂಜರ ಮನುಷ್ಯನದ್ದೇ ಎಂದು ವಿಧಿವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ವರದಿ ನೀಡಿದೆ. ಹಾಗಾಗಿ ಕೂಲಂಕಷ ತನಿಖೆಗೆ ಪೊಲೀಸರು ಮುಂದಾಗಿದ್ದಾರೆ. ತನಿಖೆ ಪ್ರಾಥಮಿಕ ಹಂತದಲ್ಲಿದ್ದು, ಎಫ್‌ಎಸ್‌ಎಲ್ ವರದಿ ಕೈ ಸೇರಿದ ಬಳಿಕ, ವಿಶ್ಲೇಷಿಸಿ ಯಾವ ರೀತಿಯ ತನಿಖೆ ನಡೆಸಬೇಕು ಎಂಬುದನ್ನು ನಿರ್ಧರಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಅಪಾರ್ಟ್‌ಮೆಂಟ್‌ಗೆ 2012ರಲ್ಲಿ ಅಡಿಪಾಯ ಹಾಕಲಾಗಿದ್ದು, 2016ರಲ್ಲಿ ಪೂರ್ಣಗೊಂಡಿತ್ತು. ಅಪಾರ್ಟ್‌ಮೆಂಟ್ ನಿರ್ಮಾಣಕ್ಕೂ ಮುನ್ನ ಈ ಜಾಗದಲ್ಲಿ ಸ್ಮಶಾನ ಇತ್ತು ಎಂದು ಸ್ಥಳೀಯರು ಹೇಳಿದ್ದಾರೆ. ಮತ್ತೆ ಕೆಲವರು ಈ ಸ್ಥಳ ಜಮೀನಾಗಿತ್ತು ಎಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಟಿಕೆಟ್ ರಹಿತ ಪ್ರಯಾಣ: 5,706 ಮಂದಿಗೆ ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 5,706 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ. ಏಪ್ರಿಲ್, ಮೇ ತಿಂಗಳಲ್ಲಿ 38,116 ಟ್ರಿಪ್‌ಗಳ ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 5,706 ಮಂದಿ ಪತ್ತೆಯಾಗಿದ್ದರು. ಅವರಿಂದ ₹ 12.64 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರ್ತವ್ಯಲೋಪ ಎಸಗಿದ ಸಂಸ್ಥೆಯ 3500 ನಿರ್ವಾಹಕರ ವಿರುದ್ಧ ಪ್ರಕರಣ ದಾಖಲಾಗಿದೆ. ಮಹಿಳಾ ಪ್ರಯಾಣಿಕರಿಗೆ ಮೀಸಲಾಗಿರುವ ಆಸನಗಳಲ್ಲಿ ಪ್ರಯಾಣಿಸಿದ್ದ 652 ಪುರುಷರಿಗೆ ₹ 65,200 ದಂಡ ವಿಧಿಸಲಾಗಿದೆ

ತಂತ್ರಜ್ಞಾನಗಳ ಲಾಭ– ವಿಶ್ಲೇಷಣೆ ಆಗಲಿ

ವಿಶ್ಲೇಷಣೆ ಆಗದೇ ಮಹತ್ವ ತಿಳಿಯದು: ಗೃಹ ಸಚಿವ ಜಿ.ಪರಮೇಶ್ವರ

ಪ್ರಜಾವಾಣಿ ವಾರ್ತೆ

ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಅವರು ಮಾತನಾಡಿದರು

ಮುಖ್ಯಾಂಶಗಳು

- 'ಮನೆ ಮನೆಗೆ ಪೊಲೀಸ್' ಯೋಜನೆ ಯಶಸ್ವಿ ಜಾರಿಗೆ ಸಲಹೆ
- ಜನರನ್ನು ಠಾಣೆಗಳಿಗೆ ಅಲೆದಾಡಿಸದೆ ಜನಸ್ನೇಹಿಯಾಗಿ ಸ್ಪಂದಿಸಿ
- ಆಧುನಿಕ ತಂತ್ರಜ್ಞಾನಗಳ ಬಗ್ಗೆ ಸಿಬ್ಬಂದಿಗೆ ಹೆಚ್ಚಿನ ತರಬೇತಿ ನೀಡಬೇಕು

ಬೆಂಗಳೂರು: 'ಪೊಲೀಸ್ ಇಲಾಖೆ ಹಲವು ತಂತ್ರಾಂಶಗಳನ್ನು ಅಳವಡಿಸಿಕೊಂಡಿದೆ. ಅವುಗಳ ಪ್ರಯೋಜನ ಬಗ್ಗೆ ದತ್ತಾಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಬೇಕಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದ ಎರಡನೇ ದಿನವಾದ ಶನಿವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

'ತಂತ್ರಾಂಶಗಳು ಎಷ್ಟರ ಮಟ್ಟಿಗೆ ಪ್ರಯೋಜನವಾಗಿವೆ ಎಂಬುದರ ವಿಶ್ಲೇಷಣೆ ಆಗಬೇಕು. ಅದನ್ನು ಕೈಗೊಳ್ಳದೆ ನಾವು ಅಳವಡಿಸಿಕೊಂಡಿರುವ ತಂತ್ರಾಂಶಗಳ ಮಹತ್ವ ಗೊತ್ತಾಗುವುದಿಲ್ಲ' ಎಂದು ಅಭಿಪ್ರಾಯಪಟ್ಟರು.

'ಮನೆ ಮನೆಗೆ ಪೊಲೀಸ್' ಯೋಜನೆ ಜಾರಿಗೆ ತರಲಾಗಿದೆ. ಈ ಯೋಜನೆಯನ್ನು ಯಶಸ್ವಿಗೊಳಿಸಬೇಕಿದೆ. ಆಗ, ಕರ್ನಾಟಕ ಪೊಲೀಸ್ ಇಲಾಖೆಗೆ ದೇಶದಲ್ಲಿಯೇ ಕೀರ್ತಿ ಬರುತ್ತದೆ' ಎಂದು ಹೇಳಿದರು.

ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದ ರೂಪುರೇಷೆ ಬದಲಾಗಬೇಕು. ವಲಯ ಮಟ್ಟದಲ್ಲಿ ಜಿಲ್ಲೆಗಳ ಪ್ರಗತಿ ಪರಿಶೀಲನೆ ನಡೆಯಲಿದೆ. ವಾರ್ಷಿಕ ಸಮಾವೇಶದಲ್ಲಿ ರಾಜ್ಯಮಟ್ಟದ ದತ್ತಾಂಶವನ್ನು ನೀಡಿದರೆ ಸಾಕು ಎಂದು ಹೇಳಿದರು.

ಸರ್ಕಾರ ಹಾಗೂ ಜನರ ಆಶಯದಂತೆ ಇಲಾಖೆ ಕೆಲಸ ಮಾಡಬೇಕಿದೆ. ಜನರನ್ನು ಠಾಣೆಗಳಿಗೆ ಹತ್ತಾರು ಬಾರಿ ಅಲೆದಾಡಿಸದೆ ದೂರು ಸ್ವೀಕರಿಸಿ, ಜನಸ್ನೇಹಿಯಾಗಿ ಸ್ಪಂದಿಸಬೇಕು ಎಂದರು.

> ಗಣೇಶ ಹಬ್ಬ ಆಚರಣೆ, ಮೊಹರಂ ಸೇರಿ ಇನ್ನಿತರ ಹಬ್ಬದ ಸಂದರ್ಭದಲ್ಲಿ ಏನೆಲ್ಲ ಸಮಸ್ಯೆಗಳು ಬರುತ್ತವೆ ಎಂದು ಗಮನಿಸದೇ ಹೋದರೆ ಪೊಲೀಸರ ಪ್ರಯೋಜನ ಏನಿದೆ
> **ಜಿ.ಪರಮೇಶ್ವರ,** ಗೃಹ ಸಚಿವ

'ಜಿಲ್ಲೆಗಳಲ್ಲಿ ಬೇರೆಬೇರೆ ರೀತಿಯ ಸಮಸ್ಯೆಗಳು ಇರುತ್ತವೆ. ಸಮಸ್ಯೆ ಪರಿಹರಿಸುವ ಕೆಲಸಗಳು ನಡೆಯಬೇಕು. ದ್ವೇಷ, ಕೋಮು ಸಂಘರ್ಷ ಇನ್ನಿತರ ವಿಚಾರಗಳು ಹೊರಬರುತ್ತವೆ, ಈ ಬಗ್ಗೆ ಗಮನಿಸಬೇಕು' ಎಂದು ಹೇಳಿದರು.

ಎಸ್‌.ಸಿ, ಎಸ್‌.ಟಿ, ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ತಪ್ಪಿತಸ್ಥರಿಗೆ ಶಿಕ್ಷೆ ಪ್ರಮಾಣ ಕಡಿಮೆ ಇದೆ. ತನಿಖಾಧಿಕಾರಿಗಳು ಸರ್ಕಾರಿ ವಕೀಲರನ್ನು (ಪಬ್ಲಿಕ್ ಪ್ರಾಸಿಕ್ಯೂಟರ್) ಭೇಟಿ ಮಾಡಿ, ಚರ್ಚಿಸಿ ಸಲಹೆ ಪಡೆದುಕೊಳ್ಳಬೇಕು. ಆದರೆ, ಯಾವ ಅಧಿಕಾರಿಯೂ ಈ ನಿಯಮ ಪಾಲಿಸುತ್ತಿಲ್ಲ. ಈ ಒಂದು ಕಾರಣದಿಂದ ಆರೋಪಿಗಳು ಕಾನೂನಿಂದ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗೆ ಆಧುನಿಕ ತಂತ್ರಜ್ಞಾನಗಳ ಬಗ್ಗೆ ಹೆಚ್ಚಿನ ತರಬೇತಿ ನೀಡಬೇಕು. ಈ ಬಗ್ಗೆ ಹಿರಿಯ ಅಧಿಕಾರಿಗಳು ಗಂಭೀರವಾಗಿ ಆಲೋಚಿಸಿ, ಗಮನ ಹರಿಸಬೇಕಿದೆ ಎಂದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಎ. ಸಲೀಂ, ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯ ಡಿಜಿ ಪ್ರಶಾಂತ್ ಕುಮಾರ್ ಠಾಕೂರ್, ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯ ಡಿಜಿ ಮಾಲಿನಿ ಕೃಷ್ಣಮೂರ್ತಿ, ಸಿಐಡಿ ಸೈಬರ್ ಕ್ರೈಂ ಮತ್ತು ಮಾದಕ ವಸ್ತು ವಿಭಾಗದ ಡಿಜಿ ಪ್ರಣವ್ ಮಹಾಂತಿ, ರಾಜ್ಯ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಪಾಲ್ಗೊಂಡಿದ್ದರು.

'ಶೀಘ್ರವೇ ಸಿಂಥೆಟಿಕ್ ಟ್ರ್ಯಾಕ್ ಸಿದ್ಧ'

ತನಿಖೆಯಲ್ಲಿ ಕರ್ನಾಟಕ ಪೊಲೀಸ್ 'ಬೆಸ್ಟ್ ಪೊಲೀಸ್'. ಕ್ರೀಡೆಯಲ್ಲಿಯೂ 'ಕರ್ನಾಟಕ ಪೊಲೀಸ್ ಬೆಸ್ಟ್' ಎಂದು ಹೇಳುವಂತಾಗಬೇಕು: ಸಚಿವ ಜಿ.ಪರಮೇಶ್ವರ

ಪೊಲೀಸ್ ಕ್ರೀಡಾಕೂಟ ಮುಕ್ತಾಯ

ಬೆಂಗಳೂರು: ಇಲ್ಲಿನ ಕೋರಮಂಗಲದ ಕೆಎಸ್‌ಆರ್‌ಪಿ ಕ್ರೀಡಾಂಗಣದಲ್ಲಿ ಎರಡು ದಿನ ನಡೆದ ರಾಜ್ಯ ಪೊಲೀಸ್ ವಾರ್ಷಿಕ ಕ್ರೀಡಾಕೂಟಕ್ಕೆ ಶನಿವಾರ ಸಂಜೆ ತೆರೆಬಿತ್ತು.

ಸಮಾರೋಪ ಸಮಾರಂಭದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಅವರು ವಿಜೇತರಿಗೆ ಬಹುಮಾನ ವಿತರಿಸಿದರು.

ಬಳಿಕ ಮಾತನಾಡಿದ ಅವರು, 'ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ರಾಜ್ಯ ಪೊಲೀಸ್ ತಂಡವು ಚಾಂಪಿಯನ್ ಆಗಿ ಹೊರ ಹೊಮ್ಮಬೇಕು. ಈ ನಿಟ್ಟಿನಲ್ಲಿ ಎಲ್ಲ ರೀತಿಯ ಉತ್ತೇಜನ ನೀಡಲಾಗುವುದು' ಎಂದು ನುಡಿದರು.

'ಕ್ರೀಡೆಯಲ್ಲಿ ಭಾಗವಹಿಸುವವರಿಗೆ ತಯಾರಿ ಬಹಳ ಮುಖ್ಯವಾಗುತ್ತದೆ. ವಿಶೇಷ ತರಬೇತಿ ನೀಡುವಂತೆ ಇಲಾಖೆಯ ಮುಖ್ಯಸ್ಥರಿಗೆ ಸೂಚಿಸಲಾಗುವುದು. ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಚಾಂಪಿಯನ್ ಆಗಬೇಕು ಎಂದರು.

'ಮುಖ್ಯಮಂತ್ರಿ ಅವರು ಪೊಲೀಸ್ ಇಲಾಖೆಯ ನೇಮಕಾತಿಯಲ್ಲಿ ಶೇ 3ರಷ್ಟು ಮೀಸಲಾತಿ ಕಲ್ಪಿಸಿ ಕ್ರೀಡಾಪಟುಗಳಿಗೆ ಉತ್ತೇಜಿಸಿದ್ದಾರೆ. ಬೇರೆ ಯಾವ ರಾಜ್ಯಗಳಲ್ಲೂ ಇಷ್ಟೊಂದು ಮೀಸಲಾತಿ ನೀಡಿಲ್ಲ. ಕೆಎಸ್‌ಆರ್‌ಪಿ ಕ್ರೀಡಾಂಗಣ ನವೀಕರಣಗೊಳಿಸಲು ₹ 3 ಕೋಟಿ ಅನುದಾನ ನೀಡಲಾಗಿದೆ. ಮುಂದಿನ ವರ್ಷದ ಕ್ರೀಡಾಕೂಟದ ವೇಳೆಗೆ ಸಿಂಥೆಟಿಕ್ ಟ್ರ್ಯಾಕ್ ಸಿದ್ಧವಾಗಲಿದೆ' ಎಂದು ಹೇಳಿದರು.



ಸಮಾವೇಶದಲ್ಲಿ ಪೊಲೀಸ್ ದೂರದೃಷ್ಟಿ ಸೇರಿದಂತೆ ಹಲವು ಮಹತ್ವದ ವಿಚಾರಗಳ ಕುರಿತು ಚರ್ಚಿಸಲಾಗಿದೆ ಎಂದು ತಿಳಿಸಿದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ, ಕೆಎಸ್‌ಆರ್‌ಪಿ ಎಡಿಜಿಪಿ ಉಮೇಶ್ ಕುಮಾರ್, ಬೆಂಗಳೂರು ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್, ಕೆಎಸ್‌ಆರ್‌ಪಿ ಐಜಿಪಿ ಸಂದೀಪ್ ಪಾಟೀಲ್ ಪಾಲ್ಗೊಂಡಿದ್ದರು.

ಹೂಡಿಕೆ: ಶೇ 71 ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೂಡಿಕೆಯ ಹೆಸರಿನಲ್ಲಿ ಶೇ 70.51ರಷ್ಟು ವಂಚನೆ ನಡೆದಿರುವುದು ಸಂಶೋಧನಾ ವರದಿಯಿಂದ ಬಹಿರಂಗವಾಗಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶರ ಕಚೇರಿಯಲ್ಲಿ ಎರಡು ದಿನ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮೇಳನದಲ್ಲಿ ಸೈಬರ್ ಅಪರಾಧ ಅಧ್ಯಯನ ವರದಿ ಬಿಡುಗಡೆ ಮಾಡಲಾಗಿದ್ದು ವಿವಿಧ ಕ್ಷೇತ್ರಗಳಲ್ಲಿ ಎಷ್ಟು ಪ್ರಮಾಣದಲ್ಲಿ ಕಳೆದ ವರ್ಷ ವಂಚನೆ ನಡೆಸಲಾಗಿದೆ ಎಂಬುದು ಗೊತ್ತಾಗಿದೆ.

ಸೈಬರ್ ಅಪರಾಧ ಪ್ರಕರಣಗಳಲ್ಲಿ ಅಕ್ರಮ ಹಣದ ವರ್ಗಾವಣೆಗೆ ವ್ಯಾಪಕವಾಗಿ ನಕಲಿ ಬ್ಯಾಂಕ್ ಖಾತೆಗಳ ಬಳಕೆಯ ಬಗ್ಗೆ ಅಧ್ಯಯನ ನಡೆಸಿ ವಂಚನೆ ತಡೆಗಟ್ಟಲು ಅನುಸರಿಸಬೇಕಾದ ಕ್ರಮಗಳ ಕುರಿತು ಶಿಫಾರಸು ಮಾಡುವಂತೆ ಸಿಐಡಿ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರದಿಂದ ವಿಶೇಷ ತಂಡ ರಚಿಸಲಾಗಿತ್ತು. ತಂಡದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು, ತನಿಖಾಧಿಕಾರಿಗಳು, ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾದ ತಜ್ಞರು ಹಾಗೂ ಬ್ಯಾಕಿಂಗ್ ವಲಯದ ಪ್ರತಿನಿಧಿಗಳು ಇದ್ದರು.

ಸೈಬರ್ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳನ್ನು ವಿಶ್ಲೇಷಿಸಿ ಸಂಶೋಧನಾ ವರದಿ ಬಿಡುಗಡೆ ಮಾಡಲಾಗಿದೆ. ನಕಲಿ ಬ್ಯಾಂಕ್ ಖಾತೆಗಳನ್ನೇ ವಂಚಕರು ಬಳಸಿರುವುದು ವಿಶ್ಲೇಷಣೆಯಿಂದ ಗೊತ್ತಾಗಿದೆ.

ವಂಚನೆ ನಡೆದಿರುವ ಬ್ಯಾಂಕಿಂಗ್ ಕ್ಷೇತ್ರ

ಬ್ಯಾಂಕ್ ಮಾದರಿ	ದೂರುಗಳ ಸಂಖ್ಯೆ	ವಂಚನೆಯ ಮೊತ್ತ (ಕೋಟಿಗಳಲ್ಲಿ)
ಖಾಸಗಿ ವಲಯ ಬ್ಯಾಂಕ್	3,02,324	₹1,859
ಸಾರ್ವಜನಿಕ ವಲಯದ ಬ್ಯಾಂಕ್	2,55,034	₹948
ಕಿರು ಹಣಕಾಸು ಸಂಸ್ಥೆಗಳು	25,159	₹17.87
ಗ್ರಾಮೀಣ ಬ್ಯಾಂಕ್	12,544	₹1.84
ವಿದೇಶಿ ಬ್ಯಾಂಕ್‌ಗಳು	9,591	₹78.14
ಸಹಕಾರ ಬ್ಯಾಂಕ್‌ಗಳು	7,036	₹8.68

ಯಾವ ವಿಭಾಗದಲ್ಲಿ ಎಷ್ಟು ವಂಚನೆ

ವಂಚನೆ ಮಾದರಿ	ಶೇಕಡವಾರು
ಹೂಡಿಕೆ	70.51
ಡಿಜಿಟಲ್ ಅರೆಸ್ಟ್	14.96
ಉದ್ಯೋಗ ವಂಚನೆ	7.43
ಇತರೆ	2.4
ಪೇಮೆಂಟ್ ಕಾರ್ಡ್ ವಂಚನೆ	1.92

7 ವರ್ಷ ಬಳಿಕ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಜಿತೇಂದ್ರ ಕುಮಾರ

ಬೆಂಗಳೂರು: ಹಾರನಹಳ್ಳಿ ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಬಳಿಯಿದ್ದ ನಗದು, ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪಿಯನ್ನು 7 ವರ್ಷದ ಬಳಿಕ ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಾಖಂಡದ ಜಿತೇಂದ್ರ ಕುಮಾರ್ ಚಾವ್ಲಾ (37) ಬಂಧಿತ. ಈತನಿಂದ ₹22.75 ಲಕ್ಷ ಮೌಲ್ಯದ 281 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ.

ಈತನ ಬಂಧನದಿಂದ 4 ಕಳ್ಳತನ ಪ್ರಕರಣ ಪತ್ತೆಯಾಗಿವೆ. ಈತ ವಾಹನಗಳ ಡೀಲರ್ ಆಗಿದ್ದು, ರೈಲಿನಲ್ಲಿ ರಾತ್ರಿ ಪ್ರಯಾಣಿಕರನ್ನು ಗುರಿಯಾಗಿಸಿ ಚಿನ್ನ, ನಗದು ಲಪಟಾಯಿಸುತ್ತಿದ್ದ ಎಂದು ರೈಲ್ವೆ ಎಸ್‌ಪಿ ಸೌಮ್ಯಾ ಲತಾ ತಿಳಿಸಿದ್ದಾರೆ.

ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ (68) ಅವರು 2018ರ ಜೂನ್ 11ರಂದು ಸಂಜೆ ಎಕ್ಸ್‌ಪ್ರೆಸ್ ರೈಲಿನಲ್ಲಿ ಬಾಗಲಕೋಟೆಯಿಂದ ಅರಸೀಕೆರೆಗೆ ಪ್ರಯಾಣಿಸುತ್ತಿದ್ದರು. ರಾತ್ರಿ ಆಭರಣ, ನಗದು ಕಳುವಾಗಿತ್ತು.

250 ಗ್ರಾಂ ತೂಕದ ಗೌರಿಶಂಕರ ರುದ್ರಾಕ್ಷಿ ಪದಕ ಹೊಂದಿದ ಚಿನ್ನದ ಸರ, ಎರಡು ಚಿನ್ನದ ನಾಗರ ಉಂಗುರಗಳು, ₹1.62 ಲಕ್ಷ ನಗದು ಸೇರಿ ₹ 10.62 ಲಕ್ಷ ಮೌಲ್ಯದ ವಸ್ತುಗಳು ಕಳುವಾಗಿರುವ ಬಗ್ಗೆ ಸ್ವಾಮೀಜಿ ದೂರು ನೀಡಿದ್ದರು.

ಆರೋಪಿ ಪತ್ತೆಗಾಗಿ ಮೈಸೂರು ರೈಲ್ವೆ ಸಿಪಿಐ ಚೇತನ್, ಅರಸೀಕೆರೆ ಪಿಎಸ್‌ಐ ಮಹೇಶ್, ಎಎಸ್‌ಐ ಫಯಾಜ್ ಖಾನ್ ಮತ್ತು ಸಿಬ್ಬಂದಿ ಒಳಗೊಂಡ ತಂಡರಚಿಸಲಾಗಿತ್ತು. ಈ ತಂಡವು ಏಳು ವರ್ಷಗಳ ಬಳಿಕ ಆರೋಪಿಯನ್ನು ಬಂಧಿಸಿದೆ.

ಆರೋಪಿ ಸಿಕ್ಕಿ ಬಿದ್ದಿದ್ದು: ಪ್ರೀತಮ್ ಕುಲಕರ್ಣಿ ಎಂಬುವವರ ತಂದೆ 2025ರ ಫೆ.8ರಂದು ಉಡುಪಿಯಿಂದ ಬೆಂಗಳೂರಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ₹25 ಸಾವಿರ ಹಣ, ಚಿನ್ನಾಭರಣವಿದ್ದ 2 ಬ್ಯಾಗ್‌ಗಳ ಕಳ್ಳತನವಾಗಿತ್ತು. ರೈಲ್ವೆ ಪೊಲೀಸರು ತನಿಖೆ ನಡೆಸಿದಾಗ ಆರೋಪಿ ಸಿಕ್ಕಿ ಬಿದ್ದ. 2018ರಲ್ಲಿ ಕೋಡಿಮಠದ ಸ್ವಾಮೀಜಿ ಅವರ ಆಭರಣ ಲಪಟಾಯಿಸಿದ್ದಾಗಿ ತಿಳಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ನಾಯಿ ಕಳೇಬರದ ಜತೆ 4 ದಿನ ಕಳೆದ ಮಹಿಳೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮಹದೇವಪುರದ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ಮಹಿಳೆಯೊಬ್ಬರು ತಾನು ಸಾಕಿದ್ದ ಲ್ಯಾಬ್ರಡಾರ್ ರಿಟ್ರೈವರ್ ನಾಯಿಗೆ ಚಿತ್ರಹಿಂಸೆ ಕೊಟ್ಟು ಸಾಯಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಬಿಬಿಎಂಪಿ ಪಶುವೈದ್ಯಾಧಿಕಾರಿ ಡಾ. ರುದ್ರೇಶ್ ಕುಮಾರ್ ಅವರ ದೂರಿನ ಮೇರೆಗೆ ಪಶ್ಚಿಮ ಬಂಗಾಳ ಮೂಲದ ತ್ರಿಪರ್ಣ ಪಾಯ್ಕಾ (38) ವಿರುದ್ಧ ಮಹದೇವಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಹದೇವಪುರ ಚಿನ್ನಪ್ಪ ಲೇಔಟ್‌ನಲ್ಲಿರುವ ಅಕ್ಮೆ ಬೆಲ್ಲಾಟ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ವಾಸಿಸುತ್ತಿರುವ ತ್ರಿಪರ್ಣ, ನಾಲ್ಕು ನಾಯಿಗಳನ್ನು ಸಾಕಿದ್ದರು. 2-3 ದಿನಗಳ ಹಿಂದೆ ಒಂದು ನಾಯಿ ಮೃತಪಟ್ಟಿದ್ದು, ಕೊಲೆ ಮಾಡಿರುವ ಬಗ್ಗೆ ಸ್ಥಳೀಯರು ಆರೋಪಿಸಿದ್ದಾರೆ.

'ಫ್ಲ್ಯಾಟ್‌ನಿಂದ ದುರ್ವಾಸನೆ ಬರುತ್ತಿದ್ದ ಕಾರಣ, ಜೂನ್ 26ರಂದು ಸ್ಥಳೀಯರು ಬಿಬಿಎಂಪಿ ಅಧಿಕಾರಿಗಳಿಗೆ ದೂರು ನೀಡಿದರು. ಬಿಬಿಎಂಪಿ ಅಧಿಕಾರಿಗಳು ಮತ್ತು ಪ್ರಾಣಿ ಪ್ರಿಯರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಕೊಠಡಿಯಲ್ಲಿ ಕೊಳೆತ ಸ್ಥಿತಿಯಲ್ಲಿ ಗಂಡು ನಾಯಿ ಮೃತದೇಹ ಪತ್ತೆಯಾಗಿದೆ. ಈ ಬಗ್ಗೆ ಪ್ರಶ್ನಿಸಿದಾಗ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಹಾಗೂ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಮಹಿಳೆ ಬೆದರಿಸಿದ್ದಾಳೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಾಯಿಯ ಮೃತ ದೇಹವನ್ನು ಬಟ್ಟೆಯಲ್ಲಿ ಸುತ್ತಿಡಲಾಗಿತ್ತು. ಶ್ವಾನಗಳನ್ನು ಕೂಡಿ ಹಾಕಿದ್ದ ಕೊಠಡಿಯಲ್ಲಿ ಹಲವಾರು ದೇವತೆಗಳ ಚಿತ್ರಗಳು ಕಂಡು ಬಂತು. ವಾಮಾಚಾರ ನಡೆಸಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ.

'2021ರಲ್ಲಿ ತ್ರಿಪರ್ಣಾ ಆರಂಭಿಸಿದ್ದ ಖಾಸಗಿ ಕಂಪನಿಯಿಂದ ನಷ್ಟ ಉಂಟಾಗಿತ್ತು. ಇದರಿಂದ ಮಾನಸಿಕವಾಗಿ ನೊಂದು ಫ್ಲ್ಯಾಟ್‌ನಲ್ಲಿ ಶ್ವಾನದೊಂದಿಗೆ ಹೆಚ್ಚು ಸಮಯ ಕಳೆಯುತ್ತಿದ್ದರು. ಪ್ರೀತಿಯಿಂದ ಸಾಕಿದ್ದ ಶ್ವಾನ 4 ದಿನಗಳ ಹಿಂದೆ ಮೃತಪಟ್ಟಿತ್ತು. ಹೀಗಾಗಿ ತ್ರಿಪರ್ಣಾ ಅವರು ಶ್ವಾನ ಬದುಕಲಿ ಎಂದು ಪೂಜೆ ಮಾಡುತ್ತಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿದಾಗ ಕುತ್ತಿಗೆ ಹಾಗೂ ಭುಜದ ಭಾಗದಲ್ಲಿ ಪೆಟ್ಟುಬಿದ್ದು ಶ್ವಾನ ಸತ್ತಿರುವುದಾಗಿ ವೈದ್ಯರು ವರದಿ ನೀಡಿದ್ದಾರೆ. ಈ ವರದಿ ಆಧರಿಸಿ ಆರೋಪಿಗೆ ವಿಚಾರಣೆ ಬರುವಂತೆ ನೋಟಿಸ್ ಜಾರಿ ಮಾಡಲಾಗಿದೆ' ಎಂದರು.

ಬಿಜೆಪಿ ಕಚೇರಿಗೆ ಮುತ್ತಿಗೆ

ಬೆಂಗಳೂರು: ದಿವಂಗತ ಪ್ರಧಾನಿ ಇಂದಿರಾಗಾಂಧಿ ಅವರನ್ನು ಹಿಟ್ಲರ್‌ಗೆ ಹೋಲಿಸಿ, ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿದ್ದ ಬಿಜೆಪಿ ಧೋರಣೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಿದರು.

ಕೇಂದ್ರ ಸಚಿವ ಭೂಪೇಂದರ್ ಯಾದವ್ ಅವರು ಕಚೇರಿಗೆ ಭೇಟಿ ನೀಡಿದ್ದ ವೇಳೆಯೇ ಮುತ್ತಿಗೆ ಹಾಕುವ ಪ್ರಯತ್ನ ಮಾಡಿದರು. ಪೊಲೀಸರು ಅವರನ್ನು ವಶಕ್ಕೆ ಪಡೆದರು. 'ದಿಟ್ಟ ನಡೆಯ ಇಂದಿರಾ ಅವರಿಗೆ ಅವಮಾನ ಮಾಡಿದ ಬಿಜೆಪಿ ದೇಶದ ಜನರ ಕ್ಷಮೆಯಾಚಿಸಬೇಕು. ಸಂವಿಧಾನ ವಿರೋಧಿ ಮನೋಸ್ಥಿತಿಯ ಅವರಿಗೆ ಇಂದಿರಾ ಅವರಂತಹ ಜನಪರ ನಾಯಕಿಯ ನಡೆಯನ್ನು ಸಹಿಸಲು ಇಂದಿಗೂ ಸಾಧ್ಯವಾಗುತ್ತಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುತ್ತಿಗೆ ಹಾಕಲು ಯತ್ನಿಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಬಿಜೆಪಿ ಕಾರ್ಯಕರ್ತರು ಹಿಂದಕ್ಕೆ ತಳ್ಳುವ ಪ್ರಯತ್ನ ಮಾಡಿದರು. ಅಷ್ಟರಲ್ಲಿ ಪೊಲೀಸರು ಮಧ್ಯ ಪ್ರವೇಶಿಸಿ, ಪರಿಸ್ಥಿತಿ ತಿಳಿಗೊಳಿಸಿದರು.

'ಕೇಂದ್ರ ಸಚಿವರು ಬಂದಾಗ ಮುತ್ತಿಗೆ ಹಾಕಿದರೂ, ಪೊಲೀಸರು ಎಫ್‌ಐಆರ್ ದಾಖಲಿಸಿಲ್ಲ. ಸರ್ಕಾರ ಹೇಳಿದಂತೆ ಪೊಲೀಸರು ನಡೆದುಕೊಳ್ಳುತ್ತಿದ್ದಾರೆ' ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯಸಚೇತಕ ಎನ್.ರವಿಕುಮಾರ್ ಹೇಳಿದರು.

ಬೆಂಗಳೂರು ರೇಸ್

ಟೈಮ್ ಅಂಡ್ ಟೈಡ್ ಗೆಲ್ಲುವ ನಿರೀಕ್ಷೆ

ಚೀಫ್ ಮಿನಿಸ್ಟರ್ಸ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟೈಮ್ ಅಂಡ್ ಟೈಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ವೆಸ್ಟ್‌ಲೇಕ್ 2, ಸನ್‌ಲಿಟ್ ಪಾಥ್ 7, ರಾಯಲ್ ವಿಸ್ಪರ್ 4
2ನೇ ರೇಸ್: ಕಾಂಕ್ರ 4, ನಾಟಿ ಕ್ರೂಸ್ 11, ವಿಕ್ಟೋರಿಯಾ ಕ್ರಾಸ್ 6
3ನೇ ರೇಸ್: ವಿಕ್ಟರ್ ಹುಗೊ 1, ಒಡಿಸಿಯಸ್ 2, ಗಾರ್ಡನ್ 3
4ನೇ ರೇಸ್: ಪಂಟಾಜಿ 4, ಡಿವೈನ್ ಸ್ಟಾರ್ 1, ಸರ್ ವಿನ್ಸೆಂಟ್ 8
5ನೇ ರೇಸ್: ಟ್ರಾಯಿಲಾ1, ರೀಗಲ್ ರಿಯಾಲಿಟಿ 12, ಭರತ್ 2
6ನೇ ರೇಸ್: ಟೈಮ್ ಅಂಡ್ ಟೈಡ್ 1, ಮ್ಯಾಗಿಲೆಟೊ 3, ನಾಟಿ ಚಾರ್ಮರ್ 2
7ನೇ ರೇಸ್: ಸ್ಪ್ರಿಂಗ್‌ಸ್ಟೀನ್ 3, ಅಗೆರಾ 5, ಸ್ಟ್ರಾವಿನ್‌ಸ್ಕಿ 6
8ನೇ ರೇಸ್: ಅಶ್ವ ಕಲಿ ಭಾನಿ 1, ಕಂಟಿನ್ಯೂಸ್ 9, ಅಸ್ಸಿಮಿಲೇಟ್ 4

ಉತ್ತಮ ಬೆಟ್: ಕಾಂಕ್ರ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

General

RENTAL WANTED- INDEPENDENT 4 BHK HOUSE, AS PER VAASTU ONLY. BTM, JPNAGAR, DOLLARS COLONY, JAYANAGAR 4TH 'T' BLOCK, 9TH BLOCK, MINI FOREST.- WANTED FOR RENT FULLY FURNISHED 250 TO 350 FT OFFICE SPACE, SHANTHINAGAR, JAYANAGAR, CBD RS.15000/ VICTORY PROPERTIES (A 35 yrs Experienced Leading Real Estate Company) 7411692219/ 8618576685 info@victoryproperties.in www.victoryproperties.in

Accommodation Wanted

Flat

FULLY FURNISHED 4 BHK flat at SANSIDH GALAXY, Rachenahalli, behind Manyata tech park with Two car parking gym, Swimming pool, club house, 24 hours Security. Rent 1 lakh Negotiable Call 9686230308

JOB OPPORTUNITIES

General

V&V GROUP, Bannergatta Road, Wanted MANAGERS, LADY RECEPTIONIST, TELECALLERS, MARKETING EXECUTIVES. Good Salary. Call 99000-54462

WANTED RECEPTIONIST with Experience Bhagawan Mahaveer Jain Netralaya Seshadripuram Bangalore- 560020. Contact: 080 41162611.

HRD & Admin

WANTED AN ADMINISTRATOR to look after Schools, High School Retd. HM may Apply, General Secretary Deena Seva Sangha, No. 22, Risaldar Street, Seshadripuram, Bangalore- 560020.

Marketing & Sales

WANTED SALES Representative for Industrial Chemicals, Grease & Lubricants PUC/ DEGREE with PCM OR DIPLOMA Knowledge of Reading and Writing English & Kannada is essential. Freshers or with 2/ 3 experience. Contact; 9342551212/ 8618510620

Teachers/ Professors

WANTED TEACHERS. B.E.T Sadathunnisa Degree College for women, Bismillahnagar, Bangalore- 560029, is in need of Lecturers to teach students of BCA, BBA & BCom. QR: MCA, MBA, MCom. Preference: K-Preference:'>SET/ NET with experience, lady candidates. Apply: bismillah.wc@gmail.com Phone: 9980340172

LAWRENCE HIGH School ICSE HSR, require well_trained and experienced Geography, English teacher Call: 080-40903777, 8971485310, 9080479986. lawrence.school.icse@gmail.com

ELITE PUBLIC SCHOOL Kempegowda Layout Laggere Bengaluru requires BSc/MSc, BEd (Physics) Qualified Teachers: 9447727526/ 9980200444

SSB INTERNATIONAL SCHOOL Indiranagar, Bangalore - 38 REQUIRES TRAINED LADY TEACHERS
PRIMARY ACADEMIC HEAD FOR ICSE
PGT / TGT For Maths & English FOR HIGH SCHOOL
TGT For Primary School
APPLY IMMEDIATELY ssbinternationalschool@gmail.com
The Director, SSB Education Society, No.5/A, HAL II-Stage, Indiranagar, B'lore-38. Ph: 08041523548

MORNING STAR English School Ramachandrapuram (Rajajinagar Entrance) Requires B.Sc Computer Science Lady Teacher to handle Classes and Administration Work. Contact: 9845018480

Wanted

FIELD EXECUTIVES for banking services. Good communication skills. 2 Wheeler must. Salary 15K+TA. Bangalore city only. : 9281495053

AUTOMOTIVE

Four Wheelers Selling

Honda

HONDA ELEVATE SV Silver 2023 Model, 19000kms Single Owner. 13,10,000/- Negotiable 9945931888 Brokers Excuse

Maruti

FOR SALE BALENO Car Alpha model Nexa Blue 9 months old single owner driven 5500/- kilometer. 9.25L Fixed. Brokers Excuse. 9448840967.

BUSINESS

Business to Business

Business

AVAILABLE COLLATERALS/ Takeovers/ Properties/ Financial Arrangements (For only big projects). 'LAND PARCEL' & Company- 9342247637.

Consultants

WE_NEED RETIRED bank_executives as consultants with good contacts in the Banking industries and experience in Negotiating and closing NPA accounts as onetime settlement. Arun 9945699789.

Finance

URGENT LOAN AVAIL @ 3.5% PER ANNUM PERSONAL BUSINESS HOUSING TAKE OVER ALL TYPES LOAN SHIVGANGA FINANCE. PHONE: 8826494700.

MATRIMONIAL

Brides Wanted

Muslim

MUSLIM BOY from a rich Family 1992 Born/ Businessman/ 5 cr / only son is looking for a match 9743700029

SUNNI MUSLIM boy, 1995/ 5'10 M.Tech, Senior Software Engineer 70 LPA, seeking a suitable match.

Telugu

TELUGU BOY 1993 Born/ 5'10/ Businessman / Networth 500 Cr residing in Bangalore is looking for a suitable match kindly match 080-69070609

EDUCATIONAL

Correspondence Courses

STUDY AT HOME SSLC DIRECT 2nd PUC BA, B.Com, BBA/B.Sc, BCA, BSW, B.LISc, B.Ed/M.Ed, M.LISc, MA/M.Com/M.Sc MBA, MSW/MCA, PG-Diploma Courses. Contact: Manasa Correspondence College. Malleshwaram Circle Bangalore 9880498484/ 9738761169/ 9663555154.

PERSONAL

Change of Name

I, SURESHA VENKATESHAPPA, residing at No. 265, Ward No. 14, Nandi Road, Kandavara, Chickballapur- 562101, have changed my name to SURESH KANDAVARA VENKATESHAPPA vide affidavit dated 27.06.2025 before Notary K.H. Venkatappa, Chickaballapur.

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact: 9845114560 9900428036 9731810277
*Conditions apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ಸಿಎಂಆರ್ ತಾಂತ್ರಿಕ ವಿದ್ಯಾಲಯದಲ್ಲಿ 22ನೇ ಪದವಿ ಪ್ರದಾನ ಸಮಾರಂಭ

ನವೋದ್ಯಮ ಆರಂಭಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಐಟಿಪಿಎಲ್ ರಸ್ತೆಯ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ 22ನೇ ಪದವಿ ಪ್ರದಾನ ಸಮಾರಂಭ ಜರುಗಿತು.

ಪದವಿ ಪೂರೈಸಿದ ಎಂಜಿನಿಯರಿಂಗ್ ವಿಭಾಗಗಳ 1,200 ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರ ಸ್ವೀಕರಿಸಿದರು. ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಫಲಕ ಮತ್ತು ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಯಿತು.

ಆಕ್ಸೆಲ್ ಇಂಡಿಯಾ ಸಂಸ್ಥಾಪಕ ಮತ್ತು ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಶನ್‌ನ ಸಹ ಸಂಸ್ಥಾಪಕ ಪ್ರಶಾಂತ್ ಪ್ರಕಾಶ್ ಮಾತನಾಡಿ, 'ಕೃಷಿ, ಉತ್ಪಾದನೆ, ರಕ್ಷಣೆ, ತಂತ್ರಜ್ಞಾನ, ಕೈಗಾರಿಕಾ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳಬೇಕು. ನವೋದ್ಯಮಗಳನ್ನು ಆರಂಭಿಸಬೇಕು' ಎಂದು ಸಲಹೆ ನೀಡಿದರು.

ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪದವಿ ಪೂರ್ಣಗೊಳಿಸಿದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶನಿವಾರ ಪದವಿ ಪ್ರದಾನ ಮಾಡಲಾಯಿತು

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಹಾಗೂ ಸಿಎಂಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಕೆ.ಸಿ. ರಾಮಮೂರ್ತಿ ಅವರು, 'ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ ರಜತ ಮಹೋತ್ಸವ ಆಚರಿಸಿಕೊಳ್ಳುತ್ತಿದೆ' ಎಂದು ತಿಳಿಸಿದರು.

ಸಿಎಂಆರ್ ವಿಶ್ವವಿದ್ಯಾಲಯದ ಪ್ರೊವೋಸ್ಟ್ ತ್ರಿಸ್ತಾ ರಾಮಮೂರ್ತಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಸಿಎಂಆರ್ ಜ್ಞಾನಧಾರ ಟ್ರಸ್ಟ್ ಕಾರ್ಯದರ್ಶಿ ಜಗನ್ನಾಥ ರೆಡ್ಡಿ, ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಜಯದೀಪ್ ಕೆ.ಆರ್.ರೆಡ್ಡಿ, ಪ್ರಾಂಶುಪಾಲ ಸಂಜಯ್ ಜೈನ್, ಉಪ ಪ್ರಾಂಶುಪಾಲ ಬಿ. ನರಸಿಂಹ ಮೂರ್ತಿ, ಡೀನ್ ಚಿತ್ರಾ ಕೆ. ಉಪಸ್ಥಿತರಿದ್ದರು.

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಮಲ್ಲೇಶ್ವರಂ, ಬೆಂಗಳೂರು

ಮುಖ್ಯ ಕಚೇರಿ: ನಂ.156, 17ನೇ ಕ್ರಾಸ್, 8ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು –560 055. ದೂರವಾಣಿ : 080 2344 2648/2344 9450. ಫ್ಯಾಕ್ಸ್ : 080 41281917. ಇ-ಮೇಲ್ : headoffice@jcbank.in.

2024–25ನೇ ಸಾಲಿನ ಲಾಭ ನಷ್ಟದ ತಃಖ್ತೆ

ನಷ್ಟಾಂಶಗಳು	ದಿನಾಂಕ 31.03.2025ಕ್ಕೆ	ದಿನಾಂಕ 31.03.2024ಕ್ಕೆ	ಲಾಭಾಂಶಗಳು	ದಿನಾಂಕ 31.03.2025ಕ್ಕೆ	ದಿನಾಂಕ 31.03.2024ಕ್ಕೆ
1. ಠೇವಣಿಗಳ ಮೇಲೆ ಬಡ್ಡಿ ಕೊಟ್ಟದ್ದು	44,46,94,797.00	52,42,18,155.00	1. ಬಡ್ಡಿ ಮತ್ತು ಸೋಡಿ	78,59,94,014.00	87,66,43,213.00
2. ಸಂಬಳ ಮತ್ತು ಭತ್ಯೆ	6,48,34,422.00	6,01,41,199.00	2. ಇತರೆ ಆದಾಯ	8,22,89,619.00	1,52,09,938.00
3. ನಿರ್ದೇಶಕರ ಸಭಾ ಭತ್ಯೆ	21,94,000.00	18,08,000.00			
4. ಬಾಡಿಗೆ, ಕರ, ವಿಮೆ	1,37,15,849.00	1,53,00,813.00			
5. ಲೀಗಲ್ ಫೀ	6,18,533.00	2,77,689.00			
6. ಅಂಚೆ, ತಂತಿ ಮತ್ತು ದೂರವಾಣಿ	2,68,693.00	3,96,947.00			
7. ಲೆಕ್ಕಪರಿಶೋಧನಾ ಶುಲ್ಕ	10,28,000.00	14,21,000.00			
8. ಕಟ್ಟಡ, ಮರಮುಟ್ಟುಗಳು ಮತ್ತು ಕಚೇರಿ ಸಲಕರಣೆಗಳಸವಕಳಿ/ರಿಪೇರಿ	64,92,841.00	64,84,682.00			
9 ಮುದ್ರಣ, ಲೇಖನ ಸಾಮಾಗ್ರಿ ಮತ್ತು ಜಾಹೀರಾತು	6,93,492.00	12,05,542.00			
10. ಇತರೆ ಖರ್ಚು	6,76,29,379.00	6,68,30,949.00			
11. ಅವಕಾಶಗಳು/ಇತರೆ ಮೀಸಲು	2,36,33,422.00	8,21,90,888.00			
12. ತೆರಿಗೆ ಪಾವತಿಗೆ ಮುನ್ನ ಲಾಭ	24,24,80,205.00	13,15,77,287.00			
13. ತೆರಿಗೆ ಪಾವತಿಸಿದ್ದು	6,70,00,000.00	5,38,05,052.00			
14. ಪ್ರಸಕ್ತ ಸಾಲಿನ ಲಾಭ	17,54,80,205.00	7,77,72,235.00			
ಒಟ್ಟು	86,82,83,633.00	89,18,53,151.00	ಒಟ್ಟು	86,82,83,633.00	89,18,53,151.00
ಹಿಂದಿನ ಸಾಲಿನ ನಷ್ಟ	–	8,34,00,264.00			
ಮೀಸಲು ನಿಧಿಗಳಿಂದ ಹಿಂಪಡೆದದ್ದು	–	1,08,17,843.00			
ಆರ್ ಎಫ್ 2.0 ಅವಕಾಶದಿಂದ ವಾಪಸ್ಸು ಪಡೆದಿರುವುದು	–	1,08,25,750.00			
ಲಾಭಾಂಶ ಹಂಚಿಕೆ					
ಶಾಸನ ಬದ್ದ ಮೀಸಲು	6,58,01,081.00				
ಇತರೆ ಮೀಸಲು	7,46,79,124.00				
ಪ್ರಸ್ತಾವಿತ ಲಾಭಾಂಶಕ್ಕೆ ವರ್ಗಾವಣೆ ಆರ್‌ಬಿಐ ಅನುಮೋದನೆಗೆ ಒಳಪಟ್ಟಂತೆ	3,50,00,000.00				
ನಿವ್ವಳ ಲಾಭ / (ನಷ್ಟ)	17,54,80,205.00	1,60,15,564.00			

ದಿನಾಂಕ: 31.03.2025ಕ್ಕೆ ಆಖೈರಾದ ಆಸ್ತಿ ಮತ್ತು ಜವಾಬ್ದಾರಿ ತಖ್ತೆ:

ಬಂಡವಾಳ ಮತ್ತು ಜವಾಬ್ದಾರಿಗಳು	ದಿನಾಂಕ 31.03.2025 ರಲ್ಲಿದ್ದಂತೆ	ದಿನಾಂಕ 31.03.2024 ರಲ್ಲಿದ್ದಂತೆ	ಆಸ್ತಿ ಮತ್ತು ಸ್ವತ್ತುಗಳು	ದಿನಾಂಕ 31.03.2025 ರಲ್ಲಿದ್ದಂತೆ	ದಿನಾಂಕ 31.03.2024 ರಲ್ಲಿದ್ದಂತೆ
1.ಅಧಿಕೃತ ಷೇರು ಬಂಡವಾಳ	50,00,00,000.00	50,00,00,000.00	1. ಕೈಯಲ್ಲಿರುವ ನಗದು	2,80,00,494.00	4,22,24,017.00
1. ಷೇರು ಬಂಡವಾಳ ಪಾವತಿಯಾದದ್ದು	32,90,30,950.00	32,99,57,200.00	2. ಇತರೆ ಬ್ಯಾಂಕುಗಳಲ್ಲಿರುವ ಶಿಲ್ಕು	29,02,81,208.00	38,89,13,873.00
2. ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು	35,19,48,227.00	37,61,92,573.00	3. ಕರೆ ಹಾಗೂ ಅಲ್ಪಸೂಚನೆಗೆ	17,00,00,000.00	15,00,00,000.00
3. ಠೇವಣಿಗಳು	660,62,70,92,500	742,55,65,872.00	4. ಠೇವಣಾತಿ ಯೋಜನೆಗಳು/ಹೂಡಿಕೆಗಳು	332,71,77,467.00	372,46,61,465.00
4. ಸಂದಾಯವಾಗತಕ್ಕ ಬಿಲ್ಲುಗಳು	48,04,755.00	1,18,08,578.00	5. ನಿವ್ವಳ ಸಾಲ ಮತ್ತು ಮುಂಗಡಗಳು	428,22,82,863.00	445,44,16,663.00
			6. ಸುಸ್ತಿ ಸಾಲಗಳ ಮೇಲೆ ಬರಬೇಕಾದ ಬಡ್ಡಿ (ಕಾಂಟ್ರ)	13,97,81,921.00	17,54,13,999.00
5. ಶಾಖೆಗಳ ಹೊಂದಾಣಿಕೆಗಳು			7. ಉತ್ಪದಕ ಸಾಲಗಳ ಮೇಲೆ ಬರಬೇಕಾದ ಬಡ್ಡಿ	4,59,46,114.00	5,15,13,425.00
6. ಸುಸ್ತಿ ಸಾಲಗಳ ಮೇಲೆ ಬರಬೇಕಾದ ಬಡ್ಡಿ (ಕಾಂಟ್ರಾ)	13,97,81,921.00	17,54,13,999.00	8. ಶಾಖೆಗಳ ಹೊಂದಾಣಿಕೆಗಳು	29,354.00	25,738.00
7. ಪಾವತಿಸಬೇಕಾದ ಬಡ್ಡಿ	45,63,797.00	41,75,859.00	9. ಕಟ್ಟಡ	61,87,927.00	68,69,607.00
8. ಇತರೆ ಜವಾಬ್ದಾರಿಗಳು	89,23,06,730.00	88,02,70,256.00	10. ಮರಮುಟ್ಟುಗಳು ಮತ್ತು ಪೀಠೋಪಕರಣಗಳು	58,73,041.00	65,25,602.00
			11. ಕಚೇರಿ ಸಲಕರಣೆಗಳು	26,90,443.00	29,18,094.00
9. ನಿವ್ವಳ ಲಾಭ ಲಾಭ–ನಷ್ಟದ ತ:ಖ್ತೆಯಿಂದ	17,54,80,205.00	1,60,15,564.00	12. ವಾಹನ	6,42,607.00	7,56,008.00
10. ಆಕಸ್ಮಿಕ ಜವಾಬ್ದಾರಿಗಳು (DEAF)			13. ಗಣಕ ಯಂತ್ರ	12,64,407.00	18,96,517.00
ಹಿಂದಿನ ಸಾಲಿನಲ್ಲಿದ್ದ ಮೊತ್ತ –14009408.00			14 ಎಲೆಕ್ಟ್ರಿಕಲ್ ಫಿಟ್ಟಿಂಗ್ಸ್	5,18,349.00	5,75,942.00
ವರದಿ ಸಾಲಿನಲ್ಲಿ ವರ್ಗಾಯಿಸಿದ ಮೊತ್ತ –6159431.00			15. ಇತರೆ ಆಸ್ತಿಗಳು:	9,84,09,037.00	10,84,28,050.00
ಹಿಂಪಡೆದ ಮೊತ್ತ –81566.00			16.ಹಕ್ಕುಗಳ ತೃಪ್ತಿಯಲ್ಲಿ ಸ್ವಾಧೀನ ಪಡಿಸಿಕೊಂಡ ಬ್ಯಾಂಕೇತರ ಆಸ್ತಿ	10,51,02,278.00	10,42,60,901.00
ವರ್ಷಾಂತ್ಯದಲ್ಲಿದ ಮೊಬಲಗು –20087273.00					–
					–
ಒಟ್ಟು	850,41,87,510.00	921,93,99,901.00	ಒಟ್ಟು	850,41,87,510.00	921,93,99,901.00

Disclosure in financial statements – 'Notes to Accounts'-UCBs

1. Regulatory Capital All Disclosure figure reported in Crores: **a) Composition of Regulatory Capital** (Rs. in Crores)

Sr. No.	Particulars	Current Year	Previous Year
i)	Paid up share capital and reserves (net of deductions, if any)	32.90	32.51
ii)	Other Tier 1 capital	41.81	33.13
iii)	Tier 1 capital (i + ii)	74.71	65.64
iv)	Tier 2 capital	10.45	2.54
v)	Total capital (Tier 1+Tier 2)	85.16	68.18
vi)	Total Risk Weighted Assets (RWAs)	404.22	448.96
Vii)	Paid-up share capital and reserves (net of deductions, if any)as percentage of RWAs	8.14%	7.24%
viii)	Tier 1 Ratio (Tier 1 capital as a percentage of RWAs)	18.48%	14.62%
ix)	Tier 2 Ratio (Tier 2 capital as a percentage of RWAs)	2.59%	0.57%
x)	Capital to Risk Weighted Assets Ratio (CRAR) (Total Capital as a percentage of RWAs)	21.07%	15.19%
xi)	Amount of paid-up equity capital raised during the year	7.91	1.42

b) Draw down from Reserves.

During the Financial Year 2024-25, the Bank has drawn down Rs. 5.40 crores from IDR, and the same has been credited to P &L under income; thereafter in the coming FY 2025-26, same will be appropriated to IFR (Net of after paying tax and SRF)The details are given below:-

SL No	Fund Name	Amount
1	Investment depreciation reserve	5.40

2. Asset liability management: a) **Maturity pattern of certain items of assets and liabilities.** (Rs. in Crores)

	Day1	2 to 7 Days	8 to 14 Days	15 to 30 Days	30 to 2 Months	Over 2 months upto 3 Months	Over 3 Months upto 6 Months	Over 6 Months upto 1Year	Over 1 Year upto 3 Year	Over Years and upto 5 Year	Over 5 Years	Total
Deposits	14.90	8.19	10.50	23.81	20.98	18.76	49.11	136.28	268.73	0.38	108.99	660.63
Advances	3.13	0.38	0.09	2.17	1.00	0.50	5.64	11.95	14.16	64.74	324.46	428.22
Investments	0.00	17.00	7.10	5.01	0.00	0.00	6.83	33.55	23.10	41.45	215.67	349.71
Borrowings	NIL	NIL	NIL	NIL	NIL	NIL	NIL	NIL	NIL	NIL	NIL	NIL
Foreign Currency Assets	NIL	NIL	NIL	NIL	NIL	NIL	NIL	NIL	NIL	NIL	NIL	NIL
Foreign Currency Liabilities	NIL	NIL	NIL	NIL	NIL	NIL	NIL	NIL	NIL	NIL	NIL	NIL

3. Investments: a) **Composition of Investment Portfolio as on 31.03.2025** (Rs. in Crores)

	Investments in India							Investments Outside India				Total Invest-ments
	G. Sec	Other Approved Securities	Shares	Deben-tures and Bonds	Subsidiar-ies and/or joint ventures	Others	Total Invest-ments in India	G. sec. (including local authorities)	Subsidiar-ies and/or joint ventures	Others	Total Investments outside India	
Held to Maturity												
Gross	134.53		37.34			61.43	233.30					233.30
Less : provision for non-performing investments (NPI)												0.00
Net	134.53		37.34			61.43	233.30					233.30
Available for Sale												
Gross	107.07		9.34				116.41					116.41
Less: Provision for depreciation and NPI												0.00
Net	107.07		9.34				116.41					116.41
Held for Trading												
Gross												0.00
Less: Provision for depreciation and NPI												0.00
Net												0.00
Total Investments	241.60		46.68			61.43	349.71					349.71
Less: Provision for non-performing investments												
Less: Provision for depreciation	0.10		37.34				37.44					37.44
Net	241.50		9.34			61.43	312.27					312.27

Composition of Investment Portfolio as on 31.03.2024 (Rs. in Crores)

	Investments in India							Investments Outside India				Total Invest-ments
	G. Sec	Other Approved Securities	Shares	Deben-tures and Bonds	Subsidiar-ies and/or joint ventures	Others	Total Invest-ments in India	G. sec. (including local authorities)	Subsidiar-ies and/or joint ventures	Others	Total Investments outside India	
Held to Maturity												
Gross	189.87		37.34			50.26	277.47					277.47
Less : provision for non-performing investments(NPI)												0.00
Net	189.87		37.34			50.26	277.47					277.47
Available for Sale												
Gross	100.66		9.34				110.00					110.00
Less: Provision for depreciation and NPI												0.00
Net	100.66		9.34				110.00					110.00
Held for Trading												
Gross												0.00
Less: Provision for depreciation and NPI												0.00
Net												0.00
Total Investments	290.53		46.68			50.26	387.47					387.47
Less: Provision for non-performing investments												
Less: Provision for depreciation	5.83		37.34				43.17					43.17
Net	284.70		9.34			50.26	344.30					344.30

Book value, face & Market value of Investments (Rs. in Crores)

Particulars	31.03.2025	31.03.2024
Book Value	241.60	290.53
Face Value	244.45	296.75
Market value	245.37	285.76

b) **Movement of Provisions for Depreciation and Investment Fluctuation Reserve** (Rs. in Crores)

Particulars	Current Year 2025	Previous Year 2024
i) Movement of provisions held towards depreciation on investments.		
a) Opening balance	5.83	14.68
b) Add: Provisions made during the year	----	----
c) Less: Write off / write back of excess provisions during the year	5.73	8.85
d) Closing balance	0.1	5.83
ii) Movement of Investment Fluctuation Reserve	----	-----
a) Opening balance		
b) Add: Amount transferred during the year	0.50	----
c) Less: Drawdown	----	----
d) Closing balance	0.50	----
iii) Closing balance in IFR as a percentage of closing balance of investments[13] in AFS and HFT/Current category	0.47%	----

Note: In order to meet the requirement of maintaining 5% IFR on the closing balance of investments under the AFS category, the bank has drawn down ₹ 5.40 crores from the IDR. The same will be credited to the IFR at the time of appropriation. Further, for the remaining deficit amount, appropriation shall be made out of the current year's profit so as to comply with the RBI guidelines.

c) **Sale and transfers to/from HTM category : NIL**

Where the value of sales and transfers of securities to/from HTM category exceeds 5 per cent of the book value of investments held in HTM category at the beginning of the year, banks shall disclose the market value of the investments held in the HTM category. The excess of book value over market value for which provision is not made shall also be disclosed. The 5 per cent threshold referred to above shall exclude: The one-time transfer of securities to/from HTM category with the approval of Board of Directors undertaken by banks at the beginning of the accounting year. Direct sales from HTM for bringing down SLR holdings in HTM category consequent to a downward revision in SLR requirements by RBI

d) Non-SLR investment portfolio : i) Non-performing non-SLR investments (Rs. in Crores)

Sr. No.	Particulars	Current Year 2025	Previous Year 2024
a)	Opening balance	0.0025	0.0025
b)	Additions during the year since 1st April	0.0000	0.0000
c)	Reductions during the above period	0.0000	0.0000
d)	Closing balance	0.0025	0.0025
e)	Total provisions held	**0.0000**	**0.0000**

ii) Issuer composition of non-SLR investments (Rs. in Crores)

Sr. No.	Issuer	Amount		Extent of Private Placement		Extent of 'Below Investment Grade' Securities		Extent of 'Unrated' Securities		Extent of 'Unlisted' Securities	
(1)	(2)	(3)		(4)		(5)		(6)		(7)	
		Current year	Previous Year	Current year	Previous Year	Current year	Previous Year	Current year	Previous Year	Current year	Previous Year
a)	PSUs										
b)	FIs										
c)	Banks	46.6725	46.6725							46.6725	46.6725
d)	Private Corporates										
e)	Subsidiaries/ Joint Ventures										
f)	Others										
g)	Provision held towards depreciation	37.3400	37.3400							37.3400	37.3400
	Total	9.3325	9.3325							9.3325	9.3325

Note: Balance of ₹ 9.33crores and ₹ 0.0025 crores relates the Equity Share held with Unity Small finance Bank and shares with BDCC bank respectively.

e) Repo transactions (in face value terms)14 : NIL

f) Government Security Lending (GSL) transactions (in market value terms)[15] : NIL

4. Asset quality (Rs. in Crores)

a) Classification of advances and provisions held

	Standard	Non-Performing				Total
	Total Standard Advances	Sub- standard	Doubtful	Loss	Total Non- Performing Advances	
Gross Standard Advances and NPAs						
Opening Balance	403.63	18.49	23.32		41.81	445.44
Add: Additions during the year					0.06	4.67
Less: Reductions during the year					21.89	21.89
Closing balance	408.24	7.24	12.74		19.98	428.22
*Reductions in Gross NPAs due to:						
Upgradation					13.67	13.67
Recoveries (excluding recoveries from upgraded accounts)					8.22	8.22
Technical/ Prudential Write-offs						
Write-offs						
Provisions (excluding Floating Provisions)						
Opening balance of provisions held	1.94	1.85	23.32		25.17	27.11
Add: Fresh provisions made during the year						
Less: Excess provision reversed/ Write-off loans						
Closing balance of provisions held	1.94	0.72	10.71		11.43	13.37
Net NPAs						
Opening Balance		14.46	-5.45		9.01	
Add: Fresh additions during the year						
Less: Reductions during the year						
Closing Balance		-	-			
Ratios (in %)	Current Year	Previous Year				
Gross NPA to Gross Advances	4.67%	9.39%				
Net NPA to Net Advances	0.00%	2.18%				
Provision coverage ratio	174.17%	78.45%				

Note : Treatment of BDDR Balance:

As at 31.03.2025, the Bank has accumulated balance of Rs.34.80 crores in the BDDR account (reserve), of which Rs.29.22 crores has been created out of debiting to the Profit and Loss account in the earlier years and Rs.5.58 crores has been created from appropriation of profits in the earlier years.

To comply with the RBI circular on Prudential Treatment of Bad and Doubtful Debt Reserve by Co-operative Banks vide circular no. RBI/2024-25/58/ DOR.CAP.REC. No.27/09.18.201/2024-25 dated August 02, 2024, the Bank has transferred the balance in the BDDR account amounting to Rs.34.80 crores to the provision for NPA provision (liability) and netted of such amount from Gross NPA to arrive at Net NPA.

Bank has followed this approach as the Bank has no intention to utilize the excess BDDR amount for the purpose of Tier I Capital, and by this approach bank will achieve better NPA Provision Coverage Ratio (PCR).

b) Sector-wise Advances and Gross NPAs (Rs. in Crores)

Sr. No.	Sector*	Current Year-2025			Previous Year-2024		
		Outstanding Total Advances	Gross NPAs	Percentage of Gross NPAs to Total Advances	Outstanding Total Advances	Gross NPAs	Percentage of Gross NPAs to Total Advances
i)	**Priority Sector**						
a)	Agriculture and allied activities	17.54	0.82	0.19	8.20	0.77	0.17
b)	Advances to industries sector eligible as priority sector lending	48.20	2.25	0.53	69.03	6.48	1.46
c)	Services	67.10	3.13	0.73	61.69	5.79	1.30
d)	Personal loans	31.41	1.47	0.34	18.43	1.73	0.39
	Subtotal (i)	164.25	7.66	1.79	157.35	14.77	3.32
ii)	**Non-priority Sector**						
a)	Agriculture and allied activities						
b)	Industry						
c)	Services						
d)	Personal loans	263.97	12.32	2.88	288.09	27.04	6.07
	Sub-total (ii)	263.97	12.32	2.88	288.09	27.04	6.07
	Total (I + ii)	428.22	19.98	4.67	445.44	41.81	9.39

c) Overseas assets, NPAs and revenue - NIL for current year-2025 and previous year-2024

d) Particulars of resolution plan and restructuring

i) Details of accounts subjected to restructuringNIL.

e) Divergence in asset classification and provisioning (Rs. in Crores)

Sl.No.	Particulars	Amount
1	Gross NPAs as on March 31,2024as reported by the bank	41.81
2	Gross NPAS as on March 31 ,2024 as assessed by RBI	41.81
3	Divergence in Gross NPAS (2-1)	0.00
4	Net NPAS as on March 31, 2024 as reported by the bank	9.01
5	Net NPAS as on March 31, 2024 as assessed by RBI	9.01
6	Divergence in Net NPAs (5-4)	0.00
7	Provisions for NPAs as on March 31, 2024 as reported by the bank	32.80
8	Provisions for NPAs as on March 31, 2024 as assessed by RBI	32.80
9	Divergence in provisioning (8-7)	0.00
10	Reported Profit before Provisions and Contingencies for the year end March 31, 2024	21.38
11	Reported Net Profit after Tax (PAT) for the year ended March 31, 2024	7.78
12	Adjusted (notional) Net Profit atter Tax (PAT) for the year ended March 31, 2024 after considering the divergence in provisioning	7.78

f) Disclosure of transfer of loan exposures: NIL for current year-2025 and previous year-2024

g) Fraud accounts: NIL for current year-2025 and previous year-2024

h) Disclosure under Resolution Framework for COVID-19-related Stress (Rs. in Crores)

Type of borrower	Exposure to accounts classified as Standard consequent to implementation of resolution plan– Position as at the end of the previous year (A)	Of (A), aggregate debt that slipped into NPA during the year	Of (A) amount paid by the borrowers during the year	Exposure to accounts classified as Standard consequent to implementation of resolution plan – Position as at the end of this year
Personal Loans	20.34	1.25	2.48	17.86
Corporate persons*				
Of which MSMEs				
Others				
Total	20.34	1.25	2.48	17.86

** As defined in section 3(7) of the Insolvency and Bankruptcy Code, 2016*

5. Exposures: a) Exposure to real estate sector (Rs. in Crores)

Category	Current year	Previous Year
a) Residential Mortgages – Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits. i) Priority housing Loans ii) Other Housing Loans b) Commercial Real Estate – Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development, and construction, etc.). Exposure would also include non-fund based (NFB) limits;	11.69 52.20 55.26	12.80 59.23 59.62
Total Exposure to Real Estate Sector	119.15	131.65

b) Exposure to capital market - **NIL for current year-2025 and previous year-2024**

c) Risk category-wise country exposure- **NIL for current year-2025 and previous year-2024**

ಅಪಾರ್ಟ್‌ಮೆಂಟ್ ಬಾಗಿಲಿಗೆ ತರಕಾರಿ

ಖಾಸಗಿ ಸಹಭಾಗಿತ್ವದಲ್ಲಿ ಮಾರಾಟಕ್ಕೆ ಹಾಪ್‌ಕಾಮ್ಸ್‌ನಿಂದ ಯೋಜನೆ

• ಖಲೀಲ ಅಹ್ಮದ ಶೇಖ

ಬೆಂಗಳೂರು: ಕೃಷಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘವು (ಹಾಪ್‌ಕಾಪ್ಸ್) ಖಾಸಗಿ ಸಹಭಾಗಿತ್ವದಲ್ಲಿ ಅಪಾರ್ಟ್‌ಮೆಂಟ್‌ಗಳಲ್ಲಿ ಹಣ್ಣು, ತರಕಾರಿಗಳನ್ನು ಮೊಬೈಲ್ ವಾಹನಗಳ ಮೂಲಕ ಮಾರಾಟ ಮಾಡುವ ಯೋಜನೆ ರೂಪಿಸಿದೆ.

ಗ್ರಾಹಕರ ಆಶಯಕ್ಕೆ ಅನುಗುಣವಾಗಿ ಹಾಪ್‌ಕಾಮ್ಸ್ ಆಧುನಿಕ ಮಳಿಗೆಗಳು ಮತ್ತು ಸಂಚಾರಿ ಮೊಬೈಲ್ ವಾಹನಗಳನ್ನು ಪರಿಚಯಿಸಿದೆ. ನಗರದಲ್ಲಿ ಅಪಾರ್ಟ್‌ಮೆಂಟ್‌ಗಳಿಗೆ ಭೇಟಿ ನೀಡಿ, ತರಕಾರಿ, ಹಣ್ಣುಗಳನ್ನು ಮಾರಾಟ ಮಾಡುತ್ತಿದೆ.

ಹಾಪ್‌ಕಾಮ್ಸ್‌ನಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ನಗರದ ಎಲ್ಲ ಅಪಾರ್ಟ್‌ಮೆಂಟ್‌ಗಳಿಗೆ ಭೇಟಿ ನೀಡಿ, ವ್ಯಾಪಾರ–ವಹಿವಾಟು ನಡೆಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಖಾಸಗಿ ಸಹಭಾಗಿತ್ವದಲ್ಲಿ ಸಂಚಾರಿ ಮೊಬೈಲ್ ವಾಹನಗಳ ಮೂಲಕ ತರಕಾರಿ–ಹಣ್ಣುಗಳ ಮಾರಾಟ ಮಾಡುವ ಯೋಜನೆ ಪರಿಚಯಿಸಿದೆ. ಈ ಮೂಲಕ ಯುವಕರಿಗೆ ಸ್ವಾವಲಂಬಿಗಳಾಗಲು ಅವಕಾಶ ಕಲ್ಪಿಸುತ್ತಿದೆ.

'ಯೋಜನೆಯಡಿ ವ್ಯಾಪಾರ ಮಾಡಲು ಮುಂದೆ ಬರುವ ಆಸಕ್ತರಿಗೆ ಹಾಪ್‌ಕಾಮ್ಸ್‌ನಿಂದ ಹಣ್ಣು ಮತ್ತು ತರಕಾರಿಗಳನ್ನು ಪೂರೈಸುವ ಜೊತೆಗೆ ಸಂಚಾರಿ ವಾಹನವನ್ನೂ ನೀಡಲಾಗುತ್ತದೆ. ಆಸಕ್ತರ ಬಳಿ ವಾಹನ ಇದ್ದರೆ, ಬಾಡಿಗೆ ಪಾವತಿಸಲಾಗುತ್ತದೆ. ನಿತ್ಯ ಯಾವ ಅಪಾರ್ಟ್‌ಮೆಂಟ್‌ಗಳಿಗೆ ಭೇಟಿ ನೀಡಬೇಕು ಎಂಬ ಮಾಹಿತಿಯನ್ನು ನೀಡಲಾಗುತ್ತದೆ. ಹಾಪ್‌ಕಾಮ್ಸ್ ನಿಗದಿಪಡಿಸಿದ ದರದಲ್ಲೇ ಮಾರಾಟ ಮಾಡಬೇಕು' ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಮಿರ್ಜಿ ಉಮೇಶ ಶಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಆಸಕ್ತರು ಭದ್ರತೆಗಾಗಿ ₹ 1ಲಕ್ಷ ಠೇವಣಿ ಇಡಬೇಕು. ಇದರಲ್ಲಿ ₹ 50 ಸಾವಿರ ಭದ್ರತಾ ಠೇವಣಿ, ₹ 50 ಸಾವಿರ ಮೌಲ್ಯದ ಹಣ್ಣು ಮತ್ತು ತರಕಾರಿಗಳನ್ನು ಪೂರೈಕೆ ಮಾಡಲಾಗುತ್ತದೆ. ತಿಂಗಳಲ್ಲಿ ಕನಿಷ್ಠ 25 ದಿನಗಳಲ್ಲಿ ₹4 ಲಕ್ಷ ಮೌಲ್ಯದ ವ್ಯಾಪಾರ–ವಹಿವಾಟು ನಡೆಸಬೇಕು. ಇದರಲ್ಲಿ ಕಮಿಷನ್ ರೂಪದಲ್ಲಿ ಪ್ರತಿ ತಿಂಗಳು ₹40 ಸಾವಿರ ಆದಾಯ ಗಳಿಸಬಹುದು' ಎಂದು ಮಾಹಿತಿ ನೀಡಿದರು.

'ಬೆಂಗಳೂರು ನಗರದಲ್ಲಿನ 220 ಹಾಪ್‌ಕಾಮ್ಸ್ ಮಳಿಗೆಗಳ ಪೈಕಿ 163 ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಯ ರೈತರು ನಿತ್ಯ 35ರಿಂದ 40 ಟನ್ ಹಣ್ಣು–ತರಕಾರಿಯನ್ನು ಹಾಪ್‌ಕಾಮ್ಸ್‌ಗೆ ಪೂರೈಕೆ ಮಾಡುತ್ತಿದ್ದಾರೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಹಾಪ್‌ಕಾಮ್ಸ್‌ನಿಂದ ಹಣ್ಣು–ತರಕಾರಿ ಮಾರಾಟ ದರ ನಿಗದಿ
- ಮಾರಾಟ ಮಾಡಬೇಕಾದ ಅಪಾರ್ಟ್‌ಮೆಂಟ್ ಹಾಪ್‌ಕಾಮ್ಸ್‌ನಿಂದ ನಿರ್ಧಾರ
- ಸ್ವಂತ ವಾಹನವಿದ್ದರೆ ₹20 ಸಾವಿರ ಪ್ರತ್ಯೇಕ ಬಾಡಿಗೆ ಪಾವತಿ

ಹಾಪ್‌ಕಾಮ್ಸ್ ಸಂಚಾರಿ ವಾಹನದ ಮೂಲಕ ಅಪಾರ್ಟ್‌ಮೆಂಟ್‌ವೊಂದರಲ್ಲಿ ಮಾವು ಮಾರಾಟ ಮಾಡಿದರು

60 ಅಪಾರ್ಟ್‌ಮೆಂಟ್‌ಗಳೊಂದಿಗೆ ಒಪ್ಪಂದ

'ಬೆಂಗಳೂರಿನ ಪ್ರಮುಖ ಬಡಾವಣೆಗಳಲ್ಲಿ ಇರುವ 60ಕ್ಕೂ ಹೆಚ್ಚು ಅಪಾರ್ಟ್‌ಮೆಂಟ್‌ಗಳಿಗೆ ಹಣ್ಣು ಮತ್ತು ತರಕಾರಿ ಪೂರೈಕೆ ಮಾಡಲು ಒಪ್ಪಂದ ಮಾಡಿಕೊಳ್ಳಲಾಗಿದೆ. ಆಸಕ್ತ ಯುವಕರು ಮುಂದೆ ಬಂದರೆ ನಿಗದಿತ ಅಪಾರ್ಟ್‌ಮೆಂಟ್‌ಗಳಿಗೆ ಸದ್ಯದಲ್ಲೇ ಹಣ್ಣು–ತರಕಾರಿ ಪೂರೈಕೆಯಾಗಲಿದೆ. ಈ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಹಾಪ್‌ಕಾಮ್ಸ್ ಕೇಂದ್ರ ಕಚೇರಿಗೆ ಭೇಟಿ ನೀಡಬಹುದು ಅಥವಾ 92411 33552 ಸಂಪರ್ಕಿಸಬಹುದು' ಎಂದು ಹಾಪ್‌ಕಾಮ್ಸ್‌ನ ಅಧಿಕಾರಿಗಳು ತಿಳಿಸಿದ್ದಾರೆ.

'ಹಾಪ್‌ಕಾಮ್ಸ್ ನಿವೃತ್ತರಿಗೆ ಆದ್ಯತೆ'

'ಅಪಾರ್ಟ್‌ಮೆಂಟ್‌ಗಳಲ್ಲಿ ಹಣ್ಣು ಮತ್ತು ತರಕಾರಿ ಮಾರಾಟಕ್ಕೆ ನಿವೃತ್ತ ಸಿಬ್ಬಂದಿಗೆ ಹಾಪ್‌ಕಾಮ್ಸ್ ಆದ್ಯತೆ ನೀಡುತ್ತಿದೆ. ನಂತರ ನಿರುದ್ಯೋಗಿಗಳಿಗೆ ಅವಕಾಶ ನೀಡಲಾಗುತ್ತಿದೆ. ತಾಜಾ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಇದೆ. ನಿರುದ್ಯೋಗಿಗಳು ಅವಕಾಶ ಬಳಸಿಕೊಂಡು ಸ್ವಾವಲಂಬಿಗಳಾಗಬಹುದು' ಎಂದು ಮಿರ್ಜಿ ಉಮೇಶ ಶಂಕರ ತಿಳಿಸಿದರು.

'ಸಣ್ಣ ಕೈಗಾರಿಕೆಗೆ ಪ್ರತ್ಯೇಕ ಸಚಿವಾಲಯಕ್ಕೆ ಸಿದ್ಧತೆ'

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: 'ಸಣ್ಣ ಕೈಗಾರಿಕೆಗಳಿಗಾಗಿ ಪ್ರತ್ಯೇಕ ಸಚಿವಾಲಯ ರಚಿಸಲು ಮುಖ್ಯಮಂತ್ರಿ ಅವರು ಸೂಚಿಸಿದ್ದು, ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿ ಶನಿವಾರ ಕಾಸಿಯಾ ಶ್ರೇಷ್ಠತಾ ಮತ್ತು ನಾವೀನ್ಯ ಕೇಂದ್ರ ಮತ್ತು ವಸ್ತು ಪ್ರದರ್ಶನ ಕೇಂದ್ರ ಕಟ್ಟಡಗಳ ಉದ್ಘಾಟನೆ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದರು.

'ಕೆಐಎಡಿಬಿ ವತಿಯಿಂದ ಶೇ 20ರಷ್ಟು ಅನುದಾನ ಸಣ್ಣ ಕೈಗಾರಿಕೆಗಳಿಗೆ ನೀಡಬೇಕು ಎಂಬ ಕಾನೂನಿದೆ. ಈ ವಿಚಾರವಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ ಪಾಟೀಲ್ ಅವರ ಬಳಿ ಹಾಗೂ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸುತ್ತೇನೆ. ಸಣ್ಣ ಕೈಗಾರಿಕೆಗಳಿಗೆ ನಾವು ಒತ್ತು ನೀಡಬೇಕು. ಕಾರ್ಮಿಕರ ವಿಚಾರವನ್ನು ಅವರು ಪ್ರಸ್ತಾಪಿಸಿದ್ದಾರೆ. ಅದನ್ನು ಚರ್ಚಿಸುತ್ತೇವೆ' ಎಂದು ಭರವಸೆ ನೀಡಿದರು.

'ನಿಮ್ಮ ಕ್ಷೇತ್ರಕ್ಕೆ ಅಗತ್ಯವಿರುವ ಕೌಶಲಾಭಿವೃದ್ಧಿ ತರಬೇತಿ ಕೇಂದ್ರವನ್ನು ಆರಂಭಿಸಲಾಗುತ್ತಿದೆ. ನಮ್ಮ ಸರ್ಕಾರ ನಿಮ್ಮ ಜೊತೆಗೆ ಇದೆ' ಎಂದು ಅವರು ಹೇಳಿದರು.

ಶೋಭಾ ಕರಂದ್ಲಾಜೆ ಅವರಿಗೆ ಪತ್ರಕರ್ತರು ಮನವಿ ಸಲ್ಲಿಸಿದರು

ಅಧಿಕ ಪಿಂಚಣಿ ಸಮಸ್ಯೆ ಪರಿಹಾರಕ್ಕೆ ಕೇಂದ್ರ ಸಚಿವೆ ಶೋಭಾ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕರರ ಭವಿಷ್ಯ ನಿಧಿ ಯೋಜನೆಯಡಿ 'ಅಧಿಕ ಪಿಂಚಣಿ ಯೋಜನೆ'ಯಲ್ಲಿ ಉಂಟಾಗಿರುವ ಸಮಸ್ಯೆಯನ್ನು ಶೀಘ್ರ ಪರಿಹರಿಸುವುದಾಗಿ ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಭರವಸೆ ನೀಡಿದರು.

'ಸುಪ್ರೀಂ ಕೋರ್ಟ್ ಆದೇಶದಂತೆ ಅಧಿಕ ಪಿಂಚಣಿ ಪಡೆಯಲು ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಗೆ ಹಲವು ಪತ್ರಕರ್ತರು ಅರ್ಜಿ ಸಲ್ಲಿಸಿದ್ದಾರೆ. ಅನೇಕ ತಿಂಗಳಿನಿಂದ ಅರ್ಜಿಗಳು ಇತ್ಯರ್ಥವಾಗದೇ ಸಮಸ್ಯೆಯಾಗಿದೆ. ನಿವೃತ್ತರಾಗಿರುವವರಿಗೆ ಆರ್ಥಿಕ ಸಮಸ್ಯೆ ಎದುರಾಗಿದೆ' ಎಂದು ಸಚಿವರಿಗೆ ಪತ್ರಕರ್ತರ ನಿಯೋಗ ಸಮಸ್ಯೆಯನ್ನು ಹೇಳಿಕೊಂಡಿತು.

'ಅನೇಕ ಪತ್ರಕರ್ತರು ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯಿಂದ ಬಂದ 'ಡಿಮ್ಯಾಂಡ್ ನೋಟ್' ಅನುಸಾರ ಹೆಚ್ಚುವರಿ ಮೊತ್ತವನ್ನು ಜನವರಿಯಲ್ಲೇ ಪಾವತಿಸಿದ್ದಾರೆ. ಕಟ್ಟಿದ ದುಡ್ಡಿಗೆ ಬಡ್ಡಿಯೂ ಇಲ್ಲ, ಹೆಚ್ಚಿನ ಪಿಂಚಣಿಯೂ ಇಲ್ಲದಂತಾಗಿದೆ' ಎಂದು ಪತ್ರಕರ್ತರು ಹೇಳಿದರು.

'ಈಗಾಗಲೇ ಡಿಮಾಂಡ್ ನೋಟ್ ವಿತರಿಸಿ ಹಣ ಕಟ್ಟಿಸಿಕೊಂಡ ಉದ್ಯೋಗಿಗಳ ಅರ್ಜಿಯನ್ನು ಕೂಡಲೇ ಇತ್ಯರ್ಥಪಡಿಸಬೇಕು' ಎಂದು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪತ್ರಕರ್ತರಾದ ಶ್ರೀವತ್ಸ ನಾಡಿಗ್, ನೆತ್ರಕೆರೆ ಉದಯಶಂಕರ, ಎಂ.ನಾಗರಾಜ, ಬಿ.ಎನ್.ರಾಘವೇಂದ್ರ, ವಾದಿರಾಜ ದೇಸಾಯಿ, ಚಂದ್ರಶೇಖರ ಮತ್ತು ಹನುಮೇಶ್ ಕೆ. ಯಾವಗಲ್ ನಿಯೋಗದಲ್ಲಿದ್ದರು.

ಪ್ರಶಸ್ತಿ ಗೆದ್ದವರು (ಎಡದಿಂದ) ರೆಯಾಂಶ್ ಜಲನ್, ತನಿಷ್ಕಾ ಕಪಿಲ್ ಕಾಲಭೈರವ, ಸಿದ್ಧಾಂತ್ ಧಾರಿವಾಲ್ ಹಾಗೂ ವೇದಾಂತ್ ವಸಿಷ್ಠ

ರಾಜ್ಯ ರ‍್ಯಾಂಕಿಂಗ್ ಟಿ.ಟಿ ರೆಯಾಂಶ್, ತನಿಷ್ಕಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಯಾಂಶ್ ಜಲನ್ ಹಾಗೂ ತನಿಷ್ಕಾ ಕಪಿಲ್ ಕಾಲಭೈರವ ಅವರು ಕರ್ನಾಟಕ ಸರ್ಕಾರದ ಸಚಿವಾಲಯ (ಕೆಜಿಎಸ್) ಕ್ಲಬ್ ಆಯೋಜಿಸಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 15 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗದ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ, ತನಿಷ್ಕಾ 11-6, 8-1, 11-5, 11-3ರಿಂದ ಸಾಕ್ಷ್ಯಾ ಸಂತೋಷ್ ಎದುರು ಗೆಲುವು ಸಾಧಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ತನಿಷ್ಕಾ 11-8, 11-4, 12-10 ನೇರ ಸೆಟ್‌ಗಳಿಂದ ರಾಶಿ ವಿ. ರಾವ್ ವಿರುದ್ಧ; ಸಾಕ್ಷ್ಯಾ 6-11, 11-3, 11-5, 9-11, 11-9ರಿಂದ ಇರೆನ್ ಅನ್ನಾ ಸುಭಾಷ್ ವಿರುದ್ಧ ಜಯಿಸಿದ್ದರು.

ನಾನ್ ಮೆಡಲಿಸ್ಟ್ ಸಿಂಗಲ್ಸ್ ಫೈನಲ್‌ನಲ್ಲಿ ತನಿಷ್ಕಾ 13-11, 12-10, 11-9ರ ನೇರ ಸೆಟ್‌ಗಳಿಂದ ಶುಭಂ ದ್ವಿವೇದಿ ಅವರನ್ನು ಮಣಿಸಿದರು. ಇದಕ್ಕೂ ಮೊದಲು, 17 ವರ್ಷ ಮತ್ತು 19 ವರ್ಷದೊಳಗಿನವರ ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದಿದ್ದ ತನಿಷ್ಕಾ ಅವರು ಟೂರ್ನಿಯಲ್ಲಿ ಒಟ್ಟು ನಾಲ್ಕು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡರು.

ಬಾಲಕರ ಫೈನಲ್‌ನಲ್ಲಿ ರೆಯಾಂಶ್ 11-7, 11-4, 10-12, 12-14, 11-5ರಿಂದ ಸಿದ್ಧಾಂತ್ ಎಂ. ಅವರನ್ನು ಸೋಲಿಸಿದರು. ಸೆಮಿಫೈನಲ್ ಪಂದ್ಯಗಳಲ್ಲಿ ರೆಯಾಂಶ್ 11-5, 11-6, 11-4ರ ನೇರ ಸೆಟ್‌ಗಳಿಂದ ಪ್ರಥಮ್ ವಿ. ರಾವ್ ಎದುರು; ಸಿದ್ಧಾಂತ್ 11-8, 11-9, 11-9ರ ನೇರ ಸೆಟ್‌ಗಳಿಂದ ಆದ್ಯೋತ್ ಯು. ಎದುರು ಗೆಲುವು ಸಾಧಿಸಿದ್ದರು.

ನಾನ್ ಮೆಡಲಿಸ್ಟ್ ಡಬಲ್ಸ್ ಫೈನಲ್‌ನಲ್ಲಿ ಸಿದ್ಧಾಂತ್ ಧಾರಿವಾಲ್ ಹಾಗೂ ವೇದಾಂತ್ ವಸಿಷ್ಠ ಜೋಡಿಯು 11-7, 8-11, 11-5, 11-7ರಿಂದ ಸಂಜಯ್ ಅಯ್ಯಂಗಾರ್ ಹಾಗೂ ಕಿಶನ್ ಶೆಟ್ಟಿ ಜೋಡಿಯನ್ನು ಸೋಲಿಸಿತು.

ತಿಪ್ಪಗೊಂಡನಹಳ್ಳಿ ಜಲಾಶಯ ಸಂರಕ್ಷಣೆ, ಪುನರುಜ್ಜೀವನಕ್ಕೆ ಒತ್ತಾಯ

'ಕಾವೇರಿ ಅವಲಂಬನೆ ಕಡಿಮೆಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಿಪ್ಪಗೊಂಡನಹಳ್ಳಿ ಜಲಾಶಯದ 10 ಕಿ.ಮೀ ವ್ಯಾಪ್ತಿಯಲ್ಲಿ ನಗರೀಕರಣ ಮತ್ತು ಕೈಗಾರೀಕರಣ ನಿಯಂತ್ರಿಸಿ, ನೀರು ಸಂಗ್ರಹ ಹೆಚ್ಚಿಸಿ, ಕಾವೇರಿ ನೀರಿನ ಮೇಲಿನ ಅವಲಂಬನೆ ಕಡಿಮೆ ಮಾಡಬೇಕು' ಎಂದು ತಜ್ಞರು ಅಭಿಪ್ರಾಯಪಟ್ಟರು.

ಆಮ್ ಆದ್ಮಿ ಪಾರ್ಟಿ– ಕರ್ನಾಟಕದ ವತಿಯಿಂದ ಆಯೋಜಿಸಿದ್ದ 'ತಿಪ್ಪಗೊಂಡನಹಳ್ಳಿ ಜಲಾಶಯ ರಕ್ಷಿಸಿ, ಬೆಂಗಳೂರು ಉಳಿಸಿ' ವಿಚಾರ ಸಂಕಿರಣದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬೆಂಗಳೂರಿಗೆ ನೀರು ಸರಬರಾಜು ಮಾಡಿದರೆ ವೆಚ್ಚ ಕಡಿಮೆಯಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.

'ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಪುನರುಜ್ಜೀವಗೊಳಿಸಲು ಇಸ್ರೊ ಸಂಸ್ಥೆ ಹಾಗೂ ಕೆಲವು ಸಂಸ್ಥೆಗಳು ಸವಿಸ್ತಾರವಾದಂತಹ ವರದಿ ನೀಡಿದ ದಶಕ ಕಳೆದಿದೆ. ಸರ್ಕಾರ ಈ ಜಲಾಶಯದ ಪುನರುಜ್ಜೀವನಕ್ಕೆ ಯಾವುದೇ ಯೋಜನೆ ರೂಪಿಸದೇ ಬೆಂಗಳೂರಿಗೆ ಅನ್ಯಾಯ ಮಾಡುತ್ತಿದೆ' ಎಂದು ಬೆಂಗಳೂರು ಜಲಮಂಡಳಿಯ ನಿವೃತ್ತ ಎಂಜಿನಿಯರ್ ಎಂ.ಎನ್.ತಿಪ್ಪೇಸ್ವಾಮಿ ಹೇಳಿದರು.

'ನಗರಕ್ಕೆ ನೀರಿನ ಲಭ್ಯತೆಯ ಸಾಮರ್ಥ್ಯದ ಮೇಲೆ ಅಭಿವೃದ್ಧಿ ಆಗಬೇಕಿದೆ. ಆದರೆ ನೀರಿನ ಲಭ್ಯತೆಯ ವಿರುದ್ಧ ದಿಕ್ಕಿನಲ್ಲಿ ಬೆಂಗಳೂರನ್ನು ಅಭಿವೃದ್ಧಿಪಡಿಸುತ್ತಿರುವುದು ರಾಜಕಾರಣಿಗಳ ದುರಾಸೆಯ ಪರಮಾವಧಿಯಾಗಿದೆ' ಎಂದು ಸಿವಿಕ್–ಬೆಂಗಳೂರು ಸಂಸ್ಥೆಯ ಕಾರ್ಯಕಾರಿ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ದೂರಿದರು.

'ಬೆಂಗಳೂರು ನಗರಕ್ಕೆ 'ನೀರಿನ ನೀತಿ'ಯನ್ನು ಕೂಡಲೇ ಜಾರಿಗೊಳಿಸಬೇಕು. ಬೆಂಗಳೂರಿನ ಕಾಲು ಭಾಗ ಮಾತ್ರ ಕಾವೇರಿ ನದಿಯನ್ನು ಆಶ್ರಯಿಸಬೇಕು. ಮುಕ್ಕಾಲು ಭಾಗ ಬೆಂಗಳೂರಿಗೆ ದಕ್ಷಿಣ ಪಿನಾಕಿನಿ ಹಾಗೂ ಸ್ಥಳೀಯ ಕೆರೆಗಳು, ಬಾವಿ, ಅಂತರ್ಜಲ ವ್ಯವಸ್ಥೆಗಳಿಂದ ನೀರನ್ನು ಸ್ವಯಂ ನಾವೇ ಪೂರೈಕೆ ಮಾಡಿಕೊಳ್ಳಬಹುದಾಗಿದೆ' ಎಂದು ಮಳೆನೀರು ತಜ್ಞ ವಿಶ್ವನಾಥ್ ಹೇಳಿದರು.

'ತಿಪ್ಪಗೊಂಡನಹಳ್ಳಿ ಜಲಾಶಯ ಪ್ರದೇಶದಲ್ಲಿ ಈ ಮೊದಲು ಆನೆ ಕಾರಿಡಾರ್ ಇತ್ತು. ಇತ್ತೀಚಿನ ದಿನಗಳಲ್ಲಿ ಅಲ್ಲಿನ ಆನೆಗಳು ಸಂಪೂರ್ಣ ಮಾಯವಾಗಿವೆ. ದೂರದಿಂದ ಪಕ್ಷಿ ಸಂಕುಲಗಳು ಇತ್ತೀಚಿನ ದಿನಗಳಲ್ಲಿ ವಲಸೆ ಬರುತ್ತಿಲ್ಲ. ನೀರು ಕೋಳಿಗಳೂ ನಾಪತ್ತೆಯಾಗಿವೆ. ಪ್ರಾಣಿ ಪಕ್ಷಿ ಸಂಕುಲಗಳಿಗೆ ಮಾರಕವಾಗಿರುವ ಚಟುವಟಿಕೆಗಳು ಜಲಾಶಯದ ಸುತ್ತಮುತ್ತ ಎದ್ದು ಕಾಣುತ್ತಿದೆ' ಎಂದು ಪ್ರಾಣಿ ಸಂರಕ್ಷಕ ಸಿಂಹಾದ್ರಿ ತಿಳಿಸಿದರು.

'ತಿಪ್ಪಗೊಂಡನಹಳ್ಳಿಯ ಅಚ್ಚುಕಟ್ಟು ಪ್ರದೇಶವನ್ನು ಎರಡು ಕಿ.ಮೀನಿಂದ 30 ಮೀಟರ್‌ಗೆ ಇಳಿಸಿರುವುದು ದುರಂತದ ಸಂಗತಿ' ಎಂದು ಪರಿಸರ ಕಾರ್ಯಕರ್ತ ರಾಮ್‌ಪ್ರಸಾದ್ ಹೇಳಿದರು.

ಮುಖ್ಯಾಂಶಗಳು

- ಬೆಂಗಳೂರು ನಗರಕ್ಕೆ ಕೂಡಲೇ 'ನೀರಿನ ನೀತಿ' ಜಾರಿಗೊಳಿಸಬೇಕು
- ತಿಪ್ಪಗೊಂಡನಹಳ್ಳಿ ಜಲಾಶಯದ ಪುನರುಜ್ಜೀವನಕ್ಕೆ ಆಗ್ರಹ

'ತಿಪ್ಪಗೊಂಡನಹಳ್ಳಿ ಜಲಾಶಯ ರಕ್ಷಿಸಿ, ಬೆಂಗಳೂರನ್ನು ಉಳಿಸಿ' ವಿಚಾರ ಸಂಕಿರಣದಲ್ಲಿ ಸೀತಾರಾಮ್ ಗುಂಡಪ್ಪ, ಕಾತ್ಯಾಯಿನಿ ಚಾಮರಾಜ್, ಎಂ.ಎಸ್. ತಿಪ್ಪೇಸ್ವಾಮಿ, ಶಶಿಧರ್ ಸಿ. ಆರಾಧ್ಯ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಕೃಷ್ಣಬೈರೇಗೌಡ ಅವರು ಕಟ್ಟಿಗೇನಹಳ್ಳಿಯಲ್ಲಿ ನೂತನವಾಗಿ ಆರಂಭಗೊಂಡಿರುವ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿದರು

ಕಟ್ಟಿಗೇನಹಳ್ಳಿ: ಸಚಿವರಿಂದ ಪಿ.ಯು ಕಾಲೇಜು ಪರಿಶೀಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು, ಬ್ಯಾಟರಾಯನಪುರ ಕ್ಷೇತ್ರದ ಕಟ್ಟಿಗೇನಹಳ್ಳಿಯ ಸರ್ಕಾರಿ ಪ್ರೌಢ ಶಾಲೆ ಹಾಗೂ ನೂತನವಾಗಿ ಆರಂಭಗೊಂಡಿರುವ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕಾಲೇಜು ಕಟ್ಟಡದ ಮುಂಭಾಗದ ಆಟದ ಮೈದಾನದ ಎರಡೂ ಕಡೆಗಳಲ್ಲಿ ಶಿಕ್ಷಕರ ವಾಹನ ನಿಲುಗಡೆಗೆ ನಿರ್ಮಿಸುತ್ತಿರುವ ಪಾರ್ಕಿಂಗ್ ತಾಣ ಸ್ಥಳಾಂತರಿಸಲು ಸೂಚಿಸಿದರು. ಮೈದಾನದಲ್ಲಿ ಮಳೆನೀರು ನಿಲ್ಲದಂತೆ ಭೂಮಿ ಸಮತಟ್ಟುಮಾಡಿ, ಚರಂಡಿಗೆ ನೀರು ಹರಿದುಹೋಗುವಂತೆ ವ್ಯವಸ್ಥೆ ಕಲ್ಪಿಸಬೇಕು. ಶೌಚಾಲಯದ ನೆಲಕ್ಕೆ ಅಳವಡಿಸಿರುವ ಟೈಲ್ಸ್‌ಗಳನ್ನು ಬದಲಾಯಿಸಿ, ಬಣ್ಣದ ಹೊಂದಾಣಿಕೆಯಾಗುವಂತೆ ಅಳವಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪಿಯುಸಿ ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿ ಸಚಿವರು, 'ಒಳ್ಳೆಯ ಕಟ್ಟಡ ಮತ್ತು ಆಟದ ಮೈದಾನದ ಜೊತೆಗೆ ಮೂಲಸೌಕರ್ಯ ಒದಗಿಸಲಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯಬೇಕು. ಕ್ರೀಡೆಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು' ಎಂದು ಸಲಹೆ ನೀಡಿದರು.

ಬಿಬಿಎಂಪಿ ಯೋಜನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಹರಿಪ್ರಸಾದ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಚೇತನ್, ಬಿಇಒ ರಾಮಮೂರ್ತಿ, ಕಾಂಗ್ರೆಸ್ ಮುಖಂಡರಾದ ದಾನೇಗೌಡ, ಎಚ್.ಎ. ಶಿವಕುಮಾರ್, ಗೋಪಾಲ್ ರೆಡ್ಡಿ, ಟಿ.ವೆಂಕಟರಾಮರೆಡ್ಡಿ, ಎಂ.ಶ್ರೀನಿವಾಸ್, ಎಂ.ಮೋಹನ್‌ರಾಜ್, ಈರಪ್ಪ, ವೆಂಕಟೇಶಯ್ಯ, ಕೃಷ್ಣಪ್ಪ, ಗುತ್ತಿಗೆದಾರರಾದ ಎಂ.ವಿ.ಮುರಳೀಧರ್, ಡಿ.ಕೆ. ನಾಗರಾಜ್ ಉಪಸ್ಥಿತರಿದ್ದರು.

ಚಿತ್ರಾವಳಿ

ಹಿಮವತ್ ಕೇದಾರ ಜಗದ್ಗುರುಗಳ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ ಮತ್ತು ಜನಜಾಗೃತಿ ಧರ್ಮ ಸಮಾರಂಭದಲ್ಲಿ ಉತ್ತರಖಂಡದ ಕೇದಾರ ಮಹಾಸಂಸ್ಥಾನ ಪೀಠಾಧ್ಯಕ್ಷ ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು ಡಿಎಸ್ ಮ್ಯಾಕ್ಸ್ ಪ್ರಾಪರ್ಟೀಸ್‌ನ ವ್ಯವಸ್ಥಾಪಕ ನಿರ್ದೇಶಕ ಎಸ್.ಪಿ. ದಯಾನಂದ್ ಅವರನ್ನು ಸನ್ಮಾನಿಸಲಾಯಿತು. ಪೂಜಾ ಸಮಿತಿ ಅಧ್ಯಕ್ಷ ಪಿ. ಶಿವಪ್ರಕಾಶ್, ಕೇಂದ್ರ ಸಚಿವ ವಿ.ಸೋಮಣ್ಣ, ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ, ಮಾಜಿ ಮೇಯರ್ ಗಂಗಾಬಿಕೆ ಮಲ್ಲಿಕಾರ್ಜುನ ಉಪಸ್ಥಿತರಿದ್ದರು

ಬಿಎಂಎಸ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಆಯೋಜಿಸಿದ್ದ ರಾಜ್ಯಮಟ್ಟದ ಯೋಗಾ ಚಾಂಪಿಯನ್ ಶಿಪ್‌ನಲ್ಲಿ ವಿಜೇತರಿಗೆ ಬಹುಮಾನ ನೀಡಲಾಯಿತು. ಶಾಲೆಯ ನಿರ್ದೇಶಕಿ ಶೈಲಾ ಬಂಟನೂರು, ಮಾರುತಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಿ.ಕೆ. ಚಂದ್ರಶೇಖರ್, ವಿಶ್ವಮಾನವ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಎನ್. ಶಿವರಾಜ್ ಉಪಸ್ಥಿತರಿದ್ದರು

d) Unsecured advances (Rs. in Crores)

Particulars	Current Year-2025	Previous Year-2024
Total unsecured advances of the bank	21.11	23.45

e) Factoring exposures- **NIL for current year-2025 and previous year-2024**

g) Unhedged foreign currency exposure- NIL for current year-2025 and previous year-2024

6. Concentration of deposits, advances, exposures and NPAs : a) Concentration of deposits (Rs. in Crores)

Particulars	Current Year	Previous Year
Total deposits of the twenty largest depositors	36.05	34.26
Percentage of deposits of twenty largest depositors to total deposits of the bank	5.46	4.61

b) Concentration of advances* (Rs. in Crores)

Particulars	Current Year	Previous Year
Total advances to the twenty largest borrowers	66.15	72.66
Percentage of advances to twenty largest borrowers to total advances of the bank	15.45	16.31

c) ***Concentration of exposures**** (Rs. in Crores)

Particulars	Current Year	Previous Year
Total exposure to the twenty largest borrowers/customers	66.15	72.66
Percentage of exposures to the twenty largest borrowers/ customers to the total exposure of the bank on borrowers/customers	15.45	16.31

d) Concentration of NPAs (Rs. in Crores)

Particulars	Current Year	Previous Year
Total Exposure to the twenty NPA accounts	13.46	25.27
Percentage of exposures to the twenty largest NPA exposure to total Gross NPAs.	67.37	60.45

7. Derivatives: Bank have not entered into any transactions in derivatives in the current 2025 and previous year 2024.

8. Transfers to Depositor Education and Awareness Fund (DEA Fund) (Rs. in Crores)

Sr.No.	Particulars	Current Year	Previous Year
i)	Opening balance of amounts transferred to DEA Fund	1.40090	0.70770
ii)	Add: Amounts transferred to DEA Fund during the year	0.61596	0.70270
iii)	Less: Amounts reimbursed by DEA Fund towards claims	0.00814	0.00950
iv)	Closing balance of amounts transferred to DEA Fund	2.00872	1.40090

* Closing balance of the amount transferred to DEA Fund, as disclosed above, are also included under 'Schedule 12 - Contingent Liabilities - Other items for which the bank is contingently liable.

9. Disclosure of complaints

a) **Summary information on complaints received by the bank from customers and from the Offices of Banking Ombudsman (OBOs) –**
One complaint received during current year and same had been disposed off during the same year. Last year Bank had received four complaints.

Sr. No		Particulars	Previous year	Current year
	Complaints received by the bank from its customers			
1.		Number of complaints pending at beginning of the year	NIL	NIL
2.		Number of complaints received during the year	NIL	NIL
3.		Number of complaints disposed during the year	NIL	NIL
	3.1	Of which, number of complaints rejected by the bank	NIL	NIL
4.		Number of complaints pending at the end of the year	NIL	NIL
	Maintainable complaints received by the bank from Office of Ombudsman			
5.		Number of maintainable complaints received by the bank from Office of Ombudsman	4	1
	5.1	Of 5, number of complaints resolved in favour of the bank by Office of Ombudsman	4	1
	5.2	Of 5, number of complaints resolved through conciliation/mediation/advisories issued by Office of Ombudsman	NIL	NIL
	5.3	Of 5, number of complaints resolved after passing of Awards by Office of Ombudsman against the bank	NIL	NIL
6.		Number of Awards unimplemented within the stipulated time (other than those appealed)	NIL	NIL
Note: Maintainable complaints refer to complaints on the grounds specifically mentioned in Integrated Ombudsman Scheme, 2021 (Previously Banking Ombudsman Scheme, 2006) and covered within the ambit of the Scheme.				

b) Top five grounds[38] of complaints received by the bank from customers - NIL

10. Disclosure of penalties imposed by the Reserve Bank of India: NIL

11. Other Disclosures

a) **Business ratios**

Particular	Current Year	Previous Year
i) Interest Income as a percentage to average Working Funds	9.11%	8.91%
ii) Non-interest income as a percentage to average Working Funds	0.64%	0.14%
iii) Average Cost of Deposits	6.42%	6.38%
iv) Average Net Interest Margin	4.29%	4.26%
v) Operating Profit as a percentage to average Working Funds	3.08%	2.17%
vi) Return on average Assets	2.03%	0.79%
vii) Business (deposits plus advances) per employee	25.32	25.83
viii) Profit per employee	0.41	0.17

b) **Bancassurance business: NIL**

c) **Marketing and distribution : NIL**

d) **Disclosures regarding Priority Sector Lending Certificates (PSLCs)**

During the current year the Bank has Purchased ₹ 238 Crore worth PSL-Micro enterprises and ₹ 72.00 Crore worth PSLC-Small and marginal farmers by paying premium of ₹ 1.66 crores (Rs. in Crores)

PARTICULARS	Current Year	Previous Year
The amount of PSLCs (category-wise) sold and purchased during the year	310	1000

e) Provisions and contingencies (Rs. in Crores)

	Provision debited to Profit and Loss Account	Current Year	Previous Year
i)	Provisions for NPI		
ii)	Provision towards NPA	2.00	
iii)	Provision made towards Income tax	6.76	5.43
iv)	Other Provisions and Contingencies (with details)		
	Special provision U/S36(1) viii	0.30	
	Provision for Unity SFB (Erstwhile PMC)		8.17

e) Payment of DICGC Insurance Premium (Rs. in Crores)

Sl. No.	Particulars	Current Year	Previous Year
i)	Payment of DICGC Insurance Premium	0.87	1.04
ii)	Arrears in payment of DICGC premium	NIL	NIL

f) Disclosure of facilities granted to directors and their relatives:

Sl No	Name of the Director	Name of the Borrower	Relation ship	Loan Balance (Rs. In lakhs)
1	Byranna M S	Byranna M S	Self	0.0112
2	Suresh Kumar K P	Suresh Kumar K P	Self	0.0129
3	Suresh Kumar K P	Spoorthy R	Daughter	0.0128
4	Suresh Kumar K P	Radha N	Wife	0.0135
5	Prakash	Prakash	Self	0.0289

ಶ್ರೀಮತಿ ವಿನೋದ ಶಿವರಾಮಯ್ಯ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ಶ್ರೀ ವಿಜಯಸಾರಥಿ ಎಂ.ಎಸ್
ನಿರ್ದೇಶಕರು

ಶ್ರೀ ಅರವಿಂದ್ ಬಿ
ಉಪಾಧ್ಯಕ್ಷರು

ಶ್ರೀ ಮರಿಗೌಡ ಸಿ.ಎಲ್
ಅಧ್ಯಕ್ಷರು

ಲೆಕ್ಕಪರಿಶೋಧನಾ ದೃಢೀಕರಣ ಪತ್ರ

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು – 560 055, ಇದರ 2024–25 ನೇ ಸಾಲಿನ ಲೆಕ್ಕ ಪುಸ್ತಕವನ್ನು ಪರಿಸಿಲಿಸಿರುತ್ತೇನೆ. ನನ್ನ ಸಾಮಾನ್ಯ ಜ್ಞಾನ ಮತ್ತು ನಂಬಿಕೆಯಂತೆ, ಲೆಕ್ಕಪರಿಶೋಧನೆಗೆ ಅಗತ್ಯವಾದ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ಪಡೆದಿದ್ದು, ತೃಪ್ತಿಕರವೆಂದು ಕಂಡುಬಂದಿರುತ್ತದೆ. ನನ್ನ ಸಾಮಾನ್ಯ ಜ್ಞಾನ ಮತ್ತು ನಂಬಿಕೆಯಂತೆ, ಮೇಲ್ಕಂಡ ಬ್ಯಾಂಕಿನ ಆಸ್ತಿ–ಜವಾಬ್ದಾರಿ ಮತ್ತು ಲಾಭ–ನಷ್ಟ ತ:ಖ್ತೆಯು ದಿನಾಂಕ 31.03.2025ಕ್ಕೆ ಬ್ಯಾಂಕಿನ ನಿಜವಾದ ಸ್ಥಿತಿಯನ್ನು ಅಲಾಯಿದ ಲಗತ್ತಿಸಿರುವ ನನ್ನ ಪ್ರತ್ಯೇಕ ವರದಿಯಲ್ಲಿನ ಅಂಶಗಳಿಗೊಳಪಟ್ಟು ಕರಾರುವಕ್ಕಾಗಿ ತೋರಿಸುತ್ತದೆ ಎಂದು ದೃಢೀಕರಿಸುತ್ತೇನೆ. ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಪ್ರಕಾರ ಬಹಿರಂಗಪಡಿಸಬೇಕಾದ ಬ್ಯಾಂಕಿನ ಮಾಹಿತಿಗಳ ಸಂಕ್ಷಿಪ್ತ ಟಿಪ್ಪಣಿಯನ್ನುಇದರೊಂದಿಗೆ ಲಗತ್ತಿಸಿದೆ.

ಬೆಂಗಳೂರು
ದಿನಾಂಕ: 26/06/2025

ಪರಿಶೀಲಿಸಿದೆ
ರಮೇಶ್ ಯು ಅಂಗಡಿ
ಪಾಲುದಾರ
ಸದಸ್ಯತ್ವ ಸಂಖ್ಯೆ : 234143
ಎಫ್‌ಆರ್‌ಎನ್:006927S
ಯುಡಿಐಎನ್: 25234143BMITVI2292

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

JANATHA SEVA CO-OPERATIVE BANK LTD.,

ಸ್ಥಾಪನೆ: 1969

ನಂ.24 "ಸುವರ್ಣ ಭವನ" 1ನೇ ಮುಖ್ಯ ರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು-560104

ದೂರವಾಣಿ: 080 – 23300497, 23359600, 41159606. ಈಮೇಲ್: jscb_ho@jscbl.com, ವೆಬ್‌ಸೈಟ್: www.jscbl.com

2024-2025ನೇ ಸಾಲಿನ ಲಾಭ-ನಷ್ಟ ತಃಖ್ತೆ

ಮೊಬಲಗು ರೂ. ಗಳಲ್ಲಿ / (Amount in Rs.)

ವಿವರಗಳು/Particulars	ಕುಳುವಾರು ಸಂಖ್ಯೆ/ Schedule No.	31-03-2025ಕ್ಕೆ ಇದ್ದಂತೆ / AS on 31-03-2025	31-03-2024ಕ್ಕೆ ಇದ್ದಂತೆ / AS on 31-03-2024
I. ಆದಾಯ / **Income**			
ಬಡ್ಡಿ ಗಳಿಸಿದ್ದು / Interest Earned	13	1,17,06,50,539	1,10,70,86,358
ಇತರೆ ಆದಾಯ / Other Income	14	4,58,07,963	6,48,06,106
ಒಟ್ಟು /**Total**		**1,21,64,58,502**	**1,17,18,92,464**
II. ವೆಚ್ಚಗಳು / **Expenditure**			
ಬಡ್ಡಿ ವ್ಯಯಿಸಲಾಗಿರುವುದು / Interest Expended	15	82,97,95,700	74,45,04,420
ಇತರೆ ಖರ್ಚುಗಳು / Operating Expenses	16	15,39,02,173	16,10,66,032
ಕಾಯ್ದಿರಿಸಿದ್ದು ಮತ್ತು ಆಕಸ್ಮಿಕಗಳು/ Provisions and Contingencies	17	7,96,77,071	9,82,43,793
ಒಟ್ಟು / **Total**		**1,06,33,74,944**	**1,00,38,14,245**
III. ನಿವ್ವಳ ಲಾಭ / **Net Profit**		**15,30,83,558**	**16,80,78,219**

ದಿನಾಂಕ: 31-03-2025ರ ಅಂತ್ಯಕ್ಕೆ ಆಸ್ತಿ-ಜವಾಬ್ದಾರಿ ತಃಖ್ತೆ

ಮೊಬಲಗು ರೂ. ಗಳಲ್ಲಿ / (Amount in Rs.)

ವಿವರಗಳು/ Particulars	ಕುಳುವಾರು ಸಂಖ್ಯೆ/ Schedule No.	31-03-2025ಕ್ಕೆ ಇದ್ದಂತೆ/ AS on 31-03-2025	31-03-2024ಕ್ಕೆ ಇದ್ದಂತೆ/ AS on 31-03-2024
ಬಂಡವಾಳ ಮತ್ತು ಜವಾಬ್ದಾರಿಗಳು / **CAPITAL LIABILITIES**			
ಷೇರು ಬಂಡವಾಳ / Capital	1	36,67,58,800	31,07,12,600
ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು / Reserves and surplus	2	1,37,22,78,784	1,39,65,82,495
ಠೇವಣಾತಿಗಳು / Deposits	3	12,37,90,51,019	11,84,84,45,636
ಹೊಣೆಗಾರಿಕೆ / Borrowings	4	-	-
ಇತರೆ ಜವಾಬ್ದಾರಿಗಳು ಮತ್ತು ಅವಕಾಶಗಳು / Other liabilities and provisions	5	1,10,27,23,575	92,64,59,198
ಶಾಖೆಗಳ ಹೊಂದಾಣಿಕೆ / Branch Adjustment		2,44,163	-
ವಸೂಲಾಗಬೇಕಾದ ಸುಸ್ತಿ ಸಾಲದ ಮೇಲಿನ ಬಡ್ಡಿ (ಕಾಂಟ್ರ)/ Overdue Interest Reserve (As per contra)		11,02,29,210	9,66,13,821
ಒಟ್ಟು / **Total**		**15,33,12,85,551**	**14,57,88,13,750**
ಆಸ್ತಿಗಳು / **ASSETS**			
ನಗದು ಶಿಲ್ಕು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಖಾತೆಯ ಶಿಲ್ಕು/Cash and Balances with Reserve Bank of India	6	45,74,13,161	50,36,20,532
ಇತರೆ ಬ್ಯಾಂಕುಗಳ ಚಾಲ್ತಿ ಖಾತೆಯ ಶಿಲ್ಕು ಮತ್ತು ಕರೆ ಠೇವಣಿ/Balances with other Banks and money at call and short notice	7	16,40,71,976	22,12,60,257
ಹೂಡಿಕೆಗಳು / Investments	8	6,93,46,07,807	6,58,08,06,142
ಸಾಲ ಮತ್ತು ಮುಂಗಡಗಳು / Loans and Advances	9	7,26,16,77,974	6,74,67,52,966
ಸ್ಥಿರ ಆಸ್ತಿಗಳು / Fixed Assets	10	19,64,37,876	19,92,32,346
ಇತರೆ ಆಸ್ತಿಗಳು / Other Assets	11	20,68,47,571	23,04,47,894
ಶಾಖೆಗಳ ಹೊಂದಾಣಿಕೆ / Branch Adjustment			79,816
ವಸೂಲಾಗಬೇಕಾದ ಸುಸ್ತಿ ಸಾಲದ ಮೇಲಿನ ಬಡ್ಡಿ (ಕಾಂಟ್ರ)/Overdue Interest Reserve (As per contra)		11,02,29,186	9,66,13,797
ಒಟ್ಟು / **Total**		**15,33,12,85,551**	**14,57,88,13,750**
ಅನಿಶ್ಚಿತ ಹೊಣೆಗಾರಿಕೆಗಳು / Contingent liabilities	12	4,07,63,791	4,27,66,541

Disclosure in financial statements- 'Notes to Accounts'

1.Regulatory Capital: ***a)*** Composition of Regulatory Capital (Amount in Crores)

Sr. No	Particulars	31.03.2025	31.03.2024
i)	Paid up share capital and reserves (net of deductions, if any)	36.68	31.07
ii)	Other Tier 1 capital	90.02	81.14
iii)	Tier 1 capital (i + ii)	126.70	112.21
iv)	Tier 2 capital	27.51	25.63
v)	Total capital (Tier 1+Tier 2)	154.21	137.84
vi)	Total Risk Weighted Assets (RWAs)	652.95	610.61
vii)	Paid-up share capital and reserves as percentage of RWAs	5.62%	5.09%
viii)	Tier 1 Ratio (Tier 1 capital as a percentage of RWAs)	19.40%	18.38%
ix)	Tier 2 Ratio (Tier 2 capital as a percentage of RWAs)	4.21%	4.20%
x)	Capital to Risk Weighted Assets Ratio (CRAR) (Total Capital as a percentage of RWAs)	23.51%	22.57%
xi)	Amount of paid -up capital raised during the year	5.61	-0.36
xii)	Amount of non equity Tier-1 capital during the year	8.88	8.28
xiii)	Amount of Tier -2 capital raised during the year	1.88	2.50

2. Asset Liability Management: a) Maturity pattern of certain items of assets and liabilities (Amount in Crores)

	Day 1	2 to 7 days	8 to 14 days	15 to 30 days	31 days to 2 Month	Over 2 months and to 3 Months	Over 3 month s and up to 6 Months	Over 6 months up to 1 Years	Over 1 year and up to 3 years	Over 3 years and to 5 years	Over 5 years	Total
Deposits	1.04	13.24	36.70	41.37	136.15	223.22	152.75	290.61	342.67	0.16	0.01	1237.91
Advances	5.77	1.27	1.07	3.93	11.24	7.38	14.56	36.80	103.11	96.85	444.17	726.17
Investment	0.00	5.00	10.00	10.00	15.00	89.12	50.60	371.46	67.10	29.97	45.21	693.46
Borrowings	-	-	-	-	-	-	-	-	-	-	-	-

3. Investments : a) Composition of Investment Portfolio as at 31.03.2025 (Amount in Crores)

	Investments in India						
	Government Securities	Other Approved Securities	Shares	Debentures and Bonds	Subsidiaries and/ or joint ventures	Others	Total Investment in India
Held to Maturity							
Gross	216.86		5.52			183.16	405.54
Less: Provision for non- performing investments (NPI)			4.42				4.42
Net	216.86		1.10			183.16	401.12
Available for Sale							
Gross	287.91						287.91
Less: Provision for depreciation	16.47						16.47
Net	271.44						271.44
Held for Trading							
Gross							
Less: Provision for depreciation and NPI							
Net							
Total Investments	504.78		5.52			183.16	693.46
Less: Provision for non- performing investments							
Less: Provision for depreciation and NPI	16.47		4.42				20.89
Net	488.31		1.10			183.16	672.57

As at 31.03.2024 (Amount in Crores)

	Investments in India						
	Government Securities	Other Approved Securities	Shares	Debentures and Bonds	Subsidiaries and/ or joint ventures	Others	Total Investment in India
Held to Maturity							
Gross	171.91		5.52			113.13	290.56
Less: Provision for non- performing investments (NPI)	0.0		4.42			0.0	4.42
Net	171.91		1.10			113.13	290.56
Available for Sale							
Gross	367.52						367.52
Less: Provision for depreciation	16.47						16.47
Net	351.05						367.52
Held for Trading							
Gross							
Less: Provision for depreciation and NPI							
Net							
Total Investments	539.43		5.52			113.13	658.08
Less: Provision for non- performing investments							
Less: Provision for depreciation and NPI	16.47		4.42				20.89
Net	522.96		1.10			113.13	637.19

(b) Movement of Provisions for Investment Depreciation and Investment Fluctuation Reserve (Amount in Crores)

Particulars	Current Year	Previous Year
i) Movement of provisions held towards depreciation on investments		
a) Opening balance	16.47	16.47
b) Add: Provisions made during the year	0.0	0.0
c) Less: Write off / write back of excess provisions during the year	0.0	0.0
d) Closing balance	16.47	16.47
ii) Movement of Investment Fluctuation Reserve		
a) Opening balance	16.85	16.44
b) Add: Amount transferred during the year	1.94	0.41
c) Less: Drawdown	0	0
d) Closing balance	18.79	16.85
iii) Closing balance in IFR as a percentage of closing balance of investments13 in AFS and HFT/Current category	6.53%	5.85%

(c) Sale and transfers to/from HTM category -NIL

(d) Non-SLR investment portfolio: i) Non-performing non-SLR Investments (Amount in Crores)

Sr. No	Particulars	Current Year	Previous Year
a)	Opening balance	5.52	5.52
b)	Additions during the year since 1st April	0	0
c)	Reductions during the above period	0	0
d)	Closing balance	5.52	5.52
e)	Total provisions held	4.42	4.42

(ii) Issuer composition of non-SLR investments (Amount in Crores)

Sr. No.	Issuer	Amount		Extent of Private Placement		Extent of 'Below Investment Grade' Securities		Extent of 'Unrated' Securities		Extent of 'Unlisted' Securities	
-1	-2	-3		-4		-5		-6		-7	
		Current year	Previous Year	Current year	Previous Year	Current year	Previous Year	Current year	Previous Year	Current year	Previous Year
a)	PSUs										
b)	FIs										
c)	Banks			5.52	5.52						
d)	Private Corporates										
e)	Subsidiaries/ Joint Ventures										
f)	Others										
g)	Provision held towards depreciation			4.42	4.42						
	Total *			5.52	5.52						

4. Asset quality : a) Classification of advances and provisions held (Amount in Crores)

Particulars	Standard	Non-Performing				Total
	Total Standard Advances	Sub- standard	Doubtful	Loss	Total Non-Performing Advances	
Gross Standard Advances and NPAs						
Opening Balance	**623.49**	**6.28**	**35.34**	**9.57**	**51.19**	**674.68**
Add: Additions during the year						
Less: Reductions during the year*						
Closing balance	**669.86**	**9.60**	**37.13**	**9.58**	**56.31**	**726.17**
*Reductions in Gross NPAs due to:						
i) Upgradation					7.87	**7.87**
ii) Recoveries (excluding recoveries from upgraded accounts)					0.48	**0.48**
iii) Technical / Prudential Write-offs					0.0	**0.0**
iv) Write-offs other than those under (iii) above					0.0	**0.0**
Provisions (excluding Floating Provisions)						
Opening balance of provisions held	**4.90**	**38.21**	**30.84**	**9.58**	**78.63**	**83.53**
Add: Fresh provisions made during the year					1.94	1.94
Less: Excess provision reversed/ Write-off loans					0	
Closing balance of provisions held	**4.90**	**7.31**	**61.72**	**11.54**	**80.57**	**85.47**
Net NPAs						
Opening Balance		0.0	0.0	0.0	0.0	**0.0**
Add: Fresh additions during the year						
Less: Reductions during the year						
Closing Balance		**0.0**	**0.0**	**0.0**	**0.0**	**0.0**
Floating Provisions						**0.0**
Opening Balance						
Add: Additional provisions made during the year						
Less: Amount drawn down26 during the year						
Closing balance of floating provisions						**0.0**
Technical write-offs and the recoveries made thereon						
Opening balance of Technical/ Prudential written-off accounts						**0.0**
Add: Technical/ Prudential write-offs during the year						
Less: Recoveries made from previously technical/ prudential written-off accounts during the year						
Closing balance						**0.0**

Ratios (in Percent)	Current Year	Previous Year
Gross NPA to Gross Advances	7.75%	7.59%
Net NPA to Net Advances	0.00%	0.00%
Provision coverage ratio	143.08%	153.60%

b) Sector-wise Advances and Gross NPA's (Amount in Crores)

Sr. No	Sector*	Current Year			Previous Year		
		Outstanding Total Advances	Gross NPAs	Percentage of Gross NPAs to Total Advances in that Sector	Outstanding Total Advances	Gross NPAs	Percentage of Gross NPAs to Total Advances in that Sector
i)	**Priority Sector**						
a)	Agriculture and allied activities	5.72	0.00	0.00%	0.32	0.00	0.00%
b)	Advances to industries sector eligible as priority sector lending	228.31	2.05	0.90%	194.11	15.32	7.89%
c)	Services	22.98	8.50	36.99%	22.07	4.41	19.98%
d)	Other Loans including Personal loans	66.85	17.66	26.42%	85.87	5.91	6.88%
	Subtotal (i)	323.86	28.21	8.71%	302.37	25.64	8.48%
ii)	**Non-priority Sector**						
a)	Agriculture and allied activities	0.00	0.00	0.00%	0.03	0.00	0.00%
b)	Industry	0.00	0.00	0.00%	89.97	4.52	5.02%
c)	Services	12.33	0.00	0.00%	15.69	0.00	0.00%
d)	Other Loans including Personal loans	389.98	28.10	7.21%	266.62	21.03	7.89%
	Subtotal (i)	402.31	28.10	6.98%	372.31	25.55	6.86%
	Total (i+ii)	726.17	56.31	7.75%	674.68	51.19	7.59%

c) Particulars of resolution and restructuring: i) Particulars of resolution Plan - NIL
ii) Details of accounts subjected to restructuring - NIL

d) Divergence in asset classification and provisioning (Amount in Crores)

Sr.	Particulars	Amount
1	Gross NPAs as on March 31, 2024as reported by the bank	51.19
2	Gross NPAs as on March 31, 2024 as assessed by Reserve Bank of India	92.61
3	Divergence in Gross NPAs (2-1)	41.42
4	Net NPAs as on March 31, 2024 as reported by the bank	0.0
5	Net NPAs as on March 31, 2024 as assessed by Reserve Bank of India	2.15%
6	Divergence in Net NPAs (5-4)	2.15%
7	Provisions for NPAs as on March 31, 2024 as reported by the bank	78.63
8	Provisions for NPAs as on March 31, 2024 as assessed by Reserve Bank of India	0.0
9	Divergence in provisioning (8-7)	0.0
10	Reported Profit before Provisions and Contingencies for the year ended March 31, 2024	22.32
11	Reported Net Profit after Tax (PAT) for the year ended March 31, 2024	16.81
12	Adjusted (notional) Net Profit after Tax (PAT) for the year ended March 31, 2024 after considering the divergence in provisioning	15.92

f) Disclosure of transfer of loan exposures – **Nil**

g) Fraud accounts - **Nil**

h) Disclosure under Resolution Framework for COVID-19-relatedStress. Format for disclosures to be made as on March 31,2025 (Amount in crores)

Type of borrower	Exposure to accounts classified as Standard consequent to implementation of resolution plan– Position as at the end of the previous half-year (A)	Of (A),aggregate debt that slipped into NPA during the half- year	Of (A)amount written off during the half-year	Of (A) amount paid by the borrowers during the half- year	Exposure to accounts classified as Standard consequent to implementation of resolution plan – Position as at the end of this year
Personal Loans	0.00	0.00	0.00	0.00	0.00
Corporate persons*	0.00	0.00	0.00	0.00	0.00
Of which MSMEs	29.11	0.00	0.00	6.52	22.59
Others	149.02	4.42	0.00	46.77	102.25
Total	178.13	4.42	0.00	53.29	124.84

5. Exposure: a) Exposure to real estate Sector (Amount in Crores)

Category	Current year	Previous Year
a) Residential Mortgages – Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	0.00	0.00
b) Commercial Real Estate – Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.). Exposure would also include non-fund based (NFB) limits	52.03	65.86
Total Exposure to Real Estate Sector	**52.03**	**65.86**

b) Exposure to capital market – **NIL**

c) Risk Category –wise country exposure - **NIL**

d) Unsecured advances (Amount in crores)

Particulars	Current Year	Previous Year
Total unsecured advances of the bank	1.24	1.20
Out of the above, amount of advances for which intangible securities such as charge over the rights, licenses, authority etc have been taken	0.00	0.00
Estimated value of such intangible securities	0.00	0.00

e) Factoring exposures: **NIL**

6. Concentration of deposits, advances and NPAs: a) Concentration of deposits (Amount in Crore)

Particulars	Current Year	Previous Year
Total deposits of the twenty largest depositors	128.87	121.14
Percentage of deposits of twenty largest depositors to total deposits of the bank	10.41%	10.22%

b) Concentration of advances (Amount in Crores)

Particulars	Current Year	Previous Year
Total advances to the twenty largest borrowers	149.64	163.79
Percentage of advances to twenty largest borrowers to total advances of the bank	20.61%	24.28%

c) Concentration of exposures (Amount in Crores)

Particulars	Current Year	Previous Year
Total exposure to the twenty largest borrowers/customers	240.00	240.00
Percentage of exposures to the twenty largest borrowers/ customers to the total exposure of the bank on borrowers/customers	1.60%	1.48%

d) Concentration of NPAs (Amount in Crores)

Particulars	Current Year	Previous Year
Total Exposure to the top twenty NPA accounts	54.07	50.23
Percentage of exposures to the twenty largest NPA exposure to total Gross NPAs.	96.02%	98.12%

7. Transfers to Depositor Education and Awareness Fund (DEA Fund) (Amount in Crore)

Particulars	Current year	Previous year
Opening balance of amounts transferred to DEA Fund	2.75	2.40
Add: Amounts transferred to DEA Fund during the year	0.47	0.42
Less: Amounts reimbursed by DEA Fund towards claims	0.04	0.07
Closing balance of amounts transferred to DEA Fund	**3.18**	**2.75**

8. Disclosure of complaints: a) Summary information on complaints received by the bank from customers and from the offices of Banking Ombudsman (OBOs)

Sr. No		Particulars	Current year	Previous year
	Complaints received by the bank from its customers			
1		Number of complaints pending at beginning of the year	0	0
2		Number of complaints received during the year	0	0
3		Number of complaints disposed during the year	0	0
	3.1	Of which, number of complaints rejected by the bank	-	-
4		Number of complaints pending at the end of the year	0	0
	Maintainable complaints received by the bank from OBOs			
5		Number of maintainable complaints received by the bank from OBOs	3	2
	5.1	Of 5, number of complaints resolved in favour of the bank by Bos	3	2
	5.2	Of 5, number of complaints resolved through conciliation/mediation/advisories issued by Bos	0	0
	5.3	Of 5, number of complaints resolved after passing of Awards by BOs against the bank	0	0
6		Number of Awards unimplemented within the stipulated time (other than those appealed)	0	0

Note: Maintainable complaints refer to complaints on the grounds specifically mentioned in BO Scheme 2006 and covered within the ambit of the Scheme.

b) Top five grounds of complaints received by the bank from customers

Grounds of complaints, (i.e. complaints relating to)	Number of complaints pending at the beginning of the year	Number of complaints received during the year	% increase/ decrease in the number of complaints received over the previous year	Number of complaints pending at the end of the year	Of 5, number of complaints pending beyond 30 days
1	2	3	4	5	6
			Current Year		
Ground - 1	1	22	-71.79%	0	0
Ground - 2					
Ground - 3					
Ground - 4					
Ground - 5					
Others	0	3	200.00%	0	0
Total	1	25	-68.35%		
			Previous Year		
Ground - 1	0	78	23.81%	1	1
Ground - 2					
Ground - 3					
Ground - 4					
Ground - 5					
Others	0	1	0.00%	0	0
Total	0	79	23.81%	1	1

9. Disclosure of penalties imposed by the Reserve Bank of India : Penalties imposed by the Reserve Bank of India under the provisions of the (i) Banking Regulation Act, 1949 and (ii) Payment and Settlement Systems Act, 2007 shall be disclosed in the 'Notes to Accounts' to the balance sheet in the concerned bank's next Annual Report. Banks shall make appropriate disclosures on the nature of the breach, number of instances of default and the quantum of penalty imposed. – **NIL**

10. Other Disclosures : a) Business ratios (Amount in Crores)

Particular	Current Year	Previous Year
i) Interest Income as a percentage to Working Funds	7.64%	7.89%
ii) Non-interest income as a percentage to Working Funds	0.29%	0.43%
iii) Cost of Deposits	6.70%	6.48%
iv) Net Interest Margin	2.23%	2.60%
v) Operating Profit as a percentage to Working Funds	1.50%	1.59%
vi) Return on Assets	1.47%	1.60%
vii) Business (deposits plus advances) per employee31 (Amount in crores)	26.19	23.24
viii) Profit per employee (in ₹crore)	0.30	0.28

b) Bank Insurance business (Amount in Crore)

Particular	Current Year	Previous Year
Insurance Commission	**0.02**	**0.01**

c) Marketing and distribution –NIL

d) Disclosures regarding Priority Sector Lending Certificates (PSLCs): During the year, Bank has purchased sold PSLC in PSLC-SMALL AND MARGINAL FARMERS (PSLCSM) scheme for Weaker Section Sub target and the details are as below. (Amount in Crores)

Deal Reference No.	Date	Purchase/Sale	Face Value	Premium Amount
PSLCP/2024/1558	28.08.2024	Purchased	**25.00**	**0.36**
PSLCP/2024/1559	02.09.2024	Purchased	**100.00**	**0.01**
PSLCP/2024/1560	05.09.2024	Purchased	**5.00**	**0.07**
PSLCP/2024/1561	05.09.2024	Purchased	**5.00**	**0.07**
PSLCP/2024/1562	13.09.2024	Purchased	**16.00**	**0.23**
PSLCP/2024/1563	20.03.2025	Purchased	**175.00**	**0.02**
PSLCP/2024/1564	21.03.2025	Purchased	**24.00**	**0.53**
PSLCS/2024/1565	27.03.2025	Sale	**(–) 5.00**	**(–) 0.04**
	Total:		**345.00**	**1.25**

e) Provisions and contingencies (Amount in Crores)

Provision debited to Profit and Loss Account	Current Year	Previous Year
i) Provisions for NPI	0.00	2.21
ii) Provision towards NPA	1.94	1.85
iii) Provision made towards Income tax	5.38	5.96
v) Provision for Investment Depreciation Reserve	0.00	0.00
vi) Provision for IT Asset	0.50	0.25
vii) Provision for Staff Gratuity	0.30	0.00
Total	**7.82**	**10.27**

f) Payment of DICGC Insurance Premium (Amount in Crores)

Sl No	Particulars	Current Year	Previous Year
i)	Payment of DICGC Insurance Premium	1.42	1.37
ii)	Arrears in payment of DICGC premium	0.00	0.00

g) Disclosure of facilities granted to directors and their relatives - Bank has not provided any fund or non-fund (guarantees, letters of credit, etc.) facilities to the Bank directors, their relatives, companies or firms in which they are interested except Loan against their FD's.

h) Disclosure in amortisation of expenditure on account of enhancement in family pension of employees of banks. - **NIL**

ಸಹಿ/- (ಲೀಲಾವತಿ ಆರ್.)	ಸಹಿ/- (ಭಾಗ್ಯ ಎಸ್)	ಸಹಿ/- (ರಾಜಗೋಪಾಲ್ ಹೆಗ್ಡೆ)	ಸಹಿ/- (ಡಾ. ವೆಂಕಟೇಶಮೂರ್ತಿ ಪಿ.ಎಲ್)	ಸಹಿ/- (ಹೆಚ್.ಸಿ.ಗೋಪಾಲ್)
ಸಹಾಯಕ ವ್ಯವಸ್ಥಾಪಕರು	ಮುಖ್ಯಕಾರ್ಯನಿರ್ವಹಣಾಧಿಕಾರಿ	ವೃತ್ತಿಪರ ನಿರ್ದೇಶಕರು	ಉಪಾಧ್ಯಕ್ಷರು	ಅಧ್ಯಕ್ಷರು

ದೃಢೀಕರಣ ಪತ್ರ

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ನಿ., ಬೆಂಗಳೂರು, ಇದರ 2024-2025ನೇ ಸಾಲಿನ ಲೆಕ್ಕ ಪುಸ್ತಕಗಳನ್ನು ಪರಿಶೀಲಿಸಿರುತ್ತೇವೆ. ನಮ್ಮ ಸಾಮಾನ್ಯ ಜ್ಞಾನ ಮತ್ತು ನಂಬಿಕೆಯಂತೆ ಅಗತ್ಯವಾದ ಎಲ್ಲಾ ಮಾಹಿತಿ ಮತ್ತು ಸಮಜಾಯಿಷಿಗಳನ್ನು ಪಡೆದಿರುತ್ತೇವೆ. ಅವು ತೃಪ್ತಿಕರವಾಗಿರುತ್ತವೆ. ನಮ್ಮ ಸಾಮಾನ್ಯ ಜ್ಞಾನ ಮತ್ತು ನಂಬಿಕೆಯಂತೆ ಮೇಲ್ಕಂಡ ಆಸ್ತಿ-ಜವಾಬ್ದಾರಿ ಹಾಗು ಲಾಭ-ನಷ್ಟ ತ:ಖ್ತೆಯು ದಿನಾಂಕ: 31-03-2025 ಕ್ಕೆ ನಮ್ಮ ಪ್ರತ್ಯೇಕ ಸ್ಥಿತಿಯನ್ನು, ವರದಿಯಲ್ಲಿನ ಅಂಶಗಳಿಗೊಳಪಟ್ಟು, ಬ್ಯಾಂಕಿನ ನಿಜವಾದ ಆರ್ಥಿಕ ಕರಾರುವಾಕ್ಕಾಗಿ ತೋರಿಸುತ್ತದೆಯೆಂದು ದೃಢೀಕರಿಸುತ್ತೇವೆ.

ರಾಮರಾಜ್ & ಕೋ. ಪರವಾಗಿ, ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ: **002839S**
ಸಹಿ/- (ಸಿಎ ಲಸಿತ್ ಜಿ. ವೆಂಕಟ್) ಪಾಲುದಾರರು
ಸದಸ್ಯತ್ವ ಸಂಖ್ಯೆ: **269288**
UDIN:25269288BMLIPC2056

Date: 27.06.2025
Place: Bengaluru

ಹಿಂದುಳಿದವರ ಏಳಿಗೆ ಸಹಿಸದ ಕಾಂಗ್ರೆಸ್

'ಜಾತಿ ಜನಗಣತಿ: ಹಿನ್ನೋಟ-ಮುನ್ನೋಟ' ವಿಚಾರಗೋಷ್ಠಿಯಲ್ಲಿ ಸಚಿವ ಯಾದವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗದ ಏಳಿಗೆಯನ್ನು ಕಾಂಗ್ರೆಸ್ ಎಂದಿಗೂ ಸಹಿಸಿಲ್ಲ. ಹಾಗಾಗಿ ಸ್ವತಂತ್ರ ಭಾರತದಲ್ಲಿ ಒಂದು ಬಾರಿಯೂ ಜಾತಿ ಗಣತಿಯಾಗಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಸಂಕಲ್ಪದಿಂದಾಗಿ ಮೊದಲ ಬಾರಿಗೆ ಜನಗಣತಿಯೊಂದಿಗೆ ಜಾತಿ ಗಣತಿಯೂ ಆಗಲಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಹೇಳಿದರು.

ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ ಕರ್ನಾಟಕ ಶನಿವಾರ ಹಮ್ಮಿಕೊಂಡಿದ್ದ 'ಜಾತಿ ಜನಗಣತಿ: ಹಿನ್ನೋಟ-ಮುನ್ನೋಟ' ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಬರುವವರೆಗೆ ಹಿಂದುಳಿದವರ ಪರ ಯಾವುದೇ ಕಾರ್ಯಕ್ರಮ ರೂಪಿಸಿರಲಿಲ್ಲ. ಜನತಾ ಸರ್ಕಾರ ಬಂದಾಗ 1979ರಲ್ಲಿ ಮಂಡಲ್ ಆಯೋಗ ರಚಿಸಲಾಯಿತು. ಒಂದೇ ವರ್ಷದಲ್ಲಿ ಆಯೋಗ ವರದಿ ನೀಡಿತು. ಆನಂತರ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದರಿಂದ 10 ವರ್ಷ ಮಂಡಲ್ ವರದಿಯನ್ನು ಕಾಲಡಿ ಹಾಕಿ ಕೂತಿತ್ತು. ಬಿಜೆಪಿ ಬೆಂಬಲದೊಂದಿಗೆ ವಿ.ಪಿ. ಸಿಂಗ್ ಪ್ರಧಾನಿಯಾದಾಗ 1990ರಲ್ಲಿ ವರದಿ ಜಾರಿಯಾಯಿತು. ಇದರ ವಿರುದ್ಧ ರಾಜೀವ್‌ಗಾಂಧಿ ಸಂಸತ್ತಿನಲ್ಲಿಯೇ ಹೇಳಿಕೆ ನೀಡಿದ್ದರು ಎಂದರು.

ಕಾಂಗ್ರೆಸ್ ಯಾವ ರಾಜ್ಯದಲ್ಲಿ ಆಡಳಿತದಲ್ಲಿ ಇಲ್ಲವೋ ಅಲ್ಲಿ ಹಿಂದುಳಿದವರಿಗಾಗಿ ಯೋಜನೆಗಳನ್ನು ರೂಪಿಸಿದ್ದರು. ಕರ್ನಾಟಕದಲ್ಲಿ ಸಿದ್ದರಾಮಯ್ಯ ಜಾತಿ ಸಮೀಕ್ಷೆಯನ್ನು ಮಾಡಿಸಿದ್ದರೂ ಕುಟುಂಬ ಪರಿವಾರದ ಸೂಚನೆಯಂತೆ ಅವರೂ ಕಾಂಗ್ರೆಸ್‌ನ ಹಳೇ ಮಾದರಿಯನ್ನು ಮುಂದುವರಿಸಿದರು. ವರದಿ 10 ವರ್ಷ ನನೆಗುದಿಗೆ ಬಿತ್ತು. ಹಿಂದುಳಿದವರ ಅಭಿವೃದ್ಧಿ ಆಗಬೇಕಿದ್ದರೆ ಕಾಂಗ್ರೆಸ್ ಅಧಿಕಾರಕ್ಕೆ ಬರಬಾರದು ಎಂದು ಹೇಳಿದರು.

ಕಾಂಗ್ರೆಸ್ ಸಂವಿಧಾನದ ಬಗ್ಗೆ ಮಾತನಾಡುತ್ತದೆ. ಜೇಬಲ್ಲಿಯೂ ಇಟ್ಟುಕೊಳ್ಳುತ್ತದೆ. ಆದರೆ, ಸಂವಿಧಾನವನ್ನು ಜಾರಿ ಮಾಡುವುದಿಲ್ಲ. ನಮಗೆ ಸಂವಿಧಾನವೇ ಆತ್ಮ. ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಒದಗಿಸಲು ಜನಗಣತಿಯೊಂದಿಗೆ ಜಾತಿ ಗಣತಿಯನ್ನು ಮಾಡಲಾಗುತ್ತಿದೆ ಎಂದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ. ಭಕ್ತವತ್ಸಲ ಮಾತನಾಡಿ, 'ಸಮೀಕ್ಷೆ ವೈಜ್ಞಾನಿಕವಾಗಿ, ಸರಿಯಾಗಿ ನಡೆಯಬೇಕು. ಬಹಳಷ್ಟು ಬಾರಿ ಗಣತಿದಾರರು ಬಂದಾಗ ಮನೆಯ ಬಾಗಿಲೇ ತೆರೆಯುವುದಿಲ್ಲ. ಬಾಗಿಲು ತೆರೆದರೂ ಮಾಹಿತಿ ಕೊಡದೇ ವಾಪಸ್ ಕಳುಹಿಸುತ್ತಾರೆ. ಎಷ್ಟೋ ಸಮುದಾಯಗಳಿಗೆ ಇಂದಿಗೂ ಪ್ರಾತಿನಿಧ್ಯ ಸಿಕ್ಕಿಲ್ಲ. ಅದಕ್ಕಾಗಿ ಎಲ್ಲರೂ ಗಣತಿಯಲ್ಲಿ ಪಾಲ್ಗೊಂಡು ಸರಿಯಾದ ಮಾಹಿತಿ ನೀಡಬೇಕು. ಶಿಕ್ಷಣದಲ್ಲಿ ಮೀಸಲಾತಿ ಇದ್ದರೆ ಸಾಲದು, ಉದ್ಯೋಗದಲ್ಲಿಯೂ ಎಲ್ಲರಿಗೂ ಅವಕಾಶ ಸಿಗಬೇಕು' ಎಂದು ಪ್ರತಿಪಾದಿಸಿದರು.

ವೇದಿಕೆ ಮುಖಂಡ ಕೆ. ಮುಕುಡಪ್ಪ ಅಧ್ಯಕ್ಷತೆ ವಹಿಸಿದ್ದರು. ಹಿಂದುಳಿದ ವರ್ಗದ ವಿವಿಧ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

'ಜಾತಿ ಜನಗಣತಿ: ಹಿನ್ನೋಟ– ಮುನ್ನೋಟ' ವಿಚಾರಗೋಷ್ಠಿಯಲ್ಲಿ ಕೆ. ಮುಕುಡಪ್ಪ ಮತ್ತು ಭೂಪೇಂದರ್ ಯಾದವ್ ಸಮಾಲೋಚನೆಯಲ್ಲಿ ತೊಡಗಿದರು. ನ್ಯಾ. ಕೆ. ಭಕ್ತವತ್ಸಲ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ರಾಜ್ಯದ ಜಾತಿವಾರು ಸಮೀಕ್ಷೆಗೆ ಮಾನ್ಯತೆ ಇಲ್ಲ'

'ರಾಜ್ಯ ಸರ್ಕಾರದ ಸಮೀಕ್ಷೆಗೆ ಸಂವಿಧಾನದಲ್ಲಿ ಮಾನ್ಯತೆ ಇಲ್ಲ' ಎಂದು ಭೂಪೇಂದರ್ ಯಾದವ್ ಹೇಳಿದರು.

ಸಂವಾದದಲ್ಲಿ ಪ್ರೇಕ್ಷಕರೊಬ್ಬರು, ರಾಜ್ಯ ಮೂರು ತಿಂಗಳಲ್ಲಿ ನಡೆಸಲಿರುವ ಜಾತಿವಾರು ಸಮೀಕ್ಷೆಗೂ ಜಾತಿ ಗಣತಿಗೂ ಏನು ವ್ಯತ್ಯಾಸ ಎಂದು ಕೇಳಿದಾಗ, ಸಚಿವರು ಹೀಗೆ ಉತ್ತರಿಸಿದರು.

ಎಲ್ಲ ಜಾತಿಗಳ ಅಂಕಿಸಂಖ್ಯೆ ಸಿಕ್ಕಿದ ಮೇಲೆ ಜನಸಂಖ್ಯೆವಾರು ಮೀಸಲಾತಿ ನೀಡುತ್ತೀರಾ ಎಂಬ ಪ್ರಶ್ನೆಗೆ, 'ಸಂವಿಧಾನದ ಆಧಾರದಲ್ಲಿಯೇ ಮೀಸಲಾತಿ ಇರುತ್ತದೆ' ಎಂದು ತಿಳಿಸಿದರು.

ಉದ್ಘಾಟಕರ ಆಯ್ಕೆ ಸಿ.ಎಂ ಸಿದ್ದರಾಮಯ್ಯ ವಿವೇಚನೆಗೆ

ಈ ಬಾರಿ 11 ದಿನ ದಸರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಬಾರಿ 11 ದಿನ ಮೈಸೂರು ದಸರಾ ಆಚರಣೆ ನಡೆಯಲಿದೆ. ವಿಜೃಂಭಣೆಯ ರಭಸದಲ್ಲಿ ಅನಗತ್ಯವಾಗಿ ಹಣ ಖರ್ಚು ಮಾಡುವುದು ವೈಭವ ಅಲ್ಲ. ಜನರ, ಪ್ರವಾಸಿಗರ ಸುರಕ್ಷತೆ ಮತ್ತು ಅನುಕೂಲಕ್ಕೆ ಆದ್ಯತೆ ನೀಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ 'ನಾಡಹಬ್ಬ ಮೈಸೂರು ದಸರಾ-2025'ರ ಆಚರಣೆ ಕುರಿತು ಶನಿವಾರ ನಡೆದ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಅವರು ಈ ಸೂಚನೆಗಳನ್ನು ನೀಡಿದರು.

ಸೆಪ್ಟೆಂಬರ್ 22ರಂದು ದಸರಾ ಹಬ್ಬಕ್ಕೆ ಚಾಲನೆ ಸಿಗಲಿದ್ದು, ಉದ್ಘಾಟನೆಗೆ ಯಾರನ್ನು ಆಹ್ವಾನಿಸಬೇಕು ಎಂಬುವುದನ್ನು ಮುಖ್ಯಮಂತ್ರಿ ಅವರ ವಿವೇಚನೆಗೆ ಬಿಡಲು ಸಭೆಯಲ್ಲಿ ನಿರ್ಧರಿಸಲಾಯಿತು. ಅಕ್ಟೋಬರ್ 2ರಂದು ವಿಜಯದಶಮಿ, ಜಂಬೂ ಸವಾರಿ ನಡೆಯಲಿದೆ.

'ಕಳೆದ ವರ್ಷ ದಸರಾ ಆಚರಣೆಗೆ ಒಟ್ಟು ₹40 ಕೋಟಿ ಅನುದಾನ ಒದಗಿಸಲಾಗಿತ್ತು. ಈ ಬಾರಿಯೂ ಅದ್ದೂರಿಯಾಗಿ ಆಚರಿಸಲು ಬೇಕಾಗುವಷ್ಟು ಅನುದಾನ ಒದಗಿಸಲಾಗುವುದು. ಸರ್ಕಾರದ ಸಾಧನೆಗಳನ್ನು ಮತ್ತು ಇಲಾಖಾ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಪ್ರತಿಬಿಂಬಿಸುವಂತಹ ವಸ್ತು ಪ್ರದರ್ಶನ, ಸ್ತಬ್ಧಚಿತ್ರ ಪ್ರದರ್ಶನ ಆಯೋಜಿಸಬೇಕು. ಅಕ್ಟೋಬರ್ 2ರಂದು ವಿಜಯದಶಮಿ ಬಂದಿರುವ ಕಾರಣ ಸ್ತಬ್ಧ ಚಿತ್ರಗಳಲ್ಲಿ ಗಾಂಧೀಜಿ ವಿಚಾರಧಾರೆಗಳಿಗೂ ಅವಕಾಶ ಕಲ್ಪಿಸಬೇಕು' ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

'ಕಳೆದ ಬಾರಿ ಅರಮನೆ ಮುಂದೆ ಆಸನ ವ್ಯವಸ್ಥೆಯನ್ನು 54 ಸಾವಿರಕ್ಕೆ ಹೆಚ್ಚಿಸಲಾಗಿತ್ತು. ಇದರಿಂದಾಗಿ ಜಂಬೂ ಸವಾರಿ ಸಂದರ್ಭದಲ್ಲಿ ಜನದಟ್ಟಣೆ ಉಂಟಾಗಿತ್ತು. ಈ ಬಾರಿ ಜನದಟ್ಟಣೆ ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ' ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಹೇಳಿದರು.

'ಮೈಸೂರು ದಸರಾ ಪ್ರಾಧಿಕಾರ ಸ್ಥಾಪಿಸಿ ಅದರ ಮೂಲಕ ದಸರಾ ವ್ಯವಸ್ಥಿತವಾಗಿ ಆಚರಿಸಬೇಕು. ಕುಳಿತುಕೊಳ್ಳುವ ಸ್ಥಳಾವಕಾಶ ಹೆಚ್ಚಿಸಬೇಕು. ಪಾರ್ಕಿಂಗ್ ವ್ಯವಸ್ಥೆಯನ್ನು ವ್ಯವಸ್ಥಿತಗೊಳಿಸಬೇಕು ಎಂದು ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಹೇಳಿದರೆ, 'ಜಂಬೂ ಸವಾರಿ ಸಂದರ್ಭದಲ್ಲಿ ಕಲಾ ತಂಡಗಳನ್ನು ಹೊರತುಪಡಿಸಿ ಬೇರೆ ಯಾರೂ ಓಡಾಡಲು ಅವಕಾಶ ಮಾಡಬಾರದು. ಕಲಾ ತಂಡಗಳಲ್ಲಿ ವೈವಿಧ್ಯ ಇರಬೇಕು' ಎಂದು ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

'ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಪರಿಸರ ಸ್ನೇಹಿ ಹಸಿರು ದಸರಾ ಆಚರಿಸಲು ಕ್ರಮ ಕೈಗೊಳ್ಳಬೇಕು. ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಕ್ರಮ ಕೈಗೊಳ್ಳಬೇಕು' ಎಂದು 'ಗ್ಯಾರಂಟಿ' ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ ಸಲಹೆ ನೀಡಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೆ.ಜೆ. ಜಾರ್ಜ್, ಶಿವರಾಜ ತಂಗಡಗಿ, ಕೆ. ವೆಂಕಟೇಶ್, ಬೈರತಿ ಸುರೇಶ್, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ದರ್ಶನ್ ಧ್ರುವನಾರಾಯಣ, ವಿಧಾನ ಪರಿಷತ್ ಸದಸ್ಯರಾದ ಯತೀಂದ್ರ, ಡಿ.ತಿಮ್ಮಯ್ಯ, ಅನಿಲ್ ಕುಮಾರ್, ಮಧು ಜಿ.ಮಾದೇಗೌಡ ಇದ್ದರು.

ಮುಖ್ಯಮಂತ್ರಿಯ ಸಲಹೆಗಳೇನು?

- ಜನದಟ್ಟಣೆ ನಿಯಂತ್ರಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ಯಾವುದೇ ಕಾರಣಕ್ಕೂ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು.
- ಅರಮನೆ ಮುಂಭಾಗದಲ್ಲಿ ಆಸನದ ವ್ಯವಸ್ಥೆಯನ್ನು ಕಳೆದ ಬಾರಿಗಿಂತ ಈ ಬಾರಿ ಕಡಿಮೆ ಮಾಡಬೇಕು
- ಪೊಲೀಸರು ಜನಸ್ನೇಹಿಯಾಗಿ ಕರ್ತವ್ಯ ನಿರ್ವಹಿಸಬೇಕು. ಕಾನೂನು ಸುವ್ಯವಸ್ಥೆಗೆ ಯಾವುದೇ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು
- ಕಲ್ಯಾಣ ಕಾರ್ಯಕ್ರಮಗಳು, 'ಗ್ಯಾರಂಟಿ' ಯೋಜನೆಗಳ ಮಾಹಿತಿ ಒದಗಿಸಲು ವ್ಯವಸ್ಥೆ ಮಾಡಬೇಕು
- ಚಾಮುಂಡಿ ಬೆಟ್ಟಕ್ಕೆ ಹೋಗುವ ರಸ್ತೆ, ಕೆಆರ್‌ಎಸ್‌ಗೆ ಹೋಗುವ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳನ್ನು ದುರಸ್ತಿ ಮಾಡಬೇಕು
- ಈ ಬಾರಿಯೂ ವಿದ್ಯುತ್ ದೀಪಾಲಂಕಾರವನ್ನು ಉತ್ತಮವಾಗಿ ಮಾಡಬೇಕು
- ಉದ್ಘಾಟನೆ ಸಂದರ್ಭದಲ್ಲಿಯೇ ವಸ್ತು ಪ್ರದರ್ಶನದ ಮಳಿಗೆಗಳು ಪೂರ್ಣ ಪ್ರಮಾಣದಲ್ಲಿ ಸಜ್ಜುಗೊಂಡಿರಬೇಕು. ಯಾವುದೇ ಮಳಿಗೆಗಳು ಖಾಲಿಯಿರಬಾರದು
- ಯಾವುದೇ ಗೊಂದಲಕ್ಕೆ ಆಸ್ಪದ ಆಗದಂತೆ 'ಗೋಲ್ಡ್ ಕಾರ್ಡ್' ವಿತರಿಸಬೇಕು
- ಸ್ತಬ್ಧಚಿತ್ರಗಳು ವೈವಿಧ್ಯಮಯ ಆಗಿರುವಂತೆ ನೋಡಿಕೊಳ್ಳಬೇಕು
- ದಸರಾ ಸಂದರ್ಭದಲ್ಲಿ ಜನಸಾಮಾನ್ಯರ ಕೆಲಸ ಕಾರ್ಯಗಳು, ಅಭಿವೃದ್ಧಿ ಕಾರ್ಯಗಳು ಯಾವುದೇ ಕಾರಣಕ್ಕೂ ಕುಂಠಿತ ಆಗಬಾರದು

ಚಿಟಿಕೆ ಸುದ್ದಿ

ದಲಿತರ ಕ್ಷೌರಕ್ಕೆ ನಿರಾಕರಣೆ: ದೂರು ದಾಖಲು

ಆಳಂದ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಕಿಣಿಸುಲ್ತಾನ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಯುವಕರಿಗೆ ಕ್ಷೌರ ಮಾಡಲು ನಿರಾಕರಿಸಿದ ಆರೋಪದಡಿ ಅಂಗಡಿ ಮಾಲೀಕನ ವಿರುದ್ಧ ಆಳಂದ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ದೂರು ದಾಖಲಾಗಿದೆ.

ಗ್ರಾಮದಲ್ಲಿ ತಾತ್ಕಾಲಿಕವಾಗಿ ಕ್ಷೌರದ ಅಂಗಡಿ ಬಂದ್ ಮಾಡಲಾಗಿದೆ. ಪರಿಶಿಷ್ಟ ಜಾತಿಯವರು ಆಳಂದಕ್ಕೆ ತೆರಳಿ ಕ್ಷೌರ ಮಾಡಿಸಿಕೊಂಡು ಬರುತ್ತಿದ್ದಾರೆ.

'ನಾವೂ ದುಡ್ಡು ಕೊಡುತ್ತೇವೆ. ನಮಗೂ ಕಟಿಂಗ್ ಮಾಡಿ' ಎಂದು ಮನವಿ ಮಾಡಿದರೂ ಅಂಗಡಿ ಮಾಲೀಕರು ನಿರಾಕರಿಸಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಗ್ರಾಮಕ್ಕೆ ಅಧಿಕಾರಿಗಳ ತಂಡ ತೆರಳಿ ವಿಚಾರಣೆ ನಡೆಸಿದ್ದು, ಸಂಧಾನದ ಬಳಿಕ ಅಂಗಡಿಯವರು ಕ್ಷೌರ ಮಾಡಲು ಒಪ್ಪಿಕೊಂಡಿದ್ದಾರೆ' ಎಂದು ತಹಶೀಲ್ದಾರ್ ಅಣ್ಣಾರಾವ್ ಪಾಟೀಲ ತಿಳಿಸಿದ್ದಾರೆ.

ಹರಿಕಥಾ ವಿದ್ವಾನ್ ಲಕ್ಷ್ಮಣದಾಸ್‌ಗೆ ₹90 ಸಾವಿರ ವಂಚನೆ

ತುಮಕೂರು: ಸರ್ಕಾರದ ಯೋಜನೆ ಅಡಿ ಹಣ ಕೊಡಿಸುವುದಾಗಿ ನಂಬಿಸಿ ಹರಿಕಥಾ ವಿದ್ವಾನ್, ನಿವೃತ್ತ ನೌಕರ ಲಕ್ಷ್ಮಣದಾಸ್ ಅವರಿಗೆ ₹90 ಸಾವಿರ ವಂಚಿಸಲಾಗಿದೆ.

ಲಕ್ಷ್ಮಣದಾಸ್ ಜಮೀನು ವಿಚಾರವಾಗಿ ನಗರದ ತಹಶೀಲ್ದಾರ್ ಕಚೇರಿಗೆ ಹೋದಾಗ ಪರಿಚಯ ಮಾಡಿಕೊಂಡ ಹರ್ಷ ಎಂಬಾತ ಸರ್ಕಾರದಿಂದ ₹10 ಲಕ್ಷ ಕೊಡಿಸುವ ಆಮಿಷವೊಡ್ಡಿ ₹90ಸಾವಿರಕ್ಕೆ ಬೇಡಿಕೆ ಇಟ್ಟಿದ್ದಾನೆ.

ಕಚೇರಿಯಿಂದ ಆಟೊದಲ್ಲಿ ಕರೆದೊಯ್ದು ಎರಡು ಎಟಿಎಂನಿಂದ ಒಟ್ಟು ₹90 ಸಾವಿರ ಪಡೆದು ಮನೆಗೆ ಕಳಿಸಿದ್ದಾನೆ. ಸಂಜೆ ಕರೆ ಮಾಡಿದಾಗ ಮೊಬೈಲ್ ಬಂದ್ ಆಗಿತ್ತು. ತಹಶೀಲ್ದಾರ್ ಕಚೇರಿಗೆ ಹೋಗಿ ವಿಚಾರಿಸಿದರೆ 'ಹರ್ಷ ಎಂಬುವರು ಯಾರೂ ಇಲ್ಲ' ಎಂದು ಅಲ್ಲಿನ ಸಿಬ್ಬಂದಿ ತಿಳಿಸಿದ್ದಾರೆ.

'ಸದಸ್ಯತ್ವ ರದ್ದು ಆದೇಶ ಪ್ರಶ್ನಿಸಿ ಮೇಲ್ಮನವಿ'

ಬೆಳಗಾವಿ: 'ಬೆಳಗಾವಿ ಮೇಯರ್ ಮಂಗೇಶ ಪವಾರ ಹಾಗೂ ಪಾಲಿಕೆ ಸದಸ್ಯ ಜಯಂತ ಜಾಧವ ಅವರ ಸದಸ್ಯತ್ವ ರದ್ದುಗೊಳಿಸಿ ನಗರಾಭಿವೃದ್ಧಿ ಇಲಾಖೆ ಹೊರಡಿಸಿದ ಆದೇಶ ಪ್ರಶ್ನಿಸಿ, ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗುವುದು' ಎಂದು ಶಾಸಕ ಅಭಯ ಪಾಟೀಲ ಹೇಳಿದರು.



ಅಭಯ ಪಾಟೀಲ

ಇಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜಕೀಯ ಒತ್ತಡದ ಮೇರೆಗೆ ಪವಾರ ಮತ್ತು ಜಾಧವ ಅವರ ಸದಸ್ಯತ್ವ ರದ್ದುಗೊಳಿಸಲಾಗಿದೆ. ಈ ಆದೇಶದ ವಿರುದ್ಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುತ್ತೇವೆ. ನ್ಯಾಯಕ್ಕಾಗಿ ಸುಪ್ರೀಂ ಕೋರ್ಟ್‌ವರೆಗಿನ ಎಲ್ಲ ಆಯ್ಕೆಗಳನ್ನು ಬಳಸಿಕೊಳ್ಳುತ್ತೇವೆ' ಎಂದರು.

'ಈ ಪ್ರಕರಣದಲ್ಲಿ ನಮಗೆ ನ್ಯಾಯ ಸಿಗುತ್ತದೆ. ಜುಲೈ 2ರಂದು ನಡೆಯಲಿರುವ ಸ್ಥಾಯಿ ಸಮಿತಿ ಚುನಾವಣೆಯಲ್ಲಿ ಮತ ಚಲಾಯಿಸುತ್ತಾರೆ ಎಂದು ನಾವು ಭಾವಿಸುತ್ತೇವೆ' ಎಂದು ಹೇಳಿದರು.

ಮಹಿಳೆ ಇದ್ದಲ್ಲೇ ವಿಚಾರಣೆ

ಪ್ರಜಾವಾಣಿ ವಾರ್ತೆ

ರಾಮನಗರ: ವಿಚಾರಣೆಗೆ ಹಾಜರಾಗಲು ಇಲ್ಲಿಯ ನ್ಯಾಯಾಲಯಕ್ಕೆ ಬಂದಿದ್ದ ಯಶೋಧಮ್ಮ ಎಂಬ ಮಹಿಳೆಯ ಕಾಲಿಗೆ ಅಪಘಾತವೊಂದರಲ್ಲಿ ಪೆಟ್ಟು ಬಿದ್ದಿದ್ದರಿಂದ ಕೋರ್ಟ್ ಮೆಟ್ಟಿಲು ಹತ್ತಲಾಗದೆ ಹೊರಗೆ ಕುಳಿತಿದ್ದರು. ಇದನ್ನು ತಿಳಿದ ನ್ಯಾಯಾಧೀಶರು ಮಹಿಳೆ ಇದ್ದ ಸ್ಥಳಕ್ಕೆ ಹೋಗಿ ವಿಚಾರಣೆ ನಡೆಸಿದ್ದಾರೆ.

ರಾಮನಗರದ ಪ್ರಧಾನ ಸಿವಿಲ್ ನ್ಯಾಯಾಧೀಶ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಎಚ್. ಅವಿನಾಶ್ ಚಿಂದು ಅವರು ಮಹಿಳೆಯ ಸ್ಥಿತಿ ಅರಿತು, ಮಹಿಳೆ ಕುಳಿತಿದ್ದ ಸ್ಥಳಕ್ಕೆ ತೆರಳಿ ವಿಚಾರಣೆ ನಡೆಸಿದರು.

ಏನಿದು ಪ್ರಕರಣ?: ಚಲುವಯ್ಯ ಎಂಬುವರು ಅಪಘಾತದಲ್ಲಿ ಮೃತಪಟ್ಟಿದ್ದರು. ಆರೋಪಿ ಸಂಜಯ್ ಕಲಾರೊ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಕೋರ್ಟ್, ಚಲುವಯ್ಯ ಅವರ ಹತ್ತು ಮಕ್ಕಳಿಗೆ ತಲಾ ₹1 ಲಕ್ಷದಂತೆ ₹10 ಲಕ್ಷ ಪರಿಹಾರ ನೀಡುವಂತೆ ಆರೋಪಿಗೆ ಆದೇಶಿಸಿತ್ತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ಪರಿಹಾರದ ಹಣವನ್ನು ರಾಮನಗರದ ನ್ಯಾಯಾಲಯದಲ್ಲಿ ಠೇವಣಿ ಇರಿಸಿತ್ತು.

ಚಲುವಯ್ಯ ಅವರ ಹತ್ತು ಮಕ್ಕಳ ಪರ ವಕಾಲತ್ತು ವಹಿಸಿದ್ದ ವಕೀಲ ಬಿ.ಪಿ. ರವಿ, ವಿಚಾರಣೆ ಸಂದರ್ಭದಲ್ಲಿ ವೋಚರ್, ಬ್ಯಾಂಕ್ ಪಾಸ್‌ಬುಕ್ ಹಾಗೂ ಆಧಾರ್ ಕಾರ್ಡ್ ಸಲ್ಲಿಸಿದ್ದರು. ಎಲ್ಲಾ ದಾಖಲೆ ಪರಿಶೀಲಿಸಿದ ನ್ಯಾಯಾಧೀಶರು, ಮೃತರ ವಾರಸುದಾರರಿಗೆ ತಲಾ ₹1 ಲಕ್ಷ ಪರಿಹಾರವಾಗಿ ನೀಡಲು ಆದೇಶಿಸಿದರು.

ವಾರಸುದಾರರ ಪೈಕಿ ಚಲುವಯ್ಯ ಅವರ ಪುತ್ರಿ ಯಶೋಧಮ್ಮ ಅವರಿಗೆ ಅಪಘಾತದಲ್ಲಿ ಕಾಲಿಗೆ ಪೆಟ್ಟು ಬಿದ್ದಿತ್ತು. ವಿಚಾರಣೆಗೆ ಬಂದಿದ್ದ ಅವರಿಗೆ ಮೆಟ್ಟಿಲು ಹತ್ತಿ ಕೋರ್ಟ್ ಒಳಗೆ ಹೋಗಲು ಸಾಧ್ಯವಾಗದೆ ಹೊರಗಡೆ ನೋಟರಿ ಬಳಿ ಕುಳಿತಿದ್ದರು.

ರಾಮನಗರದ ಕೋರ್ಟ್ ಆವರಣದಲ್ಲಿರುವ ನೋಟರಿ ಬಳಿ ಕುಳಿತಿದ್ದ ಯಶೋದಮ್ಮ ಅವರಿದ್ದ ಜಾಗಕ್ಕೆ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಎಚ್ ಅವಿನಾಶ್ ಚಿಂದು ಅವರು ಬಂದು ವಿಚಾರಣೆ ನಡೆಸಿದರು

ಸಮ್ಮೇಳನಾಧ್ಯಕ್ಷರ ಘೋಷಣೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯು ಬಳ್ಳಾರಿ ನಗರದಲ್ಲಿ ಭಾನುವಾರ ನಡೆಯಲಿದ್ದು, 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಘೋಷಣೆಗೆ ಸಿದ್ಧತೆ ನಡೆದಿದೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ಅಧ್ಯಕ್ಷತೆಯಲ್ಲಿ ಮೊದಲಿಗೆ ಕಾರ್ಯಕಾರಿ ಸಭೆ ನಡೆಯಲಿದ್ದು, ಅಲ್ಲಿ ಸಮ್ಮೇಳನಾಧ್ಯಕ್ಷರ ಆಯ್ಕೆ ಕುರಿತು ಚರ್ಚೆ ನಡೆಯಲಿದೆ. ಬಳಿಕ ಸಮ್ಮೇಳನಾಧ್ಯಕ್ಷರನ್ನು ಘೋಷಿಸಲಾಗುತ್ತದೆ.

ಹೊಸ ಸಂಪ್ರದಾಯ: ಈ ಬಾರಿಯ ಸಮ್ಮೇಳನದ ಅಧ್ಯಕ್ಷರ ಆಯ್ಕೆಯು ಕಸಾಪ ಇತಿಹಾಸದಲ್ಲೇ ಹೊಸ ಪರಂಪರೆಗೆ ನಾಂದಿ ಹಾಡಲಿದೆ. ಸಮ್ಮೇಳನ ನಡೆಯುವ ಸ್ಥಳ ಹಾಗೂ ದಿನಾಂಕ ಅಂತಿಮವಾಗದೆ, ಸ್ವಾಗತ ಸಮಿತಿ ರಚನೆ, ಲೆಕ್ಕಪತ್ರ ಮಂಡನೆ ಆಗದೆ ಹಾಗೂ ಸರ್ಕಾರದಿಂದ ಅನುದಾನ ಖಾತ್ರಿಯಾಗದೇ ಯಾವ ವರ್ಷವೂ ಸಮ್ಮೇಳನದ ಅಧ್ಯಕ್ಷರನ್ನು ಆಯ್ಕೆ ಮಾಡಿದ ಉದಾಹರಣೆಗಳಿಲ್ಲ. ಆದರೆ, ಈ ಬಾರಿ ಡಿಸೆಂಬರ್‌ನಲ್ಲಿ ಸಮ್ಮೇಳನ ಆಯೋಜಿಸಲು ನಿರ್ಧರಿಸಲಾಗಿದೆ. ಆದರೂ, ಸ್ಥಳ, ದಿನಾಂಕ, ಸಮಿತಿಗಳ ಬಗ್ಗೆ ಈವರೆಗೆ ಚರ್ಚೆಗಳಾಗಿಲ್ಲ.

ಲೆಕ್ಕ ಪತ್ರಗಳು, ಅನುದಾನದ ವಿಚಾರಗಳು ವಿವಾದಕ್ಕೆ ಗುರಿಯಾಗಿವೆ. ಹೀಗಿರುವಾಗ ಆರು ತಿಂಗಳು ಮೊದಲೇ ಅಧ್ಯಕ್ಷರನ್ನು ಘೋಷಿಸಲು ಕಸಾಪ ಮುಂದಾಗಿದೆ. ಸಂಘದ ಈ ನಡೆಗೆ ಸದಸ್ಯರಿಂದ ಆಕ್ಷೇಪವೂ ವ್ಯಕ್ತವಾಗಿದೆ.

ಎಂಜಿನಿಯರಿಂಗ್: ಸೀಟು ಹೆಚ್ಚಳಕ್ಕೆ ಸಿಗದ ಸಮ್ಮತಿ

ಬೆಂಗಳೂರು: ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್ ಪ್ರಕರಣದಲ್ಲಿ ಹೆಸರಿರುವ ಎರಡು ಕಾಲೇಜುಗಳು ಸಲ್ಲಿಸಿದ್ದ ಹೆಚ್ಚುವರಿ ಸೀಟುಗಳ ಬೇಡಿಕೆಗೆ ಉನ್ನತ ಶಿಕ್ಷಣ ಇಲಾಖೆ ಅನುಮೋದನೆ ನೀಡಿಲ್ಲ.

ಬೇಡಿಕೆ ಇರುವ ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ ಮತ್ತಿತರ ಕೋರ್ಸ್‌ಗಳಲ್ಲಿ 2025-26ನೇ ಸಾಲಿಗೆ ಸೀಟು ಹೆಚ್ಚಳ ಮಾಡಲು ಕೋರಿ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ನ್ಯೂ ಹೊರೈಜನ್ ಎಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿ ಪ್ರಸ್ತಾವ ಸಲ್ಲಿಸಿದ್ದವು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಸೀಟು ಹೆಚ್ಚಳಕ್ಕೆ ಅನುಮೋದನೆ ನೀಡಿದ್ದರೂ, ರಾಜ್ಯ ಸರ್ಕಾರ ಎನ್‌ಒಸಿ ನೀಡಿಲ್ಲ. ಬಿಎಂಎಸ್ ಕಾಲೇಜು ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ 120, ನ್ಯೂ ಹೊರೈಜನ್ ಕಾಲೇಜು ಕೃತಕ ಬುದ್ಧಿಮತ್ತೆಯಲ್ಲಿ 240 ಹಾಗೂ ಕಂಪ್ಯೂಟರ್ ಸೈನ್ಸ್‌ನಲ್ಲಿ 660 ಸೀಟುಗಳನ್ನು ಹೆಚ್ಚಿಸಲು ಅರ್ಜಿ ಸಲ್ಲಿಸಿವೆ.

ಬೀಚ್‌ಗೆ ಕರೆದೊಯ್ದು ಬಾಲಕಿ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಸಾಮಾಜಿಕ ಮಾಧ್ಯಮದಲ್ಲಿ ಬಾಲಕಿಯನ್ನು ಪರಿಚಯಿಸಿಕೊಂಡ ಯುವಕ, ಐದು ದಿನಗಳಲ್ಲೇ ಆಕೆಯನ್ನು ಪುಸಲಾಯಿಸಿ ಕರೆದೊಯ್ದು ಸೋಮೇಶ್ವರ ಸಮುದ್ರ ತೀರದಲ್ಲಿ ಕಾರೊಳಗೆ ಅತ್ಯಾಚಾರ ಮಾಡಿದ ಬಗ್ಗೆ ಪ್ರಕರಣ ದಾಖಲಾಗಿದೆ.

ಉಳ್ಳಾಲ ಠಾಣೆಯಲ್ಲಿ ಪೋಕ್ಸೊ ಅಡಿ ಪ್ರಕರಣ ದಾಖಲಾಗಿದ್ದು, ಆರೋಪಿ ಅಡ್ಯಾರ್ ವಳಚ್ಚಿಲ್ ನಿವಾಸಿ ಕೆಲ್ವಿನ್ (24) ಎಂಬಾತನನ್ನು ಬಂಧಿಸಲಾಗಿದೆ.

'ಪಿಯುಸಿ ಮುಗಿಸಿ ನರ್ಸಿಂಗ್ ಶಿಕ್ಷಣಕ್ಕೆ ಕಾಯುತ್ತಿದ್ದ ಸಂತ್ರಸ್ತೆಯನ್ನು ಭೇಟಿಯಾಗುವ ಉದ್ದೇಶದಿಂದ ಕೆಲ್ವಿನ್ ಉಳ್ಳಾಲದ ಮನೆಗೆ ಕಾರಿನಲ್ಲಿ ಕರೆದೊಯ್ದಿದ್ದ. ಬಳಿಕ ಆಕೆಯನ್ನು ಕುತ್ತಾರು ಸಮೀಪದ ಲಾಡ್ಜ್‌ಗೆ ಕರೆದುಕೊಂಡು ಹೋಗಿ ರೂಮ್ ಕೇಳಿದ್ದಾನೆ. ಆದರೆ, ಬಾಲಕಿಯಾಗಿರುವ ಕಾರಣ ಲಾಡ್ಜ್ ಸಿಬ್ಬಂದಿ ರೂಮ್ ಕೊಟ್ಟಿರಲಿಲ್ಲ. ಸೋಮೇಶ್ವರ ಸಮುದ್ರ ತೀರಕ್ಕೆ ಕರೆದೊಯ್ದು ಕಾರೊಳಗೆ ಅತ್ಯಾಚಾರ ಮಾಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ನಂತರ ಆಕೆಯನ್ನು ಮನೆಯ ವರೆಗೂ ಕಾರಿನಲ್ಲಿ ಬಿಟ್ಟುಹೋಗಿದ್ದಾನೆ. ಬೆಳಿಗ್ಗೆ ಮತ್ತು ಸಂಜೆ ಕಾರಿನಲ್ಲಿ ಬಾಲಕಿಯನ್ನು ಕರೆದೊಯ್ಯುವುದನ್ನು ಮನೆ ಸಮೀಪದವರು ಗಮನಿಸಿದ್ದರು. ರಾತ್ರಿ ಹೊತ್ತಲ್ಲಿ ಬಾಲಕಿಗೆ ಹೊಟ್ಟೆ ನೋವು ಕಾಣಿಸಿಕೊಂಡ ಕಾರಣ ವೈದ್ಯರ ಬಳಿ ಕರೆದೊಯ್ದು ಪರಿಶೀಲಿಸಿದಾಗ ಅತ್ಯಾಚಾರ ನಡೆದಿರುವುದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ಕೆಲ್ವಿನ್ ಪೇಂಟಿಂಗ್ ವೃತ್ತಿ ನಡೆಸುತ್ತಿದ್ದ.

ಮಗಳ ಕೊಲೆಗೆ ಯತ್ನಿಸಿದ ಅಪ್ಪ

ಪ್ರಜಾವಾಣಿ ವಾರ್ತೆ

ಸೊರಬ (ಶಿವಮೊಗ್ಗ): ಮದುವೆಗೆ ಮುನ್ನವೇ ಗರ್ಭಿಣಿಯಾಗಿದ್ದ 21 ವರ್ಷದ ಪುತ್ರಿಯನ್ನು ಮರ್ಯಾದೆಗೆ ಅಂಜಿ ತಂದೆಯೇ ಕೊಲೆ ಮಾಡಲು ಯತ್ನಿಸಿದ್ದಾನೆ.

ಪುತ್ರಿ ಗರ್ಭಿಣಿ ಆಗಿರುವ ವಿಚಾರ ತಿಳಿದು ಸಿಟ್ಟಾದ ಆರೋಪಿಯು, ಆಸ್ಪತ್ರೆಗೆ ಹೋಗೋಣವೆಂದು ಹೇಳಿ ಪತ್ನಿ ಹಾಗೂ ಮಗಳನ್ನು ತಾಲ್ಲೂಕಿನ ಉಳವಿ ಸಮೀಪದ ಕಾನಹಳ್ಳಿ ಬಳಿಯ ಕಣ್ಣೂರು ಅರಣ್ಯ ಪ್ರದೇಶಕ್ಕೆ ಶನಿವಾರ ಕರೆದೊಯ್ದಿದ್ದಾನೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಪೊಲೀಸರು

ಅಲ್ಲಿ ಮಗಳ ಕುತ್ತಿಗೆಗೆ ಹಗ್ಗದಿಂದ ಬಿಗಿದು ಉಸಿರುಗಟ್ಟಿಸಿ ಹತ್ಯೆ ಮಾಡಲು ಯತ್ನಿಸಿದ್ದಾನೆ. ಪುತ್ರಿಯನ್ನು ಸಾಯಿಸಬೇಡಿ ಎಂದು ಪತ್ನಿ ಕಾಲಿಗೆ ಬಿದ್ದು ಕೇಳಿಕೊಂಡರೂ ಒಪ್ಪಿಲ್ಲ. ಈ ವೇಳೆ ಯುವತಿ ಪ್ರಜ್ಞೆ ತಪ್ಪಿದ್ದಾಳೆ ಎಂದು ತಿಳಿದುಬಂದಿದೆ.

ಮಗಳು ಮೃತಪಟ್ಟಿರಬಹುದು ಎಂದು ಭಾವಿಸಿ ಇಬ್ಬರೂ ಅಲ್ಲಿಂದ ತೆರಳಿದ್ದಾರೆ. ಕೆಲ ಹೊತ್ತಿನ ನಂತರ ಯುವತಿಗೆ ಪ್ರಜ್ಞೆ ಬಂದಿದ್ದು, ರಸ್ತೆವರೆಗೂ ನಡೆದು ಬಂದಿದ್ದಾಳೆ. ಸ್ಥಳೀಯರ ಸಹಾಯ ಪಡೆದು ಉಳವಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಾಗಿ ಪ್ರಾಥಮಿಕ ಚಿಕಿತ್ಸೆ ಪಡೆದಿದ್ದಾಳೆ. ಅಲ್ಲಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕರೆದೊಯ್ಯಲಾಗಿದೆ.

ಯುವತಿಯಿಂದ ದೂರು ಪಡೆದಿರುವ ಪಟ್ಟಣ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆದು ತನಿಖೆ ಮುಂದುವರಿಸಿದ್ದಾರೆ.

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಚಳ್ಳಕೆರೆ., ಚಿತ್ರದುರ್ಗ (ಜಿ)

ಸಂ. ತಾ.ಸಾ.ಆ.(ಚ)ಔಷಧಿ/ಟೆಂಡರ್/2025–26 ದಿನಾಂಕ: 25.06.2025

ಇ–ಟೆಂಡರ್ ಪ್ರಕಟಣೆ–2ನೇ ಕರೆ

(ದ್ವಿ ಲಕೋಟೆ ಪದ್ಧತಿಯಲ್ಲಿ)

2025–26ರ ಸಾಲಿಗಾಗಿ ಔಷಧಿ ಸಾಮಾಗ್ರಿಗಳು/ಪ್ರಯೋಗ ಶಾಲಾ ರಾಸಾಯನಿಕಗಳು/ಕ್ಷ ಕಿರಣ ಫಿಲಂಗಳನ್ನು ಸರಬರಾಜು ಮಾಡಲು ಮುಖ್ಯ ವೈದ್ಯಾಧಿಕಾರಿಗಳು, ತಾ.ಸಾ.ಆಸ್ಪತ್ರೆ, ಚಳ್ಳಕೆರೆ ಇವರ ಹೆಸರಿನಲ್ಲಿ ನಿರ್ವಹಿಸಲು, ಪ್ರತಿಷ್ಠಿತ ನೊಂದಾಯಿತ ಸಂಸ್ಥೆಯವರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಸಂಗ್ರಹಣಾ ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದೆ, ಇ–ಟೆಂಡರ್ ನಮೂನೆಗಳನ್ನು http://kppp.karnataka.gov.in ರಲ್ಲಿ ಅಂತರ್ ಜಾಲದಲ್ಲಿ ಟೆಂಡರ್ ಫಾರ ಗಳನ್ನು (ದ್ವಿ ಲಕೋಟೆ) ಡೌನ್ ಲೋಡ್ ಮಾಡಿಕೊಳ್ಳುವ ದಿ:25/06/2025 ರಿಂದ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ:09/07/2025. ಅಪರಾಹ್ನ 5.00ಗಂಟೆಯ ವರೆಗೆ, ಕಾರಣಾಂತರದಿಂದ ಆನ್‌ಲೈನ್ ನಲ್ಲಿ ಅಪ್ ಲೋಡ್ ಮಾಡುವ ಮತ್ತು ಡೌನ್ ಲೋಡ್ ಮಾಡುವ ಟೆಂಡರ್ ತೆರೆಯುವ ದಿನಾಂಕಗಳಂದು ಸರ್ಕಾರಿ ರಜೆ ಘೋಷಿಸಿದಲ್ಲಿ ಅದರ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ http://kppp.karnataka.gov.in ರಲ್ಲಿ ಪಡೆಯಬಹುದು.

DIPR/CTA/KSMCA/171/2025-26

ಸಹಿ/– ಮುಖ್ಯ ವೈದ್ಯಾಧಿಕಾರಿಗಳು
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಚಳ್ಳಕೆರೆ.

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with 'A++' Grade

ಯು.ಜಿ.ಸಿ. ಮಾನ್ಯತೆ ಹಾಗೂ ನ್ಯಾಕ್ 'ಎ++' ಶ್ರೇಣಿ ಪಡೆದಿದೆ.

ದೂರ ಶಿಕ್ಷಣ ಮತ್ತು ಆನ್–ಲೈನ್ ಶಿಕ್ಷಣ ಕೇಂದ್ರ

ಜ್ಞಾನಭಾರತಿ ಆವರಣ, ಬೆಂಗಳೂರು–560056, ದೂರವಾಣಿ: 080–22961261, 080–46807810, ಇ–ಮೇಲ್: admission@ddebubonline.in

ಸಂಖ್ಯೆ: ಬಿ.ಯು/ಸಿಡಿಓಇ/ಆನ್–ಲೈನ್/ಜುಲೈ–ಆಗಸ್ಟ್/2025–26 ದಿನಾಂಕ: 17.06.2025

ಪ್ರವೇಶಾತಿ ಅಧಿಸೂಚನೆ

2025–26ನೇ ಸಾಲಿನ ಜುಲೈ–ಆಗಸ್ಟ್ ಆವೃತ್ತಿಗೆ ಆನ್‌ಲೈನ್ ಶಿಕ್ಷಣದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ

ಸದರಿ ಪದವಿಗಳು ಯು.ಜಿ.ಸಿ ಯ (ದೂರ ಶಿಕ್ಷಣ ಮತ್ತು ಮುಕ್ತ ಕಾರ್ಯಕ್ರಮಗಳ ಮತ್ತು ಆನ್ ಲೈನ್ ಕಾರ್ಯಕ್ರಮಗಳ) ನಿಯಮಾವಳಿಗಳು, 2020 ರ ನಿಬಂಧನೆ 3 (ಬಿ) (ಎ)ರ ಅನುಸಾರ ಯು.ಜಿ.ಸಿ. ಯ ಮಾನ್ಯತೆ ಪಡೆದಿವೆ.

ಸ್ನಾತಕ ಪದವಿ ಕೋರ್ಸು (3 ವರ್ಷಗಳು / 6 ಸೆಮಿಸ್ಟರ್‌ಗಳು)

(i) ಬಿ.ಕಾಂ. (ಬ್ಯಾಚುಲರ್ ಆಫ್ ಕಾಮರ್ಸ್)

ಸ್ನಾತಕೋತ್ತರ ಪದವಿ ಕೋರ್ಸುಗಳು: (2 ವರ್ಷಗಳು / 4 ಸೆಮಿಸ್ಟರ್ ಗಳು)

(i) ಎಂ.ಎ. – ಇಂಗ್ಲೀಷ್
(ii) ಎಂ.ಕಾಂ. ಮಾಸ್ಟರ್ ಆಫ್ ಕಾಮರ್ಸ್ (ಸಾಮಾನ್ಯ)
(iii) ಎಂ.ಎಸ್ಸಿ (ಗಣಿತ ಶಾಸ್ತ್ರ)

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 15.09.2025

- ಪ್ರವೇಶಾತಿಯ ಎಲ್ಲಾ ಪ್ರಕ್ರಿಯೆಗಳು ಆನ್‌ಲೈನ್ ಮೂಲಕ ನಡೆಯಲಿದೆ
- ಆನ್–ಲೈನ್ ಕೋರ್ಸ್‌ಗಳಿಗೆ ರಾಜ್ಯ/ದೇಶದ/ವಿದೇಶದ ಯಾವುದೇ ಭಾಗದ ಆಸಕ್ತ ಅರ್ಹ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾಲಯದ ಅಂತರ್ಜಾಲವನ್ನು ವೀಕ್ಷಿಸಬಹುದಾಗಿದೆ: www.bangaloreuniversity.karnataka.gov.in

ಸಹಿ/–
ಕುಲಸಚಿವರು

DIPR/CP/RO1522/AAPL/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–2/2025–26/2721–45 ದಿನಾಂಕ: 27.06.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಭಾಗಶಃ ಟರ್ನ್ ಕೀ ಆಧಾರದ ಮೇಲೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ. ಸಂ.	ವಿಚಾರಣಾ ಸಂಖ್ಯೆ / ಕಾಮಗಾರಿಗಳ ವಿವರ
1.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2380**
	ಬೆಳಗಾವಿ ಜಿಲ್ಲೆ, ಸೌಂದತ್ತಿ ತಾಲ್ಲೂಕು **ಇಂಚಲ** ಗ್ರಾಮದಲ್ಲಿ 1x20ಎಂ.ವಿ.ಎ, 110/33 ಕೆ.ವಿ ಮತ್ತು 2x20ಎಂ.ವಿ.ಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು, 110ಕೆವಿ ಹೊಸೂರು ಉಪಕೇಂದ್ರದಲ್ಲಿ 2 ಸಂಖ್ಯೆಯ 110ಕೆವಿ ಟರ್ಮಿನಲ್ ಬೇಗಳನ್ನು ಹಾಗೂ 110ಕೆವಿ ಹೊಸೂರು ಉಪಕೇಂದ್ರದಿಂದ **13.802ಕಿ.ಮೀ.**ಗಳ ಉದ್ದಕ್ಕೆ 110ಕೆವಿ ಡಿಸಿ (DC) ಪ್ರಸರಣ ಮಾರ್ಗವನ್ನು ಪ್ಯಾಂಥರ್ (Panther) ವಾಹಕದಿಂದ ನಿರ್ಮಿಸುವುದು.
2.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2374**
	ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕು **ಸಾಲಾಪುರ**ದಲ್ಲಿ 2x20 ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆವಿ ಸಾಲಹಳ್ಳಿ–ಲೋಕಪುರ ಎಸ್.ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110ಕೆವಿ ಸಾಲಾಪುರ ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **4.9ಕಿ.ಮೀ.**ಗಳ ಉದ್ದಕ್ಕೆ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
3	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2375**
	ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು **ಬಮ್ಮಿಗಟ್ಟಿ (ನೆಲ್ಲಿ ಹರವಿ)** ಯಲ್ಲಿ 2x20ಎಂ.ವಿ.ಎ, 110/11ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110/11 ಕೆ.ವಿ ತಬಕದಹೊನ್ನಳ್ಳಿ ಉಪಕೇಂದ್ರದಿಂದ ಪ್ರಸ್ತಾವಿತ 110/11ಕೆ.ವಿ ಬಮ್ಮಿಗಟ್ಟಿ (ನೆಲ್ಲಿ ಹರವಿ) ಉಪಕೇಂದ್ರದವರೆಗೆ DC ಗೋಪುರಗಳ ಮೇಲೆ ಪ್ಯಾಂತರ್ (Panther) ವಾಹಕದಿಂದ **8.945 ಕಿ.ಮೀ.**ಗಳ ಉದ್ದಕ್ಕೆ 110 ಕೆ.ವಿ DC ಪ್ರಸರಣ ಮಾರ್ಗವನ್ನು ಹಾಗೂ ಹಾಲಿಯಿರುವ 110/11ಕೆ.ವಿ ತಬಕದಹೊನ್ನಳ್ಳಿ ಉಪಕೇಂದ್ರದಲ್ಲಿ ಎರಡು 110ಕೆವಿ ಟರ್ಮಿನಲ್ ಬೇ ಗಳನ್ನು ನಿರ್ಮಿಸುವುದು
4.	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2367**
	ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲ್ಲೂಕು **ಎಚ್.ವಿ.ಕುಂಟಾ (ಉಪ್ಪಲದಿನ್ನಿ) ಗ್ರಾಮದಲ್ಲಿ** 1x20ಎಂ.ವಿ.ಎ, 110/33 ಕೆ.ವಿ ಮತ್ತು 2x20ಎಂ.ವಿ.ಎ, 110/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110 ಕೆ.ವಿ ಕುಷ್ಟಗಿ–ಬೇವೂರ್ SC ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/33/11 ಕೆ.ವಿ ಎಚ್.ವಿ.ಕುಂಟಾ (ಉಪ್ಪಲದಿನ್ನಿ) ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **8.682ಕಿ.ಮೀ.** ನಷ್ಟು 110ಕೆ.ವಿ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
5	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2378**
	ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕು **ಸಂಡೂರು ಪಟ್ಟಣ (ದೌಲತ್‌ಪುರ)**ದಲ್ಲಿ 2x20 ಎಂವಿಎ, 110/11 ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆವಿ ಮುನಿರಾಬಾದ್ ಪವರ್ ಹೌಸ್– ವ್ಯಾಸನಕೆರಿ (ದೋಣಿಮಲೈ) ಡಿಸಿ (DC) ಪ್ರಸರಣ ಮಾರ್ಗದಿಂದ ಒಂದು ಪ್ರಸರಣ ಮಾರ್ಗವನ್ನು ಪ್ರಸ್ತಾವಿತ 110/11 ಕೆವಿ ಸಂಡೂರು ಪಟ್ಟಣ (ದೌಲತ್‌ಪುರ) ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **0.416 ಕಿ.ಮೀ.**ಗಳ ಉದ್ದಕ್ಕೆ 110ಕೆವಿ ಲೀಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
6	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2376**
	ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕು, **ಯಾಗಪುರ (ಬೆಳಗೆರ)** ಗ್ರಾಮದಲ್ಲಿ 2x20 ಎಂ.ವಿ.ಎ, 110/11 ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110 ಕೆವಿ ಎಸ್‌ಸಿ (SC) ನಾಲವಾರ–ಯಾದಗಿರಿ (North) ಎಸ್‌ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11 ಕೆವಿ ಯಾಗಪುರ (ಬೆಳಗೆರ) ಗ್ರಾಮ ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **15.680 ಕಿ.ಮೀ**ಗಳ ಉದ್ದಕ್ಕೆ 110 ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
7	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2373**
	ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು **ಮದಲಗೆರೆ(ಬಂಡ್ರಿ ಕ್ರಾಸ್)**ನಲ್ಲಿ **2x20ಎಂ.ವಿ.ಎ, 66/11 ಕೆ.ವಿ.** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಇಟ್ಟಗಿ – ಹರಪನಹಳ್ಳಿ SC ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11 ಕೆವಿ ಮದಲಗೆರೆ ಉಪಕೇಂದ್ರದವರೆಗೆ ಕೊಯೋಟ್ (Coyote) ವಾಹಕದಿಂದ **9.315 ಕಿ.ಮೀ.**ಗಳ ಉದ್ದಕ್ಕೆ 66 ಕೆ.ವಿ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
8	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2369**
	ತುಮಕೂರು ಜಿಲ್ಲೆ, ಸಿರಾ ತಾಲ್ಲೂಕು **ಎಂ. ದಾಸರಹಳ್ಳಿ (ಮದಲೂರು)**ನಲ್ಲಿ **2x20 ಎಂ.ವಿ.ಎ, 66/11ಕೆ.ವಿ.** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆ.ವಿ ಸಿರಾ–ಮಧುಗಿರಿ ಲೈನ್–2 ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11ಕೆ.ವಿ ಎಂ. ದಾಸರಹಳ್ಳಿ (ಮದಲೂರು) ಉಪಕೇಂದ್ರದವರೆಗೆ 110ಕೆ.ವಿ ಡಿ.ಸಿ ಗೋಪುರಗಳ ಮೇಲೆ ಕೊಯೋಟ್ (Coyote) ವಾಹಕದಿಂದ **6.19 ಕಿ.ಮೀ.**ಗಳ ಉದ್ದಕ್ಕೆ 66ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
9	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2377**
	ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, **ನೆಲೋಗಿಪುರ (ಬೈರಾಪುರ) ಗ್ರಾಮದಲ್ಲಿ 2x20 ಎಂ.ವಿ.ಎ, 110/11ಕೆ.ವಿ.** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆ.ವಿ ಮುಂಡರಗಿ–ಬೆಟಗೇರ ಎಸ್.ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆ.ವಿ ನೆಲೋಗಿಪುರ ಗ್ರಾಮದ ಉಪಕೇಂದ್ರದವರೆಗೆ ಡಿ.ಸಿ (DC) ಗೋಪುರಗಳ ಮೇಲೆ ಲಿಂಕ್ಸ್ (Lynx) ವಾಹಕದಿಂದ **5.693 ಕಿ.ಮೀ.**ಗಳ ಉದ್ದಕ್ಕೆ 110ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
10	**ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್2368**
	ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕು **ಕ್ಯಾದಿಗೇರನಲ್ಲಿ 2x20 ಎಂ.ವಿ.ಎ, 110/11ಕೆ.ವಿ.** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆವಿ ಮಲ್ಲತ್–ಅಲ್ಕೋಡ್ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆ.ವಿ ಕ್ಯಾದಿಗೇರ ಉಪಕೇಂದ್ರದವರೆಗೆ ಡಿ.ಸಿ (DC) ಗೋಪುರಗಳ ಮೇಲೆ ಲಿಂಕ್ಸ್ (Lynx) ವಾಹಕದಿಂದ **7.989 ಕಿ.ಮೀ.**ಗಳ ಉದ್ದಕ್ಕೆ 110ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.inನ ಹೈಪರ್‌ಲಿಂಕ್ "ಇ–ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ **04.07.2025 ರಂದು ಅಪರಾಹ್ನ 15:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಮೇಲೆ ತಿಳಿಸಿರುವ ಕಾಮಗಾರಿ ಕ್ರ.ಸಂ (1) ರಿಂದ (4) ರ ಕಾಮಗಾರಿಗಳಿಗೆ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **21.07.2025 ರಂದು ಅಪರಾಹ್ನ 15:00 ಗಂಟೆ**. ಕ್ರ.ಸಂ (5) ರಿಂದ (8) ರ ಕಾಮಗಾರಿಗಳಿಗೆ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **23.07.2025 ರಂದು ಅಪರಾಹ್ನ 15:00 ಗಂಟೆ** ಹಾಗೂ ಕ್ರ.ಸಂ (9) ರಿಂದ (10) ರ ಕಾಮಗಾರಿಗೆ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **25.07.2025 ರಂದು ಅಪರಾಹ್ನ 15:00 ಗಂಟೆ**. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳನ್ನು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್,
ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560 009.

ಸೋರುವ ಕೊಠಡಿಯಲ್ಲೇ ಕಲಿಕೆ!

ದಾವಣಗೆರೆ ಜಿಲ್ಲೆಯ ಬಸವಾಪಟ್ಟಣ ಸಮೀಪದ ಯಲೋದಹಳ್ಳಿಯ ಸರ್ಕಾರಿ ಶಾಲೆ ಜಲಾವೃತಗೊಂಡು, ತರಗತಿ ಕೊಠಡಿಗಳಿಗೆ ಈಚೆಗೆ ನೀರು ನುಗ್ಗಿತ್ತು

ಒಂದನೇ ಪುಟದಿಂದ..

ಮುರಿದ ಕಿಟಕಿ–ಬಾಗಿಲುಗಳ ಸಂದಿಯಿಂದ ಸಿಡಿಯುವ ನೀರು ಮಕ್ಕಳನ್ನು ತೋಯಿಸಿದೆ, ವಿದ್ಯಾರ್ಥಿಗಳನ್ನು ಸುರಕ್ಷಿತ ಸ್ಥಳದಲ್ಲಿ ಕೂರಿಸಿ, ಪಾಠ ಮಾಡಲು ಶಿಕ್ಷಕರು ಪರದಾಡುತ್ತಿದ್ದಾರೆ.

ಶಾಲೆ ಪ್ರಾರಂಭೋತ್ಸವದ ದಿನ ವಿದ್ಯಾರ್ಥಿಗಳನ್ನು 'ಕಲಿಕಾ ಸಾಧಕರು' ಎಂದು ಶಿಕ್ಷಕರು ಸಂಭ್ರಮದಿಂದ ಬರಮಾಡಿಕೊಂಡಿದ್ದರು. ಈ ಸಂಭ್ರಮ ಕೆಲವೇ ದಿನಗಳಲ್ಲಿ ಮಳೆ ನೀರಿನಲ್ಲಿ ಕರಗಿ ಹೋಗಿತ್ತು. 'ಸೋರುವ ಕೊಠಡಿಗಳಲ್ಲಿ ಮಕ್ಕಳನ್ನು ಕೂರಿಸಿ ಪಾಠ ಮಾಡಬೇಡಿ' ಎಂದು ಮುಖ್ಯಮಂತ್ರಿ ಮತ್ತು ಶಿಕ್ಷಣ ಸಚಿವರು ಆದೇಶಿಸಿದ್ದಾರೆ. ಆದರೆ, ಇರುವ ಕೊಠಡಿಗಳಲ್ಲೇ ಸುರಕ್ಷಿತವಾಗಿ ಮಕ್ಕಳಿಗೆ ಪಾಠ ಮಾಡುವುದೇ ಶಿಕ್ಷಕರಿಗೆ ದೊಡ್ಡ ಸವಾಲಾಗಿದೆ.

ರಾಜ್ಯದಲ್ಲಿ 46,755 ಸರ್ಕಾರಿ ಶಾಲೆಗಳಿದ್ದು, 17,258 ಶಾಲಾ ಕೊಠಡಿಗಳ ಕೊರತೆ ಇದೆ. ರಾಜ್ಯದ 5 ಜಿಲ್ಲೆಗಳಲ್ಲಿ ತಲಾ ಒಂದು ಸಾವಿರಕ್ಕೂ ಹೆಚ್ಚು ಕೊಠಡಿಗಳು ನಿರ್ಮಾಣವಾಗಬೇಕಿವೆ.

'ನೆಲದ ಮೇಲೆ ಕುಳಿತು ಪಾಠ ಕೇಳುವ ವ್ಯವಸ್ಥೆಯನ್ನು ಮುಂದಿನ ವರ್ಷದೊಳಗೆ ಕೊನೆಗೊಳಿಸಲಾಗುವುದು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭರವಸೆ ಕೊಟ್ಟಿದ್ದಾರೆ. ಅದಕ್ಕೆ ಬೇಕಾಗುವ ಅನುದಾನವನ್ನು ಮುಂದಿನ ವರ್ಷದ ಬಜೆಟ್‌ನಲ್ಲಿ ಕೊಡಿಸಲು ಅವರು ಮುಖ್ಯಮಂತ್ರಿಯ ಮೇಲೆ ಅಗತ್ಯ ಒತ್ತಡ ಹಾಕಬೇಕಾಗಿದೆ. ಮೂಲಸೌಕರ್ಯ ಹಾಗೂ ಶಿಕ್ಷಕರ ಕೊರತೆಯ ಕಾರಣದಿಂದಲೇ ಸರ್ಕಾರಿ ಶಾಲೆಗಳು ಸೊರಗುತ್ತಿವೆ ಎಂಬುದು ಬಹಳ ಸ್ಪಷ್ಟ.

'ಶಾಲಾ ಮೂಲಸೌಕರ್ಯವನ್ನು ಖಾತರಿಪಡಿಸುವುದರ ಜೊತೆಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವ ಕ್ರಮಗಳನ್ನೂ ಸರ್ಕಾರ ಕೈಗೊಳ್ಳಲೇಬೇಕು. ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕುಸಿತವು ಕಳವಳ ಮೂಡಿಸುವ ಮತ್ತೊಂದು ಸಂಗತಿ. ಹಾಗಾಗಲು ಶಿಕ್ಷಕರ ಕೊರತೆ ಮತ್ತು ಗುಣಮಟ್ಟದ ಶಿಕ್ಷಣ ಸಿಗದಿರುವುದು ಪ್ರಮುಖ ಕಾರಣ' ಎನ್ನುತ್ತಾರೆ ಶಿಕ್ಷಣ ತಜ್ಞರು.

ಮುಗಿಯದ ಕಾಮಗಾರಿ, ತಪ್ಪದ ಕಿರಿಕಿರಿ: 'ಶಿಥಿಲಗೊಂಡಿರುವ ಶಾಲಾ ಕೊಠಡಿಗಳ ದುರಸ್ತಿ ಮತ್ತು ಮರು ನಿರ್ಮಾಣ ಕಾರ್ಯ ಆಮೆವೇಗದಲ್ಲಿದೆ. ಕೆಲವೆಡೆ ಅನುದಾನದ ಕೊರತೆ, ಮತ್ತೆ ಕೆಲವೆಡೆ ಅನುದಾನವಿದ್ದರೂ ದುರಸ್ತಿ ಆರಂಭಿಸದ ಅಧಿಕಾರಿಗಳ ನಿಷ್ಕಾಳಜಿ ಮತ್ತು ಕೆಲವೆಡೆ ಟೆಂಡರ್ ಪಡೆದ ಏಜೆನ್ಸಿಗಳ ನಿರ್ಲಕ್ಷ್ಯದಿಂದ ಕಾಮಗಾರಿ ನನೆಗುದಿಗೆ ಬಿದ್ದಿವೆ' ಎನ್ನುತ್ತಾರೆ ಹಾವೇರಿಯ ಎಸ್‌ಎಫ್‌ಐ ಮುಖಂಡ ಬಸವರಾಜ ಭೋವಿ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಹಲಗೂರಿನ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ 400ಕ್ಕೂ ಅಧಿಕ ಮಕ್ಕಳಿದ್ದಾರೆ. 8 ಕೊಠಡಿಗಳಷ್ಟೇ ಬಳಕೆಗೆ ಯೋಗ್ಯವಾಗಿವೆ. ಈ ಸಮಸ್ಯೆಯಿಂದ ಶಿಕ್ಷಕರು ಕೆಲ ಕಾಲ ಸಭಾಂಗಣದಲ್ಲಿ ತರಗತಿ ನಡೆಸುತ್ತಿದ್ದಾರೆ. 2017ರಲ್ಲಿ ಆರಂಭವಾದ ಹೆಚ್ಚುವರಿ ಮೂರು ಕೊಠಡಿಗಳ ಕಟ್ಟಡ ನಿರ್ಮಾಣದ ಕೆಲಸ 8 ವರ್ಷವಾದರೂ ಪೂರ್ಣಗೊಂಡಿಲ್ಲ.

ಚಾಮರಾಜನಗರ ಜಿಲ್ಲೆಯಲ್ಲಿ 906 ಕೊಠಡಿಗಳು ಬಳಕೆಗೆ ಯೋಗ್ಯವಾಗಿಲ್ಲ. 327 ಕೊಠಡಿಗಳು ಸಂಪೂರ್ಣವಾಗಿ ದುರಸ್ತಿಯಾಗಬೇಕಾಗಿದೆ. ಹಾಸನ ಜಿಲ್ಲೆಯಲ್ಲಿ ಸುಮಾರು 366 ಶಾಲಾ ಕೊಠಡಿಗಳ ದುರಸ್ತಿ ಮತ್ತು ನೂತನ ಕೊಠಡಿಗಳ ನಿರ್ಮಾಣಕ್ಕೆ ₹5.24 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಇದುವರೆಗೂ 56 ಕೊಠಡಿಗಳ ದುರಸ್ತಿಯಷ್ಟೇ ನಡೆದಿದೆ.

'ಶಿಕ್ಷಣ ಸಚಿವರ ಜಿಲ್ಲೆ'ಯಾದ ಶಿವಮೊಗ್ಗದಲ್ಲಿರುವ 2001 ಸರ್ಕಾರಿ ಶಾಲೆಗಳ ಪೈಕಿ, 60 ಶಾಲೆಗಳಲ್ಲಿ ಕೊಠಡಿಗಳ ನಿರ್ಮಾಣದ ಕೆಲಸ ಆರಂಭಿಸಲಾಗಿದೆ' ಎಂದು ಡಿಡಿಪಿಐ ಮಂಜುನಾಥ್ ಮಾಹಿತಿ ನೀಡಿದ್ದಾರೆ.

'ಕರಾವಳಿಯ ಹವಾಮಾನಕ್ಕೆ ಕಿಟಕಿ, ಬಾಗಿಲುಗಳು ಬೇಗ ಹಾಳಾಗುತ್ತವೆ. ಅವುಗಳೊಂದಿಗೆ ಚಾವಣಿಯ ದುರಸ್ತಿ ಮತ್ತು ನೆಲಹಾಸು ಸುಸಜ್ಜಿತಗೊಳಿಸಲು ಅನುದಾನದ ಬೇಡಿಕೆ ಸಲ್ಲಿಸಲಾಗಿದೆ. ತರಗತಿ ನಡೆಸಲು ಕೊಠಡಿಯ ಕೊರತೆ ಇಲ್ಲ. ಇದ್ದ ಕೊಠಡಿಗಳಲ್ಲೇ ಹೊಂದಾಣಿಕೆ ಮಾಡಿಕೊಂಡಿದ್ದೇವೆ' ಎಂದು ಬಂಟ್ವಾಳದ ಶಿಕ್ಷಕರೊಬ್ಬರು ಹೇಳಿದರು.

'ಕಲ್ಯಾಣ'ವಾಗದ ಶಾಲೆಗಳು: ಮೂಲಸೌಕರ್ಯ ಮತ್ತು ಕೊಠಡಿಗಳ ಕೊರತೆಯುಳ್ಳ ಸಾವಿರಾರು ಶಾಲೆಗಳು 'ಕಲ್ಯಾಣ ಕರ್ನಾಟಕ'ದಲ್ಲಿವೆ. ಮುಖ್ಯಶಿಕ್ಷಕರು ಪ್ರತಿ ವರ್ಷ ಶಿಥಿಲಗೊಂಡಿರುವ ಕೊಠಡಿಗಳನ್ನು ನೆಲಸಮಗೊಳಿಸಿ ಹೊಸ ಕೊಠಡಿ ನಿರ್ಮಾಣಕ್ಕೆ, ಇಲ್ಲವೇ ದುರಸ್ತಿಗೆ ಕೋರಿ ವರದಿಗಳನ್ನು ಸಲ್ಲಿಸುತ್ತಾರೆ. ಆದರೆ, ಕೆಲವೇ ಶಾಲೆಗಳಿಗೆ 'ದುರಸ್ತಿ ಭಾಗ್ಯ' ಸಿಗುತ್ತಿದೆ.

ಶಿಕ್ಷಣ ಭಾಗಿದಾರರ ಸಮಾವೇಶ–2024ರ ವೇಳೆ ಶಿಕ್ಷಣ ಇಲಾಖೆಯ ಕಲಬುರಗಿ ವಿಭಾಗ ಸಿದ್ಧಪಡಿಸಿದ್ದ ವರದಿ ಪ್ರಕಾರ ಕಲ್ಯಾಣ ಕರ್ನಾಟಕದ 6,538 ತರಗತಿ ಕೊಠಡಿಗಳು (ಶೇ 76ರಷ್ಟು) ಮಳೆಗೆ ಸೋರುತ್ತಿವೆ. 5,310 ಶಾಲೆಗಳಲ್ಲಿ (ಶೇ 59ರಷ್ಟು) ಶೌಚಾಲಯ ವ್ಯವಸ್ಥೆ ಇಲ್ಲ. 1,624 ಶಾಲೆಗಳಲ್ಲಿ (ಶೇ 18) ಕುಡಿಯುವ ನೀರಿನ ಸೌಲಭ್ಯವಿಲ್ಲ. 2,466 ಶಾಲೆಗಳಲ್ಲಿ (ಶೇ 27ರಷ್ಟು) ಅಡುಗೆ ಕೊಠಡಿಗಳಿಲ್ಲ. 3,844 ಶಾಲೆಗಳಲ್ಲಿ (ಶೇ 43ರಷ್ಟು) ಅಡುಗೆಯ ಪಾತ್ರೆಗಳೂ ಇಲ್ಲ.

ಕೊಠಡಿಗಳಿವೆ; ಮಕ್ಕಳೇ ಇಲ್ಲ!: ಕೊಡಗಿನಲ್ಲಿ ಕಟ್ಟಡಗಳ ಕೊರತೆ ಇಲ್ಲ. ಆದರೆ, ಮಡಿಕೇರಿ ತಾಲ್ಲೂಕಿನ ಕೊಯನಾಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೇಲೆ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿದಿದ್ದರಿಂದ ಪಕ್ಕದ ಸಂಪಾಜೆಯ ಸರ್ಕಾರಿ ಶಾಲೆಗೆ ಸ್ಥಳಾಂತರಿಸಲಾಗಿದೆ. ಇನ್ನೂ ಕೊಯನಾಡಿನಲ್ಲಿ ಶಾಲೆಯ ಹೊಸ ಕಟ್ಟಡ ನಿರ್ಮಾಣವಾಗಿಲ್ಲ. ಇದನ್ನು ಬಿಟ್ಟರೆ, ಉಳಿದೆಡೆ ಸ್ವಂತ ಕಟ್ಟಡಗಳಿವೆ.

'ಹಲವೆಡೆ ಸುಸಜ್ಜಿತ ಕಟ್ಟಡಗಳಿದ್ದರೂ ಇತ್ತೀಚಿನ ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಪೋಷಕರ ಇಂಗ್ಲಿಷ್ ಮಾಧ್ಯಮದ ವ್ಯಾಮೋಹವೂ ಇದಕ್ಕೆ ಕಾರಣ. ಶಾಲಾ ದಾಖಲಾತಿ ಹೆಚ್ಚಿಸಲು ಈ ವರ್ಷದಿಂದ ಇಲ್ಲಿ ಕೆಲವೆಡೆ ಆಯ್ದ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸಲಾಗುತ್ತಿದೆ' ಎನ್ನುತ್ತಾರೆ ಶಿಕ್ಷಕರು.

ಪೂರಕ ಮಾಹಿತಿ: ಚಂದ್ರಹಾಸ ಹಿರೇಮಳಲಿ, ಸಂಧ್ಯಾ ಹೆಗಡೆ, ಪ್ರಮೋದ ಕುಲಕರ್ಣಿ, ಹರಿಶಂಕರ್ ಆರ್., ಮಲ್ಲಿಕಾರ್ಜುನ ನಾಲವಾರ, ಇಮಾಮ್‌ಹುಸೇನ್ ಗೂಡುನವರ

ಸರ್ಕಾರಿ ಶಾಲೆಗೆ ದಾನಿಗಳ ದೇಣಿಗೆ

ಸರ್ಕಾರಿ ಶಾಲೆಗಳ ಬಲವರ್ಧನೆಗೆ ಶಿಕ್ಷಕರು, ಹಳೇ ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ದಾನಿಗಳು ಅಪಾರ ಕೊಡುಗೆ ನೀಡುತ್ತಿರುವುದು ವಿಶೇಷ.

ಕೊಪ್ಪಳ ತಾಲ್ಲೂಕಿನ ಕಾಮನೂರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಇಕ್ಕಟ್ಟಾದ ಏಳು ಕೊಠಡಿಗಳಿವೆ. ಹೀಗಾಗಿ, ಶಾಲೆಯ ಶಿಕ್ಷಕರು ತಮ್ಮ ವೇತನದ ಒಂದಷ್ಟು ಹಣವನ್ನು ನೀಡಿ ₹1.48 ಲಕ್ಷ ಸಂಗ್ರಹಿಸಿದರು. ಬಳಿಕ ದಾನಿಗಳು ಹಾಗೂ ಜನಪ್ರತಿನಿಧಿಗಳಿಂದ ಸೇರಿ ಒಟ್ಟು ₹21 ಲಕ್ಷ ಸಂಗ್ರಹಿಸಿ ಒಂದೂವರೆ ಎಕರೆ ಜಾಗವನ್ನು ಶಾಲೆಗೆ ಖರೀದಿಸಿದ್ದಾರೆ.

ಕೊಪ್ಪಳ ಸಮೀಪದ ಕುಣಿಕೇರಿ ಗ್ರಾಮದ ಸರ್ಕಾರಿ ಶಾಲೆಗೆ ಹುಚ್ಚಮ್ಮ ಚೌದ್ರಿ ಅವರು 2002ರಲ್ಲಿ ಒಂದು ಎಕರೆ ಭೂಮಿ ದಾನ ನೀಡಿದ್ದರು. 2 ವರ್ಷಗಳ ಬಳಿಕ ಕ್ರೀಡಾ ಚಟುವಟಿಕೆಗಾಗಿ ಇನ್ನೊಂದು ಎಕರೆ ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ನಯಾಪೈಸೆ ಗೌರವ ಧನ ಪಡೆಯದೆ ಶಾಲೆಯಲ್ಲಿ ಅಡುಗೆ ಸಹಾಯಕಿಯಾಗಿಯೂ ಕೆಲಸ ಮಾಡುತ್ತಿದ್ದಾರೆ. ಅವರ ನಿಸ್ವಾರ್ಥ ಸೇವೆಗೆ 2023ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ.

ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಕೆ.ಸೂಗೂರು ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಯ ಕಟ್ಟಡ ನಿರ್ಮಾಣಕ್ಕೆ ಸಿದ್ಧಲಿಂಗೇಶ್ವರ ಮಠದ ಮಠಾಧಿಪತಿ ಶಿವಯೋಗಿ ಮಲ್ಲಿಕಾರ್ಜುನ ಸ್ವಾಮೀಜಿ ಎರಡು ಎಕರೆ ಜಮೀನನ್ನು ದಾನ ಮಾಡಿದ್ದಾರೆ. ಸಂಡೂರು ತಾಲ್ಲೂಕಿನ ಬನ್ನಿಹಟ್ಟಿ ಗ್ರಾಮದಲ್ಲಿ ದಾಖಲಾತಿ ಹೆಚ್ಚಿಸಲು ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿ ಸದಸ್ಯರು ಸ್ವಂತ ಹಣ ಖರ್ಚು ಮಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ನವೀಕರಿಸಿದ್ದಾರೆ.

ರಾಜ್ಯದಲ್ಲಿರುವ ಶಾಲೆಗಳು

41,905 ಪ್ರಾಥಮಿಕ ಶಾಲೆಗಳು

4,850 ಪ್ರೌಢ ಶಾಲೆಗಳು

ಚಿತ್ರದುರ್ಗ ಜಿಲ್ಲೆಯ ಬಹುತೇಕ ಸರ್ಕಾರಿ ಶಾಲೆಗಳು ಹಂದಿ ಗುಂಡಿಗಳಂತಿವೆ. ಜಿಲ್ಲೆಯ ಮಕ್ಕಳು ಉದ್ಧಾರವಾಗಬೇಕಾದರೆ ಶಾಲಾ ಕೊಠಡಿಗಳು ತುರ್ತಾಗಿ ದುರಸ್ತಿಯಾಗಬೇಕು

ಗೋವಿಂದ ಕಾರಜೋಳ
ಸಂಸದ, (ಕೆಡಿಪಿ ಸಭೆಯಲ್ಲಿ ಹೇಳಿದ್ದು)

ದೇಗುಲ, ಆಸ್ಪತ್ರೆ ಕಟ್ಟಡದಲ್ಲಿ ಕಲಿಕೆ!

ಹುಬ್ಬಳ್ಳಿ–ಧಾರವಾಡ ಅವಳಿ ನಗರದಲ್ಲಿ 15 ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಧಾರವಾಡ ಜಿಲ್ಲೆಯ ನವಲಗುಂದ ಪಟ್ಟಣದ ತೆಗ್ಗಿನಕೇರಿ ಓಣಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕೊಠಡಿಗಳ ಕೊರತೆಯಿಂದ ಉಡಚಮ್ಮ ದೇವಸ್ಥಾನದಲ್ಲಿ ತರಗತಿ ನಡೆಸಲಾಗುತ್ತಿದೆ. 147 ಶಾಲೆಗಳ 495 ಕೊಠಡಿಗಳನ್ನು ದುರಸ್ತಿಗೆ ಗುರುತಿಸಲಾಗಿದೆ. ಜುಲೈ 15ರೊಳಗೆ ಕೊಠಡಿಗಳನ್ನು ದುರಸ್ತಿಗೊಳಿಸಲು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಡುವು ವಿಧಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಮೇದಿನಿ ಗ್ರಾಮ ದಟ್ಟ ಕಾಡಿನ ನಡುವಿನ, ಗುಡ್ಡದ ಪ್ರದೇಶದಲ್ಲಿದೆ. ಈ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕೊಠಡಿ ಕುಸಿದು ಬಿದ್ದು ಒಂದೂವರೆ ವರ್ಷ ಕಳೆದರೂ ಮರು ನಿರ್ಮಾಣವಾಗಿಲ್ಲ. ಪಕ್ಕದ ಆರೋಗ್ಯ ಕೇಂದ್ರದ ಕಟ್ಟಡದಲ್ಲಿ ತರಗತಿ ನಡೆಸಲಾಗುತ್ತಿದೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ನಂದೀಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕೊಠಡಿಯ ಹೆಂಚುಗಳು ಒಡೆದು ಹೋಗಿವೆ

ಸರ್ಕಾರಿ ಶಾಲೆಗಳಿಗೆ ದೊಡ್ಡ ಪ್ರಮಾಣದ ದುರಸ್ತಿ ಅಗತ್ಯವಿರುವ ಕೊಠಡಿಗಳ ವಿವರ

ಜಿಲ್ಲೆ	ಕೊಠಡಿಗಳ ಸಂಖ್ಯೆ
ಬಾಗಲಕೋಟೆ	257
ಬಳ್ಳಾರಿ	480
ಬೆಳಗಾವಿ	1,325
ಬೆಂಗಳೂರು ಗ್ರಾಮಾಂತರ	44
ಬೆಂಗಳೂರು ನಗರ	316
ಬೀದರ್	916
ಚಾಮರಾಜನಗರ	325
ಚಿಕ್ಕಬಳ್ಳಾಪುರ	125
ಚಿಕ್ಕಮಗಳೂರು	361
ಚಿತ್ರದುರ್ಗ	360
ದಕ್ಷಿಣ ಕನ್ನಡ	1323
ದಾವಣಗೆರೆ	359
ಧಾರವಾಡ	252
ಗದಗ	150
ಹಾಸನ	218
ಹಾವೇರಿ	101
ಕಲಬುರ್ಗಿ	1898
ಕೊಡಗು	189
ಕೋಲಾರ	434
ಕೊಪ್ಪಳ	838
ಮಂಡ್ಯ	1371
ಮೈಸೂರು	1716
ರಾಯಚೂರು	1406
ರಾಮನಗರ	183
ಶಿವಮೊಗ್ಗ	426
ತುಮಕೂರು	1963
ಉಡುಪಿ	274
ಉತ್ತರಕನ್ನಡ	510
ವಿಜಯನಗರ	1423
ವಿಜಯಪುರ	1567
ಯಾದಗಿರಿ	145
ಒಟ್ಟು	21,255

ಮಣ್ಣಿನ ಕಟ್ಟಡ; ಸುರಕ್ಷತೆಯೇ ಸವಾಲು

ಶಿರಸಿ ಶೈಕ್ಷಣಿಕ ಜಿಲ್ಲೆಯಲ್ಲಿ 60 ವರ್ಷ ದಾಟಿದ, ಮಣ್ಣಿನ ಗೋಡೆ ಹೊಂದಿರುವ ಹಳೇ ಶಾಲೆಗಳ ಸಂಖ್ಯೆ ಜಾಸ್ತಿ ಇದ್ದು, ಈ ಶಾಲೆಗಳ ಸುರಕ್ಷತೆಯೇ ಈಗ ಸವಾಲಿನ ಕೆಲಸವಾಗಿದೆ. 274 ಶಾಲೆಗಳ 536 ಕೊಠಡಿಗಳು ಮಣ್ಣಿನ ಗೋಡೆಯಿಂದ ಕೂಡಿವೆ. ಈ ಪೈಕಿ ಹಳಿಯಾಳ ತಾಲ್ಲೂಕಿನಲ್ಲಿ ಇಂತಹ ಶಾಲೆ ಮತ್ತು ಕೊಠಡಿಗಳ ಸಂಖ್ಯೆ ಜಾಸ್ತಿ ಇದೆ.

ಶಾಲಾ ಕಟ್ಟಡಗಳನ್ನು ಪ್ರತಿ ವರ್ಷ ಸಮೀಕ್ಷೆ ನಡೆಸುತ್ತಿರುವ ಶಿಕ್ಷಣ ಇಲಾಖೆ, '263 ಮಣ್ಣಿನ ಗೋಡೆಯ ಕೊಠಡಿಗಳು ಭದ್ರವಾಗಿವೆ. ಗಾಳಿ ಮಳೆಯಿಂದ ಈ ಕೊಠಡಿಗಳಿಗೆ ಸಮಸ್ಯೆ ಆಗುವುದಿಲ್ಲ. 273 ಕೊಠಡಿಗಳು ಶಿಥಿಲ ಕೊಠಡಿಗಳಾಗಿದ್ದು, ಇವುಗಳನ್ನು ಕೆಡವಿ ಹೊಸ ಕಟ್ಟಡ ನಿರ್ಮಿಸಬೇಕು' ಎಂದು ವರದಿ ನೀಡಿದೆ.

ಉತ್ತರ ಕನ್ನಡ ಮತ್ತು ಶಿರಸಿ ಶೈಕ್ಷಣಿಕ ಜಿಲ್ಲೆಯಲ್ಲಿ ಕೊಠಡಿಗಳ ಕೊರತೆ ಅಷ್ಟಾಗಿ ಇಲ್ಲ. ಆದರೆ, ವಿಪರೀತ ಮಳೆ–ಗಾಳಿಯ ಕಾರಣದಿಂದ ಶಾಲೆಗಳ ಕಟ್ಟಡಗಳಿಗೆ ಹಾನಿಯಾಗುವ ಪ್ರಮಾಣ ಹೆಚ್ಚಿದೆ. ಪ್ರಸಕ್ತ ಶೈಕ್ಷಣಿಕ ವರ್ಷ ಆರಂಭಕ್ಕೆ ಮುನ್ನ ಎರಡೂ ಜಿಲ್ಲೆಗಳಿಂದ 1,119 ಕೊಠಡಿಗಳ ದುರಸ್ತಿಗೆ ಪ್ರಸ್ತಾವ ಸಲ್ಲಿಸಲಾಗಿದೆ.

ಹದಗೆಟ್ಟ ಶೌಚಾಲಯಗಳು

ಗದಗ ಜಿಲ್ಲೆಯಲ್ಲಿನ ಸರ್ಕಾರಿ ಶಾಲೆಗಳು ಶೌಚಾಲಯ ಸಮಸ್ಯೆಯಿಂದ ಬಳಲುತ್ತಿವೆ. ಇರುವ ಕಡೆಗಳಲ್ಲಿ ನಿರ್ವಹಣೆ ಮತ್ತು ನೀರಿನ ಕೊರತೆಯಿಂದಾಗಿ ಬಳಸಲಾಗದಷ್ಟು ಹದಗೆಟ್ಟಿವೆ. ಈ ಸಮಸ್ಯೆಯನ್ನು ನಿವಾರಿಸಲು ಶಾಲಾ ಶಿಕ್ಷಣ ಇಲಾಖೆ 'ವಿಶೇಷ ಅಭಿಯಾನ' ನಡೆಸಿ ಸ್ಥಳೀಯ ಸಂಪನ್ಮೂಲ ಬಳಸಿ ದುರಸ್ತಿ ಕಾರ್ಯಕ್ಕೆ ಮುಂದಾಗಿದೆ.

'ಸರ್ಕಾರಿ ಶಾಲೆ ಸಶಕ್ತಗೊಳಿಸಲು ಯೋಜನೆ ರೂಪಿಸಿ'



'ಸರ್ಕಾರಿ ಶಾಲೆಗಳನ್ನು ಹೆಚ್ಚಾಗಿ ನೆಚ್ಚಿಕೊಂಡಿರುವುದು ದುರ್ಬಲ ಸಮುದಾಯಗಳ ಮಕ್ಕಳು. ಆ ಸಮುದಾಯಗಳ ಸಬಲೀಕರಣದ ಕೀಲಿಕೈ ಸರ್ಕಾರಿ ಶಾಲೆಗಳ ಶಿಕ್ಷಕರ ಕೈಯಲ್ಲಿದೆ. ಈ ಶಾಲೆಗಳನ್ನು ಎಲ್ಲ ರೀತಿಯಲ್ಲೂ ಸಶಕ್ತಗೊಳಿಸಲು ಬೇಕಾದ ಸಮಗ್ರ ಯೋಜನೆ ರೂಪಿಸಿ, ಅದನ್ನು ಕಾಲಮಿತಿಯೊಳಗೆ ಕಾರ್ಯರೂಪಕ್ಕೆ ತರುವ ಬದ್ಧತೆಯನ್ನು ಸರ್ಕಾರ ಈಗಲಾದರೂ ಪ್ರದರ್ಶಿಸಬೇಕು'

ಟಿ.ಎಲ್.ಕೃಷ್ಣೇಗೌಡ, ಮಂಡ್ಯ ಜಿಲ್ಲಾ ಕಾರ್ಯದರ್ಶಿ, ಸಿಪಿಎಂ

'ಶಾಲೆ ದುರಸ್ತಿಗೆ ಅನುದಾನದ ಕೊರತೆಯಿಲ್ಲ'

ವಿದ್ಯಾವಿಕಾಸ, ಮುಖ್ಯಮಂತ್ರಿಗಳ ವಿಶೇಷ ಅನುದಾನ ಹಾಗೂ ಸರ್ವ ಶಿಕ್ಷಣ ಅಭಿಯಾನ ಈ ಮೂರು ಯೋಜನೆಗಳಡಿ ಸಾಕಷ್ಟು ಅನುದಾನವನ್ನು ಶಾಲೆಗಳ ದುರಸ್ತಿಗಾಗಿ ಬಿಡುಗಡೆ ಮಾಡಲಾಗುತ್ತಿದೆ. ತುರ್ತು ದುರಸ್ತಿಗೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಅನುದಾನವನ್ನು ಬಳಕೆ ಮಾಡಿಕೊಳ್ಳಲು ನಿರ್ದೇಶನ ನೀಡಲಾಗಿದೆ.

ತ್ರಿಲೋಕ್‌ಚಂದ್ರ ಕೆ.ವಿ., ಆಯುಕ್ತ, ಶಾಲಾ ಶಿಕ್ಷಣ ಇಲಾಖೆ

ಧಾರವಾಡ ಜಿಲ್ಲೆ ನವಲಗುಂದ ಪಟ್ಟಣದ ತೆಗ್ಗಿನಕೇರಿ ಓಣಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ–9ರಲ್ಲಿ ಕೊಠಡಿಗಳ ಕೊರತೆಯಿಂದ ಗ್ರಾಮದೇವತೆ ಉಡಚಮ್ಮ ದೇವಸ್ಥಾನದಲ್ಲಿ ತರಗತಿ ನಡೆಸುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರ

ಶಾಲಾ ಕಟ್ಟಡ ಶಿಥಿಲವಾಗಿದ್ದು ದುರಸ್ತಿ ಮಾಡುವಂತೆ ಮೇಲಧಿಕಾರಿಗಳಿಗೆ ಪ್ರತಿ ವರ್ಷ ಮನವಿ ಸಲ್ಲಿಸಿದ್ದರೂ ಸ್ಪಂದನೆ ಸಿಕ್ಕಿಲ್ಲ. ಸೋರುವ ಕೋಣೆಗಳಲ್ಲಿ ಮಕ್ಕಳನ್ನು ಕೂಡಿಸಿ ಪಾಠ ಮಾಡುತ್ತಿದ್ದೇವೆ
ಹಣಮಂತ ರೇವಣ್ಣೂರ್, ಮುಖ್ಯಶಿಕ್ಷಕ (ಪ್ರಭಾರ), ಕಲಬುರಗಿ ನಗರದ ಎಂ.ಎಸ್.ಕೆ ಮಿಲ್ ಸರ್ಕಾರಿ ಶಾಲೆ–2.

ಕೊಠಡಿ ಕುಸಿದು ಅನಾಹುತ ಸಂಭವಿಸಿದಲ್ಲಿ ನಾನೇ ಹೊಣೆಗಾರನಾಗಬೇಕಾಗುವುದರಿಂದ ಶಾಲೆಯ ಪಕ್ಕ ಗೌರಸಂದ್ರ ಮಾರಮ್ಮ ದೇವಸ್ಥಾನವಿದ್ದು, ಅಲ್ಲಿಗೆ ಮಕ್ಕಳನ್ನು ಕೂರಿಸಿ ಪಾಠ ಮಾಡಲು ನಿರ್ಧರಿಸಿದ್ದೇನೆ
ರಾಮಚಂದ್ರಪ್ಪ, ಮುಖ್ಯಶಿಕ್ಷಕ, ಸಿದ್ದನೂರು ಲಂಬಾಣಿ ಹಟ್ಟಿಯ ಸರ್ಕಾರಿ ಶಾಲೆ

ಕಟ್ಟಡ ಶಿಥಿಲಗೊಂಡಿರುವುದರಿಂದ ಪಾಲಕರು ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಲು ಹಿಂದೇಟು ಹಾಕುತ್ತಾರೆ. ವಿದ್ಯಾರ್ಥಿಗಳನ್ನು ಸೆಳೆಯಲು ಖಾಸಗಿ ಶಾಲೆಯವರ ಕ್ರಮಗಳನ್ನು ಅನುಸರಿಸಬೇಕು
ಎಂ. ಲಿಂಗರಾಜು, ಮುಖಂಡ, ಸರ್ಕಾರಿ ಕನ್ನಡ ಶಾಲೆ ಉಳಿಸಿ ಹೋರಾಟ ಸಮಿತಿ, ದಾವಣಗೆರೆ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 29-6-2000

● **ಅಂಬೇಡ್ಕರ್ ಪ್ರತಿಮೆಗೆ ಅವಮಾನ: ಸಿಒಡಿ ತನಿಖೆ**

ಬೆಂಗಳೂರು, ಜೂನ್ 28 – ಬೀದರ್ ಜಿಲ್ಲೆಯ ಹುಮ್ನಾಬಾದ್‌ನಲ್ಲಿ ಡಾ.ಅಂಬೇಡ್ಕರ್ ಪ್ರತಿಮೆಯ ಕನ್ನಡಕ ಕಿತ್ತು ಹಾಕಿ ವಿರೂಪಗೊಳಿಸಿರುವ ಘಟನೆಯ ಬಗ್ಗೆ ಸಿಒಡಿಯಿಂದ ತನಿಖೆ ನಡೆಸಲಾಗುವುದು ಎಂದು ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ಅವರು ತಿಳಿಸಿದರು.

ಅಂಬೇಡ್ಕರ್ ಪ್ರತಿಮೆ ವಿರೂಪಗೊಳಿಸಿರುವುದರ ವಿರುದ್ಧ ಪ್ರತಿಭಟನೆ ನಡೆಸಿದ ಯುವಕರ ಮೇಲೆ ಲಾಠಿ ಪ್ರಹಾರ ಮಾಡಿದ ಘಟನೆಯೂ ಸಿಒಡಿ ತನಿಖೆಗೆ ಒಳಪಡುತ್ತದೆ ಎಂದು ತಿಳಿಸಿದರು.

75 ವರ್ಷಗಳ ಹಿಂದೆ

ಗುರುವಾರ, 29-6-1950

● **ಸಿಯೋಲ್ ನಗರಕ್ಕೆ ಕಮ್ಯುನಿಸ್ಟ್ ಪಡೆಗಳ ಪ್ರವೇಶ**

ಟೋಕಿಯೊ, ಜೂನ್ 26 – ನಾಲ್ಕು ದಕ್ಷಿಣ ಕೊರಿಯಾ ಸೇನಾ ಡಿವಿಜನ್‌ಗಳನ್ನು ನಾಶ ಮಾಡಿ, ನಗರದ ಮುಖ್ಯ ರಕ್ಷಣೆಗಳನ್ನು ಮುರಿದು ಉತ್ತರ ಕೊರಿಯಾದ ಪ್ರಬಲ ಸೇನಾ ದಳಗಳು, ದಕ್ಷಿಣ ಕೊರಿಯಾ ರಾಜಧಾನಿಯಾದ ಸಿಯೋಲ್ ನಗರವನ್ನು ಇಂದು ಪ್ರವೇಶಿಸಿದವು.

ರಕ್ಷಕರ ಮೇಲೆ 24 ಗಂಟೆಗಳ ಅವಿರತ ಒತ್ತಡ ಹಾಕಿ ಉತ್ತರದವರ ಸೇನೆ ಮುನ್ನುಗ್ಗಿತು. ಡಗ್ಲಾಸ್ ಮೆಕ್‌ಆರ್ಥರ ಆಜ್ಞೆ ಪ್ರಕಾರ ಕದನದಲ್ಲಿ ಮಧ್ಯಪ್ರವೇಶಿಸಿದ ಅಮೆರಿಕ ವಿಮಾನಗಳೂ ಈ ದಾಳಿಯನ್ನು ನಿಲ್ಲಿಸುವುದರಲ್ಲಿ ಯಶಸ್ವಿಯಾಗಲಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಚತುರ್ಥಿ ಗಂ. 9-15 ನಕ್ಷತ್ರ: ಆಶ್ಲೇಷ ಗಂ. 6-34 ಯೋಗ: ವಜ್ರ ಗಂ.17-59 ಕರಣ: ವಿಷ್ಟಿ ಗಂ. 9-15, ಮಿಥುನ ಮಾಸದ 15 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 2 ನೇ ಪಾದ. **ರಾಹುಕಾಲ :** ಸಾಯಂಕಾಲ 04-30 – 06-00
ಸೂರ್ಯೋದಯ : 06-10 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 03 ಮೊಹರಮ್, **ಅದೃಷ್ಟ ಸಂಖ್ಯೆ :** 5, 11

ಮೇಷ: ಹೊಸ ಯೋಜನೆಗಳಿಗೆ ಚಾಲನೆ ನೀಡುವ ವಿಚಾರವನ್ನು ಸ್ವಲ್ಪ ದಿನ ಮುಂದಕ್ಕೆ ತಳ್ಳುವುದು ಸೂಕ್ತ. ಅನಿವಾರ್ಯದ ಪ್ರಯಾಣಗಳು ಹೆಚ್ಚಾಗಲಿದೆ. ಮನೆಯಲ್ಲಿ ಸಂತೋಷದ ವಾತಾವರಣ ನಿಮ್ಮಿಂದ ಸೃಷ್ಟಿಯಾಗಲಿದೆ.

ವೃಷಭ: ಸಂಸಾರದ ವಿಷಯಗಳತ್ತ ಗಮನ ಹರಿಸುವಿರಿ. ಯೋಜನೆಯೊಂದಕ್ಕೆ ನಿಮ್ಮ ಸೃಜನಾತ್ಮಕತೆಯನ್ನು ಉಪಯೋಗಿಸಿಕೊಳ್ಳುವರು, ಫಲವಾಗಿ ಸಮಾಜದಲ್ಲಿ ಗಮನಾರ್ಹ ವ್ಯಕ್ತಿಯಾಗುವಿರಿ. ಸಹವರ್ತಿಗಳು ಬೆಂಬಲ ನೀಡುವರು.

ಮಿಥುನ: ವೃತ್ತಿ ಅಥವಾ ಕೆಲಸಗಳಲ್ಲಿ ಬದಲಾವಣೆ ಸನ್ನಿಹಿತವಾಗಲಿದೆ. ಸಮಾನ ಮನಸ್ಕರ ಜೊತೆಗಿನ ವ್ಯವಹಾರದಲ್ಲಿ ಮಾನಸಿಕ ಭಿನ್ನಾಭಿಪ್ರಾಯಗಳು ಉದ್ಭವವಾಗಲಿದೆ. ಸ್ನೇಹಿತರೊಂದಿಗೆ ಕ್ಲಿಷ್ಟಕರ ಕ್ಷಣಗಳನ್ನು ಕಳೆಯುವಂತಾಗಲಿದೆ.

ಕರ್ಕಾಟಕ: ಹೆಚ್ಚಿನ ಕ್ರಿಯಾತ್ಮಕ ಶಕ್ತಿ ಇದೆ ಆದರೆ ಕೆಲಸಗಳು ಕಾರ್ಯಗತವಾಗಲು ಆತುರ ತೋರಬೇಡಿ. ಏಕಮುಖ ಪ್ರತಿಭೆಯನ್ನು ನಾಶಮಾಡಿ ಇತರ ವಿಷಯಗಳಿಗೂ ಪ್ರಾಮುಖ್ಯತೆ ನೀಡಿ. ದಲ್ಲಾಳಿಗಳಿಗೆ ತೃಪ್ತಿಕರ ದಿನವಾಗುವುದು.

ಸಿಂಹ: ಕೆಲಸದಲ್ಲಿ ಒತ್ತಡ ಹೆಚ್ಚಿರುವುದರಿಂದ ಅತಿಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ. ಆಕಸ್ಮಿಕ ಧನಲಾಭ ಉಂಟಾಗಲಿದೆ. ಹೊಸ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುವುದು. ಪ್ರಾಮಾಣಿಕತೆಗೆ ಅಡ್ಡಿ ಉಂಟಾಗುವುದು.

ಕನ್ಯಾ: ಸಮಸ್ಯೆ ಪರಿಸಿಕೊಳ್ಳಲು ಸೂಕ್ತ ಸಲಹೆ ಪಡೆಯುವುದು ಉತ್ತಮ. ಅನಾವಶ್ಯಕ ಖರ್ಚುಗಳಿಗೆ ಕಡಿವಾಣ ಹಾಕಿ. ಮನೆಯಲ್ಲಿನ ಭಿನ್ನಾಭಿಪ್ರಾಯ ದೂರಾವಾಗುವುದು. ಕಬ್ಬಿಣ ವ್ಯಾಪಾರಸ್ಥರಿಗೆ ಆಶಾದಾಯಕ ದಿನ.

ತುಲಾ: ಯೋಜನೆಗಳು ಕಾರ್ಯಗತಗೊಳ್ಳುವುದರ ಬಗ್ಗೆ ಶನೈಶ್ಚರನ ಆರಾಧನೆ ಮಾಡುವುದು ಉತ್ತಮ. ಕೆಲಸಗಳಿಗಾಗಿ ಓಡಾಟ ನಡೆಸುವಿರಿ. ಹೆಚ್ಚಿನ ಔದಾರ್ಯ ಬುದ್ಧಿಯನ್ನು ತೋರಿದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶಗಳಿವೆ.

ವೃಶ್ಚಿಕ: ವಾಣಿಜ್ಯ ವ್ಯವಹಾರಗಳ ಸಂಬಂಧಪಟ್ಟ ವ್ಯಕ್ತಿಗಳನ್ನು ಭೇಟಿ ಮಾಡುವ ನಿಮ್ಮ ಕೆಲಸದಲ್ಲಿ ವಿಘ್ನ ಇರಲಿದೆ. ಹೊಸ ಒಪ್ಪಂದಗಳನ್ನು ಮಾಡಿಕೊಳ್ಳುವ ವಿಚಾರದಲ್ಲಿ ಎಚ್ಚರಿಕೆ ವಹಿಸಿ. ವಿದ್ಯಾರ್ಥಿಗಳಿಗೆ ಪ್ರತಿಸ್ಪರ್ಧಿಗಳು ಹುಟ್ಟುವರು.

ಧನು: ನಿಮ್ಮ ಪ್ರಿಯಕರನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತವಾದ ಸಮಯ. ಕಟ್ಟಡದ ಕೆಲಸಗಳು ಪೂರ್ತಿಗೊಂಡು ಮನಸ್ಸಿಗೆ ಸಮಾಧಾನ. ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಪ್ರಯಾಣ ಬೆಳೆಸುವ ಸಾಧ್ಯತೆ ಇದೆ.

ಮಕರ: ನೆಮ್ಮದಿಯ ವಿಷಯವೇನೆಂದರೆ ಧನಾಗಮದಲ್ಲಿ ಚಿಂತೆ ಇರದು. ದೀರ್ಘಕಾಲಿಕ ಕೆಲಸಗಳು ನಿಧಾನವಾಗಿ ಸಾಗಲಿವೆ. ಇಂದು ಹಳೇ ಬಾಕಿ ಸಂದಾಯವಾಗುವುದು. ಸಂಜೆಯ ಸಮಯದಲ್ಲಿ ಶಿರೋವೇದನೆ ಕಾಡಲಿದೆ.

ಕುಂಭ: ಹಣಕಾಸು ಪರಿಸ್ಥಿತಿಗಳು ಉತ್ತಮಗೊಳ್ಳುವುದು. ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ವಿಶೇಷ ತಯಾರಿ ನಡೆಸಿಕೊಳ್ಳಿ. ಕೆಲಸದಲ್ಲಿ ಬದಲಾವಣೆ ಬಯಸಿದ್ದಲ್ಲಿ ಬೇರೆ ಸ್ಥಳದಲ್ಲಿ ಕಾರ್ಯ ನಿರ್ವಹಿಸಲು ಸಿದ್ಧರಾಗಿ.

ಮೀನ: ಸಮಾರಂಭದಲ್ಲಿ ಭಾಗವಹಿಸುವುದರಿಂದ ಮಗನ ಮದುವೆಯ ವಿಚಾರದಲ್ಲಿ ಅನುಕೂಲವಾಗುವುದು. ಕಾರ್ಖಾನೆ ಕೆಲಸಗಾರರ ಬೇಡಿಕೆಗಳು ಇತ್ಯರ್ಥವಾಗಲಿದೆ. ವಾಹನ ಮಾರಾಟಗಾರರಿಗೆ ಉತ್ತಮ ಆದಾಯ ಲಭ್ಯ.

ಪದಬಂಧ 6088

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶ್ವಾಸವಿದ್ದರಷ್ಟೇ ಈ ಭರವಸೆ! (3)
3.ಇದು ಮಣ್ಣಿಗೆ ಸಂಬಂಧಿಸಿದ್ದು (3)
6.ಮಧ್ಯಸ್ಥಿಕೆ ಮಾಡುವವನು (3)
7.ಒಬ್ಬ ರಾಜನಿಗೆ ಅಧೀನನಾಗಿರುವ ರಾಜ (3)
8.ಹರನನ್ನು ಒಲಿಸಿಕೊಂಡಿರುವ ಶೂರ (3)
10.ಮಾತುಲನಾಡಿದ ನುಡಿ! (2)
11.ಕನ್ನಡಿಗನು ಹಿಡಿದಿರುವ ಲೆನ್ಸು! (3)
12.ಬೀಜ ಬಿತ್ತಲು ಮಾಡಿರುವ ಮಡಿ (2)
14.ಎಳೆತವಲ್ಲ,ಪ್ರವಾಹದ ರಭಸ! (3)
16.ಹತ್ತು ನೂರಿದು (3)
17.ನವಿಲಿನ ಕುಣಿತ (3)
18.ಗುಡಿಸಲ ಹತ್ತಿರವಿರುವ ಗಂಡಾನೆ (3)
19.ನೆಲವನ್ನು ಅಗೆಯುವ ಸಾಧನ (3)

ಮೇಲಿಂದ ಕೆಳಕ್ಕೆ

1.ದೇಹವಿಲ್ಲದವನು ಇಲ್ಲಿದ್ದಾನೆ (3)
2.ಕೊನೆಗೆ ಬೆಲೆಯಿಟ್ಟು ನೀಡಿದ ಸಲಿಗೆ! (3)
3.ಸರದಿಯನ್ನು ಹೀಗೆನ್ನಿ (2)
4.ವಲಸೆ ಹೊರಟವರು ನೆಲೆ ನಿಂತ ಪ್ರದೇಶ (4)
5.ಆತಂಕ ಹುಟ್ಟಿಸಿದ ಕೊಲೆಗಾರ (3)
9.ಮತಿ ಇಟ್ಟುಕೊಂಡು ಮಾಡಿದ ಹೋಲಿಕೆ (3)
10.ಕೆಡುಕನ್ನು ಉಂಟುಮಾಡುವುದು (3)
12.ಕನ್ನಡಿಗನ ಕಾಲ ಬುಡದಲ್ಲಿರುವ ಮಕ್ಕ್ಯುರಿ! (4)
13.ಮಾಂಸ ಮಾರಿ ಜೀವಿಸುವವನು (3)
14.ಸೀರೆಯ ಹೊದೆಯುವ ಭಾಗ (3)
15.ನೂಲನ್ನು ತೆಗೆಯುವ ಉಪಕರಣ (3)
17.ಜಾಗರೂಕತೆಯಿಂದ ವೀಕ್ಷಿಸಿದ ಸ್ಥಳ (2)



6087ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಾಟಿಮದ್ದು 3.ತಲೆಹೋಕ
5.ಕರಟ 7.ಪಡಪೋಶಿ
9.ಮೂಗ 10.ಡಿಕ್ರಿ
11.ತಲೋದರಿ 13.ವಾಡಿಕೆ
16.ತರಾತುರಿ 17.ಹೊಸಬಾಳು

ಮೇಲಿಂದ ಕೆಳಕ್ಕೆ:
1.ನಾಸಿಕ 2.ಮರ್ಕಟ
3.ತಡಬಡ 4.ಕಕ್ಕಿ 6.ರಕ್ತಗತ
7.ಪರಾರಿ 8.ಸಿಡಿಮಿಡಿ
12.ದಸ್ತಗಿರಿ 13.ವಾಯಸ
14.ಕೆರಳು 15.ಹಠ

ಸುಡೊಕು 6472

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		9			7	1		4
	6							
5		7	4		6	2		3
					5		3	1
	5	1		8			2	
3			9					8
		2		1		8		5
9			7		8		1	2
	8			2		4		6

6471 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಿಟಿಕೆ ಸುದ್ದಿ

ತೆಂಗು ಬೆಳೆಗೆ ಬಾಧೆ ಕ್ರಮಕ್ಕೆ ಸಿ.ಎಂ ಸೂಚನೆ

ದಿನೇಶ್ ಗೂಳಿಗೌಡ

ಬೆಂಗಳೂರು: 'ತೆಂಗು ಬೆಳೆಗಾರರಿಗೆ ಕಾಡುತ್ತಿರುವ ಕಪ್ಪು ತಲೆಹುಳುವಿನ ಬಾಧೆ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ತಜ್ಞರಿಂದ ತಕ್ಷಣ ವರದಿ ಪಡೆದು ಪ್ರಸ್ತಾವ ಮಂಡಿಸಬೇಕು' ಎಂದು ತೋಟಗಾರಿಕಾ ಇಲಾಖೆಯ ನಿರ್ದೇಶಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

'ತೆಂಗು ಬೆಳೆಗೆ ಕಪ್ಪು ತಲೆ ಹುಳುವಿನ ಬಾಧೆ ವ್ಯಾಪಕವಾಗಿದ್ದು, ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಕೂಡಲೇ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು.

ಮನವಿಯಲ್ಲಿ ಏನಿತ್ತು?: 'ಇತ್ತೀಚಿನ ವರ್ಷಗಳಲ್ಲಿ ತೆಂಗು ಬೆಳೆಗೆ ಕಪ್ಪು ತಲೆ ಕಂಬಳಿ ಹುಳು ಬಾಧೆ ಹೆಚ್ಚಾಗಿದೆ. ಹುಳದ ಹತೋಟಿ ಕೈಗೊಳ್ಳದಿದ್ದರೆ ಶೇ 80ರವರೆಗೆ ಉತ್ಪಾದನೆ ಕುಂಠಿತವಾಗಲಿದೆ. ಸಮರೋಪಾದಿಯಲ್ಲಿ ಕ್ರಮ ಕೈಗೊಂಡರಷ್ಟೇ ನಿರ್ವಹಣೆ ಜೊತೆಗೆ ಹರಡುವುದನ್ನು ನಿಯಂತ್ರಿಸಲು ಸಾಧ್ಯ. ಹೀಗಾಗಿ, ಇದರ ನಿಯಂತ್ರಣಕ್ಕೆ ತುರ್ತು ಕ್ರಮ ತೆಗೆದುಕೊಳ್ಳಬೇಕು' ಎಂದು ಕೋರಿದ್ದರು.

ನಾಮನಿರ್ದೇಶನ: ಸೂಕ್ತ ಪ್ರಾತಿನಿಧ್ಯಕ್ಕೆ ಒತ್ತಾಯ

ಬೆಂಗಳೂರು: ನಿಗಮ, ಮಂಡಳಿ, ವಿಧಾನಪರಿಷತ್ ಸೇರಿದಂತೆ ಸರ್ಕಾರದ ನಾಮನಿರ್ದೇಶನಗಳಲ್ಲಿ ಸೂಕ್ತ ಪ್ರಾತಿನಿಧ್ಯ ಕಲ್ಪಿಸಬೇಕು ಎಂದು ಮುಸ್ಲಿಂ ಸಮುದಾಯದ ಪ್ರತಿನಿಧಿಗಳು ಒತ್ತಾಯಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ನೇತೃತ್ವದಲ್ಲಿ ಮುಸ್ಲಿಂ ಜನಪ್ರತಿನಿಧಿಗಳ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಭೇಟಿ ಮಾಡಿ, ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡಲು ಕೋರಿತು.

ಸಿ.ಎಂ ಭೇಟಿಯಾದ ಮಾಧುಸ್ವಾಮಿ

ಬೆಂಗಳೂರು: ಮಾಜಿ ಸಚಿವ ಹಾಗೂ ಬಿಜೆಪಿ ನಾಯಕ ಜೆ.ಸಿ. ಮಾಧುಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಭೇಟಿಯಾಗಿ ಚರ್ಚೆ ನಡೆಸಿದರು.

ಮುಖ್ಯಮಂತ್ರಿಯವರ ಅಧಿಕೃತ ನಿವಾಸ 'ಕಾವೇರಿ'ಗೆ ತಮ್ಮ ಆಪ್ತರ ಜತೆ ಭೇಟಿ ನೀಡಿದ ಮಾಧುಸ್ವಾಮಿ ಕೆಲಹೊತ್ತು ಸಮಾಲೋಚನೆ ನಡೆಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಮಾಧುಸ್ವಾಮಿ, 'ಭೇಟಿಯಲ್ಲಿ ಯಾವ ರಾಜಕೀಯ ಉದ್ದೇಶವಿರಲಿಲ್ಲ. ಸಮುದಾಯದ ವಿದ್ಯಾರ್ಥಿ ನಿಲಯಕ್ಕೆ ಬೆಂಗಳೂರಿನಲ್ಲಿ ನೀಡಲಾಗಿದ್ದ ನಿವೇಶನಕ್ಕೆ ಸಂಬಂಧಿಸಿ ಚರ್ಚಿಸುವುದಕ್ಕಷ್ಟೇ ಭೇಟಿಯಾಗಿದ್ದೆ' ಎಂದು ಹೇಳಿದರು.

ವಿಧಾನಸಭೆ ಚುನಾವಣೆಯ ಸೋಲು ಹಾಗೂ ಲೋಕಸಭೆ ಚುನಾವಣೆಯ ವೇಳೆ ನಡೆದ ವಿದ್ಯಮಾನಗಳ ಬಳಿಕ ಮಾಧುಸ್ವಾಮಿ ಅವರು ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದ್ದರು. ಸಿದ್ದರಾಮಯ್ಯ ಅವರನ್ನು ಭೇಟಿಯಾಗಿರುವುದು ಈ ಕಾರಣದಿಂದಾಗಿ ರಾಜಕೀಯ ಆಯಾಮ ಪಡೆದುಕೊಂಡಿದೆ.

1.10 ಲಕ್ಷ ಕ್ಯೂಸೆಕ್ ಹೊರಹರಿವು

ಕೃಷ್ಣಾ ಕಣಿವೆಯಲ್ಲಿ ಸುರಿಯುತ್ತಿರುವ ಮಳೆ ಆಲಮಟ್ಟಿ ಜಲಾಶಯಕ್ಕೆ ಒಳಹರಿವು ಹೆಚ್ಚಳ

ಪ್ರಜಾವಾಣಿ ವಾರ್ತೆ

ಆಲಮಟ್ಟಿ (ವಿಜಯಪುರ ಜಿಲ್ಲೆ): ಆಲಮಟ್ಟಿ ಜಲಾಶಯದ ಒಳಹರಿವು ಶನಿವಾರ ಇನ್ನಷ್ಟು ಹೆಚ್ಚಿದ್ದು, ಹೊರ ಹರಿವನ್ನು 90 ಸಾವಿರ ಕ್ಯೂಸೆಕ್‌ನಿಂದ 1.10ಲಕ್ಷ ಕ್ಯೂಸೆಕ್‌ಗೆ ಹೆಚ್ಚಿಸಲಾಗಿದೆ.

ಸಂಜೆ ಜಲಾಶಯದ ಒಳಹರಿವು 1,15,944 ಕ್ಯೂಸೆಕ್‌ಗ ಹೆಚ್ಚಳವಾಗಿದೆ. ಮಹಾರಾಷ್ಟ್ರದ ಕೃಷ್ಣಾ ಕಣಿವೆಯಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಜಲಾಶಯದ ಒಳಹರಿವು ದಿನೇ ದಿನೇ ಏರಿಕೆಯಾಗುತ್ತಿದೆ.

ಕಳೆದ ಮೂರು ದಿನಗಳಿಂದ ಹೊರಹರಿವು 70 ಸಾವಿರ ಕ್ಯೂಸೆಕ್ ಇತ್ತು. ಶುಕ್ರವಾರ ರಾತ್ರಿ ಅದನ್ನು ಹೆಚ್ಚಿಸಲಾಯಿತು.

ಜಲಾಶಯದ ಎಲ್ಲಾ 26 ಗೇಟ್‌ಗಳಿಂದ ನೀರನ್ನು ಹೊರ ಬಿಡಲಾಗುತ್ತಿದೆ. ಶನಿವಾರ, 67,500 ಕ್ಯೂಸೆಕ್ ಹಾಗೂ ಜಲಾಶಯದ ಬಲಭಾಗದ ವಿದ್ಯುತ್ ಉತ್ಪಾದನಾ ಕೇಂದ್ರದ ಮೂಲಕ 42,500 ಕ್ಯೂಸೆಕ್ ಸೇರಿ 1,10,000 ಕ್ಯೂಸೆಕ್ ನೀರನ್ನು ನದಿಪಾತ್ರಕ್ಕೆ ಹರಿಸಲಾಗುತ್ತಿದೆ.

ಜಲಾಶಯದಲ್ಲಿ 517.10 ಮೀಟರ್ ಎತ್ತರದವರೆಗೆ 85.697 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಜಲಾಶಯದ ಸಂಗ್ರಹ ಸಾಮರ್ಥ್ಯದ ಶೇ 69.63ರಷ್ಟು ಭರ್ತಿಯಾಗಿದೆ.

ಜಲಾಶಯಕ್ಕೆ ಶನಿವಾರ ಒಂದೇ ದಿನ 9.877 ಟಿಎಂಸಿ ಅಡಿಯಷ್ಟು ನೀರು ಹರಿದು ಬಂದಿದೆ ಎಂದು ಜಲಾಶಯದ ಮೂಲಗಳು ತಿಳಿಸಿವೆ.

ಆಲಮಟ್ಟಿ ಜಲಾಶಯದ ಎಲ್ಲಾ 26 ಗೇಟ್‌ಗಳ ಮೂಲಕ ಹಾಗೂ ವಿದ್ಯುತ್ ಉತ್ಪಾದನಾ ಘಟಕ ಸೇರಿ ಒಟ್ಟು 1,10,000 ಕ್ಯೂಸೆಕ್ ನೀರನ್ನು ಶನಿವಾರ ನದಿಗೆ ಹರಿಸಲಾಯಿತು —ಪ್ರಜಾವಾಣಿ ಚಿತ್ರ: ಚಂದ್ರಶೇಖರ ಕೋಳೇಕರ


ಮಡಿಕೇರಿ– ಸಂಪಾಜೆ ಮುಖ್ಯರಸ್ತೆಯ ಜೋಡುಪಾಲದಲ್ಲಿನ ಅಬ್ಬಿಕೊಲ್ಲಿ ಜಲಪಾತ ಭೋರ್ಗರೆಯುತ್ತಿದ್ದ ದೃಶ್ಯ ಶನಿವಾರ ಕಂಡು ಬಂತು —ಪ್ರಜಾವಾಣಿ ಚಿತ್ರ: ಸಿ.ಎಸ್.ಸುರೇಶ್

ತುಂಗಭದ್ರಾ: ಯಾವುದೇ ಕ್ಷಣದಲ್ಲಿ ನೀರು ಹೊರಕ್ಕೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯಕ್ಕೆ 60 ಸಾವಿರ ಕ್ಯೂಸೆಕ್‌ಗೂ ಅಧಿಕ ಒಳಹರಿವು ಇರುವ ಕಾರಣ ಹಾಗೂ ಜಲಾಶಯದಲ್ಲಿ ಈಗಾಗಲೇ 61.88 ಟಿಎಂಸಿ ಅಡಿಯಷ್ಟು ನೀರು ಸಂಗ್ರಹವಾಗಿರುವುದರಿಂದ ಅಣೆಕಟ್ಟೆಯ ಸುರಕ್ಷತೆಯ ದೃಷ್ಟಿಯಿಂದ ಯಾವುದೇ ಕ್ಷಣದಲ್ಲಿ ನೀರನ್ನು ನದಿಗೆ ಹರಿಸುವ ನಿರೀಕ್ಷೆ ಇದೆ.

'ಅಣೆಕಟ್ಟೆಯ ಕ್ರಸ್ಟ್‌ಗೇಟ್‌ಗಳನ್ನು ತೆರೆದು 25 ಸಾವಿರ ಕ್ಯೂಸೆಕ್‌ವರೆಗೆ ನೀರು ಹೊರಬಿಡುವ ಸಾಧ್ಯತೆ ಇದೆ. ಹೀಗಾಗಿ ಅಣೆಕಟ್ಟೆಯ ಕೆಳಭಾಗದಲ್ಲಿ ಇರುವ ನದಿ ದಂಡೆಯ ಜನರು ಎಚ್ಚರದಿಂದ ಇರಬೇಕು' ಎಂದು ತುಂಗಭದ್ರಾ ಮಂಡಳಿ ಶನಿವಾರ ಹೊರಡಿಸಿದ ತುರ್ತು ಪ್ರಕಟಣೆಯಲ್ಲಿ ತಿಳಿಸಿದೆ.

1,633 ಅಡಿ ಎತ್ತರದ ಅಣೆಕಟ್ಟೆಯಲ್ಲಿ ಸದ್ಯ 1,620.20 ಅಡಿ ಮಟ್ಟದಲ್ಲಿ ನೀರು ಇದೆ. 105.78 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಜಲಾಶಯಕ್ಕೆ ಪ್ರತಿದಿನ 4 ಟಿಎಂಸಿ ಅಡಿಗೂ ಅಧಿಕ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ. ಅಣೆಕಟ್ಟೆಯ ಕ್ರಸ್ಟ್‌ಗೇಟ್‌ಗಳು ದುರ್ಬಲವಾಗಿರುವ ಕಾರಣ ಈ ಮಳೆಗಾಲದಲ್ಲಿ ಗರಿಷ್ಠ 80 ಟಿಎಂಸಿ ಅಡಿಯಷ್ಟು ಮಾತ್ರ ನೀರು ಸಂಗ್ರಹಿಸಲು ನಿರ್ಧರಿಸಲಾಗಿದ್ದು, ಹೀಗಾಗಿ ಒಳಹರಿವು ಅಧಿಕ ಇರುವ ಕಾರಣ ಕ್ರಸ್ಟ್‌ಗೇಟ್‌ಗಳನ್ನು ತೆರೆದು ಈಗಿನಿಂದಲೇ ನೀರನ್ನು ನದಿಗೆ ಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತುಂಗಭದ್ರಾ ಮಂಡಳಿಯ ಮೂಲಗಳು ತಿಳಿಸಿವೆ.

ಕಳೆದ ವರ್ಷ ಜುಲೈ ಮೂರನೇ ವಾರ ಅಣೆಕಟ್ಟು ಬಹುತೇಕ ಭರ್ತಿಯ ಹಂತಕ್ಕೆ ಬಂದ ಕಾರಣ ಕ್ರಸ್ಟ್‌ಗೇಟ್‌ಗಳನ್ನು ತೆರೆದು ನೀರನ್ನು ನದಿಗೆ ಹರಿಸಲಾಗಿತ್ತು.

ಕೊಡಗಿನಲ್ಲಿ ತಗ್ಗಿದ ಮಳೆ, ಜಲಪಾತಗಳಿಗೆ ಸೊಬಗು

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮಳೆ ಅಬ್ಬರ ಕಡಿಮೆಯಾಗಿದೆ.
ಮಡಿಕೇರಿ ಮತ್ತು ನಾಪೋಕ್ಲು ಭಾಗದಲ್ಲಿ ಶನಿವಾರ ಸಾಮಾನ್ಯ ಮಳೆ ಸುರಿಯಿತು.
ಭಾಗಮಂಡಲ, ಶಾಂತಳ್ಳಿಯಲ್ಲಿ ತಲಾ 5 ಸೆಂ.ಮೀ. ಹಾಗೂ ಮಡಿಕೇರಿಯಲ್ಲಿ 3 ಸೆಂ.ಮೀ. ಮಳೆಯಾಗಿದೆ.
ಮೈಸೂರು ವರದಿ: ನಗರವೂ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಶನಿವಾರ ಆಗಾಗ ಜೋರು ಮಳೆಯಾಯಿತು.

ನಡುಗಡ್ಡೆಯಲ್ಲಿ ಸಿಲುಕಿದ ಜನ

ಲಿಂಗಸುಗೂರು (ರಾಯಚೂರು ಜಿಲ್ಲೆ): ಬಸವಸಾಗರ ಜಲಾಶಯದಿಂದ ಶನಿವಾರ ಕೃಷ್ಣಾ ನದಿಗೆ 1.06 ಲಕ್ಷ ಕ್ಯೂಸೆಕ್ ನೀರು ಹರಿಸಲಾಗಿದ್ದು, ಲಿಂಗಸುಗೂರು ತಾಲ್ಲೂಕಿನ ಕೃಷ್ಣಾ ತೀರದ ಗ್ರಾಮಗಳಿಗೆ ಹಾಗೂ ನಡುಗಡ್ಡೆಗಳಿಗೆ ಪ್ರವಾಹ ಭೀತಿ ಎದುರಾಗಿದೆ.

ಕರಕಲಗಡ್ಡಿಯಲ್ಲಿ ಚಿಕ್ಕ ಮಕ್ಕಳು ಸೇರಿ ಒಟ್ಟು ಏಳು ಮಂದಿ, ಮಾದರ ಗಡ್ಡಿಯಲ್ಲಿ ಇಬ್ಬರು ಹಾಗೂ ಹೊಂಕಮ್ಮನಗಡ್ಡಿಯಲ್ಲಿ 3 ಮಂದಿ, ಜಾನುವಾರು ನಡುಗಡ್ಡೆಯಲ್ಲಿ ಉಳಿಯುವಂತಾಗಿದೆ.

'15 ದಿನಗಳ ಹಿಂದೆ ತಂದಿದ್ದ ಸಾಮಗ್ರಿಗಳು ಖಾಲಿಯಾಗುವ ಹಂತಕ್ಕೆ ಬಂದಿವೆ. ಮುಂದೆ ಏನು ಮಾಡಬೇಕೆಂದು ದಿಕ್ಕು ತೋಚದಂತಾಗಿದೆ' ಎಂದು ಕರಕಲಗಡ್ಡಿ ನಿವಾಸಿ ದ್ಯಾಮಣ್ಣ ಅಮ್ಮಾಪುರ ಹೇಳಿದರು.

'ಕರಕಲಗಡ್ಡಿಯಲ್ಲಿ ಉಳಿದಿರುವ ಜನರನ್ನು ಸುರಕ್ಷಿತ ಸ್ಥಳಕ್ಕೆ ಕರೆತರಲಾಗುವುದು' ಎಂದು ಉಪ ವಿಭಾಗಾಧಿಕಾರಿ ಬಸವಣಪ್ಪ ಕಲಶೆಟ್ಟಿ ಪ್ರತಿಕ್ರಿಯಿಸಿದರು.

ಮೆಟ್ಟೂರು ಜಲಾಶಯ ಶೀಘ್ರವೇ ಗರಿಷ್ಠ ಮಟ್ಟಕ್ಕೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಕರ್ನಾಟಕದ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವ ಕಾರಣ ತಮಿಳುನಾಡಿನ ಮೆಟ್ಟೂರಿನಲ್ಲಿರುವ ಸ್ಟ್ಯಾನ್ಲಿ ಜಲಾಶಯದ ಒಳಹರಿವಿನ ಪ್ರಮಾಣ 81,000 ಕ್ಯೂಸೆಕ್‌ಗೆ ಏರಿಕೆಯಾಗಿದೆ. ಇದರ ಪರಿಣಾಮ ಜಲಾಶಯವು ಇನ್ನೆರಡು ದಿನಗಳಲ್ಲಿಯೇ ತನ್ನ ಗರಿಷ್ಠ ಮಟ್ಟವಾದ 120 ಅಡಿ ತಲುಪುವ ಸಾಧ್ಯತೆಯಿದೆ.

ಒಳಹರಿವು ಹೆಚ್ಚಿರುವ ಕಾರಣಕ್ಕೆ ತಮಿಳುನಾಡಿನ ಲೋಕೋಪಯೋಗಿ ಇಲಾಖೆಯು ಈರೋಡ್, ನಾಮಕ್ಕಲ್, ಕರೂರ್, ಅರಿಯಲೂರ್, ತಿರುಚ್ಚಿ, ತಂಜಾವೂರು, ತಿರುವರೂರ್, ಮೈಲಾಡತುರೈ, ನಾಗಪಟ್ಟಣಂ ಮತ್ತು ಕಡಲೂರು ಭಾಗದ ಜನರಿಗೆ ಪ್ರವಾಹದ ಎಚ್ಚರಿಕೆ ನೀಡಿದೆ.

ಮೆಟ್ಟೂರು ಜಲಾಶಯದ ನೀರಿನ ಮಟ್ಟ ಶನಿವಾರ 117.930 ಅಡಿಗೆ ಏರಿಕೆಯಾಗಿದೆ. ಒಳಹರಿವು 80,984 ಕ್ಯೂಸೆಕ್‌ಗಳಷ್ಟಿದ್ದು, ಶೀಘ್ರದಲ್ಲೇ 120 ಅಡಿ ತಲುಪುವ ಸಾಧ್ಯತೆಯಿದೆ. ಸದ್ಯ 26,000 ಕ್ಯೂಸೆಕ್ ನೀರನ್ನು ಹೊರ ಬಿಡಲಾಗುತ್ತಿದ್ದು, ಅದನ್ನು ಕ್ರಮೇಣ 50,000 ಕ್ಯೂಸೆಕ್, ನಂತರ 75,000 ಕ್ಯೂಸೆಕ್ ಏರಿಸಲಾಗುತ್ತದೆ ಎಂದು ಇಲಾಖೆ ತಿಳಿಸಿದೆ.

ಆದ್ದರಿಂದ ನದಿಯ ದಡದಲ್ಲಿ, ತಗ್ಗು ಪ್ರದೇಶಗಳಲ್ಲಿ ವಾಸಿಸುತ್ತಿರುವವರು ಸುರಕ್ಷಿತ ಸ್ಥಳಗಳಿಗೆ ತೆರಳಬೇಕು ಮತ್ತು ಜೀವ, ಆಸ್ತಿ ಪಾಸ್ತಿ ರಕ್ಷಣೆಗೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಅದು ಸಲಹೆ ನೀಡಿದೆ.

ಸುಮಾರು 91 ವರ್ಷಗಳಷ್ಟು ಹಳೆಯದಾದ ಸ್ಟ್ಯಾನ್ಲಿ ಜಲಾಶಯವು ಈ ವರ್ಷ ಸದ್ಯದಲ್ಲೇ ಮೊದಲ ಬಾರಿಗೆ ಗರಿಷ್ಠ ಮಟ್ಟ ತಲುಪಲಿದೆ. ವಾಡಿಕೆಯಂತೆ ಜೂನ್ 12ರಿಂದ ಕುರುವೈ ಬೆಳೆಗಾಗಿ ಜಲಾಶಯದಿಂದ ನೀರು ಹರಿಸಲಾಗುತ್ತಿದೆ. ಕಳೆದ ವರ್ಷ ನೀರಿನ ಅಭಾವವಿದ್ದ ಕಾರಣ ಜೂನ್ 12ರ ಬದಲಿಗೆ ಜುಲೈ 28ರಂದು ನೀರನ್ನು ಹರಿಸಲಾಗಿತ್ತು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124	39,689	25,548
ಹಾರಂಗಿ	2,859	2,850.09	4,592	6,500
ಕಬಿನಿ	2,284.00	2,279.44	30,853	30,000
ಹೇಮಾವತಿ	2,922	2,916.01	26,008	24,950
ಲಿಂಗನಮಕ್ಕಿ	1,819	1,784.05	24,752	7,198
ಸೂಪಾ (ಮೀ)	564	536.16	21,138	3,732
ಮಾಣಿ	595	582.95	3,118	0
ತುಂಗಭದ್ರಾ	1,633	1,620.20	60,023	200
ಮಲಪ್ರಭಾ	2,079.5	2,060.15	7,583	194
ಘಟಪ್ರಭಾ	2175	2,141.85	18,570	449
ಭದ್ರಾ *	186	161.4	21,139	1,290
ಆಲಮಟ್ಟಿ (ಮೀ)	519.6	517.06	1,14,327	1,10,000
ನಾರಾಯಣಪುರ (ಮೀ)	492.25	490.74	1,10,000	94,000

* ನೆಲಮಟ್ಟದಿಂದ

'ಬಿಜೆಪಿಯಲ್ಲಿ ಸಮಸ್ಯೆ ಇರುವುದು ನಿಜ'

ಪ್ರಜಾವಾಣಿ ವಾರ್ತೆ

ಅರವಿಂದ ಲಿಂಬಾವಳಿ

ಕೋಲಾರ: 'ಬಿಜೆಪಿಯಲ್ಲಿ ಸಮಸ್ಯೆಗಳು ಇರುವುದು ನಿಜ' ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಒಪ್ಪಿಕೊಂಡಿದ್ದಾರೆ.

ಒಂದು ಕುಟುಂಬವೆಂದ ಮೇಲೆ ಸಮಸ್ಯೆಗಳು ಇದ್ದೇ ಇರುತ್ತವೆ. ಬಿಜೆಪಿ ರಾಷ್ಟ್ರೀಯ ಪಕ್ಷ. ರಾಜ್ಯದಲ್ಲಿ ಎರಡು ಬಾರಿ ಆಡಳಿತ ನಡೆಸಿದೆ. ಇಂಥ ದೊಡ್ಡ ಪಕ್ಷದಲ್ಲಿ ಸಹಜವಾಗಿ ಸಮಸ್ಯೆ ಇದ್ದೇ ಇರುತ್ತೇವೆ. ಆ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶದಿಂದಲೇ ಸಭೆಗಳು ನಡೆಯುತ್ತಿವೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮಗೆ ಹೈಕಮಾಂಡ್ ಎಂಬುದು ಇದೆ. ಜೊತೆಗೆ ಸಲಹೆ, ಸೂಚನೆ ಕೊಡಲು ಆರ್‌ಎಸ್‌ಎಸ್‌ನ ಹಲವು ಹಿರಿಯರು ಇದ್ದಾರೆ. ಅವರ ಮಟ್ಟದಲ್ಲಿ ಚರ್ಚೆ ನಡೆಯಲಿದೆ' ಎಂದರು.

'ಸಭೆಯಲ್ಲಿ ಈಗಾಗಲೇ ಹಲವಾರು ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ. ಆದರೆ, ಆಂತರಿಕ ವಿಚಾರಗಳನ್ನು ಮಾಧ್ಯಮದ ಮುಂದೆ ಚರ್ಚಿಸುವುದಿಲ್ಲ' ಎಂದು ಹೇಳಿದರು.

'ಅರವಿಂದ ಲಿಂಬಾವಳಿ ಹಾಗೂ ವಿಜಯೇಂದ್ರ ನಡುವೆ ಸಂಧಾನ ಸಭೆ ನಡೆದಿದೆ ಎಂಬುವುದು ಮಾಧ್ಯಮದ ಸೃಷ್ಟಿ' ಎಂದರು.

'ಅಭಿಪ್ರಾಯ, ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ'

ಚಿಕ್ಕಬಳ್ಳಾಪುರ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ನೇಮಕದ ವಿಚಾರದಲ್ಲಿ ಅಭಿಪ್ರಾಯ, ಭಿನ್ನಾಭಿಪ್ರಾಯಗಳಿಗೆ ಮಾನ್ಯತೆ ಇಲ್ಲ. ಅಂತಿಮವಾಗಿ ಹೈಕಮಾಂಡ್ ಏನು ಆಯ್ಕೆ ಮಾಡುತ್ತದೆಯೊ ಅದನ್ನು ಪಾಲಿಸುವುದು ಸಂಪ್ರದಾಯ ಎಂದು ಸಂಸದ ಡಾ.ಕೆ.ಸುಧಾಕರ್ ಹೇಳಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೇರೆ ಬೇರೆ ರಾಜ್ಯಗಳಲ್ಲಿಯೂ ಪಕ್ಷದ ಅಧ್ಯಕ್ಷರ ನೇಮಕ ಆಗುತ್ತಿದೆ. ಹೈಕಮಾಂಡ್ ನಿರ್ಧಾರವನ್ನು ಎಲ್ಲರೂ ಪಾಲಿಸುವರು' ಎಂದರು.

ದಸರಾ ಮುನ್ನವೇ ಮುಖ್ಯಮಂತ್ರಿ ಬದಲಾವಣೆ: ಆರ್. ಅಶೋಕ

ಆರ್. ಅಶೋಕ

ಮೈಸೂರು: 'ಈ ಬಾರಿಯ ದಸರಾ ಮಹೋತ್ಸವವನ್ನು ಹೊಸ ಮುಖ್ಯಮಂತ್ರಿ ಉದ್ಘಾಟಿಸುತ್ತಾರೆ. ಸಿದ್ದರಾಮಯ್ಯ ಬದಲಾವಣೆ ನಿಶ್ಚಿತ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಅಧಿಕಾರ ಹಸ್ತಾಂತರ ಮೊದಲೇ ನಿಶ್ಚಯವಾಗಿದೆ. ಕಾಂಗ್ರೆಸ್‌ನ ಸಚಿವರು–ಶಾಸಕರೂ ಅದನ್ನೇ ಹೇಳುತ್ತಿದ್ದಾರೆ. ಆದರೆ, ಏನೂ ಆಗಿಲ್ಲ ಎಂಬಂತೆ ಸಿದ್ದರಾಮಯ್ಯ ಮಾತನಾಡುತ್ತಿದ್ದಾರೆ' ಎಂದರು.

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ, ವಿರೋಧ ಪಕ್ಷದ ನಾಯಕರ ಬದಲಾವಣೆ ಸದ್ಯಕ್ಕಿಲ್ಲ. ಆ ಚರ್ಚೆಯೂ ನಡೆದಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ನಡೆದ ಬಳಿಕ ಕೊನೆಯಲ್ಲಿ ಕರ್ನಾಟಕದ ಅಧ್ಯಕ್ಷರ ಚುನಾವಣೆ ಆಗುತ್ತದೆ. ಮೊನ್ನೆ ಬೆಂಗಳೂರಿನಲ್ಲಿ ಪಕ್ಷದ ಸೂಚನೆಯಂತೆಯೇ ಡಾ.ಸಿ.ಎನ್. ಅಶ್ವತ್ಥನಾರಾಯಣ ಮನೆಯಲ್ಲಿ ಪಕ್ಷದ ಮುಖಂಡರ ಸಭೆ ನಡೆದಿದೆ' ಎಂದು ಪ್ರತಿಕ್ರಿಯಿಸಿದರು.

'ನಾನು ವಿರೋಧಪಕ್ಷದ ನಾಯಕನಾಗಿ ಮೂರು ತಿಂಗಳಿಗೊಮ್ಮೆ ದೆಹಲಿಗೆ ತೆರಳಿ ಪಕ್ಷದ ಹೈಕಮಾಂಡ್‌ಗೆ ವರದಿ ಕೊಟ್ಟು ಬಂದಿದ್ದೇನೆ. ಮುಂದಿನ ಮೂರು ತಿಂಗಳ ನಂತರವೂ ಹೋಗುತ್ತೇನೆ. ಹೈಕಮಾಂಡ್ ಸೂಚನೆಯೂ ಅದೇ ರೀತಿ ಇದೆ. ಹೀಗಿರುವಾಗ, ಬದಲಾವಣೆ ಎಲ್ಲಿ ಬಂತು' ಎಂದು ಪ್ರಶ್ನಿಸಿದರು.

'ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇದೆ' ಎಂಬ ಕಾಂಗ್ರೆಸ್ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿ, 'ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದ ಬಗ್ಗೆ ಕಾಂಗ್ರೆಸ್ ಮೊದಲು ತನ್ನ ನಿಲುವೇನೆಂದು ಸ್ಪಷ್ಟಪಡಿಸಲಿ. ಹೇರಿದ್ದು ಸರಿ ಎನ್ನುವುದೇ ಅವರ ಮನಸ್ಥಿತಿ ಆಗಿದ್ದರೆ ಅದನ್ನು ಬಹಿರಂಗವಾಗಿ ಹೇಳಲಿ' ಎಂದು ಸವಾಲು ಹಾಕಿದರು.

'ಬದಲಾವಣೆಗೆ ಸೂಚನೆ ಇಲ್ಲ'

ಒಂದನೇ ಪುಟದಿಂದ...

'ಮುಖ್ಯಮಂತ್ರಿ ಹುದ್ದೆಗೆ ಅರ್ಹತೆ ಇರುವವರು ಕಾಂಗ್ರೆಸ್‌ನಲ್ಲಿ ಅನೇಕರಿದ್ದಾರೆ. ಯಾವ ಶಾಸಕರೂ ಸರ್ಕಾರದ ವಿರುದ್ಧ ಇಲ್ಲ. ಮುಖ್ಯಮಂತ್ರಿ ಬದಲಾವಣೆ ಬಗ್ಗೆಯೂ ಹೈಕಮಾಂಡ್‌ನಿಂದ ಯಾವುದೇ ಸೂಚನೆ ಬಂದಿಲ್ಲ' ಎಂದರು.

'ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುತ್ತಾರೆ' ಎಂದು ಚನ್ನಗಿರಿಯ ಕಾಂಗ್ರೆಸ್ ಶಾಸಕ ಬಸವರಾಜ್ ಶಿವಗಂಗಾ ಹೇಳಿಕೆಗೆ ಪ್ರತಿಕ್ರಿಯಿಸಿದ ಯತೀಂದ್ರ, 'ಅಂತಹ ಸಣ್ಣ ಪುಟ್ಟ ಧ್ವನಿಗಳು ಇದ್ದೇ ಇರುತ್ತವೆ. ಹಾಗೆಂದು, ಯಾರೂ ಸರ್ಕಾರದ ವಿರುದ್ಧ, ಪಕ್ಷದ ವಿರುದ್ಧ ಹೋಗುವುದಿಲ್ಲ. ಹೈಕಮಾಂಡ್ ಆ ರೀತಿ ಯಾವುದೇ ತೀರ್ಮಾನ ಮಾಡಿಲ್ಲ' ಎಂದರು.

ಸದ್ಯ ಸ್ಥಾನ ಅಭಾದಿತ: 'ಕ್ರಾಂತಿ ಬಗ್ಗೆ ಸಚಿವ ರಾಜಣ್ಣ ಅವರನ್ನೆ ಕೇಳಬೇಕು. ಅವರು ಯಾವ ಅರ್ಥದಲ್ಲಿ ಮಾತನಾಡಿದ್ದಾರೆಂದು ಗೊತ್ತಿಲ್ಲ. ಸದ್ಯಕ್ಕೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದು ಅವರ ಸ್ಥಾನ ಅಭಾದಿತ. ಬದಲಿಸುವ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡಲಿದೆ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

'ನನಗೇನು ತಾಕೀತು ಮಾಡಲು ಸಾಧ್ಯ?'

ಒಂದನೇ ಪುಟದಿಂದ...

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಡಿ.ಕೆ.ಶಿವಕುಮಾರ್ ಅವರನ್ನು ಪ್ರಧಾನಿ, ಇಲ್ಲವೆ ಮುಖ್ಯಮಂತ್ರಿಯನ್ನೇ ಮಾಡಲಿ. ನನ್ನದೇನೂ ಅಭ್ಯಂತರವಿಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತದೆ. ಸತೀಶ ಜಾರಕಿಹೊಳಿ ಅಧ್ಯಕ್ಷರಾಗಬಹುದು ಅಂದುಕೊಂಡಿದ್ದೇನೆ' ಎಂದರು.

'ನಾನು ಹೇಳಿದ ತಕ್ಷಣ ಕಾಂಗ್ರೆಸ್‌ನಲ್ಲಿ ಮಾತ್ರ ಕ್ರಾಂತಿ ನಡೆಯುತ್ತದೆ ಅಂದುಕೊಳ್ಳಬಾರದು. ಬಿಜೆಪಿಯಲ್ಲೂ ಕ್ರಾಂತಿ ಆಗಬಹುದು. ಪ್ರಧಾನಿ ನರೇಂದ್ರ ಮೋದಿ ಅವರೇ ಬದಲಾಗಬಹುದು' ಎಂದೂ ಅವರು ಹೇಳಿದರು.

ಕುತೂಹಲ ಮೂಡಿಸಿದ ಪರಮೇಶ್ವರ ನಡೆ

ಒಂದನೇ ಪುಟದಿಂದ...

ಶುಕ್ರವಾರ ತಡರಾತ್ರಿ ಸದಾಶಿವನಗರದ ಡಿ.ಕೆ. ಶಿವಕುಮಾರ್ ಅವರ ನಿವಾಸಕ್ಕೆ ತೆರಳಿ ಮಾತುಕತೆ ನಡೆಸಿದ್ದರು. ಮುಖ್ಯಮಂತ್ರಿಯವರ ದೆಹಲಿ ಭೇಟಿ ಮತ್ತು 'ಸೆಪ್ಟೆಂಬರ್‌ನಲ್ಲಿ ರಾಜ್ಯ ಕಾಂಗ್ರೆಸ್‌ನಲ್ಲಿ ಕ್ರಾಂತಿ ಆಗಲಿದೆ' ಎಂಬ ಸಚಿವ ರಾಜಣ್ಣ ಅವರ ಹೇಳಿಕೆಯ ಬೆನ್ನಲ್ಲೆ ಉಭಯ ನಾಯಕರನ್ನು ಪರಮೇಶ್ವರ ಭೇಟಿ ಮಾಡಿರುವುದು ಅಚ್ಚರಿಗೆ ಕಾರಣವಾಗಿದೆ.

'ಗೃಹಸಚಿವರು ಮಧ್ಯರಾತ್ರಿ ಬಂದು ಭೇಟಿ ಮಾಡಿದ್ದು, ಅಧಿಕಾರ ಹಂಚಿಕೆ ಬಗ್ಗೆ ಚರ್ಚೆ ನಡೆಯಿತೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಡಿ.ಕೆ. ಶಿವಕುಮಾರ್, 'ಅವರು ಭೇಟಿ ಮಾಡಿದ್ದು ನಿಜ. ಆದರೆ, ಬೇರೆ ವಿಚಾರ ಚರ್ಚೆ ಮಾಡಿದೆವು. ಇಲ್ಲಿ ಅಧಿಕಾರ ಹಂಚಿಕೆ ವಿಚಾರ ಚರ್ಚೆ ಆಗಿಲ್ಲ. ನಾವೆಲ್ಲರೂ ಸೇರಿ ಒಟ್ಟಾಗಿ ಶಿಸ್ತಿನಿಂದ ಕೆಲಸ ಮಾಡಬೇಕು' ಎಂದರು.

ಹುಲಿಗಳ ಜೀವಕ್ಕೆ 'ಸಗಣಿ' ಮಾಫಿಯಾ ಕುತ್ತು

ಒಂದನೇ ಪುಟದಿಂದ...

'ಜಾನುವಾರುಗಳ ಮೇಲೆ ದಾಳಿ ಮಾಡುವ ಕಾಡು ಪ್ರಾಣಿಗಳ ಮೇಲೆ ಸೇಡು ತೀರಿಸಿಕೊಳ್ಳಲು ಕಳೇಬರಕ್ಕೆ ವಿಷ ಹಾಕಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಗುರುತಿಸುವುದು ಕಷ್ಟ: 'ಸ್ಥಳೀಯರೇ ಹಸುಗಳನ್ನು ಮೇಯಿಸುವುದರಿಂದ ಜಾನುವಾರುಗಳ ನಿಜವಾದ 'ಮಾಲೀಕರು' ಯಾರೆಂದು ಗುರುತಿಸುವುದು ಸವಾಲು. ಅರಣ್ಯ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಹಿಂದೆ ಸಮೀಕ್ಷೆ ಮಾಡಿದಾಗ 6,500ಕ್ಕೂ ಹೆಚ್ಚು ಜಾನುವಾರುಗಳಿದ್ದವು. 5 ಸಾವಿರಕ್ಕೂ ಹೆಚ್ಚು ಹಸುಗಳ ಮಾಲೀಕರು ತಮಿಳುನಾಡಿನವರು ಎಂದು ಖಚಿತವಾದರೂ, ಕ್ರಮ ಕೈಗೊಳ್ಳಲು ಸ್ಥಳೀಯರು, ಜನಪ್ರತಿನಿಧಿಗಳು ವಿರೋಧಿಸಿದರು' ಎಂದು ಅಧಿಕಾರಿಯೊಬ್ಬರು ಅಸಹಾಯಕತೆ ವ್ಯಕ್ತಪಡಿಸಿದರು.

ಸಮಸ್ಯೆ ಏನು: 'ತಮಿಳುನಾಡಿನ ಸತ್ಯಮಂಗಲ ಹಾಗೂ ಬರಗೂರು ಮೀಸಲು ಅರಣ್ಯದಲ್ಲಿ ಜಾನುವಾರು ಮೇಯಿಸಲು ಅವಕಾಶ ಇಲ್ಲದಿರುವುದರಿಂದ ಹಂದಿಯೂರು, ಬರಗೂರು ಸೇರಿದಂತೆ ಹಲವು ಗ್ರಾಮಗಳಿಂದ ಜಾನುವಾರುಗಳನ್ನು ಪಾಲಾರ್ ನದಿಯ ಮೂಲಕ ಅಕ್ರಮವಾಗಿ ರಾಜ್ಯದ ಗಡಿಯೊಳಗೆ ನುಗ್ಗಿಸಲಾಗುತ್ತಿದೆ. ಗೋಪಿನಾಥಮ್ ಹಾಗೂ ಪಾಲಾರ್ ಕೂಡುವ ಪ್ರದೇಶದಲ್ಲಿ ಚೆಕ್‌ಪೋಸ್ಟ್ ಇಲ್ಲವಾಗಿದ್ದು, ಸುಲಭವಾಗಿ ಹಸುಗಳು ಹನೂರು ಪ್ರವೇಶಿಸುತ್ತವೆ' ಎನ್ನುತ್ತಾರೆ ಅಧಿಕಾರಿಗಳು.

ಕಾಡಂಚಿನ ಗ್ರಾಮಸ್ಥರಿಗೆ ಜಾನುವಾರು ಸಾಕಾಣಿಕೆ ಹೊಣೆಗಾರಿಕೆ ವಹಿಸುವ ತಮಿಳುನಾಡಿನವರು, ಮಾಸಿಕ ಹಣ ನೀಡಿ, ಲೋಡ್‌ಗಟ್ಟಲೆ ಸಗಣಿ ಗೊಬ್ಬರವನ್ನು ಮಾರಿ ಲಾಭ ಗಳಿಸುತ್ತಾರೆ. ಸ್ಥಳೀಯರಿಗೆ ಹಣದ ಜೊತೆಗೆ ಹಾಲಷ್ಟೇ ಸಿಗುತ್ತದೆ.

'ಕಾಡಂಚಿನ ಪ್ರದೇಶಗಳಲ್ಲಿ ಸ್ಥಳೀಯರ ಜಾನುವಾರು ಮೇಯಿಸಲು ಅಡ್ಡಿಪಡಿಸುವುದಿಲ್ಲ. ಆದರೆ, ತಮಿಳುನಾಡಿನ ಜಾನುವಾರುಗಳು ಬಂದರೆ ಪ್ರಾಣಿಗಳ ಆವಾಸ ಸ್ಥಾನಕ್ಕೆ ತೊಂದರೆಯಾಗುತ್ತದೆ. ಮಾನವ–ವನ್ಯಪ್ರಾಣಿ ಸಂಘರ್ಷವೂ ಹೆಚ್ಚಾಗುತ್ತದೆ' ಎನ್ನುತ್ತಾರೆ ಅಧಿಕಾರಿಗಳು.

ತಮಿಳುನಾಡು–ಕರ್ನಾಟಕ ರಾಜ್ಯಗಳ ಗಡಿಯಲ್ಲಿರುವ ಪಾಲಾರ್ ನದಿ ದಾಟಿ ಹನೂರು ಕಡೆಗೆ ಬರುತ್ತಿರುವ ದನಗಳು

'ನಿಯಂತ್ರಣಕ್ಕೆ ಅಡ್ಡಿ'

'ತಮಿಳುನಾಡಿನ ಜಾನುವಾರುಗಳನ್ನು ಇಲ್ಲಿಗೆ ತಂದು ಮೇಯಿಸಿ ಸಗಣಿ ಸಂಗ್ರಹಿಸಿ ಮಾರುವುದು 10–15 ವರ್ಷಗಳಿಂದ ನಡೆಯುತ್ತಿದೆ. ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸಿದರೂ ನಿಯಂತ್ರಣಕ್ಕೆ ಬಂದಿಲ್ಲ. ಅಧಿಕಾರಿಗಳು ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಕೆಲವರು ಜನಪ್ರತಿನಿಧಿಗಳಿಗೆ ದೂರು ನೀಡಿ ಒತ್ತಡ ಹಾಕಿಸಿದ್ದಾರೆ. ಕ್ರಮ ಜರುಗಿಸಿದ ಅಧಿಕಾರಿಗಳ ವಿರುದ್ಧ ಸದನದೊಳಗೆ ಜನಪ್ರತಿನಿಧಿಗಳು ಹಕ್ಕುಚ್ಯುತಿ ಮಂಡಿಸಿದ ಉದಾಹರಣೆಗಳೂ ಇವೆ' ಎಂದು ಸಿಸಿಎಫ್ ಟಿ.ಹೀರಾಲಾಲ್ ಹೇಳಿದರು.

'ಹುಲಿಗಳ ಸಾವು ಗಂಭೀರ ವಿಷಯ'

ಬೆಂಗಳೂರು: ಚಾಮರಾಜನಗರ ಜಿಲ್ಲೆಯಲ್ಲಿ ನಡೆದ ಐದು ಹುಲಿಗಳ ಸಾವಿನ ಪ್ರಕರಣದ ಮಧ್ಯಂತರ ವರದಿ ಲಭ್ಯವಾಗಿದ್ದು, ಗಡಿ ರಾಜ್ಯಗಳ ಜತೆ ಚರ್ಚೆ ನಡೆಸಿದ ನಂತರ ವನ್ಯಜೀವಿಗಳ ಸಂರಕ್ಷಣೆಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವ ಭೂಪೇಂದರ್ ಯಾದವ್ ಹೇಳಿದರು.

ತಲಾ ₹2.90 ಲಕ್ಷ ವೆಚ್ಚದಲ್ಲಿ 10 ಮನೆಗಳ ನಿರ್ಮಾಣ

ಕರುಳ ಕೂಗಿಗೆ ಅಮೆರಿಕದಿಂದ ಸ್ಪಂದನ

• ಎಂ.ಜಿ.ಬಾಲಕೃಷ್ಣ

ಪ್ರಜಾವಾಣಿ ವಿಶೇಷ

ಮುಖ್ಯಾಂಶಗಳು
- ಪ್ರತಿ ಮನೆಗೆ ₹2.90 ಲಕ್ಷ ವೆಚ್ಚ
- ಪಟ್ಟಾ ಮಹಿಳೆಯ ಹೆಸರಲ್ಲೇ ಇರಬೇಕು

ಹೊಸಪೇಟೆ (ವಿಜಯನಗರ): ಬಾಗಲಕೋಟೆ ಜಿಲ್ಲೆ ಜಮಖಂಡಿ ಮೂಲದ ಹಣಕಾಸು ಸಲಹೆಗಾರ ನಿತ್ಯಾನಂದ ಸದ್ಯ ಅಮೆರಿಕದಲ್ಲಿ ನೆಲೆಸಿದ್ದು, ತಮ್ಮ ತಾಯಿ ಶಕ್ಕು ಬದರಿನಾಥ ಅವರ ಹೆಸರಿನಲ್ಲಿ ಪುನರ್ವಸತಿ ಕಲ್ಪಿತ ದೇವದಾಸಿ, ಒಂಟಿ ಮಹಿಳೆ, ಕೂಲಿ ಕಾರ್ಮಿಕ ಮಹಿಳೆ, ಆರೋಗ್ಯ ಹದಗೆಟ್ಟ ಮಹಿಳೆಯರಿಗೆ ಉಚಿತವಾಗಿ ಮನೆ ಕಟ್ಟಿಸಿಕೊಡುತ್ತಿದ್ದು, ಅಂತಹ 10 ಮನೆಗಳು ತಾಲ್ಲೂಕಿನಲ್ಲಿ ನಿರ್ಮಾಣವಾಗುತ್ತಿವೆ.

ನಾಗೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ 82 ಡಣಾಪುರದಲ್ಲಿ ಎಂಟು ಮನೆಗಳು, ಪಾಪಿನಾಯಕನ ಹಳ್ಳಿಯಲ್ಲಿ 2 ಮನೆಗಳು ನಿರ್ಮಾಣವಾಗುತ್ತಿದ್ದು, ಜುಲೈ 4ರಂದು ಮನೆ ಮಾಲೀಕರಿಗೆ ಸಂವಿಧಾನ ಪೀಠಿಕೆ ನೀಡಿ ಕೀ ಹಸ್ತಾಂತರ ನಡೆಯಲಿದೆ.

ನಿತ್ಯಾನಂದ ಅವರು ಕಳೆದ ವರ್ಷದಿಂದ ಈ ಕಾರ್ಯ ಆರಂಭಿಸಿದ್ದಾರೆ. ತಲಾ ₹2.80 ಲಕ್ಷ ವೆಚ್ಚದಲ್ಲಿ ಪುನರ್ವಸತಿ ಕಲ್ಪಿತ ದೇವದಾಸಿಯರಿಗೆ ಐದು ಮನೆಗಳನ್ನು ಇದೇ 82 ಡಣಾಪುರ ಗ್ರಾಮದಲ್ಲಿ ಕಟ್ಟಿಸಿ ಕೊಟ್ಟಿದ್ದಾರೆ. ಈ ಬಾರಿ ಸಖಿ ಟ್ರಸ್ಟ್ ಮೂಲಕ ಮತ್ತೆ 10 ಮನೆಗಳನ್ನು ತಲಾ ₹2.90 ಲಕ್ಷ ವೆಚ್ಚದಲ್ಲಿ ಕಟ್ಟಿಸಿಕೊಟ್ಟಿದ್ದಾರೆ. ಬೆಳಗಾವಿ, ಚಾಮರಾಜನಗರ, ಕೋಲಾರ ಜಿಲ್ಲೆಗಳಲ್ಲೂ ತೀರಾ ಅಗತ್ಯ ಇರುವ ಮಹಿಳೆಯರಿಗೆ ತಲಾ 5 ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ರಾಜ್ಯದ ಹಲವೆಡೆ 'ಶಕ್ಕು ಬದರಿನಾಥ್ ಫೌಂಡೇಶನ್' ಹೆಸರಲ್ಲಿ ಮನೆಗಳು ನಿರ್ಮಾಣವಾಗಿವೆ.

ಮನೆಗಳು ಹೇಗಿವೆ?: ಮಾಜಿ ಸಚಿವ ಆನಂದ್ ಸಿಂಗ್ ಅವರು 8 ವರ್ಷಗಳ ಹಿಂದೆ 82 ಡಣಾಪುರದಲ್ಲಿ ಸರ್ಕಾರಿ ಜಾಗದಲ್ಲಿ ಬಡವರ ವಸತಿ ಯೋಜನೆಗಾಗಿ ಲೇಔಟ್ ರೂಪಿಸಿದ್ದರು. ಸಿಮೆಂಟ್ ರಸ್ತೆ, ಚರಂಡಿಯ ವ್ಯವಸ್ಥೆ ಮಾಡಿಸಿದ್ದರು. ತುಂಗಭದ್ರಾ ನದಿ ದಂಡೆಯಲ್ಲಿ ತೀರಾ ಕಷ್ಟದ ಸ್ಥಿತಿಯಲ್ಲಿ ವಾಸವಿದ್ದವರು ಇಲ್ಲಿ ಗುಡಿಸಲು ಕಟ್ಟಿಕೊಂಡಿದ್ದರು. ಬಳಿಕ ನಾಗೇನಹಳ್ಳಿ ಗ್ರಾ.ಪಂ.ನಿಂದ ಸರ್ವೆ ಮಾಡಿಸಿ ಪಟ್ಟಾ ನೀಡುವ ಕೆಲಸವನ್ನು ಸಖಿ ಟ್ರಸ್ಟ್ ಮಾಡಿತ್ತು. 30x40 ಚದರ ಅಡಿ ನಿವೇಶನ ದಲ್ಲಿ 13x17 ಚದರಿ ಅಡಿಯ ಮನೆ ನಿರ್ಮಿಸಲಾಗಿದೆ. ಮನೆಯ ಹೊರಗಡೆ 9x5 ಚದರ ಅಡಿಯ ಬಚ್ಚಲು/ಶೌಚಾಲಯ ನಿರ್ಮಿಸಲಾಗಿದೆ. ಚಾವಣಿಗೆ ಶೀಟ್ ಹಾಕಲಾಗಿದೆ. ಮನೆಯೊಳಗೆ ಹಾಲ್, ಕಿಚನ್, ಬೆಡ್‌ರೂಂ ಇದೆ. ಜಲಜೀವನ್ ಮಿಷನ್‌ನಡಿ ನೀರಿನ ಸಂಪರ್ಕ ಕಲ್ಪಿಸಲಾಗಿದೆ.

ಸ್ವತಃ ದಾನಿಯಿಂದಲೇ ಆಯ್ಕೆ

ಹೊಸಪೇಟೆ ತಾಲ್ಲೂಕಿನ 82 ಡಣಾಪುರ ಗ್ರಾಮದಲ್ಲಿ ಪುನರ್ವಸತಿ ಕಲ್ಪಿತ ದೇವದಾಸಿ ದೇವಮ್ಮ (ಎಡದಿಂದ ನಾಲ್ಕನೇಯವರು) ಅವರಿಗೆ ನಿರ್ಮಿಸಲಾಗಿರುವ ಮನೆ –ಪ್ರಜಾವಾಣಿ ಚಿತ್ರ

ಮಹಿಳೆಯ ಹೆಸರಲ್ಲೇ ಪಟ್ಟಾ ಇರಬೇಕು, ಆಕೆಯ ಬಳಿಕ ಆಕೆಯ ಪುತ್ರಿಯರಿಗಷ್ಟೇ ಮನೆ ಸಿಗಬೇಕು ಎಂಬ ಉದ್ದೇಶದಿಂದ ಹತ್ತಾರು ಫಲಾನುಭವಿಗಳ ಪಟ್ಟಿ ತರಿಸಿಕೊಂಡು ಸೂಕ್ತ ವ್ಯಕ್ತಿಯನ್ನು ಆರಿಸುವುದು ದಾನಿ ನಿತ್ಯಾನಂದ ಅವರು. ತಮ್ಮೂರಿಗೆ ಬಂದಾಗ ವರ್ಷಕ್ಕೆ ಒಮ್ಮೆ ಮಾತ್ರ ಇಲ್ಲಿಗೂ ಬರುತ್ತಾರೆ, ಫಲಾನುಭವಿಗಳ ಆಯ್ಕೆ ಮಾಡುತ್ತಾರೆ.

ವಿಜಯನಗರ ಜಿಲ್ಲೆಯಲ್ಲಿ ಪುನರ್ವಸತಿ ಕಲ್ಪಿತ ದೇವದಾಸಿಯರು ಬಹಳಷ್ಟು ಕಷ್ಟಕರ ಜೀವನ ಸಾಗಿಸುತ್ತಿದ್ದಾರೆ ಎಂಬ ಮಾಹಿತಿ ಪಡೆದು ಅವರು ಕಳೆದ ವರ್ಷ ಕೇವಲ ಅಂತಹವರಿಗೇ ಐದು ಮನೆ ಕಟ್ಟಿಸಿಕೊಟ್ಟಿದ್ದರು. ಈ ಬಾರಿ ಪುನರ್ವಸತಿ ಕಲ್ಪಿತ ದೇವದಾಸಿಯರ ಸಹಿತ ತೀರಾ ಕಷ್ಟಕರ ಸ್ಥಿತಿಯಲ್ಲಿರುವ ಇತರ ಮಹಿಳೆಯರನ್ನೂ ಆಯ್ಕೆ ಮಾಡಿದ್ದಾರೆ. ಮುಂದಿನ ವರ್ಷವೂ ಮತ್ತೆ 10 ಮನೆಗಳನ್ನು ಕಟ್ಟಿಸಿಕೊಡುವುದಾಗಿ ತಿಳಿಸಿದ್ದಾರೆ.

> ನಿಜವಾದ ಅರ್ಥದಲ್ಲಿ ಮಹಿಳಾ ಸಬಲೀಕರಣ ಪ್ರಚಾರವನ್ನೇ ಬಯಸದ ಒಬ್ಬ ದಾನಿಯಿಂದ ನಡೆಯುತ್ತಿದೆ. ದಾನದ ಹಣ ನಯಾ ಪೈಸೆ ವ್ಯರ್ಥವಾಗದ ರೀತಿಯಲ್ಲಿ ನಾವು ಅದನ್ನು ಜಾರಿಗೆ ತರುತ್ತಿದ್ದೇವೆ
> **ಭಾಗ್ಯಲಕ್ಷ್ಮಿ,** ಸಖಿ ಟ್ರಸ್ಟ್ ಸಂಸ್ಥಾಪಕಿ

> ನನ್ನ ಅಮ್ಮ ಕರುಣಾಮಯಿ ಆಗಿದ್ದರು. ಅಗತ್ಯ ಇರುವವರಿಗೆ ನೆರವು ನೀಡುವ ಇಚ್ಛೆ ಹೊಂದಿದ್ದರು. ಹೀಗಾಗಿ ತಳ ಸಮುದಾಯದ ಮಹಿಳೆಯರು, ಮಕ್ಕಳಿಗೆ ನೆರವು ನೀಡುವುದು ನನ್ನ ಕರ್ತವ್ಯ ಎಂದು ಭಾವಿಸಿದ್ದೇನೆ
> **ನಿತ್ಯಾನಂದ,** ಮನೆಗಳ ದಾನಿ

ಮೊಟ್ಟೆ ಧಾರಣೆ (ಎನ್ಇಸಿಸಿ)

ಬೆಂಗಳೂರು		
	100 ಕ್ಕೆ	₹620
	12 ಕ್ಕೆ	₹80
ಮೈಸೂರು:	100 ಕ್ಕೆ	₹625

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹355-545
ದ್ವಿತಳಿ (ಬಿ.ವಿ)	₹330-678

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹197
ಆರ್‌ಎಸ್‌ಎಸ್-5	₹191
ಗುಡ್ ಲಾಟ್	₹180

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1190 (1190)
ಸೂರ್ಯಕಾಂತಿ (ರಿಫೈನ್ಡ್)	₹1335 (1335)
ಪಾಮೋಲಿನ್	₹1185 (1185)

ಮುಂಬೈ ಧಾರಣೆ (ಶೇಂಗಾ)

28-06-2025	
ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	7800-7900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1183 (1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1250)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	95,250 (94,850)
ಬೆಳ್ಳಿ ಕೆ.ಜಿಗೆ	1,05,600 (1,05,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಾಲ ನೀಡಿಕೆ ಹೆಚ್ಚಿಸಲು ನಿರ್ಮಲಾ ಕರೆ

ಎಂಎಸ್‌ಎಂಇ ಉದ್ಯಮ ವಲಯಕ್ಕೆ ಬ್ಯಾಂಕ್ ಸಾಲ ಹೊಸ ವ್ಯವಸ್ಥೆ ಬಲಪಡಿಸಲು ಸಚಿವರ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಲ ನೀಡುವಿಕೆಯನ್ನು ಹೆಚ್ಚು ಮಾಡಬೇಕು, ಅದರಲ್ಲೂ ಮುಖ್ಯವಾಗಿ ಎಂಎಸ್‌ಎಂಇ ವಲಯದ ಉದ್ಯಮಗಳಿಗೆ ಸಾಲ ನೀಡುವಿಕೆ ಹೆಚ್ಚಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಹೇಳಿದರು.

ಬ್ಯಾಂಕ್‌ಗಳು ಗ್ರಾಹಕರಿಗೆ ಒದಗಿಸುವ ಸೇವೆಗಳನ್ನು ಉತ್ತಮಪಡಿಸುವ ಬಗ್ಗೆಯೂ ಗಮನಹರಿಸಬೇಕು ಎಂದು ಅವರು ತಾಕೀತು ಮಾಡಿದರು.

ಎಂಎಸ್‌ಎಂಇ (ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ) ಉದ್ಯಮಗಳ ಸಾಲ ಪಡೆಯುವ ಅರ್ಹತೆಯನ್ನು ನಿರ್ಣಯಿಸಲು ಹೊಸದಾಗಿ ಜಾರಿಗೆ ತಂದಿರುವ ಮಾದರಿಯ ಅನುಷ್ಠಾನಕ್ಕೆ ಬಲ ತುಂಬಬೇಕು, ಈ ಮೂಲಕ ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಸಾಲ ತ್ವರಿತವಾಗಿ ಸಿಗುವಂತೆ ಆಗಬೇಕು ಎಂದು ಅವರು ಪರಿಶೀಲನಾ ಸಭೆಯೊಂದರಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಶುಕ್ರವಾರ ಸೂಚಿಸಿದರು.

ಹೊಸ ಮಾದರಿಯನ್ನು ಈ ವರ್ಷದ ಮಾರ್ಚ್ ತಿಂಗಳಲ್ಲಿ ಆರಂಭಿಸಲಾಗಿದೆ. ಇದರ ಅಡಿಯಲ್ಲಿ, ಎಂಎಸ್‌ಎಂಇ ವಲಯದ ಉದ್ದಿಮೆಗಳು ಸಾಲ ಪಡೆಯಲು ಎಷ್ಟು ಅರ್ಹ ಎಂಬುದನ್ನು ನಿರ್ಣಯಿಸಲು ಬ್ಯಾಂಕ್‌ಗಳು ಹೊರಗಿನ ಸಂಸ್ಥೆಗಳನ್ನು ನೆಚ್ಚಿಕೊಳ್ಳುವ ಬದಲು ತಮ್ಮದೇ ಆದ ವ್ಯವಸ್ಥೆಯೊಂದನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ಹೊಸ ಮಾದರಿಯ ಮೂಲಕ 1.97 ಲಕ್ಷ ಎಂಎಸ್‌ಎಂಇ ಸಾಲ ನೀಡಲಾಗಿದೆ, ಇದರ ಮೊತ್ತ ಒಟ್ಟು ₹60 ಸಾವಿರ ಕೋಟಿ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಆರ್‌ಬಿಐ ಮೇಲ್ವಿಚಾರಣೆ ಬೇಕು: ಎಫ್‌ಕೆಸಿಸಿಐ

ಬೆಂಗಳೂರು: ಬ್ಯಾಂಕ್‌ಗಳು ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ನೀಡುವ ಸಾಲದ ಬಗ್ಗೆ ಆರ್‌ಬಿಐ ಹಾಗೂ ಕೇಂದ್ರ ಸರ್ಕಾರದ ಮೇಲ್ವಿಚಾರಣೆ ಇರಬೇಕು ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಹೇಳಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ಬ್ಯಾಂಕ್‌ಗಳು ಸಾಲವನ್ನು ತಮಗೆ ಪರಿಚಯ ಇರುವವರಿಗೇ ಕೊಟ್ಟುಕೊಂಡಿರುವ ನಿದರ್ಶನಗಳು ಇವೆ. ಹೀಗಾಗಿ ಹೊಸದೊಂದು ಕಾನೂನು ಚೌಕಟ್ಟು ರೂಪಿಸಿ, ಒಂದು ಪೋರ್ಟಲ್ ಆರಂಭಿಸಬೇಕು. ಬ್ಯಾಂಕ್‌ಗಳು ನೀಡಿರುವ ಸಾಲವು ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ನಿಜವಾಗಿಯೂ ತಲುಪಿದೆಯೇ ಎಂಬುದನ್ನು ಆರ್‌ಬಿಐ, ಕೇಂದ್ರ ಸರ್ಕಾರ ಪರಿಶೀಲಿಸಬೇಕು' ಎಂದು ಸಲಹೆ ನೀಡಿದರು.

ಈ ವಲಯಕ್ಕೆ ಸಾಲ ಸಿಗುವಂತೆ ಆಗಬೇಕು ಎಂಬ ಉದ್ದೇಶದಿಂದ ಕೇಂದ್ರ ರೂಪಿಸಿರುವ ಹಲವು ಯೋಜನೆಗಳು ಉತ್ತಮವಾಗಿವೆ. ಆದರೆ ಸಾಲವು ನೈಜ ಉದ್ಯಮಿಗೆ ಸಿಗುವಂತೆ ಆಗಬೇಕು ಎಂದು ಅವರು ಹೇಳಿದರು.

ಸಾಲಕ್ಕೆ ಸಂಬಂಧಿಸಿದಂತೆ ಕೇಂದ್ರ ರೂಪಿಸಿರುವ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸವೂ ಆಗಬೇಕು ಎಂದರು.

ಬಾಂಗ್ಲಾದಿಂದ ಅದಾನಿ ಪವರ್‌ಗೆ ₹3,282 ಕೋಟಿ ಪಾವತಿ

ನವದೆಹಲಿ (ಪಿಟಿಐ): ಬಾಂಗ್ಲಾದೇಶ ಸರ್ಕಾರವು ಅದಾನಿ ಪವರ್ ಕಂಪನಿಗೆ ಜೂನ್ ತಿಂಗಳಲ್ಲಿ ₹3,282 ಕೋಟಿ ಪಾವತಿ ಮಾಡಿದೆ. ಕಂಪನಿಗೆ ಬಾಕಿ ಇರಿಸಿಕೊಂಡಿರುವ ಮೊತ್ತವನ್ನು ಈ ಮೂಲಕ ಅದು ತಗ್ಗಿಸಿಕೊಂಡಿದೆ.

ವಿದ್ಯುತ್ ಪೂರೈಕೆ ಒಪ್ಪಂದದ ಭಾಗವಾಗಿ ಜೂನ್ ತಿಂಗಳಲ್ಲಿ ಬಾಂಗ್ಲಾದೇಶದಿಂದ ಅದಾನಿ ಪವರ್ ಕಂಪನಿಗೆ ₹3,735 ಕೋಟಿ ಪಾವತಿ ಆಗಬೇಕಿದೆ. ಆ ಪೈಕಿ ₹3,282 ಕೋಟಿ ಪಾವತಿ ಆಗಿದೆ ಎಂದು ಮೂಲಗಳು ಹೇಳಿವೆ.

ಬಾಂಗ್ಲಾದೇಶವು ಪಾವತಿ ಮಾಡಬೇಕಿರುವ ಮೊತ್ತವನ್ನು ಸರಿಯಾಗಿ ಪಾವತಿ ಮಾಡದ ಕಾರಣಕ್ಕೆ ಅದಾನಿ ಪವರ್ ಕಂಪನಿಯು ವಿದ್ಯುತ್ ಪೂರೈಕೆಯನ್ನು ಅರ್ಧದಷ್ಟು ಕಡಿಮೆ ಮಾಡಿತ್ತು. ಆದರೆ, ಬಾಂಗ್ಲಾದೇಶದಿಂದ ಆಗುವ ಮಾಸಿಕ ಪಾವತಿಗಳು ಬಾಕಿ ಮೊತ್ತವನ್ನೂ ಒಳಗೊಳ್ಳುವುದು ಆರಂಭವಾದ ನಂತರ ಕಂಪನಿಯು ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಪೂರೈಕೆಯನ್ನು ಈ ವರ್ಷದ ಮಾರ್ಚ್‌ನಲ್ಲಿ ಪುನರಾರಂಭಿಸಿದೆ.



ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಕೆ. ಸತ್ಯನಾರಾಯಣ ರಾಜು ಅವರು (ಬಲದಿಂದ ಮೂರನೆಯವರು) ಬ್ಯಾಂಕ್‌ನ 2024–25ನೇ ಸಾಲಿನ ಲಾಭಾಂಶವಾಗಿ ₹2,283 ಕೋಟಿಯ ಚೆಕ್‌ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಹಸ್ತಾಂತರಿಸಿದರು. ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ಹರದೀಪ್ ಸಿಂಗ್ ಅಹ್ಲುವಾಲಿಯಾ, ಭವೇಂದ್ರ ಕುಮಾರ್, ಎಸ್‌.ಕೆ. ಮಜುಮದಾರ್ ಇದ್ದರು.

ಮಧ್ಯಪ್ರದೇಶ: ಇಂಧನದಲ್ಲಿ ಮಿಶ್ರಣ– ಎಫ್‌ಐಆರ್ ದಾಖಲು

ಸಿ.ಎಂ ಬೆಂಗಾವಲು ವಾಹನಕ್ಕೆ ನೀರು!

ಭೋಪಾಲ್/ರತ್ಲಂ (ಪಿಟಿಐ): ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರ ಬೆಂಗಾವಲು ಪಡೆಯ ವಾಹನಗಳು ಹಠಾತ್ತನೆ ಸ್ಥಗಿತಗೊಳ್ಳಲು, ಅದರ ಇಂಧನದಲ್ಲಿ ನೀರು ಮಿಶ್ರಣವಾಗಿದ್ದೇ ಕಾರಣ ಎಂದು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಶನಿವಾರ ತಿಳಿಸಿದೆ.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ ಪೆಟ್ರೋಲ್ ಪಂಪ್ ನಿರ್ವಹಿಸುತ್ತಿರುವವರ ವಿರುದ್ಧ ಎಫ್‌ಐಆರ್ ದಾಖಲಿಸಿದೆ.

'ಈ ಭಾಗದಲ್ಲಿ ಸುರಿದ ಭಾರಿ ಮಳೆಯ ಕಾರಣ ರತ್ಲಂನ ಪೆಟ್ರೋಲ್ ಪಂಪ್‌ನ ಇಂಧನ ಸಂಗ್ರಹದ ಟ್ಯಾಂಕ್‌ವೊಳಗೆ ನೀರು ಸೇರ್ಪಡೆಯಾಗಿ, ಇಂಧನದ ಜತೆಗೆ ಮಿಶ್ರಣಗೊಂಡಿದೆ' ಎಂದು ಬಿಪಿಸಿಎಲ್ ಹೇಳಿದೆ.

ಜೂನ್ 26ರಂದು ಬೆಳಿಗ್ಗೆ 10 ಗಂಟೆಗೆ ಮುಖ್ಯಮಂತ್ರಿ ಅವರ ಬೆಂಗಾವಲು ಪಡೆಯ ವಾಹನಗಳಿಗೆ ರತ್ಲಂನ ಶಕ್ತಿ ಪೆಟ್ರೋಲ್ ಪಂಪ್‌ನಲ್ಲಿ ಡೀಸೆಲ್ ತುಂಬಿಸಲಾಗಿತ್ತು. ಆದರೆ, ಕೆಲ ಕ್ಷಣದಲ್ಲಿಯೇ ವಾಹನಗಳು ದಿಢೀರನೇ ಸ್ಥಗಿತಗೊಂಡವು. ವಾಹನಗಳು ಚಾಲನೆಗೊಳ್ಳದ ಕಾರಣ, ರಸ್ತೆ ಬದಿಯಲ್ಲಿ ನಿಲ್ಲಿಸಬೇಕಾಯಿತು. ಬಳಿಕ ಜಿಲ್ಲಾಡಳಿತ ಬೆಂಗಾವಲು ಪಡೆಗೆ ಪರ್ಯಾಯ ವ್ಯವಸ್ಥೆ ಮಾಡಿಕೊಟ್ಟಿತು. 'ಗ್ರಾಹಕರಿಗೆ ಆದ ತೊಂದರೆಗೆ ವಿಷಾದಿಸುತ್ತೇವೆ ಮತ್ತು ಸರ್ಕಾರದ ತನಿಖೆಗೆ ಸಹಕರಿಸುತ್ತೇವೆ' ಎಂದು ಬಿಪಿಸಿಎಲ್ ಹೇಳಿದೆ.

ಗುಣಮಟ್ಟ ಪರೀಕ್ಷೆಗೆ ಸೂಚನೆ: ಆಹಾರ ಸಚಿವ ಗೋವಿಂದ ಸಿಂಗ್ ರಜಪೂತ್ ಅವರು ಶನಿವಾರ ಅಧಿಕಾರಿಗಳ ಜತೆ ಸಭೆ ನಡೆಸಿ, ರಾಜ್ಯದ ಎಲ್ಲ ಪೆಟ್ರೋಲ್ ಪಂಪ್‌ಗಳಲ್ಲಿನ ಪೆಟ್ರೋಲ್ ಮತ್ತು ಡೀಸೆಲ್‌ನ ಗುಣಮಟ್ಟ ಪರಿಶೀಲಿಸುವಂತೆ ನಿರ್ದೇಶಿಸಿದರು. ಅಲ್ಲದೆ ಅಕ್ರಮ ಕಂಡು ಬಂದರೆ ಸಂಬಂಧಿಸಿದ ತೈಲ ಕಂಪನಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆಯೂ ಸೂಚಿಸಿದರು.

ಪಂಪ್ ಬಂದ್

ಲೋಪ ಎಸಗಿದ ಆರೋಪದ ಮೇಲೆ ಶಕ್ತಿ ಪೆಟ್ರೋಲ್ ಪಂಪ್ ಅನ್ನು ಜಿಲ್ಲಾಡಳಿತ ಬಂದ್ ಮಾಡಿಸಿದೆ. ತಪ್ಪಿತಸ್ಥ ಪಂಪ್ ನಿರ್ವಾಹಕರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಅಲ್ಲದೆ ಪೆಟ್ರೋಲ್ ಪಂಪ್‌ನಲ್ಲಿದ್ದ 5,995 ಲೀಟರ್ ಪೆಟ್ರೋಲ್ ಮತ್ತು 10,657 ಲೀಟರ್ ಡೀಸೆಲ್ ಅನ್ನು ಸರ್ಕಾರ ಜಪ್ತಿ ಮಾಡಿದೆ.

ಟಾಟಾ ಏಸ್ ಪ್ರೊ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕು ಸಾಗಣೆ ವಾಹನ ತಯಾರಿಕಾ ಕ್ಷೇತ್ರದ ಪ್ರಮುಖ ಕಂಪನಿಗಳ ಪೈಕಿ ಒಂದಾಗಿರುವ ಟಾಟಾ ಮೋಟರ್ಸ್, ಹೊಸ 'ಏಸ್ ಪ್ರೊ' ಬಿಡುಗಡೆ ಮಾಡಿದೆ. ಈ ಮಿನಿ ಟ್ರಕ್‌ನ ಆರಂಭಿಕ ಬೆಲೆ ₹3.99 ಲಕ್ಷ ಮಾತ್ರ ಎಂದು ಕಂಪನಿ ಹೇಳಿದೆ.

ಇದು ಭಾರತದಲ್ಲಿ ಅತ್ಯಂತ ಕಡಿಮೆ ಬೆಲೆಯ ನಾಲ್ಕು ಚಕ್ರಗಳ ಮಿನಿ ಟ್ರಕ್. ಇದು ಅಸಾಧಾರಣವಾದ ದಕ್ಷತೆಯನ್ನು ಹೊಂದಿದೆ, ಬೇರೆ ಬೇರೆ ಉದ್ದೇಶಗಳಿಗೆ ಇದನ್ನು ಬಳಕೆ ಮಾಡಿಕೊಳ್ಳಬಹುದು. ಹೊಸ ತಲೆಮಾರಿನ ಉದ್ಯಮಿಗಳ ಬಲ ಹೆಚ್ಚಿಸುವ ಉದ್ದೇಶದಿಂದ ಇದನ್ನು ವಿನ್ಯಾಸಗೊಳಿಸಲಾಗಿದೆ. ಈ ಮಿನಿ ಟ್ರಕ್ ಪೆಟ್ರೋಲ್, ಸಿಎನ್‌ಜಿ ಮತ್ತು ಪೆಟ್ರೋಲ್ ಹಾಗೂ ವಿದ್ಯುತ್ ಚಾಲಿತ ಎಂಜಿನ್ ಆಯ್ಕೆಗಳಲ್ಲಿ ಲಭ್ಯವಿದೆ ಎಂದು ಕೂಡ ಕಂಪನಿಯು ಹೇಳಿದೆ. ಈ ವಾಹನ ಖರೀದಿಗೆ ಹಣಕಾಸಿನ ನೆರವು ಒದಗಿಸಲು ಟಾಟಾ ಮೋಟರ್ಸ್ ಕಂಪನಿಯು ವಿವಿಧ ಬ್ಯಾಂಕ್‌ಗಳು ಹಾಗೂ ಬ್ಯಾಂಕೇತರ ಹಣಕಾಸು ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡಿದೆ.

'ಟಾಟಾ ಏಸ್ ಪ್ರೊ ಮಾದರಿಯನ್ನು ಗ್ರಾಹಕರಿಂದ ಸಲಹೆಗಳನ್ನು ಪಡೆದು ಅಭಿವೃದ್ಧಿಪಡಿಸಲಾಗಿದೆ, ಅವರ ವಿವಿಧ ಅಗತ್ಯಗಳನ್ನು ಪೂರೈಸಲು ವಿನ್ಯಾಸಗೊಳಿಸಲಾಗಿದೆ. ವಿವಿಧ ಭೂಪ್ರದೇಶಗಳಲ್ಲಿ ಈ ವಾಹನವನ್ನು ಕಠಿಣ ಪರೀಕ್ಷೆಗೆ ಒಳಪಡಿಸಲಾಗಿದೆ' ಎಂದು ಟಾಟಾ ಮೋಟರ್ಸ್ ಕಂಪನಿಯ ವಾಣಿಜ್ಯ ವಾಹನಗಳ ವಿಭಾಗದ ಉಪಾಧ್ಯಕ್ಷ ಮತ್ತು ವ್ಯಾಪಾರ ಮುಖ್ಯಸ್ಥ ಪಿನಾಕಿ ಹಲ್ದಾರ್ ಹೇಳಿದ್ದಾರೆ. ಈ ವಾಹನದ ಇ.ವಿ ಆವೃತ್ತಿಯು ಒಮ್ಮೆ ಚಾರ್ಜ್ ಮಾಡಿದರೆ 155 ಕಿ.ಮೀ. ಸಾಗುತ್ತದೆ.

ಸೇನಾ ಕಮಾಂಡರ್‌ಗಳ ಅಂತ್ಯಕ್ರಿಯೆ

ಇರಾನ್: ಟೆಹರಾನ್‌ನಲ್ಲಿ ನಡೆದ ಮೆರವಣಿಗೆಗೆ ಸಾಕ್ಷಿಯಾದ ಲಕ್ಷಾಂತರ ಜನ

ಟೆಹರಾನ್ (ಎಎಫ್‌ಪಿ): ಇಸ್ರೇಲ್‌ನ ದಾಳಿಯಲ್ಲಿ ಹತ್ಯೆಯಾದ ಇರಾನ್ ಸೇನೆಯ ಕಮಾಂಡರ್‌ಗಳು, ಅಣು ವಿಜ್ಞಾನಿಗಳು ಸೇರಿ ಪ್ರಮುಖ 60 ಮಂದಿಯ ಅಂತ್ಯಕ್ರಿಯೆ ಶನಿವಾರ ನಡೆಯಿತು.

ಅಂತಿಮ ಮೆರವಣಿಗೆಗೆ ಸಾಕ್ಷಿಯಾಗಲು ಕಪ್ಪು ಬಟ್ಟೆ ಧರಿಸಿ ಜನರು ಲಕ್ಷೋಪಾದಿಯಲ್ಲಿ ಸೇರಿದ್ದರು. ಇರಾನ್‌ನ ರಾಜಧಾನಿ ಟೆಹರಾನ್‌ನ ಬೀದಿಗಳಿಗೆ ಕಪ್ಪು ಬಟ್ಟೆ ಹೊದಿಸಿದಂತೆ ಭಾಸವಾಗುತ್ತಿತ್ತು.

'ಅಮೆರಿಕಕ್ಕೆ ಸಾವಾಗಲಿ', 'ಇಸ್ರೇಲ್‌ನ ಸಾವಾಗಲಿ' ಎನ್ನುತ್ತಾ ಜನರು ಆಕ್ರೋಶ ವ್ಯಕ್ತಪಡಿಸಿದರು. 11 ಕಿ.ಮೀ ಉದ್ದದ ಮೆರವಣಿಗೆ ಉದ್ದಕ್ಕೂ ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರ ವಿರುದ್ಧ ಘೋಷಣೆಗಳು ಮೊಳಗಿದವು. ದೊಡ್ಡ ದೊಡ್ಡ ಪೋಸ್ಟರ್‌ಗಳನ್ನು ಪ್ರದರ್ಶಿಸಲಾಯಿತು. ಹತ್ಯೆಯಾದ ದೇಶದ ಪ್ರಮುಖರ ಫೋಟೊಗಳನ್ನು, ಇರಾನ್‌ನ ರಾಷ್ಟ್ರಧ್ವಜವನ್ನು ಜನರು ಹಿಡಿದು ಸಾಗಿದರು.

ನಗರದ ವ್ಯಾಪಾರ–ವಹಿವಾಟು ಸ್ಥಗಿತಗೊಂಡಿತ್ತು. 'ಇರಾನ್ ಜನರು ರಕ್ತ ಅರ್ಪಿಸಿದ್ದಾರೆ, ಭೂಮಿಯನ್ನಲ್ಲ; ಅವರು ತಮ್ಮ ಪ್ರೀತಿಪಾತ್ರರನ್ನು ಅರ್ಪಿಸಿದ್ದಾರೆ, ತಮ್ಮ ಆತ್ಮಗೌರವವನ್ನಲ್ಲ; ಸಾವಿರಾರು ಸಂಖ್ಯೆಯ ಬಾಂಬ್‌ನ ಮಳೆಯನ್ನು ತಡೆದುಕೊಂಡಿದ್ದಾರೆ, ಆದರೆ ಶರಣಾಗಲಿಲ್ಲ' ಎಂದು ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ 'ಎಕ್ಸ್' ಪೋಸ್ಟ್ ಹಂಚಿಕೊಂಡಿದ್ದಾರೆ.

ಇಸ್ರೇಲ್‌ನ ದಾಳಿಯಲ್ಲಿ ಹತ್ಯೆಯಾದ ಇರಾನ್ ಸೇನೆಯ ಕಮಾಂಡರ್‌ಗಳು, ಅಣು ವಿಜ್ಞಾನಿಗಳ ಅಂತಿಮಯಾತ್ರೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ –ಎಎಫ್‌ಪಿ ಚಿತ್ರ

ಖಮೇನಿ ಉಳಿಸಿದ್ದು ನಾನು: ಟ್ರಂಪ್

'ಅವರು (ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ) ಎಲ್ಲಿದ್ದಾರೆ ಎಂದು ನಮಗೆ ಖಚಿತವಾಗಿ ತಿಳಿದಿತ್ತು. ಅವರನ್ನು ಹತ್ಯೆ ಮಾಡಲು ಇಸ್ರೇಲ್ ಅಥವಾ ನಮ್ಮ ಸೇನೆಗೆ ಒಪ್ಪಿಗೆ ನೀಡಲಿಲ್ಲ. ನಾನು ಅವರನ್ನು ಅವಮಾನಕರ ಸಾವಿನಿಂದ ಉಳಿಸಿದ್ದೇನೆ. ಅವರು ನನಗೇನೂ ಧನ್ಯವಾದ ಹೇಳುವುದು ಬೇಡ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪೋಸ್ಟ್ ಹಂಚಿಕೊಂಡಿದ್ದಾರೆ.



ಟ್ರಂಪ್ ಅವರ ಹೇಳಿಕೆಗೆ ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅವರು ಶನಿವಾರ ಕಟುವಾಗಿ ಪ್ರತಿಕ್ರಿಯಿಸಿದ್ದಾರೆ. 'ಟ್ರಂಪ್ ಅವರಿಗೆ ನಿಜವಾಗಿಯೂ ಒಪ್ಪಂದ ಬೇಕಿದ್ದರೆ, ಖಮೇನಿ ಅವರ ಕುರಿತ ಅಗೌರವದ ಮಾತುಗಳನ್ನಾಡುವುದನ್ನು ಬಿಡಬೇಕು' ಎಂದಿದ್ದಾರೆ.

ಪಾಕ್: 13 ಸೈನಿಕರು ಬಲಿ

ಡೆರಾ ಇಸ್ಮಾಯಿಲ್ ಖಾನ್ (ಪಾಕಿಸ್ತಾನ) (ರಾಯಿಟರ್ಸ್): ಪಾಕಿಸ್ತಾನದ ಉತ್ತರ ವಜೀರಿಸ್ತಾನ ಜಿಲ್ಲೆಯ ಮಿರ್ ಆಲಿ ಪ್ರದೇಶದಲ್ಲಿ ಶನಿವಾರ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಕನಿಷ್ಠ 13 ಸೈನಿಕರು ಮೃತಪಟ್ಟಿದ್ದಾರೆ.

ಸ್ಫೋಟಕ ತುಂಬಿದ ಕಾರನ್ನು ಪಾಕಿಸ್ತಾನ ಸೇನಾ ಬೆಂಗಾವಲು ಪಡೆಯ ವಾಹನಕ್ಕೆ ಡಿಕ್ಕಿ ಹೊಡೆಸಿ ದಾಳಿ ನಡೆಸಲಾಗಿದೆ. ಘಟನೆಯಲ್ಲಿ ಮಕ್ಕಳೂ ಸೇರಿದಂತೆ 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸಮೀಪದ ಎರಡು ಕಟ್ಟಡಗಳ ಚಾವಣಿ ಕುಸಿದಿವೆ. ಗಾಯಗೊಂಡವನ್ನು ಹೆಲಿಕಾಪ್ಟರ್ ಮೂಲಕ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪಾಕಿಸ್ತಾನದ ನಾಲ್ವರು ಗುಪ್ತಚರ ಅಧಿಕಾರಿಗಳು ಮತ್ತು ಮಿರ್ ಆಲಿ ಪ್ರದೇಶದ ಸ್ಥಳೀಯ ಅಧಿಕಾರಿ ಆತ್ಮಾಹುತಿ ಬಾಂಬ್ ದಾಳಿ ನಡೆದಿರುವುದನ್ನು ಖಚಿತಪಡಿಸಿದ್ದಾರೆ. ಆದರೆ, ಯಾವುದೇ ಸಂಘಟನೆ ಇದುವರೆಗೆ ದಾಳಿಯ ಹೊಣೆ ಹೊತ್ತುಕೊಂಡಿಲ್ಲ. ಪಾಕಿಸ್ತಾನ ಸೇನೆಯೂ ಈ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

'ಇದೊಂದು ದೊಡ್ಡ ಸ್ಫೋಟವಾಗಿತ್ತು. ಸ್ಫೋಟ ನಡೆದ ಸ್ಥಳದಲ್ಲಿ ಕಟ್ಟಡಗಳಿಂದ ದಟ್ಟವಾಗಿ ಹೊಗೆ ಹೊರ ಬರುತ್ತಿತ್ತು' ಎಂದು ಸ್ಥಳೀಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸ್ಫೋಟ ನಡೆದ ಸ್ಥಳ ಪಾಕಿಸ್ತಾನ–ಅಫ್ಗಾನಿಸ್ತಾನ ಗಡಿಗೆ ಹೊಂದಿಕೊಂಡಿದ್ದು, ಇಲ್ಲಿ ಪಾಕಿಸ್ತಾನಿ ತಾಲಿಬಾನ್ ಎಂದು ಹೆಸರಾಗಿರುವ ತೆಹರೀಕ್ ಎ–ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಸೇರಿದಂತೆ ಹಲವು ಇಸ್ಲಾಮಿಕ್ ಉಗ್ರಗಾಮಿ ಸಂಘಟನೆಗಳು ಪ್ರಾಬಲ್ಯ ಹೊಂದಿವೆ.

ಅಲ್ಪಸಂಖ್ಯಾತರ ರಕ್ಷಣೆಗೆ ಬದ್ಧ: ಬಾಂಗ್ಲಾ

ಸಾರ್ವಜನಿಕ ಸ್ಥಳದಲ್ಲಿ ಧಾರ್ಮಿಕ ಕಟ್ಟಡಕ್ಕೆ ಅನುಮತಿ ಇಲ್ಲ

ಢಾಕಾ (ಪಿಟಿಐ): 'ಸಾರ್ವಜನಿಕ ಸ್ಥಳದಲ್ಲಿ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಲು ಯಾವುದೇ ಪರಿಸ್ಥಿತಿಯಲ್ಲೂ ಅನುಮತಿ ನೀಡುವುದಿಲ್ಲ' ಎಂದು ಬಾಂಗ್ಲಾದೇಶ ಹೇಳಿದೆ.

'ದೇಶದಲ್ಲಿರುವ ಎಲ್ಲ ಸಮುದಾಯದವರ ಹಕ್ಕುಗಳನ್ನು ಕಾಪಾಡಲು ಹಾಗೂ ಪೂಜಾ ಸ್ಥಳಗಳನ್ನು ರಕ್ಷಿಸಲು ಬದ್ಧ' ಎಂದು ಇದೇ ಸಂದರ್ಭ ಪುನರುಚ್ಚರಿಸಿದೆ.

ಢಾಕಾದಲ್ಲಿ ದುರ್ಗಾ ದೇವಾಲಯವನ್ನು ಧ್ವಂಸಗೊಳಿಸಿದ ಘಟನೆಯನ್ನು ಭಾರತವು ಖಂಡಿಸಿದ ಒಂದು ದಿನದ ನಂತರ, ಬಾಂಗ್ಲಾದೇಶದ ವಿದೇಶಾಂಗ ಸಚಿವಾಲಯ ಈ ರೀತಿ ಪ್ರತಿಕ್ರಿಯೆ ನೀಡಿದೆ. ಹಿಂದೂಗಳು ಮತ್ತು ಅವರ ಧಾರ್ಮಿಕ ಸಂಸ್ಥೆಗಳನ್ನು ರಕ್ಷಿಸುವುದಾಗಿಯೂ ಹೇಳಿದೆ.

ಢಾಕಾದ ಖಿಲ್‌ಖೆತ್ ಪ್ರದೇಶದಲ್ಲಿದ್ದ ದೇಗುಲವನ್ನು ಬಾಂಗ್ಲಾದ ರೈಲ್ವೆ ಒಡೆತನದ ಭೂಮಿಯಲ್ಲಿ ನಿರ್ಮಿಸಲಾಗಿತ್ತು ಎಂದು ಸಚಿವಾಲಯ ಹೇಳಿಕೊಂಡಿದೆ. ಸಾರ್ವಜನಿಕ ಭೂಮಿಯನ್ನು ವಾಪಸ್ ಪಡೆಯಲು ಅಗತ್ಯವಿರುವ ಸೂಕ್ತ ಪ್ರಕ್ರಿಯೆ ನಡೆಸಿದ ನಂತರವೇ ಕ್ರಮಕೈಗೊಳ್ಳಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಬಿಎಸ್‌ಎಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಸರ್ಕಾರ ಭದ್ರತೆ ಒದಗಿಸಲಿ: ಜೈಸ್ವಾಲ್

'ಢಾಕಾದ ಖಿಲ್‌ಖೆತ್‌ನಲ್ಲಿರುವ ದುರ್ಗಾ ದೇಗುಲವನ್ನು ಕೆಡವಲು ಉಗ್ರವಾದಿಗಳು ಹುಯಿಲೆಬ್ಬಿಸಿದ್ದಾರೆ. ಮಧ್ಯಂತರ ಸರ್ಕಾರವು ದೇಗುಲಕ್ಕೆ ಭದ್ರತೆ ಒದಗಿಸುವ ಬದಲು, ಇದನ್ನು ಸರ್ಕಾರಿ ಭೂಮಿಯ ಅತಿಕ್ರಮಣ ಎಂದು ಬಿಂಬಿಸುತ್ತಿದೆ' ಎಂದು ಭಾರತದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

'ಹಿಂದೂಗಳು, ಅವರ ಆಸ್ತಿ ಹಾಗೂ ಧಾರ್ಮಿಕ ಸ್ಥಳಗಳನ್ನು ರಕ್ಷಿಸುವುದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಜವಾಬ್ದಾರಿಯಾಗಿದೆ' ಎಂದರು.

ಗಾಣದ ಮಾಲೀಕರಿಗೆ ಆದಾಯ; ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ

ಕುಸುಬಿ ಕಾಳು, ಎಣ್ಣೆ ಬೆಲೆ ದಿಢೀರ್ ಹೆಚ್ಚಳ

● ಶಶಿಕಾಂತ ಎಸ್.ಶೆಂಬೆಳ್ಳಿ

ಬೀದರ್: ಕುಸುಬಿ ಗಾಣದ ಎಣ್ಣೆಗೆ ಬೇಡಿಕೆ ಹೆಚ್ಚಾಗಿದ್ದು, ಬೆಲೆಯಲ್ಲೂ ದಿಢೀರ್ ಏರಿಕೆಯಾಗಿದೆ. ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ ತಟ್ಟಿದ್ದರೆ, ಗಾಣದ ಮಾಲೀಕರಿಗೆ ಹೆಚ್ಚಿನ ಆದಾಯ ಸಿಗುತ್ತಿದೆ.

ಪ್ರತಿ ಕೆ.ಜಿ ಕುಸುಬಿ ಎಣ್ಣೆಗೆ ಸದ್ಯ ₹350ರಿಂದ ₹360 ದರ ಇದೆ. ಸಗಟು ಮತ್ತು ಚಿಲ್ಲರೆ ಬೆಲೆಯಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ. ಪ್ರತಿ ಕ್ವಿಂಟಲ್ ಕುಸುಬಿ ಬೆಲೆ ₹8 ಸಾವಿರದಿಂದ ₹8,500ಕ್ಕೆ ಏರಿಕೆಯಾಗಿದೆ. ಎರಡು–ಮೂರು ತಿಂಗಳ ಹಿಂದೆ ಪ್ರತಿ ಕೆ.ಜಿ ಕುಸುಬಿ ಎಣ್ಣೆ ₹260ರಿಂದ ₹280ರ ನಡುವೆ ಮಾರಾಟವಾಗುತ್ತಿತ್ತು. ಪ್ರತಿ ಕ್ವಿಂಟಲ್ ಕುಸುಬಿ ₹4,500ರಿಂದ ₹5 ಸಾವಿರ ದರ ಇತ್ತು.

ಈ ಹಿಂದೆ ಗಾಣದ ಶೇಂಗಾ ಎಣ್ಣೆಗೆ ಗರಿಷ್ಠ ದರ ಇತ್ತು. ಈಗಲೂ ಪ್ರತಿ ಕೆ.ಜಿ ಶೇಂಗಾ ಎಣ್ಣೆ ₹290ರಿಂದ ₹300ರವರೆಗೆ ಮಾರಾಟವಾಗುತ್ತಿದೆ. ಶೇಂಗಾ ಎಣ್ಣೆ ಬೆಲೆಯಲ್ಲಿ ಏರಿಳಿತ ಆಗಿಲ್ಲ. ಆದರೆ, ಕುಸುಬಿ ಎಣ್ಣೆ ಬೆಲೆಯು ಸದ್ಯ ಶೇಂಗಾವನ್ನು ಹಿಂದಿಕ್ಕಿದೆ. ಸೂರ್ಯಕಾಂತಿ ಎಣ್ಣೆ ಪ್ರತಿ ಕೆಜಿಗೆ ₹200ರಿಂದ ₹220 ದರ ಇದೆ.

ಈ ಹಿಂದೆ ಎಪಿಎಂಸಿ ಮುಖ್ಯ ಮಾರುಕಟ್ಟೆಯಲ್ಲಿ ಬೆರಳೆಣಿಕೆಯ ಕುಸುಬಿ ಎಣ್ಣೆ ಗಾಣಗಳು ನಡೆಯುತ್ತಿದ್ದವು. ಈಗ ಹಳ್ಳಿಗಳಲ್ಲೂ ಗಾಣಗಳು ತಲೆ ಎತ್ತಿವೆ. ಗಾಣ ನಡೆಸುತ್ತಿರುವವರು ಯಾರೂ ನಷ್ಟದಲ್ಲಿಲ್ಲ

ಪ್ರಶಾಂತ್, ಕುಸುಬಿ ಗಾಣದ ಎಣ್ಣೆ ಮಾಲೀಕ

'ಪ್ರತಿಯೊಬ್ಬರಲ್ಲೂ ಆರೋಗ್ಯ ಕಾಳಜಿ ಹೆಚ್ಚಿದೆ. ಕುಸುಬಿ ಎಣ್ಣೆ ಆರೋಗ್ಯಕ್ಕೆ ಒಳ್ಳೆಯದು. ಕುಸುಬಿ ಎಣ್ಣೆಯಲ್ಲಿ ಕರಿದ ಪದಾರ್ಥಗಳನ್ನು ಹೆಚ್ಚು ಇಷ್ಟಪಡುತ್ತಾರೆ. ಗಾಣದಲ್ಲಿ ಎಣ್ಣೆಯನ್ನು ಗ್ರಾಹಕರ ಎದುರಲ್ಲೇ ತಯಾರಿಸಿ ಕೊಡಲಾಗುತ್ತದೆ. ಕಲಬೆರಕೆ ಇರುವುದಿಲ್ಲ. ಇವೆಲ್ಲವೂ ದಿಢೀರನೆ ಬೆಲೆ ಏರಿಕೆಗೆ ಕಾರಣ. ಹೊರ ರಾಜ್ಯಗಳಿಂದಲೂ ಕುಸುಬಿ ಎಣ್ಣೆಗೆ ಬೇಡಿಕೆ ಇದೆ' ಎಂದು ಕುಸುಬಿ ಗಾಣದ ಮಾಲೀಕ ಶಿವರಾಜ 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜ್ಯದಲ್ಲಿಯೇ ಕುಸುಬಿಯನ್ನು ಹೆಚ್ಚಾಗಿ ಬೀದರ್ ಜಿಲ್ಲೆಯಲ್ಲಿ ಬೆಳೆಯಲಾಗುತ್ತದೆ. ನೆರೆಯ ಮಹಾರಾಷ್ಟ್ರದ ವಿದರ್ಭ ಭಾಗದ ರೈತರು ಕುಸುಬಿ ಬೆಳೆಯುತ್ತಾರೆ. ಅಲ್ಲಿನ ರೈತರು ಗಾಣದಲ್ಲಿ ತಯಾರಿಸಿದ ಕುಸುಬಿ ಎಣ್ಣೆಯನ್ನು ಪ್ಯಾಕ್ ಮಾಡಿ ಮಹಾನಗರಗಳಿಗೆ ಕಳಿಸುತ್ತಿದ್ದಾರೆ. ಆ ಕಡೆಯಿಂದ ಜಿಲ್ಲೆಗೆ ಕುಸುಬಿ ಹೆಚ್ಚಾಗಿ ಬರುತ್ತಿಲ್ಲ. ಸ್ಥಳೀಯವಾಗಿ ಬೇಡಿಕೆ ಹೆಚ್ಚಾಗಿರುವುದರಿಂದ ಬೆಲೆ ಏರಿಕೆಯಾಗಿದೆ. ಕುಸುಬಿ ಎಣ್ಣೆಗೆ ಇಷ್ಟು ಬೇಡಿಕೆ ಇರುವುದರಿಂದ ಅದರ ಬಗ್ಗೆ ಪ್ರಚಾರ ಮಾಡುವ ಅಗತ್ಯವೇ ಇಲ್ಲ' ಎನ್ನುತ್ತಾರೆ ಶಿವರಾಜ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Domestic Helpers / Housekeeping

"ಬೆಂಗಳೂರಿನ ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಮನೆಗಲಸದ ಹೆಂಗಸು ಬೇಕಾಗಿದ್ದಾರೆ. ಒಬ್ಬ ಹೆಂಗಸಿಗೆ ಅಥವಾ ಗಂಡ ಮತ್ತು ಹೆಂಡತಿಗೆ ವಸತಿ ಸೌಲಭ್ಯ ನೀಡಲಾಗುವುದು. ಸಂಬಳ:15000. ಸಂಪರ್ಕಿಸಿ: 9606916280"

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವೈಯಕ್ತಿಕ

Change of Name

ನಾನು, ಕವಿತ ಯಾಕರಿ (ಹಳೆಯ ಹೆಸರು), ವಿ. ವೆಂಕಟರತ್ನಂ ಅವರ ಪತ್ನಿ, ವಯಸ್ಸು 57 ವರ್ಷ, ನಂ.17, ಬ್ರಿಂದಾವನಂ, ಓಲ್ಡ್ ಪೋಸ್ಟ್ ಆಫೀಸ್ ರಸ್ತೆ, ಪಿಲಣ್ಣ ಗಾರ್ಡನ್ 3ನೇ ಹಂತ, ಲಿಂಗರಾಜಪುರಂ, ಸ್ಟೆಂಟ್ ಥಾಮಸ್ ಟೌನ್ ಪೋಸ್ಟ್, ಬೆಂಗಳೂರು – 560084 ರ ನಿವಾಸಿ, 26062024ರಂದು ಬೆಂಗಳೂರಿನಲ್ಲಿ ಶಪಥ ಪತ್ರ ಮಾಡಿದ್ದು, ನನ್ನ ಹೆಸರನ್ನು ಕವಿತ (ಹೊಸ ಹೆಸರು) ಎಂದು ಬದಲಾಯಿಸಿಕೊಂಡಿದ್ದೇನೆ.

ಪ್ರವಾಸ

Travel

★ಶ್ರೇಯಸ್ ಟೂರ್ಸ್★
04.07.2025,25.07.2025 6ದಿನಗಳು ಸಂಪೂರ್ಣ ಅಹೋಬಲ,ನವನಂದಿ,ಶ್ರೀಶೈಲಂ ಮಂತ್ರಾಲಯ,ಗಂಡಿಕೊಟ ಬೇಲಂಗುಹೆ,ಯಾಗಂಟಿ
14.07.2025,15.07.2025 10ದಿನಗಳು ವಿಜಯವಾಢ ಪಂಚರಾಮಕ್ಷೇತ್ರಗಳು ಪೀಠಾಪುರಂ,ವಿಶಾಖಪಟ್ಟಣ ಅರಕು,ಸಿಂಹಾಚಲಂ,ಅನ್ನಾವರಂ ಶ್ರೀಕೂರ್ಮಂ,ಭದ್ರಾಚಲಂ ವಾರಂಗಲ್,ಕೋಲ್ಲಿಪಾಕ ಯಾದಗಿರಿಗುಟ್ಟ,ಸ್ವರ್ಣಗಿರಿ ಶ್ರೀರಾಮಾನುಜಚಾರ್ಯ
09.08.2025 13ದಿನಗಳು ಮಾನಸಸರೋವರ ಯಾತ್ರೆ ಮೌಂಟ್‌ಕೈಲಾಸ.
08.09.2025,13.10.2025 12ದಿನಗಳು ಚಾರ್‌ದಾಮ್ ಯಾತ್ರಾವಿಶೇಷ.
10.08.2025,28.08.2025 10ದಿನಗಳು ಅಖಂಡ ಕೇರಳ ರಾಜ್ಯ ಪ್ರವಾಸ.
10.08.2025,28.08.2025 7ದಿನಗಳು ಅಷ್ಟವಿನಾಯಕ, ಶಿರಡಿ, 3ಜ್ಯೋತಿರ್ಲಿಂಗ ದರ್ಶನ,ಪೂನಾ ಕೊಲ್ಲಾಪುರ,ಪಂಡರಾಪುರ.
8073824856
9206979202
9606032154

ವೈವಾಹಿಕ

Brides Wanted

Hindu

ವಧು ಬೇಕಾಗಿದೆ
39 ವರ್ಷದ ವಿಚ್ಛೇದಿತ ಸುಂದರ ಅಯ್ಯಂಗಾರ್ ವರ 5'11" ಭಾರದ್ವಾಜ ಗೋತ್ರ, ಪುಬ್ಬಾ ನಕ್ಷತ್ರ ಎಂ.ಎಸ್ಸಿ, ಕೇಂದ್ರ ಸರ್ಕಾರಿ ನೌಕರ, (ಬಲ ಭಾಗದಲ್ಲಿ ಸಣ್ಣ ತೊಂದರೆ ಇದೆ) ಯಾವುದೇ ವಿದ್ಯಾರ್ಹತೆಯ ಅವಿವಾಹಿತ, ಮಕ್ಕಳಿಲ್ಲದ ವಿಚ್ಛೇದಿತ, ವಿಧವೆ ಬ್ರಾಹ್ಮಣ, ಲಿಂಗಾಯತ ವಧು ಬೇಕಾಗಿದೆ ಬ್ರೋಕರ್ಸ್‌ಗೆ ಅವಕಾಶವಿಲ್ಲ.
ಮೊ.: 7019455168

Kannada

ಒಕ್ಕಲಿಗ 55 ವರ್ಷದ ರೈತಾಪಿ ವರ್ಗದವರಿಗೆ ಹಳ್ಳಿಯಲ್ಲಿ ವಾಸಮಾಡಲು ಇಚ್ಚಿಸುವ ಜೀವನ ಸಂಗಾತಿ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9663153646.

Grooms Wanted

Brahmin

ಬ್ರಾಹ್ಮಣ ವರ ಬೇಕಾಗಿದೆ
ಶೀಘ್ರ ವಿವಾಹಕ್ಕಾಗಿ ಎಲ್ಲಾ ಜಾತಿಯ ವಧು–ವರರಿಗಾಗಿ ಸಂಪರ್ಕಿಸಿ. ಬ್ರಾಹ್ಮಣ ಕನ್ಯೆ (ವಧುವಿನ) ವಯಸ್ಸು 22, PUC ಕಲಿತಿರುವ / ವಯಸ್ಸು 25, MBA / ವಯಸ್ಸು 28, SSLC / ವಯಸ್ಸು 33, PUC /ವಯಸ್ಸು 38, SSLC / ವಯಸ್ಸು 30, BE ಇಂಜಿನಿಯರ್ ವಧುವಿಗೆ ಸೂಕ್ತವಾದ ಸದ್ಗುಣವಂತ ವರ ಬೇಕಾಗಿದೆ. ವಧುಗಳಿಗೆ ಮಾತ್ರ ಉಚಿತ ನೊಂದಾವಣೆ. (ವಧು–ವರಾನ್ವೇಷಣ ಕೇಂದ್ರ)
M. 8904834199

Sindhi

25 ವರ್ಷದ ಕುರುಬಗೌಡ 7 ವರ್ಷದ ಮಗಳಿರುವ ವಿಧವೆಗೆ ಎರಡನೇ ವಿವಾಹದ ವರ ಬೇಕಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9686120913.

ಇತರೆ

Medical

ಉಚಿತ ಶಿಬಿರ 7 ದಿನಗಳು ಮಾತ್ರ. ದಿನಾಂಕ 28-06-2025 ರಿಂದ 04-07-2025 ವರೆಗೆ. ಸಮಯ ಮಧ್ಯಾಹ್ನ 2:00 ರಿಂದ ಸಂಜೆ 4 ರವರೆಗೆ. ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆನೋವು, ಮೈಗ್ರೇನ್, ಭುಜದ ನೋವು,ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಯಾವುದೇ ರೀತಿ ಔಷಧಿ ಅಥವಾ ಶಸ್ತ್ರ ಚಿಕಿತ್ಸೆ ಇಲ್ಲದೆ ACU ಥೆರಪಿಯಿಂದ ಚಿಕಿತ್ಸೆ ಪಡೆಯಿರಿ. ವಿಳಾಸ: ಸನ್ಮಾನ್ ಹೋಟೆಲ್ ಹತ್ತಿರ ಶೇಷಾದ್ರಿಪುರಂ, ಬೆಂಗಳೂರು. ಮೊಬೈಲ್: 7349494852

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424
+91 9731810277 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

18ನೇ ವರ್ಷದ ಚಿರಸ್ಮರಣೆ

ಎಚ್.ಪಿ. ರತನ್ (ಯಮಲೂರು)
ನೀನು ನಮ್ಮನ್ನಗಲಿ ಇಂದಿಗೆ ಹದಿನೆಂಟು ವರ್ಷಗಳಾದವು ಅನುದಿನವು, ಅನುಕ್ಷಣವು, ನಾವು ನಿನ್ನ ಸ್ಮರಣೆ ಮಾಡುತ್ತಲಿರುವೆವು, ನಿನ್ನ ಸ್ಮರಣೆಯೆ ನಮಗೆ ದಿವ್ಯಚೇತನ ನೀವು ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿರುವ.
ಸದಾ ನಿನ್ನ ನೆನಪಿನಲ್ಲಿರುವ: ತಂದೆ ತಾಯಿ, ಎಚ್.ಪಿ. ರತನ್ ಚಾರಿಟಬಲ್ ಟ್ರಸ್ಟ್ (ರಿ)

ವೈಕುಂಠ ಸಮಾರಾಧನೆ

ಶ್ರೀ ಬಿ.ಸಿ. ಲಕ್ಷ್ಮಣ್‌ರೆಡ್ಡಿ
ನಂ. 235, 10ನೇ ಅಡ್ಡರಸ್ತೆ, ಬೆಳ್ಳಂದೂರು, ಬೆಂಗಳೂರು-560 103
ಇವರು ದಿ: 20.06.2025 ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿ:30.06.2025 ಸೋಮವಾರ, ಬೆ.10.00ಕ್ಕೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖಪತ್ತರು: ಪತ್ನಿ– ಶ್ರೀಮತಿ ಪಾಪಮ್ಮ ಮತ್ತು ಮಕ್ಕಳು ಹಾಗೂ ಕುಟುಂಬದವರು

ಭಾವಪೂರ್ಣ ಶ್ರದ್ಧಾಂಜಲಿ

ಸಿ.ಶಂಕರ ರೆಡ್ಡಿ
(S/O ದಿ.ಚಿಕ್ಕತಾಯಪ್ಪ ರೆಡ್ಡಿ)
DOD 28/06/2025
ನಮ್ಮೆಲ್ಲರ ಮಾರ್ಗದರ್ಶಿಗಳು ಹೃದಯವಂತ. ಈ ಮಹಾ ಚೇತನಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಕೋರುವ ದುಃಖತಪ್ತರು: ದಿ.ಚಿಕ್ಕತಾಯಪ್ಪ ರೆಡ್ಡಿ ಕುಟುಂಬದವರು
ಅಂತಿಮ ವಿಧಿ–ವಿಧಾನಗಳನ್ನು ಚಳ್ಳಕೆರೆ ಗ್ರಾಮ,ಕಲ್ಯಾಣನಗರ ಅಂಚೆ, ಬೆಂಗಳೂರಿನಲ್ಲಿ 29th June 2025 ಮದ್ಯಾಹ್ನ 3:00 PM ಗಂಟೆಗೆ ನೆರವೇರಲಿದೆ.

ಸಂವಿಧಾನ ನಿರ್ಮಾತೃಗಳಿಗೆ ದ್ರೋಹ: ಧನಕರ್

ತುರ್ತು ಪರಿಸ್ಥಿತಿಯಲ್ಲಿ ಸಂವಿಧಾನ ಪ್ರಸ್ತಾವನೆ ಬದಲಾವಣೆ: ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸಂವಿಧಾನದ ಪ್ರಸ್ತಾವನೆಯಿಂದ 'ಸಮಾಜವಾದ' ಮತ್ತು 'ಜಾತ್ಯತೀತ' ಪದಗಳನ್ನು ತೆಗೆಯಬೇಕು' ಎಂದು ಆರ್‌ಎಸ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಕರೆ ನೀಡಿದ ಬೆನ್ನಲ್ಲೇ, 'ಈ ಪದಗಳನ್ನು ಸಂವಿಧಾನ ಪ್ರಸ್ತಾವನೆಯಲ್ಲಿ ಸೇರಿಸುವ ಮೂಲಕ ಸಂವಿಧಾನ ನಿರ್ಮಾತೃಗಳಿಗೆ ದ್ರೋಹ ಬಗೆಯಲಾಗಿದೆ' ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಪ್ರತಿಪಾದಿಸಿದರು.

ಜಗದೀಪ್ ಧನಕರ್ ಕೃತಿ ಬಿಡುಗಡೆ ಮಾಡಿದರು. ವಿಆರ್‌ಎಲ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ವಿಜಯ ಸಂಕೇಶ್ವರ, ಲೇಖಕ ಡಿ.ಎಸ್.ವೀರಯ್ಯ ಚಿತ್ರದಲ್ಲಿದ್ದಾರೆ

ಉಪರಾಷ್ಟ್ರಪತಿ ಭವನದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್‌ನ ಮಾಜಿ ಸದಸ್ಯ ಡಿ.ಎಸ್.ವೀರಯ್ಯ ಅವರ 'ಅಂಬೇಡ್ಕರ್ ಅವರ ಸಂದೇಶಗಳು' ಕೃತಿಯ ಇಂಗ್ಲಿಷ್ ಹಾಗೂ ಹಿಂದಿ ಅವತರಣಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು. 'ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪ್ರಸ್ತಾವನೆಗೆ ಸೇರಿಸಲಾದ ಪದಗಳು ಕೊಳೆಯುತ್ತಿರುವ ಗಾಯ (ನಸೂರ್). ಇದು ಸನಾತನ ಧರ್ಮದ ಚೈತನ್ಯ ಹಾಗೂ ಆತ್ಮಕ್ಕೆ ಮಾಡಿದ ಅಪಮಾನ' ಎಂದು ವ್ಯಾಖ್ಯಾನಿಸಿದರು.

'1976ರಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿ ತರುವ ಮೂಲಕ 'ಸಮಾಜವಾದಿ', 'ಜಾತ್ಯತೀತ' ಮತ್ತು 'ಸಮಗ್ರತೆ' ಎಂಬ ಪದಗಳನ್ನು ಸೇರಿಸುವ ಮೂಲಕ ಪ್ರಸ್ತಾವನೆಯನ್ನು ಬದಲಾಯಿಸಲಾಗಿದೆ' ಎಂದು ಒತ್ತಿ ಹೇಳಿದ ಅವರು, 'ಇದೊಂದು ಅನ್ಯಾಯದ ಕೆಲಸ. ನಾವು ಬದಲಾಯಿಸಬಾರದ್ದನ್ನು ಬದಲಾಯಿಸಿದ್ದೇವೆ. ಅದು ಕೂಡ ದೇಶದಲ್ಲಿ ತುರ್ತು ಪರಿಸ್ಥಿತಿ ಇದ್ದಾಗ. ಪ್ರಸ್ತಾವನೆಯು ಸಂವಿಧಾನದ ಆತ್ಮ. ಅದನ್ನು ವಿರೂಪಗೊಳಿಸಬಾರದು ಮತ್ತು ಕೆಡವಬಾರದು' ಎಂದು ಅವರು ಹೇಳಿದರು.

ಈ ಕೃತಿಯನ್ನು ಇಂಗ್ಲಿಷ್‌ಗೆ ಡಾ.ಎಚ್.ಎಸ್.ಎಂ. ಪ್ರಕಾಶ್ ಅನುವಾದಿಸಿದ್ದಾರೆ.

'ಆರ್‌ಎಸ್‌ಎಸ್ ಹೇಳಿಕೆಗಳಿಗೆ ಕಡಿವಾಣ ಅಗತ್ಯ'

ಬೆಂಗಳೂರು: ಆರ್‌ಎಸ್‌ಎಸ್‌ನ ಸಂವಿಧಾನ ವಿರೋಧಿ ಹೇಳಿಕೆ, ದೇಶದ್ರೋಹದ ನಡವಳಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಒತ್ತಾಯಿಸಿದ್ದಾರೆ.

ಜಾತಿ ಮತ್ತು ಧರ್ಮದ ಭೇದ ನೋಡದೆ ಎಲ್ಲರನ್ನೂ ಸಮಾನವಾಗಿ ಕಾಣುವುದು, ಸಾಮಾಜಿಕ ಮತ್ತು ಆರ್ಥಿಕವಾಗಿ ಎಲ್ಲರಿಗೂ ನ್ಯಾಯ ಒದಗಿಸುವುದೇ ಜಾತ್ಯತೀತ, ಸಮಾಜವಾದದ ಆಶಯ. ಸಂವಿಧಾನದ ಮೂಲ ಆಶಯಗಳಲ್ಲಿ ಸಮಾನತೆ, ನ್ಯಾಯದ ಅಂಶಗಳೂ ಮಹತ್ವ ಪಡೆದಿವೆ. ಇಂತಹ ಅಂಶಗಳನ್ನು ತೆಗೆದು ಹಾಕಬೇಕು ಎಂದು ಆರ್‌ಎಸ್‌ಎಸ್‌ನ ದತ್ತಾತ್ರೇಯ ಹೊಸಬಾಳೆ ಹೇಳಿಕೆ ಖಂಡನೀಯ ಎಂದಿದ್ದಾರೆ.

ದೇಶದ ಬಹುತ್ವಕ್ಕೆ ವಿರುದ್ಧವಾಗಿರುವ ಆರ್‌ಎಸ್‌ಎಸ್ ಯಾವಾಗಲೂ ಮನುಷ್ಯನ ಆಹಾರ, ಬಟ್ಟೆ, ಆಚರಣೆ ಹಾಗೂ ಅವರ ಆಲೋಚನೆಗಳ ವಿಷಯದಲ್ಲಿ ನಿಯಂತ್ರಣ ಸಾಧಿಸಲು ಯತ್ನಿಸುತ್ತಲೇ ಇದೆ. ಆದರೆ, ಅಂಬೇಡ್ಕರ್ ಅವರು ನೀಡಿರುವ ಸಂವಿಧಾನವು ಇಂತಹ ನೂರಾರು ದಾಳಿಗಳು ಮತ್ತು ಕುತಂತ್ರಗಳನ್ನು ಎದುರಿಸಿ ನಿಲ್ಲುವಷ್ಟು ಸಮರ್ಥವಾಗಿದೆ ಎಂದು ಹೇಳಿದ್ದಾರೆ.

ಅಂಬೇಡ್ಕರ್ ವಿಷಯದಲ್ಲಿ ಪ್ರೀತಿ ತೋರಿಸುವ ನಾಟಕ ಮಾಡುತ್ತಿರುವ ಆರ್‌ಎಸ್‌ಎಸ್, ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಮಾತನಾಡುತ್ತಿರುವ ದತ್ತಾತ್ರೇಯ ಹೊಸಬಾಳೆ ಅವರನ್ನು ಹೊರಹಾಕಬೇಕು. ಕ್ರಮ ಜರುಗಿಸಬೇಕು. ಇಲ್ಲವಾದರೆ ತಮ್ಮದು ದೇಶದ್ರೋಹಿ ಸಂಘಟನೆ ಎನ್ನುವುದನ್ನು ಬಹಿರಂಗವಾಗಿ ಒಪ್ಪಿಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

'ಆರ್‌ಎಸ್‌ಎಸ್‌ಗೆ ನಂಬಿಕೆ ಇಲ್ಲ'

ಬೆಂಗಳೂರು: 'ಆರ್‌ಎಸ್‌ಎಸ್‌ಗೆ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದತ್ತಾತ್ರೇಯ ಹೊಸಬಾಳೆಯವರ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಆರ್‌ಎಸ್‌ಎಸ್‌ನವರು ಮನುಸ್ಮೃತಿಯಲ್ಲಿ ನಂಬಿಕೆ ಇಟ್ಟುಕೊಂಡಿರುವವರು. ಸಂವಿಧಾನ ಬದಲಾವಣೆ ಆಗಬೇಕು ಹಾಗೂ ಮನುಸ್ಮೃತಿ ಜಾರಿ ಆಗಬೇಕೆಂಬ ಮನಃಸ್ಥಿತಿ ಇರುವವರು. ಅದನ್ನು ಬಿಟ್ಟು ಅವರಿಗೆ ಇನ್ನೇನು ಹೇಳಲು ಸಾಧ್ಯ' ಎಂದರು.

'ಜಾತ್ಯತೀತ ಮತ್ತು ಸಮಾಜವಾದ ಎಂಬ ಪದಗಳನ್ನು ನಂತರ ಸೇರಿಸಲಾಗಿದೆ' ಎಂಬ ಹೇಳಿಕೆಗೆ ಉತ್ತರಿಸಿದ ಮುಖ್ಯಮಂತ್ರಿ, 'ಸಂಸತ್ತಿನಲ್ಲಿ ಚರ್ಚೆಯಾದ ನಂತರ ಸಂವಿಧಾನ ತಿದ್ದುಪಡಿ ಮಾಡಲಾಗಿದೆ. ದತ್ತಾತ್ರೇಯ ಹೊಸಬಾಳೆ ಅವರು ಹೇಳಿದಂತೆ ಸಂವಿಧಾನ ರಚನೆ ಆಗಿಲ್ಲ' ಎಂದರು.

'ರಾಜ್ಯವೊಂದಕ್ಕೆ ಪ್ರತ್ಯೇಕ ಸಂವಿಧಾನ ಬೇಡ'

ನಾಗ್ಪುರ (ಪಿಟಿಐ): 'ಡಾ.ಬಿ.ಆರ್. ಅಂಬೇಡ್ಕರ್ ಅವರು ದೇಶದ ಎಲ್ಲರಿಗೂ ಅನ್ವಯವಾಗುವಂಥ ಒಂದೇ ಸಂವಿಧಾನ ಬೇಕು ಎಂದು ಕನಸು ಕಂಡಿದ್ದರೇ ಹೊರತು ರಾಜ್ಯವೊಂದಕ್ಕೆ ಪ್ರತ್ಯೇಕ ಸಂವಿಧಾನ ಇರಬೇಕು ಎನ್ನುವುದರ ಪರವಾಗಿ ಅವರು ಎಂದೂ ಇರಲಿಲ್ಲ' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಅಭಿಪ್ರಾಯಪಟ್ಟರು.

ಗವಾಯಿ

ಗವಾಯಿ ಅವರು ಇಲ್ಲಿ ನಿರ್ಮಿಸಲಾಗಿರುವ 'ಸಂವಿಧಾನದ ಪ್ರಸ್ತಾವನೆ ಉದ್ಯಾನ'ವನ್ನು ಉದ್ಘಾಟಿಸಿ ಶನಿವಾರ ಮಾತನಾಡಿದರು.

'ಸಂವಿಧಾನದ 370ನೇ ವಿಧಿಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಯುತ್ತಿದ್ದ ವೇಳೆ, 'ಎಲ್ಲರಿಗೂ ಅನ್ವಯವಾಗುವ ಒಂದೇ ಸಂವಿಧಾನ ಬೇಕು' ಎನ್ನುತ್ತಿದ್ದ ಅಂಬೇಡ್ಕರ್ ಅವರ ಮಾತುಗಳನ್ನು ನಾನು ನೆನಪು ಮಾಡಿಕೊಂಡೆ. ನಾವು ದೇಶವನ್ನು ಒಂದಾಗಿಡಬೇಕು ಎಂದಾದರೆ ನಮಗೆ ಒಂದೇ ಸಂವಿಧಾನ ಬೇಕು' ಎಂದರು.

'ಎಲ್ಲ ರೀತಿಯ ಸವಾಲುಗಳನ್ನು ಎದುರಿಸಲು ನಮ್ಮ ಸಂವಿಧಾನ ಶಕ್ತವಾಗಿದೆ ಮತ್ತು ಇದು ದೇಶವನ್ನು ಒಗ್ಗೂಡಿಸಿ ಇಡುತ್ತದೆ. ನಮ್ಮ ನೆರೆಯ ದೇಶಗಳ ಸ್ಥಿತಿಯನ್ನೇ ನೋಡಿ. ಅದು ಪಾಕಿಸ್ತಾನ, ಬಾಂಗ್ಲಾದೇಶ ಅಥವಾ ಶ್ರೀಲಂಕಾ ಇರಬಹುದು. ಭಾರತವು ಯಾವುದೇ ಸವಾಲನ್ನು ಎದುರಿಸಿದರೂ, ದೇಶ ಮಾತ್ರ ಒಗ್ಗಟ್ಟಾಗಿಯೇ ಇತ್ತು' ಎಂದು ಅವರು ಅಭಿಪ್ರಾಯಪಟ್ಟರು.

ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿದ ಕೇಂದ್ರ ಸರ್ಕಾರದ ನಿರ್ಧಾರವನ್ನು ಗವಾಯಿ ಅವರು ಸಮರ್ಥಿಸಿಕೊಂಡರು.

ವಿಶೇಷ ಸ್ಥಾನಮಾನ ರದ್ದು ಮಾಡಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಅಂದಿನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠದಲ್ಲಿ ಗವಾಯಿ ಅವರೂ ಇದ್ದರು.

ಪರಾಗ್ ಜೈನ್ 'ರಾ' ಮುಖ್ಯಸ್ಥ

ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂರ' ಯೋಜನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಹಿರಿಯ ಐಪಿಎಸ್ ಅಧಿಕಾರಿ ಪರಾಗ್ ಜೈನ್ ಅವರನ್ನು ದೇಶದ ಗುಪ್ತಚರ ಸಂಸ್ಥೆ 'ರಿಸರ್ಚ್ ಆ್ಯಂಡ್ ಅನಲಿಸಿಸ್ ವಿಂಗ್'ನ (ರಾ) ನೂತನ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಪರಾಗ್ ಜೈನ್

'ರಾ' ಮುಖ್ಯಸ್ಥರಾಗಿರುವ ರವಿ ಸಿನ್ಹಾ ಅವರು ಜೂನ್ 30ರಂದು ನಿವೃತ್ತಿ ಹೊಂದಲಿದ್ದಾರೆ. ಸಂಸತ್ತಿನ ನೇಮಕಾತಿ ಸಮಿತಿಯು ಪರಾಗ್ ಅವರ ನೇಮಕವನ್ನು ಅನುಮೋದಿಸಿ ಆದೇಶ ಹೊರಡಿಸಿದೆ.

ಪಂಜಾಬ್ ಕೇಡರ್‌ನ 1989ರ ಬ್ಯಾಚ್‌ನ ಅಧಿಕಾರಿಯಾಗಿರುವ ಪರಾಗ್ ಅವರು, ವೈಮಾನಿಕ ಕಣ್ಗಾವಲು, ಗಡಿ ಮತ್ತು ಗುಪ್ತಚರ ಮೇಲ್ವಿಚಾರಣೆ ನಡೆಸುವ 'ವೈಮಾನಿಕ ಸಂಶೋಧನಾ ಕೇಂದ್ರ'ದ ಮುಖ್ಯಸ್ಥರಾಗಿದ್ದು, ಜುಲೈ 1ರಂದು ಅಧಿಕಾರ ಸ್ವೀಕರಿಸಲಿದ್ದಾರೆ.

'ಸಿಂಧೂರ' ಯಶಸ್ಸಿನಲ್ಲಿ ಪರಾಗ್

'ಸಿಂಧೂರ' ಕಾರ್ಯಾಚರಣೆ ವೇಳೆ, ಪಾಕಿಸ್ತಾನ ಹಾಗೂ ಪಾಕಿಸ್ತಾನ ಆಕ್ರಮಿತ ಪ್ರದೇಶಗಳಲ್ಲಿ ಉಗ್ರರ ನೆಲೆಗಳನ್ನು ನಿಖರವಾಗಿ ಗುರಿಯಾಗಿಸಿ ದಾಳಿ ಮಾಡಲು ಸೇನೆಗೆ ಗುಪ್ತಚರ ಮಾಹಿತಿ ನೀಡಿದ್ದ ಪರಾಗ್, ಅದರ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಜೈನ್ ನೇತೃತ್ವದ ತಂಡವು ಸಂಗ್ರಹಿಸಿದ್ದ ನಿಖರವಾದ ಗುಪ್ತಚರದ ಮಾರ್ಗದರ್ಶನದಲ್ಲಿ ಕ್ಷಿಪಣಿ ದಾಳಿ ನಡೆಸಲಾಯಿತು. ಅಂತೆಯೇ ಗುರಿ ತಲುಪಿದ ಕ್ಷಿಪಣಿಗಳಿಂದ ಉಗ್ರರ 9 ಕ್ಯಾಂಪ್‌ಗಳನ್ನು ಧ್ವಂಸ ಮಾಡಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐಫೋನ್‌ಗಾಗಿ ಹತ್ಯೆ: ಬಾಲಕರ ವಶ

ಬಹ್ರೈಚ್ (ಪಿಟಿಐ): ಐಫೋನ್‌ಗಾಗಿ ಯುವಕನೊಬ್ಬನ ಕುತ್ತಿಗೆ ಸೀಳಿ, ತಲೆಯನ್ನು ಕಲ್ಲಿನಿಂದ ಜಜ್ಜಿ ಅಮಾನುಷವಾಗಿ ಕೊಂದ ಆರೋಪದ ಮೇಲೆ ಇಬ್ಬರು ಬಾಲಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ರೀಲ್ಸ್‌ಗಳನ್ನು ಮಾಡಲು ಐಫೋನ್ ಅಗತ್ಯವಿದ್ದ ಕಾರಣ ಈ ಕೃತ್ಯ ಎಸಗಿದ್ದಾಗಿ ಬಾಲಕರು ಒಪ್ಪಿಕೊಂಡಿದ್ದಾರೆ' ಎಂದು ಪೊಲೀಸರು ಶನಿವಾರ ಮಾಹಿತಿ ನೀಡಿದ್ದಾರೆ.

ಬೆಂಗಳೂರಿನಲ್ಲಿ ವಾಸವಿರುವ ಶಾದಾಬ್ (19) ಮೃತ ದುರ್ದೈವಿ. ಚಿಕ್ಕಪ್ಪನ ಮದುವೆಗೆಂದು ಬಹ್ರೈಚ್ ಹೋಗಿದ್ದ ಅವರನ್ನು ಜೂನ್ 21ರಂದು ಹತ್ಯೆ ಮಾಡಲಾಗಿತ್ತು. ಗ್ರಾಮದ ಹೊರವಲಯದ ತೋಟದಲ್ಲಿ ಮೃತದೇಹ ಪತ್ತೆಯಾಗಿತ್ತು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು 14 ಮತ್ತು 16 ವರ್ಷದ ಇಬ್ಬರು ಬಾಲಕರನ್ನು ಗುರುವಾರ ವಶಕ್ಕೆ ಪಡೆದಿದ್ದಾರೆ. ಬಳಿಕ ಆರೋಪಿಗಳಿಂದ ಐಫೋನ್ ಮತ್ತು ಕೃತ್ಯಕ್ಕೆ ಬಳಸಿದ್ದ ಚಾಕುವನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಚಾಕುವನ್ನು ಬಚ್ಚಿಡಲು ಬಾಲಕರಿಗೆ ನೆರವಾಗಿದ್ದ ವ್ಯಕ್ತಿಯನ್ನು ಶುಕ್ರವಾರ ಬಂಧಿಸಿರುವ ಪೊಲೀಸರು, ಮತ್ತೊಬ್ಬ ವಯಸ್ಕನಿಗಾಗಿ ಶೋಧ ನಡೆಸಿದ್ದಾರೆ.


ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಲಿಂಕ್ ಮೂಲಕ ಸಂಭಾಷಣೆ ನಡೆಸಿದರು — ಪಿಟಿಐ ಚಿತ್ರ

'ಹೊಸ ಯುಗದ ಶುಭಾರಂಭ'

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿರುವ (ಐಎಸ್‌ಎಸ್) ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರು ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರ ಜತೆ ವಿಡಿಯೊ ಲಿಂಕ್ ಮೂಲಕ ಸಂಭಾಷಣೆ ನಡೆಸಿದರು.

ಸುಮಾರು 18 ನಿಮಿಷಗಳ ಸಂವಾದದ ಕೊನೆಯಲ್ಲಿ ಇಬ್ಬರೂ 'ಭಾರತ ಮಾತಾ ಕಿ ಜೈ' ಘೋಷಣೆಗಳನ್ನು ವಿನಿಮಯ ಮಾಡಿಕೊಂಡರು.

'ಗಗನಯಾನ ಯೋಜನೆಯನ್ನು ಯಶಸ್ವಿಗೊಳಿಸುವ, ನಮ್ಮದೇ ಆದ ಬಾಹ್ಯಾಕಾಶ ನಿಲ್ದಾಣ ನಿರ್ಮಿಸುವ ಮತ್ತು ಚಂದ್ರನ ಮೇಲೆ ಭಾರತದ ಗಗನಯಾನಿಯನ್ನು ಕಳುಹಿಸುವುದೂ ಸೇರಿದಂತೆ ದೇಶದ ಭವಿಷ್ಯದ ಬಾಹ್ಯಾಕಾಶ ಯೋಜನೆಗಳಿಗೆ ಶುಭಾಂಶು ಶುಕ್ಲಾ ಅವರ ಅನುಭವಗಳು ಅತ್ಯಂತ ಮಹತ್ವದ ಪಾತ್ರ ನಿರ್ವಹಿಸಲಿವೆ' ಎಂದು ಪ್ರಧಾನಿ ಅವರು ಬಣ್ಣಿಸಿದರು.

'ಶುಭಾಂಶು ಅವರೇ, ನೀವು ಈಗ ಭೂಮಿಯಿಂದ ಅತ್ಯಂತ ಎತ್ತರದಲ್ಲಿದ್ದೀರಿ (400 ಕಿ.ಮೀ). ಆದರೆ ಇದೇ ವೇಳೆ ನೀವು ಪ್ರತಿ ಭಾರತೀಯರ ಹೃದಯಕ್ಕೆ ಹತ್ತಿರದಲ್ಲಿದ್ದೀರಿ' ಎಂದು ಹೇಳಿದರು.

'ನಿಮ್ಮ ಹೆಸರು 'ಶುಭ್' (ಶುಭ) ಎಂಬ ಪದವನ್ನು ಹೊಂದಿದೆ. ಆ ಮೂಲಕ ನಿಮ್ಮ ಪ್ರಯಾಣವು ಹೊಸ ಯುಗದ ಶುಭಾರಂಭವನ್ನು ಗುರುತಿಸಿದೆ. ನೀವು ಅಲ್ಲಿನ ಪ್ರತಿ ಅನುಭವವನ್ನೂ ದಾಖಲಿಸುತ್ತಿದ್ದೀರಿ ಎಂಬ ವಿಶ್ವಾಸ ನನಗಿದೆ. ಇದೆಲ್ಲ ದೇಶದ ಯುವ ಜನರಿಗೆ ದೊಡ್ಡ ಸ್ಫೂರ್ತಿಯಾಗಲಿದೆ' ಎಂದು ವಿವರಿಸಿದರು.

ಈ ವೇಳೆ ಮಾತನಾಡಿದ ಶುಭಾಂಶು, 'ನನ್ನ ಈ ಬಾಹ್ಯಾಕಾಶ ಯಾನದ ಜತೆಗೆ ಇಡೀ ದೇಶವಿದೆ. ಇಲ್ಲಿನ ಅನುಭವಗಳನ್ನು ನಾನು ಸ್ಪಂಜಿನಂತೆ ಹೀರಿಕೊಳ್ಳುತ್ತಿದ್ದೇನೆ' ಎಂದು ತಿಳಿಸಿದರು.

ತಲಾ 16 ಬಾರಿ ಸೂರ್ಯೋದಯ, ಸೂರ್ಯಾಸ್ತ: 'ಬಾಹ್ಯಾಕಾಶ ನಿಲ್ದಾಣವು ದಿನಕ್ಕೆ 16 ಬಾರಿ ಭೂಮಿಯನ್ನು ಸುತ್ತುತ್ತಿದೆ. ಇಲ್ಲಿ ದಿನಕ್ಕೆ 16 ಸೂರ್ಯೋದಯ ಮತ್ತು 16 ಸೂರ್ಯಾಸ್ತಗಳನ್ನು ವೀಕ್ಷಿಸುವ ಸೌಭಾಗ್ಯ ನನಗೆ ದೊರೆತಿದೆ. ಸದ್ಯಕ್ಕೆ ನಾವು ಗಂಟೆಗೆ 28,000 ಕಿ.ಮೀ ವೇಗದಲ್ಲಿ ಪ್ರಯಾಣಿಸುತ್ತಿದ್ದೇವೆ. ಈ ವೇಗವು ನಮ್ಮ ದೇಶ ಎಷ್ಟು ವೇಗವಾಗಿ ಪ್ರಗತಿ ಹೊಂದುತ್ತಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ನಾವು ಅದನ್ನೂ ಮೀರಿ ಪ್ರಗತಿ ಹೊಂದಬೇಕು' ಎಂದು ಶುಕ್ಲಾ ಹೇಳಿದರು.

'ಕ್ಯಾರೆಟ್ ಮತ್ತು ಹೆಸರು ಕಾಳಿನ ಹಲ್ವಾ, ಮಾವಿನ ರಸವನ್ನು ಇಲ್ಲಿಗೆ ತಂದಿದ್ದೇನೆ. ಅವುಗಳನ್ನು ಇಲ್ಲಿನ ಗಗನಯಾನಿಗಳೂ ಸವಿಯಲಿದ್ದಾರೆ' ಎಂದರು.

'ಆಕ್ಸಿಯಂ-4' ಕಾರ್ಯಕ್ರಮದ ಭಾಗವಾಗಿ ಶುಕ್ಲಾ ಮತ್ತು ಇತರ ಮೂವರು ಗಗನಯಾನಿಗಳು ಗುರುವಾರ ಐಎಸ್‌ಎಸ್ ತಲುಪಿದ್ದಾರೆ. ಇವರು ಅಲ್ಲಿ 14 ದಿನಗಳವರೆಗೆ ವಾಸ್ತವ್ಯ ಇರಲಿದ್ದು, ಹಲವು ವೈಜ್ಞಾನಿಕ ಸಂಶೋಧನೆಗಳನ್ನು ಕೈಗೊಳ್ಳಲಿದ್ದಾರೆ. ಪ್ರಸ್ತುತ ಐಎಸ್‌ಎಸ್‌ನಲ್ಲಿ ಆರು ದೇಶಗಳ 11 ಗಗನಯಾನಿಗಳು ಇದ್ದಾರೆ.

'ಮಲಗುವುದು ದೊಡ್ಡ ಸವಾಲು'

'ಇಲ್ಲಿ ಎಲ್ಲವೂ ವಿಭಿನ್ನವಾಗಿದೆ. ಬಾಹ್ಯಾಕಾಶ ನಿಲ್ದಾಣದಲ್ಲಿನ ಸೂಕ್ಷ್ಮ ಗುರುತ್ವ ಪರಿಸ್ಥಿತಿಗಳಂತೂ ಇನ್ನೂ ವಿಭಿನ್ನವಾಗಿದೆ. ಇಲ್ಲಿನ ಪರಿಸರಕ್ಕೆ ಹೊಂದಿಕೊಳ್ಳುವುದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಇಲ್ಲಿ ಮಲಗುವುದು ದೊಡ್ಡ ಸವಾಲು' ಎಂದು ಶುಭಾಂಶು ಶುಕ್ಲಾ ಅವರು ಅನುಭವ ಹಂಚಿಕೊಂಡರು.

'ಬಾಹ್ಯಾಕಾಶದಿಂದ ಭಾರತವನ್ನು ಮೊದಲ ಬಾರಿಗೆ ನೋಡಿದಾಗ, ಭವ್ಯವಾಗಿ ಮತ್ತು ನಕ್ಷೆಯಲ್ಲಿರುವುದಕ್ಕಿಂತ ದೊಡ್ಡದಾಗಿ ಕಂಡು ಬಂದಿತು. ಯಾವುದೇ ಗಡಿ, ರೇಖೆಗಳಿಲ್ಲದೆ ಇಡೀ ಭೂಮಿ ನಮ್ಮ ಮನೆ ಮತ್ತು ನಾವೆಲ್ಲರೂ ಅದರ ನಾಗರಿಕರು ಎಂಬ ಏಕತೆಯ ಭಾವನೆ ಮೂಡುತ್ತದೆ' ಎಂದು ಅವರು ವಿವರಿಸಿದರು.

ನಟಿ ಶೆಫಾಲಿ ಜರಿವಾಲಾ ನಿಧನ

ಪ್ರಜಾವಾಣಿ ವಾರ್ತೆ

ಮುಂಬೈ: ನಟಿ, ರೂಪದರ್ಶಿ ಶೆಫಾಲಿ ಜರಿವಾಲಾ (42) ಶುಕ್ರವಾರ ರಾತ್ರಿ ಮುಂಬೈನಲ್ಲಿ ಮೃತಪಟ್ಟಿದ್ದಾರೆ.

ಶುಕ್ರವಾರ ರಾತ್ರಿ 11.15ರ ಸುಮಾರಿಗೆ ಶೆಫಾಲಿ ಅವರಿಗೆ ಹೃದಯಸ್ತಂಭನವಾಗಿದ್ದು, ಅವರ ಪತಿ ಪರಾಗ್ ತ್ಯಾಗಿ ಅಂಧೇರಿಯ ಬೆಲ್ಲೆವ್ಯೂ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಕರೆದೊಯ್ದರು. ಆದರೆ, ಅವರು ಆಸ್ಪತ್ರೆಗೆ ತಲುಪುವ ವೇಳೆಗಾಗಲೇ ಅಸುನೀಗಿದ್ದಾರೆ ಎಂದು ಆಸ್ಪತ್ರೆ ವೈದ್ಯರು ಘೋಷಿಸಿದ್ದಾರೆ.

ಅಂಧೇರಿಯ ನಿವಾಸದಲ್ಲಿ ಅವರ ಶವ ಪತ್ತೆಯಾಗಿದೆ. ಈ ಮಾಹಿತಿ ಪೊಲೀಸರಿಗೆ ರಾತ್ರಿ 1ಗಂಟೆಗೆ ತಲುಪಿತು. ಕೂಪರ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಗಿದೆ. ಅವರ ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಶೆಫಾಲಿ ಹೃದಯಾಘಾತದಿಂದ ಮೃತಪಟ್ಟಿರುವುದನ್ನು ಆಲ್ ಇಂಡಿಯನ್ ಸಿನಿ ವರ್ಕರ್ಸ್ ಅಸೋಸಿಯೇಷನ್ ಖಚಿತಪಡಿಸಿದೆ. 'ಶೆಫಾಲಿ ಈಗ ನಮ್ಮೊಂದಿಗಿಲ್ಲ. ಕೇವಲ 42ನೇ ವಯಸ್ಸಿನಲ್ಲೇ ಹೃದಯಾಘಾತದಿಂದ ಮೃತಪಟ್ಟಿದ್ದಾರೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಶೆಫಾಲಿ ಸಂಗೀತಗಾರ ಹರ್ಮಿತ್ ಸಿಂಗ್ ಅವರನ್ನು 2004ರಲ್ಲಿ ಮದುವೆಯಾಗಿದ್ದರು. ಆದರೆ, 2009ರಲ್ಲಿ ಅವರು ಪ್ರತ್ಯೇಕಗೊಂಡರು. ನಂತರ, 2015ರಲ್ಲಿ ನಟ ಪರಾಗ್ ತ್ಯಾಗಿ ಅವರನ್ನು ವಿವಾಹವಾಗಿದ್ದರು.

2011ರಲ್ಲಿ ಬಿಡುಗಡೆಯಾದ ಕನ್ನಡದ 'ಹುಡುಗರು' ಚಿತ್ರದ 'ತೊಂದ್ರೆ ಇಲ್ಲ ಪಂಕಜ' ಹಾಡಿಗೆ ಶೆಫಾಲಿ ನೃತ್ಯ ಮಾಡಿ ಜನಪ್ರಿಯರಾಗಿದ್ದರು. 2002ರಲ್ಲಿ ಹೊರತಂದ 'ಕಾಂಟಾ ಲಗಾ' ಆಲ್ಬಂ ಶೆಫಾಲಿ ಅವರಿಗೆ ಹೆಸರು ತಂದುಕೊಟ್ಟಿತ್ತು.

'ಬಿಹಾರ: ಅಗತ್ಯ ದಾಖಲೆ ಸಲ್ಲಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರದಲ್ಲಿ ಚುನಾವಣಾ ಆಯೋಗವು ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ನಡೆಸುತ್ತಿದ್ದು, ರಾಜ್ಯದ 7.89 ಕೋಟಿ ಮತದಾರರ ಪೈಕಿ 2.93 ಕೋಟಿ ಮತದಾರರು ತಮ್ಮ ಅರ್ಹತೆಯ ದಾಖಲೆಗಳನ್ನು ಸಲ್ಲಿಸಬೇಕಿದೆ.

'ಪ್ರತಿ ಮತದಾರರ ಅರ್ಹತೆಯನ್ನು ಪರಿಶೀಲಿಸುವ ಕಾರ್ಯ ಬಿಹಾರದಲ್ಲಿ ಈಗಾಗಲೇ ಆರಂಭವಾಗಿದ್ದು, ಎಲ್ಲ ಪಕ್ಷಗಳು ಪೂರ್ಣವಾಗಿ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿವೆ' ಎಂದು ಚುನಾವಣಾ ಆಯೋಗ ಶನಿವಾರ ತಿಳಿಸಿದೆ.

'ಈ ಹಿಂದೆ ಬಿಹಾರದಲ್ಲಿ 2003ರಲ್ಲಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ನಡೆದಿತ್ತು. ಆ ಪಟ್ಟಿಯಲ್ಲಿ 4.96 ಕೋಟಿ ಮತದಾರರ ಹೆಸರುಗಳಿವೆ. ಹೀಗಾಗಿ ಅವರುಗಳಿಗೆ ಸಂಬಂಧಿಸಿದಂತೆ ಸರಳ ಪರಿಶೀಲನೆಯಷ್ಟೇ ನಡೆಯುತ್ತದೆ. ಈ ಪಟ್ಟಿಯಲ್ಲಿ ಹೆಸರು ಇಲ್ಲದ ಮತದಾರರು ನಿಗದಿತ ಅರ್ಜಿ ನಮೂನೆಯ ಜತೆಗೆ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಬೇಕು' ಎಂದು ಆಯೋಗ ವಿವರಿಸಿದೆ.

ಆಯೋಗದ ಈ ಪ್ರಕ್ರಿಯೆಯನ್ನು ಟೀಕಿಸಿರುವ ವಿರೋಧ ಪಕ್ಷಗಳು, ಬಿಹಾರದ ಚುನಾವಣೆ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಹಿಂಬಾಗಿಲ ಮೂಲಕ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು (ಎನ್‌ಆರ್‌ಸಿ) ತರುತ್ತಿದೆ ಎಂದು ದೂರಿದ್ದಾರೆ.

ಅಸಹಜ ಲೈಂಗಿಕ ದೌರ್ಜನ್ಯ: ನೃತ್ಯ ಶಿಕ್ಷಕನಿಗೆ 52 ವರ್ಷ ಜೈಲು ಶಿಕ್ಷೆ

ತಿರುವನಂತಪುರ (ಪಿಟಿಐ): ಅಸಹಜ ರೀತಿಯಲ್ಲಿ 7 ವರ್ಷದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ 46 ವರ್ಷದ ಸುನಿಲ್ ಕುಮಾರ್ ಎಂಬ ನೃತ್ಯ ಶಿಕ್ಷಕನಿಗೆ ಕೇರಳದ ತ್ವರಿತ ವಿಚಾರಣಾ ವಿಶೇಷ ನ್ಯಾಯಾಲಯವು (ಪೋಕ್ಸೊ) ಒಟ್ಟು 52 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಪೋಕ್ಸೊ ಮತ್ತು ಬಾಲನ್ಯಾಯ ಕಾಯ್ದೆ ಅಡಿಯಲ್ಲಿ ಶಿಕ್ಷೆ ಪ್ರಮಾಣ ಪ್ರಕಟಿಸಲಾಗಿದೆ. ಎಲ್ಲ ಶಿಕ್ಷೆಗಳು ಏಕಕಾಲದಲ್ಲಿ ಜಾರಿಗೆ ಬರುವ ಕಾರಣಕ್ಕೆ ಸುನಿಲ್, ಒಟ್ಟು 20 ವರ್ಷ ಜೈಲುವಾಸ ಅನುಭವಿಸಬೇಕಾಗುತ್ತದೆ. ಜೊತೆಗೆ, ₹3.25 ಲಕ್ಷ ದಂಡವನ್ನೂ ವಿಧಿಸಲಾಗಿದೆ. ಈ ಹಣವನ್ನು ಸಂತ್ರಸ್ತ ಬಾಲಕನಿಗೆ ಪರಿಹಾರವಾಗಿ ನೀಡಲಾಗುವುದು ಎಂದಿತು.

2017-19ರ ಅವಧಿಯಲ್ಲಿ ಬಾಲಕನ ಮೇಲೆ ಸುನಿಲ್, ಪದೇ ಪದೇ ಲೈಂಗಿಕ ದೌರ್ಜನ್ಯ ಎಸಗಿದ್ದನು.

ಕೋಲ್ಕತ್ತ ಕಾನೂನು ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ಪ್ರಕರಣ

ಕಾಲೇಜಿನ ಭದ್ರತಾ ಸಿಬ್ಬಂದಿ ಬಂಧನ

ಕೋಲ್ಕತ್ತ (ಪಿಟಿಐ): ದಕ್ಷಿಣ ಕೋಲ್ಕತ್ತದ ಕಾನೂನು ಪದವಿ ವಿದ್ಯಾರ್ಥಿನಿ ಮೇಲೆ ಜೂನ್ 25ರಂದು ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಾಲೇಜಿನ ಭದ್ರತಾ ಸಿಬ್ಬಂದಿಯನ್ನು ಶನಿವಾರ ಬಂಧಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಮೂವರನ್ನು ಬಂಧಿಸಲಾಗಿತ್ತು.

'ಕಾಲೇಜಿನಲ್ಲಿದ್ದ ಸಿ.ಸಿ ಟಿವಿ ದೃಶ್ಯಾವಳಿ ಗಮನಿಸಿ, ಭದ್ರತಾ ಸಿಬ್ಬಂದಿಯನ್ನು ಶನಿವಾರ ಬೆಳಿಗ್ಗೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು. ವಿಚಾರಣೆಗೆ ಸಹಕರಿಸದ ಕಾರಣ, ನಂತರ ಅವರನ್ನು ಬಂಧಿಸಲಾಯಿತು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಭದ್ರತಾ ಸಿಬ್ಬಂದಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ವಿಫಲರಾಗಿದ್ದಾರೆ. ಘಟನೆ ನಡೆದ ವೇಳೆ ಅವರೊಬ್ಬರು ಮಾತ್ರ ಇದ್ದರೇ ಎಂಬುದು ಇನ್ನಷ್ಟೇ ತಿಳಿಯಬೇಕಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಾಲೇಜಿಗೆ ಬಿಗಿ ಭದ್ರತೆ: ಇಲ್ಲಿನ ಕಸಬಾ ಪ್ರದೇಶದಲ್ಲಿರುವ ಕಾಲೇಜಿನ ಆವರಣಕ್ಕೆ ಬಿಗಿಭದ್ರತೆ ಕಲ್ಪಿಸಲಾಗಿದ್ದು, ಒಳ ಹಾಗೂ ಹೊರ ಆವರಣದಲ್ಲಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ. ಅಪರಾಧ ಕೃತ್ಯ ನಡೆದ ಯೂನಿಯನ್ ಕೊಠಡಿ, ಭದ್ರತಾ ಕೊಠಡಿಯನ್ನು ಸೀಲ್ ಮಾಡಲಾಗಿದೆ. ಕಾಲೇಜಿಗೆ ಪ್ರವೇಶ ಕಲ್ಪಿಸುವ ಅರ್ಟಿಯಲ್ ರಸ್ತೆಯಲ್ಲಿ ಶನಿವಾರ ವಾಹನ ಸಂಚಾರ ಎಂದಿನಂತಿತ್ತು.

ಪ್ರತಿಭಟನೆ: ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಭದ್ರತೆ ಕಲ್ಪಿಸಲು ತೃಣಮೂಲ ಸರ್ಕಾರವು ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿ, ಬಿಜೆಪಿ ಹಾಗೂ ಎಡಪಕ್ಷಗಳ ಸದಸ್ಯರು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ರ‍್ಯಾಲಿಗೆ ತಡೆ: ಕೃತ್ಯ ಖಂಡಿಸಿ ನಗರದ ಕೇಂದ್ರ ಸಚಿವ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ನೇತೃತ್ವದಲ್ಲಿ ಗೈರಾಹಾಟ್‌ನಿಂದ ಕಾಲೇಜಿನವರೆಗೆ ಶನಿವಾರ ಬಿಜೆಪಿ ಬೃಹತ್ ರ‍್ಯಾಲಿ ನಡೆಸಲು ನಿರ್ಧರಿಸಿತ್ತು.

ಪತ್ರ ಬರೆದ ಮಹಿಳಾ ಆಯೋಗ

ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ತಕ್ಷಣ ಕ್ರಮ ಕೈಗೊಳ್ಳಬೇಕು ಹಾಗೂ ಸಂತ್ರಸ್ತೆ ಕುಟುಂಬಸ್ಥರ ಜೊತೆ ಸಭೆ ನಡೆಸಲು ಆಯೋಗದ ಸದಸ್ಯೆ ಅರ್ಚನಾ ಮಜುಂದಾರ್ ಅವರಿಗೆ ಸೂಕ್ತ ಭದ್ರತೆ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ರಾಷ್ಟ್ರೀಯ ಮಹಿಳಾ ಆಯೋಗವು ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಒತ್ತಾಯಿಸಿದೆ.

ಪ್ರಕರಣವು 'ಗಂಭೀರವಾಗಿದ್ದು, ಸಾರ್ವಜನಿಕ ಆತ್ಮಸಾಕ್ಷಿಯನ್ನು ಕಲುಕಿದೆ' ಎಂದು ಆಯೋಗದ ಅಧ್ಯಕ್ಷೆ ವಿಜಯ ರಹಟ್ಕರ್ ಅವರು ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಶುಕ್ರವಾರ ಈ ಸಂಬಂಧ ಆಯೋಗವು ಸ್ವಯಂಪ್ರೇರಿತ ದೂರು ದಾಖಲಿಸಿದೆ.

ಎಸ್‌ಐಟಿ ರಚನೆ

ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಸಹಾಯಕ ಕಮಿಷನರ್ ನೇತೃತ್ವದಲ್ಲಿ ಐದು ಸದಸ್ಯರ ವಿಶೇಷ ತನಿಖಾ ತಂಡ(ಎಸ್‌ಐಟಿ)ವನ್ನು ರಚಿಸಲಾಗಿದೆ.

> **ಬಂಗಾಳದಲ್ಲಿ ಮಹಿಳೆಯರಿಗೆ ಯಾವುದೇ ಭದ್ರತೆಯಿಲ್ಲ. ರಾಜ್ಯದಲ್ಲಿ ಅವರು ಸುರಕ್ಷಿತರಲ್ಲ**
> **ಸುಕಾಂತ ಮಜುಂದಾರ್,** ಪಶ್ಚಿಮ ಬಂಗಾಳ ಬಿಜೆಪಿ ಘಟಕದ ಅಧ್ಯಕ್ಷ

ದೂರಿನಲ್ಲೇನಿದೆ?

- ಭದ್ರತಾ ಸಿಬ್ಬಂದಿ ಮನವಿ ಮಾಡಿದ್ದರೂ, ನೆರವಿಗೆ ಬಂದಿರಲಿಲ್ಲ
- ಅತ್ಯಾಚಾರವೆಸಗಿದ್ದ ವ್ಯಕ್ತಿ ವಕೀಲ, ಗುತ್ತಿಗೆ ಆಧಾರದಲ್ಲಿ ಅಧ್ಯಾಪಕನಾಗಿ ಕೆಲಸ
- ಮದುವೆ ಪ್ರಸ್ತಾಪ ತಿರಸ್ಕರಿಸಿದ್ದಕ್ಕೆ ಅತ್ಯಾಚಾರ
- ಇಬ್ಬರು ವಿದ್ಯಾರ್ಥಿಗಳಿಂದ ಕೃತ್ಯದ ಚಿತ್ರೀಕರಣ
- ರಾತ್ರಿ 7.30ರಿಂದ 10.30ರವರೆಗೆ ನಡೆದಿದ್ದ ಕೃತ್ಯ

ಇದೋ ನೋಡಿ ಹಲಸಿನ ಸಂತೆ
ಕೋಲಾರ ಜಿಲ್ಲೆಯ ಟಮಕ ಗ್ರಾಮದ ತೋಟಗಾರಿಕೆ ಮಹಾವಿದ್ಯಾಲಯದ ಆವರಣದಲ್ಲಿ ನಿಂತರೆ ಹಲಸಿನ ಸಂತೆಯಲ್ಲಿ ನಿಂತ ಅನುಭವವಾಗುತ್ತದೆ.

ಉತ್ತರಾಖಂಡ್‌ನ 'ಕೌರಿ ಟಾಪ್' ಶಿಖರದ ಮೇಲೆ ತ್ರಿವರ್ಣ ಧ್ವಜ ಹಾರಿಸಿದ ಸಂಭ್ರಮದಲ್ಲಿ ಮೈಸೂರಿನ ಪೌರಕಾರ್ಮಿಕರ ಮಕ್ಕಳು, ಮಾವುತರು ಹಾಗೂ ಅರಣ್ಯ ವೀಕ್ಷಕರ ತಂಡ

ಚಾಮುಂಡಿ ಬೆಟ್ಟ ಏರದವರು ಹಿಮಾಲಯ ಏರಿದಾಗ!

ಹಿಮಾಲಯ ಎನ್ನುವುದು ಶ್ರಮಿಕರು, ಬಡವರಿಗೆ ಕೈಗೆಟುಕದ ಪರ್ವತ. ಪೌರಕಾರ್ಮಿಕರ ಮಕ್ಕಳು, ಮಾವುತ–ಕಾವಾಡಿಗಳು ಹಾಗೂ ಅರಣ್ಯ ಗಸ್ತು ವೀಕ್ಷಕರ ಚಾರಣದ ಕನಸು ನನಸಾಗಲು 165ಕ್ಕೂ ಹೆಚ್ಚು ಪರ್ವತಾರೋಹಿಗಳು ಕೈ ಜೋಡಿಸಿದರು. ಹಿಮಾಲಯ ಎಂಬುದು ಈಗ ಅವರಿಗೆ ಹೃದ್ಯವಾಗಿದೆ. 'ಜೂನೂನ್– 2025' ಹಿಮಾಲಯ ಸಾಹಸ ಯಾತ್ರೆಯನ್ನು ಇದೇ ಏಪ್ರಿಲ್–ಮೇನಲ್ಲಿ ಕೈಗೊಳ್ಳಲಾಗಿತ್ತು.

• ಮೋಹನ್ ಕುಮಾರ ಸಿ.

ನಿತ್ಯಶ್ರೀ ಮೈಸೂರಿನ ಹೆಬ್ಬಾಳದ ಪೌರಕಾರ್ಮಿಕ ದಂಪತಿ ಜಯರಾಮು–ನಾಗವೇಣಿ ಅವರ ಪುತ್ರಿ. ಈಕೆ ಸಮೀಪವೇ ಇರುವ ಚಾಮುಂಡಿ ಬೆಟ್ಟವನ್ನು ಒಮ್ಮೆಯೂ ಹತ್ತಿರಲಿಲ್ಲ. ಈಕೆಯನ್ನು ಹಿಮಾಲಯ ಚಾರಣಕ್ಕೆ ಆಹ್ವಾನಿಸಿದಾಗ ಸ್ವತಃ ನಿತ್ಯಶ್ರೀಯೇ ನಕ್ಕಿದ್ದಳು. ಈಕೆಯ ಪೋಷಕರು 'ಅಟ್ಟವನ್ನೇ ಏರದವಳು ಹಿಮಾಲಯ ಏರುವಳೇ' ಎಂದು ತಮಾಷೆ ಮಾಡಿದ್ದರು. ಹಿಮಾಲಯ ಏರುವುದು ನಿತ್ಯಶ್ರೀ ಮತ್ತು ಅವಳ ಅಪ್ಪ–ಅಮ್ಮನಿಗೆ ತಮಾಷೆಯಂತೆ, ಕನಸಿನಂತೆ, ಭ್ರಮೆಯಂತೆ ಅನಿಸಿತ್ತು. ಆದರೆ, ಮೈಸೂರಿನ 'ಟೈಗರ್ ಅಡ್ವೆಂಚರ್ ಫೌಂಡೇಷನ್'ನವರು ನಿತ್ಯಶ್ರೀ ಹಿಮಾಲಯವನ್ನು ಏರಿ ತ್ರಿವರ್ಣ ಧ್ವಜ ಹಾರಿಸುವಂತೆ ಮಾಡಿಯೇ ಬಿಟ್ಟರು. ಹೌದು, ಇದು ಕೇವಲ ನಿತ್ಯಶ್ರೀ ಒಬ್ಬಳ ಕತೆಯಲ್ಲ; ಪೌರಕಾರ್ಮಿಕರು, ದಸರಾ ಆನೆಗಳ ಮಾವುತರು–ಕಾವಾಡಿಗಳು, ಅರಣ್ಯ ಗಸ್ತು ಸಿಬ್ಬಂದಿಯೂ ಈ ಸಾಹಸದಲ್ಲಿ ಜೊತೆಯಾಗಿ ರಾಷ್ಟ್ರಧ್ವಜವನ್ನು ಎತ್ತಿ ಹಿಡಿದು ತಮ್ಮ ಸಾಧನೆಗೆ ಹೆಮ್ಮೆಪಟ್ಟಿದ್ದಾರೆ.

ಇದು ಶುರುವಾಗಿದ್ದು ಹೀಗೆ–ಹಿಮಾಲಯ ಚಾರಣ ಕೇವಲ ಹಣವಿದ್ದವರಿಗೆ ಮಾತ್ರವೇ? ನಗರವನ್ನು ಸ್ವಚ್ಛಗೊಳಿಸಿ ಜನರ ಆರೋಗ್ಯವನ್ನು ಕಾಪಾಡುವ ಪೌರಕಾರ್ಮಿಕರ ಮಕ್ಕಳನ್ನೇಕೆ ಕರೆದೊಯ್ಯಬಾರದು ಎಂಬ ಯೋಚನೆ 'ಟೈಗರ್ ಅಡ್ವೆಂಚರ್ ಫೌಂಡೇಷನ್'ಗೆ ಬಂದಿತು. ಈ ಉದಾತ್ತ ಯೋಚನೆಯ ಸಾಹಸವನ್ನು ಸಾಧ್ಯವಾಗಿಸಲು ಹತ್ತಾರು ಮಂದಿ ಜೊತೆಯಾದರು. ಅಷ್ಟೇ ಅಲ್ಲದೇ, ಚಾರಣಕ್ಕೆ ಪೌರಕಾರ್ಮಿಕ ಮಕ್ಕಳನ್ನು ಕರೆತರುವುದು, ಅವರಿಗೆ ತರಬೇತಿ ನೀಡಿ ಅಣಿಗೊಳಿಸುವುದು ಕೂಡ ಸಂಸ್ಥೆಗೆ ಸವಾಲೇ ಆಗಿತ್ತು. ಎಂಟು ಮಂದಿ ಪೌರಕಾರ್ಮಿಕರ ಮಕ್ಕಳೊಂದಿಗೆ ಕಳೆದ ದಸರಾದಲ್ಲಿ ಪಾಲ್ಗೊಂಡಿದ್ದ ಮಾವುತ–ಕಾವಾಡಿಗಳಾದ ಜಯಬಾಲ, ನವೀನ್ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಗಸ್ತು ವೀಕ್ಷಕರಾದ ಕೆ.ಡಿ.ಮಧು ಮತ್ತು ಅನಂತ ಕುಮಾರ್ ಅವರನ್ನೂ ಪ್ರತಿಷ್ಠಾನವು ಚಾರಣ ತಂಡದೊಂದಿಗೆ ಸೇರಿಸಿಕೊಂಡಿತು.

2019ರಲ್ಲಿ ಆದಿವಾಸಿ ಮಕ್ಕಳಿಗೆ ಹಿಮಾಲಯ ಚಾರಣ ಮಾಡಿಸಿದ್ದ 'ಟೈಗರ್ ಅಡ್ವೆಂಚರ್ ಫೌಂಡೇಷನ್'ನ ಅಧ್ಯಕ್ಷ ಟೈಗರ್ ಡಿಎಸ್‌ಡಿ ಸೋಲಂಕಿ ಅವರಿಗೆ ಕೋವಿಡ್ ಸಂದರ್ಭದಲ್ಲಿ ಸೋಂಕಿನ ಭೀತಿಯ ನಡುವೆ ಜೀವ ಒತ್ತೆಯಿಟ್ಟು ದುಡಿದ ಪೌರಕಾರ್ಮಿಕರ ಮಕ್ಕಳಿಗೂ ಹಿಮಾಲಯ ತೋರಿಸಬೇಕೆಂಬ ಕನಸಿತ್ತು. ಈ ವಿಷಯವನ್ನು ತಮ್ಮ ಮನೆಗೆ ಕಸ ಸಂಗ್ರಹಿಸಲು ಬಂದ ಪೌರಕಾರ್ಮಿಕರಿಗೆ ಹೇಳಿದರು. ಅವರು ಆಸಕ್ತಿ ತೋರಿಸಲಿಲ್ಲ. ಹೀಗಾಗಿ, ಈ ಯೋಚನೆಯನ್ನು ಹಾಗೆಯೇ ಬಿಟ್ಟುಬಿಟ್ಟಿದ್ದರು.

2024ರ ಜುಲೈನಲ್ಲಿ ಮುಂದಿನ ಬೇಸಿಗೆಯಲ್ಲಾದರೂ ಪೌರಕಾರ್ಮಿಕ ಮಕ್ಕಳೊಂದಿಗೆ ಹಿಮಾಲಯ ಚಾರಣಕ್ಕೆ ಹೋಗಲೇಬೇಕು ಎಂಬ ಸಂಕಲ್ಪವನ್ನು ಮಾಡಿದರು. ಈ ಕುರಿತು ಗೆಳೆಯರಾದ ದಿಯಾ ಫೌಂಡೇಶನ್‌ನ ಟ್ರಸ್ಟಿ ನಮ್ರತಾ ಶೆಣೈ, ಫೋಟೊಗ್ರಾಫರ್ ಮಂಜು ಹಾಗೂ ಉಪನ್ಯಾಸಕ ಅನಿಲ್ ಕುಮಾರ್ ಅವರೊಂದಿಗೆ ಚರ್ಚಿಸಿದರು. ಪ್ರತಿದಿನ ಪೌರಕಾರ್ಮಿಕರ ಕಾಲೋನಿಗಳಿಗೆ ಇವರೆಲ್ಲರೂ ಅಲೆದು 'ನಿಮ್ಮ ಮಕ್ಕಳನ್ನು ಚಾರಣಕ್ಕೆ ಕಳುಹಿಸಿಕೊಡಿ. ನಮ್ಮದೇ ಖರ್ಚಿನಲ್ಲಿ ಕರೆದುಕೊಂಡು ಹೋಗುತ್ತೇವೆ. ಸುರಕ್ಷಿತವಾಗಿ ನಿಮಗೆ ತಂದೊಪ್ಪಿಸುತ್ತೇವೆ' ಎಂದು ಪರಿಪರಿಯಾಗಿ ಕೇಳಿಕೊಂಡರೂ ಯಾರೂ ಒಪ್ಪಲಿಲ್ಲ. 'ಇವರ್‍ಯಾರೋ ಮಕ್ಕಳ ಕಳ್ಳರಿರಬೇಕು' ಎಂದು ಪೌರಕಾರ್ಮಿಕರು ಅನುಮಾನಿಸಿದರು. ಅವರೇ ದುಡ್ಡು ಖರ್ಚು ಮಾಡಿ, ಹಿಮಾಲಯ ತೋರಿಸುತ್ತಾರೆ ಎಂದರೆ ಬೇರೇನೋ ಇರಬೇಕು ಎಂದು ಯಾರೊಬ್ಬರು ಇವರ ಮಾತಿಗೆ ಕಿವಿಗೊಡುತ್ತಿರಲಿಲ್ಲ.

ಏಕಲವ್ಯ ನಗರ, ಬನ್ನಿ ಮಂಟಪ, ಗೋಕುಲಂ, ಸಿಲ್ಕ್ ಫ್ಯಾಕ್ಟರಿ ಬಳಿಯ ಕಾಲೋನಿಗಳಿಗೆ ಹೋದಾಗೆಲ್ಲ ಇವರನ್ನು ನೋಡುತ್ತಲೇ ಪೌರಕಾರ್ಮಿಕರು ಜಾಗ ಖಾಲಿ ಮಾಡುತ್ತಿದ್ದರು! ಹೀಗಾಗಿ ಇವರು ನಿರಾಶೆಗೊಂಡರು. ದಸರಾ ಆನೆಗಳ ಮಾವುತರನ್ನಾದರೂ ಕರೆದೊಯ್ಯೋಣವೆಂದು ಪ್ರಯತ್ನಿಸಿದರು. ಅದೂ ಸಾಧ್ಯವಾಗಲಿಲ್ಲ. 13 ರಿಂದ 20 ವರ್ಷದೊಳಗಿನ ಕನಿಷ್ಠ ಹನ್ನೆರಡು ಮಂದಿಯಾದರೂ ತಂಡಕ್ಕೆ ಬೇಕಿತ್ತು. ಅಷ್ಟು ಮಂದಿ ಸಿಗಲಿಲ್ಲ.

ಪ್ರತಿದಿನ ಬೆಳಿಗ್ಗೆ ಪೌರಕಾರ್ಮಿಕರು ಸ್ವಚ್ಛತಾ ಕೆಲಸಕ್ಕೆ ಹೋಗುವ ಮುನ್ನ ಸೇರುವ ಪ್ರತಿ ವಾರ್ಡ್‌ನ ಜಾಗಗಳಿಗೆ ಅಲೆಯುವುದೇ ಸೋಲಂಕಿ ಮತ್ತವರ ಸಂಗಡಿಗರ ಕೆಲಸವಾಯಿತು. ಹೆಬ್ಬಾಳ ವಾರ್ಡ್‌ನ ಪಾಲಿಕೆಯ ಮಾಜಿ ಸದಸ್ಯೆ ಪ್ರೇಮಾ ಶಂಕರೇಗೌಡ ಅವರಲ್ಲಿ, 'ಹೀಗೊಂದು ಆಲೋಚನೆಯಿದ್ದು, ಪೌರಕಾರ್ಮಿಕರೊಂದಿಗೆ ಮಾತನಾಡಬಹುದೇ' ಎಂದು ವಿನಂತಿಸಿಕೊಂಡರು. ಅಲ್ಲಿದ್ದ ಮೂವತ್ತು ಪೌರಕಾರ್ಮಿಕರನ್ನೂ ಅವರು ಒಪ್ಪಿಸಿದರು. ಮಕ್ಕಳ ಆಧಾರ್ ಕಾರ್ಡ್ ಸೇರಿದಂತೆ ದಾಖಲೆಗಳನ್ನು ಕೊಡುವಂತೆ ಕೇಳಿದಾಗ ಅಲ್ಲಿದ್ದವರಲ್ಲಿ ಹನ್ನೆರಡು ಮಂದಿ ಮಾತ್ರ ದಾಖಲೆ ತಂದುಕೊಟ್ಟರು. ಅವರಲ್ಲಿ 'ಫಿಟ್‌ನೆಸ್' ಪರೀಕ್ಷೆಯಲ್ಲಿ ಆಯ್ಕೆ ಆದವರು ಎಂಟು ಮಂದಿ ಮಾತ್ರ.

ಪೌರಕಾರ್ಮಿಕರ ಮಕ್ಕಳ ಜೊತೆ ಮಾವುತರನ್ನು ಕರೆದೊಯ್ಯಲು ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್ ಅವರನ್ನು ಪ್ರತಿಷ್ಠಾನವು ಸಂಪರ್ಕಿಸಿತು. ಅವರು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಸೀಮಾ ಅವರೊಂದಿಗೆ ಮಾತನಾಡಿ, ಅರಣ್ಯ ಇಲಾಖೆಯ ಗಸ್ತು ವೀಕ್ಷಕರು ಹಾಗೂ ಇಬ್ಬರು ಮಾವುತರನ್ನು ಚಾರಣಕ್ಕೆ ಕಳುಹಿಸಲು ಅನುಮತಿ ಕೊಡಿಸಿದರು. ಇವರೊಂದಿಗೆ ಆಲನಹಳ್ಳಿಯ ಶಾಶ್ವತ ಸೇವಾ ಶಾಲೆಯ ವಿದ್ಯಾರ್ಥಿಗಳಾದ ಅಂಜನಾ, ಮಿಂಚು ಅವರೂ ಸೇರಿ ಹದಿನಾಲ್ಕು ಮಂದಿಯ ತಂಡ ಅಣಿಗೊಂಡಿತು.

ಮರಿಮಲ್ಲಪ್ಪ ಪಿಯುಸಿ ಕಾಲೇಜಿನ ಉಪನ್ಯಾಸಕರೂ, ಚಾರಣಿಗರೂ ಆದ ಅನಿಲ್ ಕುಮಾರ್, ಸಂತೋಷ್, ನಂಜುಂಡಸ್ವಾಮಿ, ಹರ್ಷವರ್ಧನ್ ಸೇರಿದಂತೆ ಒಂಬತ್ತು ಜನರ ತಂಡ ಮಕ್ಕಳಿಗೆ ನಿತ್ಯ ತರಬೇತಿ ನೀಡಲು ಆರಂಭಿಸಿತು. ಕುಕ್ಕರಹಳ್ಳಿ ಕೆರೆಯಲ್ಲಿ ನಡಿಗೆ ಅಭ್ಯಾಸದ ಜೊತೆಗೆ ವಾರದ ಕೊನೆಯಲ್ಲಿ ಚಾಮುಂಡಿ ಬೆಟ್ಟ, ಕಬಿನಿ ಹಿನ್ನೀರು, ಕುಂತಿಬೆಟ್ಟ, ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಬೆಟ್ಟಕ್ಕೆ ಕರೆದೊಯ್ದು ಸಜ್ಜುಗೊಳಿಸಿದರು. ಏಪ್ರಿಲ್ 5 ರಿಂದ ನಡೆದ ತಯಾರಿಯು 20 ರಂದು 10 ಕಿಲೋಮೀಟರ್ 'ಜೋಶ್ ರನ್'ನೊಂದಿಗೆ ಪೂರ್ಣಗೊಂಡಿತು.

'ಏಪ್ರಿಲ್ 23ರಂದು ಬೆಂಗಳೂರಿನಿಂದ ಉತ್ತರಾಖಂಡದ 'ಕೌರಿ ಟಾಪ್' ಶಿಖರಕ್ಕೆ 24 ಜನರ ತಂಡ ಹೊರಟಿತು. ಆದರೆ, ಏಪ್ರಿಲ್ 22 ರಂದು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ದಾಳಿ ನಡೆಸಿದ್ದರಿಂದ ದೇಶದಲ್ಲಿ ಉಂಟಾಗಿದ್ದ ಭೀತಿ ತಂಡಕ್ಕೂ ತಟ್ಟಿತು. 24 ರಂದು ದೆಹಲಿ ತಲುಪಿ ಆಗ್ರಾದ ತಾಜ್‌ಮಹಲ್ ಸೇರಿದಂತೆ ಅಲ್ಲಿನ ಪ್ರೇಕ್ಷಣೀಯ ಸ್ಥಳ ತೋರಿಸಲಾಯಿತು. ನಂತರ ನವದೆಹಲಿಯ ಹೊಸ ಸಂಸತ್ ಭವನ, ರಾಷ್ಟ್ರಪತಿ ಭವನದಲ್ಲಿ ನಡೆಯುವ 'ಚೇಂಜ್ ಆಫ್ ಗಾರ್ಡ್ಸ್' ಅನ್ನು ನೋಡಿ, ಉತ್ತರಾಖಂಡದ ಹೃಷಿಕೇಶವನ್ನು ಬಸ್ ಮೂಲಕ ತಲುಪಿದೆವು' ಎಂದು ಟೈಗರ್ ಸೋಲಂಕಿ ಹೇಳಿದರು.

12ನೇ ಪುಟಕ್ಕೆ...

ಎಲ್ಲವೂ ಮೊದಲು..

ಪೌರಕಾರ್ಮಿಕರ ಮಕ್ಕಳಿಗೆ ಇಡೀ ಯಾತ್ರೆಯೇ ಹಲವು 'ಮೊದಲ' ಮಧುರ ನೆನಪುಗಳನ್ನು ಉಳಿಸಿದೆ. ಇವರಲ್ಲಿ ಯಾರೊಬ್ಬರು ವಿಮಾನ ಪ್ರಯಾಣ ಮಾಡಿರಲಿಲ್ಲ. ಬೆಟ್ಟ, ಕಾಡು–ಮೇಡು ಅಲೆದಿದ್ದ ಮಾವುತ, ಕಾವಾಡಿಗರಿಗೂ ಮೋಡಗಳ ನಡುವಿನ ಪ್ರಯಾಣ ಮರೆಯಲಾಗದ ಖುಷಿ ಉಳಿಸಿದೆ.

'ಎರಡು ವರ್ಷದ ಹಿಂದೆ ದಸರಾ ಏರ್‌ಶೋನಲ್ಲಿ ವಿಮಾನ ನೋಡಲು ಪಂಜಿನ ಕವಾಯತು ಮೈದಾನಕ್ಕೆ ಹೋಗಿದ್ದೆ. ಚಿಕ್ಕಂದಿನಿಂದಲೂ ವಿಮಾನವನ್ನು ಆಕಾಶದಲ್ಲಿ ನೋಡುತ್ತಿದ್ದೆಯಷ್ಟೇ. ವಿಮಾನದಲ್ಲಿ ಹೋಗಿದ್ದು ಖುಷಿ ಆಯಿತು' ಎನ್ನುತ್ತಾರೆ ಹೆಬ್ಬಾಳದ ಪೌರಕಾರ್ಮಿಕ ದಂಪತಿ ಶಿವರಾಮು–ಜಯಾ ಅವರ ಪುತ್ರ ಪುನೀತ್.

ಮತ್ತಿಗೋಡು ಆನೆ ಶಿಬಿರದಲ್ಲಿ ಮಾವುತ, ಕಾವಾಡಿಯಾಗಿರುವ ಜಯಬಾಲು ಮತ್ತು ನವೀನ್ ಅವರು 'ವಿಮಾನ ಪ್ರಯಾಣವನ್ನು ನೆನೆದರೆ ಮೈ ಜುಮ್ಮೆನುತ್ತದೆ' ಎಂದು ಈಗಲೂ ಹೇಳುತ್ತಾರೆ. 'ದೆಹಲಿ, ಅಮೃತಸರ, ಆಗ್ರಾ ನೋಡಿದ್ದನ್ನು ನಮಗೆ ನಂಬಲು ಆಗುತ್ತಿರಲಿಲ್ಲ' ಎಂದರು.

'ಆನೆಗಳ ಜೊತೆ ಕಾಡು–ಮೇಡು, ಹುಲಿ, ಆನೆ ಸೆರೆ ಕಾರ್ಯಾಚರಣೆಯಲ್ಲಿ ಮೈಲಿಗಟ್ಟಲೆ ನಡೆದಿದ್ದೇವೆ. ಆದರೆ, ವಿಮಾನ ಪ್ರಯಾಣ ಮಾಡಿರಲಿಲ್ಲ. ಮೇಲಿಂದ ಭೂಮಿ ಕಂಡಾಗ ಆದ ಖುಷಿ ಅಷ್ಟಿಷ್ಟಲ್ಲ. ಹಿಮಾಲಯ ಏರುವುದು ನಮಗೆ ಅಷ್ಟು ಕಷ್ಟ ಅನಿಸಲಿಲ್ಲ. ಎಲ್ಲರೂ ಜೊತೆಗಿದ್ದರಲ್ಲ ಅದಕ್ಕೆ ಭಯವಾಗಲಿಲ್ಲ. ಈಗ ನಮ್ಮ ಆನೆ ಕ್ಯಾಂಪಲ್ಲಿ ನಮ್ಮನ್ನು, 'ಡೆಲ್ಲಿ– ಕಾಶ್ಮೀರಕ್ಕೆ ಹೋಗಿ ಬಂದವ್ರು' ಅಂತ ಕರೀತಾರೆ. ಅದಕ್ಕಿಂತ ಇನ್ನೇನು ಬೇಕು' ಎಂದು 'ಶ್ರೀರಂಗ' ಆನೆಯ ಕಾವಾಡಿ ಜಯಬಾಲು ಸಂತಸ ಹಂಚಿಕೊಂಡರು.

ದಸರಾದಲ್ಲಿ ಪಾಲ್ಗೊಳ್ಳುತ್ತಿರುವ 'ಗೋಪಿ' ಆನೆಯ ಕಾವಾಡಿ ನವೀನ್ ತಮ್ಮಣ್ಣ ಅವರೂ ಇದೇ ಅನುಭವ ಹೇಳಿಕೊಂಡರು.

ಕುಕ್ಕರಹಳ್ಳಿ ಕೆರೆಯಲ್ಲಿ ಮಕ್ಕಳಿಗೆ ತರಬೇತಿ

ಚಾರಣದ ಹಾದಿಯಲ್ಲಿ

ಬಂಗಾರವಾದ ಬಂಜರು ನೆಲ ಬೇಸಿಗೆಯಲ್ಲೂ ಬತ್ತದ ಜಲ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಮಳೆಗಾಲದಲ್ಲಿ ಬೆಟ್ಟಗುಡ್ಡಗಳಿಂದ ಇಳಿದ ವ್ಯರ್ಥವಾಗಿ ಹರಿದು ಹೋಗುತ್ತಿದ್ದ ನೀರಿಗೆ ಚೆಕ್ ಡ್ಯಾಂ, ನಾಲಾ ಬಂಡ್‌ಗಳು, ಕಲ್ಲಿನ ತಡೆಗೋಡೆಗಳನ್ನು ನಿರ್ಮಿಸಲಾಯಿತು. ಈಗ ಅವುಗಳಲ್ಲಿ ನೀರು ನಿಂತು ಸಾವಿರಾರು ಎಕರೆ ಹಸಿರು ಹೊದ್ದು ಕಂಗೊಳಿಸುತ್ತಿದೆ.

• ಚಂದ್ರಶೇಖರ ಎಸ್ ಚಿನಕೇಕರ

ಸುತ್ತಲೂ ಬೆಟ್ಟಗುಡ್ಡಗಳ ಸಾಲು. ಕೃಷಿ ಮಾಡಲು ಅನ್ನದಾತನಿಗೆ ಇದೇ ಸವಾಲು. ಎಷ್ಟು ಭೂಮಿ ಇದ್ದರೇನು ಫಲ? ನಿಲ್ಲೋದೇ ಇಲ್ಲ ಇಲ್ಲಿ ಜೀವಜಲ...ಹೀಗೆ ಕಳೆದ ಮೂರು ವರ್ಷಗಳ ಹಿಂದೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕೋಥಳಿ, ಚಿಂಚಣಿ, ಹಿರೇಕೋಡಿ ಮುಂತಾದ ಗ್ರಾಮಗಳ ರೈತರು ಗೊಣಗಿಕೊಳ್ಳುತ್ತಿದ್ದರು.

ಇಂದು ಹಾಗಿಲ್ಲ. ಬರಡು ನೆಲವು ಬಂಗಾರವಾಗಿದೆ. ಬಂಜರುಭೂಮಿಯು ಕೃಷಿಗೆ ಯೋಗ್ಯವಾಗಿದೆ. ಇದಕ್ಕೆಲ್ಲ ಕಾರಣ ಬೆಟ್ಟಗುಡ್ಡ, ಹಳ್ಳಕೊಳ್ಳಗಳಿಗೆ ಕಟ್ಟಿದ ಚೆಕ್ ಡ್ಯಾಂ, ನಾಲಾ ಬಂಡ್‌ಗಳು. ಇವುಗಳು ವ್ಯರ್ಥವಾಗಿ ಹರಿಯುವ ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ಅನುಕೂಲ ಮಾಡಿವೆ. ಬೆಟ್ಟಗುಡ್ಡಗಳಿಂದ ಕೂಡಿದ ಈ ಭಾಗದಲ್ಲಿ ಮಳೆ ಸುರಿದರೆ ಕಾದ ಹಂಚಿನ ಮೇಲೆ ನೀರು ಸುರಿದಂತೆಯೇ ಸರಿ. ನೀರು ವ್ಯರ್ಥವಾಗಿ ಹರಿದು ಹೋಗುತ್ತಿತ್ತು. ಹೀಗೆ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ತಡೆದು ನಿಲ್ಲಿಸಿದ್ದರಿಂದ ಬೆಟ್ಟಗುಡ್ಡಗಳು ಹಸಿರ ಹೊದಿಕೆ ಹೊದ್ದಿದ್ದರೆ, ಬಂಜರು ಭೂಮಿ ಹಸಿರ ತೆನೆ ಹೊತ್ತು 'ತಾನ...ತನನನ' ಅಂತಾ ಹಾಡು ಹಾಡುತ್ತಿದೆ.

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಜಲಾನಯನ ಘಟಕದ ಅಡಿಯಲ್ಲಿ 2022-25ನೇ ಸಾಲಿನ ಮೂರು ವರ್ಷಗಳ ಅವಧಿಯಲ್ಲಿ ಹಿರೇಕೋಡಿ ಉಪ ಜಲಾನಯನ ಯೋಜನೆಯ 6195 ಹೆಕ್ಟೇರ್ ಪ್ರದೇಶದಲ್ಲಿ 58 ಚೆಕ್ ಡ್ಯಾಂ, 68 ನಾಲಾ ಬಂಡ್, 20 ಕಲ್ಲಿನ ತಡೆಗೋಡೆ, 2800 ಹೆಕ್ಟೇರ್ ಪ್ರದೇಶದಲ್ಲಿ ಬದು ನಿರ್ಮಾಣ ಮಾಡಲಾಗಿದೆ. ಹೀಗೆ ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ತಡೆದು ನಿಲ್ಲಿಸಲಾಗುತ್ತಿದೆ. ಇದರಿಂದ 800 ಅಡಿಗೂ ಹೆಚ್ಚು ಆಳಕ್ಕೆ ಕೊಳವೆ ಕೊರೆದರೂ ಬಾರದ ನೀರು ಇದೀಗ 400-500 ಅಡಿಗೆ ಉಕ್ಕುತ್ತಿದೆ. ಬೇಸಿಗೆಯಲ್ಲೂ ಬೇಸಾಯ ಮಾಡುವ ಶಕ್ತಿ ಈ ಭಾಗದ ರೈತರಲ್ಲಿ ಬಂದಿದೆ!

ಯೋಜನೆ ವ್ಯಾಪ್ತಿಯು ನಾಗರಾಳ, ಹಿರೇಕೋಡಿ, ಕೋಥಳಿ, ಚಿಂಚಣಿ ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿದ್ದು, ಹತ್ತಕ್ಕೂ ಹೆಚ್ಚು ಗ್ರಾಮಗಳ ಸಾವಿರಾರು ರೈತರು ಈ ಯೋಜನೆಯ ಲಾಭವನ್ನು ಪಡೆದುಕೊಂಡಿದ್ದಾರೆ. ಮೂರು ವರ್ಷಗಳ ಹಿಂದೆ ಆರು ಎಕರೆ ಜಮೀನು ಇದ್ದ ರೈತ ಕೇವಲ 2-3 ಎಕರೆ ಭೂಮಿಯನ್ನು ನೀರಾವರಿಗೊಳಪಡಿಸುವಷ್ಟು ನೀರು ಲಭ್ಯವಾಗುತ್ತಿತ್ತು; ಅದೂ ಮಳೆಗಾಲದಲ್ಲಿ. ಬೇಸಿಗೆಯಲ್ಲಿ ಬೆಳೆ ಬೆಳೆಯದೇ ಹಾಗೇ ಬಿಡಲಾಗುತ್ತಿತ್ತು.

13ನೇ ಪುಟಕ್ಕೆ...

ಬೆಟ್ಟಗುಡ್ಡಗಳಲ್ಲಿ ಕಟ್ಟಿದ ಚೆಕ್‌ಡ್ಯಾಂ



ಪ್ರಜಾವಾಣಿ
ದೀಪಾವಳಿ ವಿಶೇಷಾಂಕ 2025
ದೀಪಾವಳಿ ಕಥಾ–ಕವನ ಸ್ಪರ್ಧೆಯ ಪ್ರವೇಶಗಳಿಗೆ ಆಹ್ವಾನ

ಪ್ರವೇಶಗಳು ತಲುಪಲು ಕೊನೆಯ ದಿನ
31ನೇ ಜುಲೈ, 2025
ಕನ್ನಡ ಕಥಾ ಜಗತ್ತಿನ ವಾರ್ಷಿಕ ಸಂಭ್ರಮ

ಕಥಾ ಸ್ಪರ್ಧೆ
ಮೊದಲ ಬಹುಮಾನ ₹ 20,000
ಎರಡನೇ ಬಹುಮಾನ ₹ 15,000
ಮೂರನೇ ಬಹುಮಾನ ₹ 10,000

ಕವನ ಸ್ಪರ್ಧೆ
ಮೊದಲ ಬಹುಮಾನ ₹ 5,000
ಎರಡನೇ ಬಹುಮಾನ ₹ 3,000
ಮೂರನೇ ಬಹುಮಾನ ₹ 2,500

ಕಥೆ – ಕವನ ಕಳಿಸುವ ಮುನ್ನ

- ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು
- ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು
- ಕಥೆ- ಕವನಗಳು ಯೂನಿಕೋಡ್‌ನಲ್ಲಿ ಇರಬೇಕು
- ಕಥೆ/ ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ-ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು
- ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು
- 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'ನ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ.
- ಸ್ಪರ್ಧೆಗೆ ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ
- ಬಹುಮಾನಿತ ಕಥೆ, ಕವನಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕುಗಳನ್ನು 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್' ಕಾಯ್ದಿರಿಸಿಕೊಂಡಿದೆ
- ಸಂಪಾದಕರ ತೀರ್ಮಾನವೇ ಅಂತಿಮ

ಇ–ಮೇಲ್: deepavali@prajavani.co.in

ವಿಳಾಸ
ಸಂಪಾದಕರು, ದೀಪಾವಳಿ ವಿಶೇಷಾಂಕ ವಿಭಾಗ ಪ್ರಜಾವಾಣಿ,
ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–560001

ಈ ಹಲಸಿನ ತೋಟಕ್ಕೀಗ ಐವತ್ತರ ಹರೆಯ



• ಗಾಣಧಾಳು ಶ್ರೀಕಂಠ

ಗೇಟ್ ದಾಟುತ್ತಿದ್ದಂತೆ ಕಾಯಿಗಳಿಂದ ಭರ್ತಿಯಾದ ಹಲಸಿನ ಮರಗಳು ಸಾಲಿನಲ್ಲಿ ನಿಂತು ಸ್ವಾಗತ ಕೋರುತ್ತಿದ್ದವು. ನಾಲ್ಕೈದು ಮಾರು ಹಾಗೇ ಹೆಜ್ಜೆ ಹಾಕುತ್ತಾ ಎಡಕ್ಕೆ ತಿರುಗಿದರೆ ಹಲಸು, ಬಲಕ್ಕೆ ತಿರುಗಿದರೂ ಹಲಸು, ರಸ್ತೆಯ ತುದಿಗೆ ಹೋಗಿ ಅಲ್ಲಿದ್ದ ಕಟ್ಟಡ ಏರಿ ನಿಂತರೆ ಅಲ್ಲೂ ಹಲಸು.

ಕೋಲಾರ ಜಿಲ್ಲೆಯ ಟಮಕ ಗ್ರಾಮದ ತೋಟಗಾರಿಕೆ ಮಹಾವಿದ್ಯಾಲಯದ ಆವರಣದಲ್ಲಿ ನಿಂತರೆ ಹಲಸಿನ ಸಂತೆಯಲ್ಲಿ ನಿಂತ ಅನುಭವ ಆಗುತ್ತದೆ. ಕೋಲಾರ ನಗರದಿಂದ 10 ಕಿಲೋಮೀಟರ್ ದೂರದಲ್ಲಿದೆ ಈ ತೋಟಗಾರಿಕೆ ವಿದ್ಯಾಲಯ. ಇದಕ್ಕೆ ರಾಜ್ಯದ ಮೊದಲ ಹಲಸಿನ ತಳಿ ಸಂರಕ್ಷಣಾ ಕ್ಷೇತ್ರ ಅನ್ನುವ ಹೆಗ್ಗಳಿಕೆಯೂ ಇದೆ.

46 ಎಕರೆಯಲ್ಲಿ ಅಂಗಳದ ತುಂಬಾ 1,600ಕ್ಕೂ ಹೆಚ್ಚು ಹಲಸಿನ ಮರಗಳಿವೆ. ಪ್ರತಿ ಮರಕ್ಕೂ ಒಂದೊಂದು ಸಂಖ್ಯೆ ಇದೆ. ಕೆಲ ಮರದ ಬುಡದಲ್ಲಿ ತಳಿ ವಿವರದ ಫಲಕಗಳಿವೆ. ಒಂದೊಂದು ಮರದಲ್ಲಿನ ಹಲಸಿನ ಕಾಯಿಯ ಆಕಾರ, ಗಾತ್ರ, ಮೇಲ್ಮೈ ಲಕ್ಷಣಗಳು ವಿಭಿನ್ನ. ಒಂದು ಮರದಲ್ಲಿ ಕೊಂಬೆಗಳಿಗೇ ಕಾಯಿಗಳು ಜೋತಾಡುತ್ತಿದ್ದರೆ, ಇನ್ನೊಂದು ಮರದಲ್ಲಿ ಬುಡದಿಂದ ನೆತ್ತಿಯವರೆಗೂ ತಬ್ಬಿಕೊಂಡಿರುವ ಕಾಯಿಗಳು. ಮರದ ಬುಡದಲ್ಲಿ, ನೆಲದಲ್ಲಿ ಹುದುಗಿರುವ ರೆಂಬೆಯಿಂದಲೇ ಕಾಯಿಗಳು ಟಿಸಿಲೊಡೆದಿವೆ. ಇಲ್ಲಿ ಅಂಟು ಕಡಿಮೆ ಇರುವ ಹಲಸಿದೆ. ವರ್ಷಪೂರ್ತಿ ಹಲಸು ಬಿಡುವ ಹಲಸಿನ ಮರಗಳೂ ಅಲ್ಲಲ್ಲಿ ಕಾಣುತ್ತವೆ. ಹೀಗೆ ತೋಟದ ತುಂಬ ವಿಶಿಷ್ಟ ಹಲಸಿನ ತಳಿಗಳ ಲೋಕವೇ ಅನಾವರಣಗೊಂಡಿದೆ.

ತೋಟಗಾರಿಕೆ ಕಾಲೇಜಿನ ಆವರಣದಲ್ಲಿರುವ ಹಲಸಿನ ಮರ

ಅರ್ಧ ಶತಮಾನದ ತೋಟ

ಈ ಹಲಸಿನ ಕ್ಷೇತ್ರ, ಕರ್ನಾಟಕದ 'ತೋಟಗಾರಿಕೆ ಪಿತಾಮಹ' ದಿವಂಗತ ಎಂ.ಎಚ್. ಮರೀಗೌಡ ಅವರ ಕನಸಿನ ಕೂಸು, ಅವರ ದೂರದೃಷ್ಟಿಯ ಫಲ. 1969, ಮಹಾತ್ಮಗಾಂಧಿಯವರ ಜನ್ಮ-ಶತಮಾನೋತ್ಸವ ವರ್ಷ. ಅದರ ನೆನಪಿಗಾಗಿ ತೋಟಗಾರಿಕೆ ಇಲಾಖೆಯಿಂದ ಕರ್ನಾಟಕದಾದ್ಯಂತ 100 ಹಣ್ಣಿನ ತೋಟಗಳನ್ನು ಮಾಡಬೇಕೆಂದು ಮರೀಗೌಡರು ಸಂಕಲ್ಪ ಮಾಡಿದರು. ಆ ಪ್ರಯತ್ನದ ಭಾಗವಾಗಿಯೇ ಟಮಕದಲ್ಲಿ ಹಲಸಿನ ತೋಟ ತಲೆ ಎತ್ತಿತು.

'ಭೂಸ್ವಾಧೀನ ಮತ್ತಿತರ ಪ್ರಕ್ರಿಯೆಯಿಂದಾಗಿ 1973ರಲ್ಲಿ ಅಧಿಕೃತವಾಗಿ ಈ ಹಲಸಿನ ತೋಟದಲ್ಲಿ ಸಸಿಗಳನ್ನು ಬೆಳೆಸುವ ಕಾರ್ಯ ಶುರುವಾಯಿತು. ಈಗಿರುವ ಅಲ್ಲಿನ ಬಹುತೇಕ ಮರಗಳು 1973–75ರ ನಡುವೆ ನಾಟಿ ಮಾಡಿರುವಂತಹವು' ಎಂದು ನಿವೃತ್ತ ತೋಟಗಾರಿಕಾ ಅಧಿಕಾರಿ ಎಸ್.ವಿ. ಹಿತ್ತಲಮನಿಯವರು, ಮರೀಗೌಡರ ಕಾರ್ಯವನ್ನು ಹೆಮ್ಮೆಯಿಂದ ನೆನಪಿಸಿಕೊಂಡರು.

ಈ ಹಲಸಿನ ತೋಟ(ಹಲಸಿನ ಕ್ಷೇತ್ರ)ದಲ್ಲಿ ಆರಂಭದಿಂದಲೇ ಬೀಜಗಳಿಂದ ಸಸಿ ಮಾಡಿ ಬೆಳೆಸಲಾಗಿದೆ. ತೋಟಗಾರಿಕೆ ಇಲಾಖೆ ಅಧಿಕಾರಿಗಳು ಎಲ್ಲೆಲ್ಲಿ ಗುಣಮಟ್ಟದ ಹಣ್ಣುಗಳ ಕಂಡರೂ, ಅವುಗಳ ಬೀಜಗಳನ್ನು ಸಂಗ್ರಹಿಸಿ, ತಂದು, ಸಸಿ ಮಾಡಿ ಕಕ್ಕುಲತೆಯಿಂದ ಇಲ್ಲಿ ಬೆಳೆಸಿದ್ದಾರೆ. ಸುಮಾರು ಮೂರೂವರೆ ದಶಕಗಳ ಕಾಲ (2008ರವರೆಗೆ), ಇಲಾಖೆಯ ಅಧಿಕಾರಿಗಳು ಹಲಸಿನ ತೋಟವನ್ನು ಆಸ್ಥೆ, ಅಕ್ಕರೆಯಿಂದ ಆರೈಕೆ ಮಾಡಿ, ರಕ್ಷಿಸಿದ್ದಾರೆ. ಆ ಆರೈಕೆಯ ಕುರುಹುಗಳು, ತೋಟದಲ್ಲಿರುವ ಮರಗಳಲ್ಲಿ ಕಾಣುತ್ತದೆ.

ಇಲಾಖೆಯಿಂದ ವಿವಿಗೆ ಹಸ್ತಾಂತರ...

2009ರಲ್ಲಿ ಹಲಸಿನ ಕ್ಷೇತ್ರದಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯಕ್ಕೆ ಸೇರಿದ ತೋಟಗಾರಿಕೆ ಕಾಲೇಜು ಆರಂಭವಾಯಿತು. ಆನಂತರ ಇಲಾಖೆಯ ಸುಪರ್ದಿಯಲ್ಲಿದ್ದ ಹಲಸಿನ ತೋಟವನ್ನು, ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲಾಯಿತು. ಇಲಾಖೆಯೊಟ್ಟಿಗಿದ್ದಾಗ ತಳಿ ಸಂಗ್ರಹಣಾ ಕೇಂದ್ರವಾಗಿದ್ದ ಈ ಕ್ಷೇತ್ರ, ವಿಶ್ವವಿದ್ಯಾಲಯಕ್ಕೆ ಹಸ್ತಾಂತರವಾದ ನಂತರ ವೈಜ್ಞಾನಿಕವಾಗಿ ತಳಿ ಅಭಿವೃದ್ಧಿಯಂತಹ ಚಟುವಟಿಕೆಗಳು ಆರಂಭವಾಗಿ, ಈಗ ತಳಿ ಸಂರಕ್ಷಣಾ ಕೇಂದ್ರವಾಗಿದೆ. ವಿಶ್ವವಿದ್ಯಾಲಯ, ಕಾಲೇಜಿನ ವಿಜ್ಞಾನಿಗಳು, ಮರಗಳನ್ನು ಆರೈಕೆ ಮಾಡುವ ಜೊತೆಗೆ ತಳಿ ಅಭಿವೃದ್ಧಿಯನ್ನೂ ಮುಂದುವರಿಸಿದ್ದಾರೆ.

ಕಾಲೇಜಿನ ಸಿಬ್ಬಂದಿ ಮರಗಳಿಗೆ ಕಾಲಕಾಲಕ್ಕೆ ನೀರು, ಗೊಬ್ಬರ ನೀಡಿ ಆರೈಕೆ ಮಾಡುತ್ತಿದ್ದಾರೆ. ಕೆಲವು ಕಡೆ ಸ್ವಾಭಾವಿಕವಾಗಿ ಮರಗಳು ನಶಿಸಿದ್ದರೂ, ಅವುಗಳ ಸಂಖ್ಯೆ ವಿರಳ. ಹಾಗೆ ಬಿದ್ದು ಹೋಗಿರುವ ಮರಗಳ ಜಾಗದಲ್ಲಿ ಮತ್ತೆ ಹಲಸಿನ ಸಸಿಗಳನ್ನು ನಾಟಿ ಮಾಡಿದ್ದಾರೆ. ಹಲಸಿನ ಮರಗಳ ನಡುವೆ ಇರುವ ಜಾಗದಲ್ಲೇ ಕಲ್ಲುಬೆಂಚುಗಳನ್ನು ಅಳವಡಿಸಿದ್ದಾರೆ. ವಿದ್ಯಾರ್ಥಿಗಳು ಬೆಂಚಿನ ಮೇಲೆ ಕುಳಿತು ಓದುತ್ತಾರೆ, ಚರ್ಚೆ ಸಂವಾದ ನಡೆಸುತ್ತಾರೆ.

'ಖಾಲಿ ಇರುವ ಜಾಗದಲ್ಲಿ ಮಾತ್ರ ಈ ಪ್ರದೇಶಕ್ಕೆ ಹೊಂದುವಂತಹ ಬೇರೆ ಬೇರೆ ಹಣ್ಣಿನ ಗಿಡಗಳನ್ನು ನಾಟಿ ಮಾಡಿದ್ದೇವೆ. ಅದು ಕಾಲೇಜಿನ ವಿದ್ಯಾರ್ಥಿಗಳಿಗೆ ಹಾಗೂ ರೈತರಿಗೆ ಪ್ರಾತ್ಯಕ್ಷಿಕೆ ನೀಡುವುದಕ್ಕಾಗಿ. ಅದನ್ನು ಹೊರತುಪಡಿಸಿ, ಈ ತಾಣವನ್ನು ಹಲಸಿನ ಕ್ಷೇತ್ರವಾಗಿಯೇ ಸಂರಕ್ಷಿಸಿದ್ದೇವೆ' ಎಂದು ವಿವರಿಸಿದರು ತೋಟಗಾರಿಕೆ ಕಾಲೇಜಿನ ಡೀನ್ ರಾಘವೇಂದ್ರ ಮೇಸ್ತ.

ಕನಸು ನನಸಾಗಿದೆ...

'ಈ ಹಲಸಿನ ತೋಟ ಭವಿಷ್ಯದಲ್ಲಿ ತಳಿ ಸಂರಕ್ಷಣಾ ಕ್ಷೇತ್ರವಾಗಬೇಕು (ಪ್ರೊಜನಿ ಆರ್ಚರ್ಡ್)' ಎನ್ನುವುದು ಮರೀಗೌಡರ ಆಲೋಚನೆಯಾಗಿತ್ತು' ಎಂದು ಹಿತ್ತಲಮನಿಯವರು ನೆನಪಿಸಿಕೊಳ್ಳುತ್ತಾರೆ. ಬೇರೆ ಬೇರೆ ಕಡೆ ಸಿಗುವ ಉತ್ತಮ ಗುಣಮಟ್ಟದ ಹಲಸಿನ ಸಸಿಗಳನ್ನು ತಂದು ಇಲ್ಲಿ ಬೆಳೆಸಬೇಕು. ಅವುಗಳಲ್ಲಿ ಉತ್ತಮವಾಗಿ ಬೆಳೆಯುವ, ಇಳುವರಿ ನೀಡುವ, ಗುಣಮಟ್ಟದ ತಳಿಗಳನ್ನು ಆಯ್ಕೆ ಮಾಡಿ, ಸಸಿಗಳನ್ನು ಅಭಿವೃದ್ಧಿಪಡಿಸಿ ರೈತರಿಗೆ ನೀಡುವಂತಹ ಕೇಂದ್ರವಾಗಬೇಕು ಎಂದು ಮರೀಗೌಡರು ಕನಸು ಕಂಡಿದ್ದರಂತೆ.

ಮರೀಗೌಡರ ಕನಸು ನನಸಾಗಲಾರಂಭಿಸಿದೆ. ತೋಟಗಾರಿಕೆ ಕಾಲೇಜಿನ ಹಣ್ಣು ವಿಭಾಗದ ವಿಜ್ಞಾನಿ ನಾಗರಾಜ್ ಅವರು ಹಲಸಿನ ತೋಟದಲ್ಲಿರುವ ಉತ್ತಮ ತಳಿಗಳನ್ನು ಆಯ್ಕೆ ಮಾಡಿಕೊಂಡು, ಮೂರು ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿ, ಬಿಡುಗಡೆ ಮಾಡಿದ್ದಾರೆ. ಒಂದು ತಳಿಗೆ ಮರೀಗೌಡರ ಹೆಸರಿಡುವ ಮೂಲಕ, ಅವರಿಗೆ ಗೌರವ ಸಲ್ಲಿಸಿದ್ದಾರೆ.

'ಒಂಬತ್ತು ವರ್ಷಗಳಿಂದ ತಳಿ ಅಭಿವೃದ್ಧಿ ಕೆಲಸ ನಡೆಯುತ್ತಿದೆ. ಕೃಷ್ಣಪ್ರಭ ಮರೀಗೌಡ ಆರೆಂಜ್, ಕೃಷ್ಣಪ್ರಭ ಟಮಕ ಗಮ್‌ಲೆಸ್ ಮತ್ತು ಕೃಷ್ಣಪ್ರಭ ಟಮಕ ಸೂಪರ್ ಎಂಬ ಮೂರು ತಳಿಗಳನ್ನು ಅಭಿವೃದ್ಧಿಪಡಿಸಿದ್ದೇವೆ. ಸಸಿ ಮಾಡಿ ರೈತರಿಗೂ ವಿತರಿಸಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ತಳಿಗಳ ಅಭಿವೃದ್ಧಿಪಡಿಸುವ ಯೋಚನೆ ಇದೆ' ಎಂದು ನಾಗರಾಜ್ ವಿವರಿಸಿದರು.

ಈ ಹಲಸಿನ ಕ್ಷೇತ್ರದಲ್ಲಿ ಬೆಳೆಯುವ ಹಣ್ಣುಗಳನ್ನು ಪ್ರತಿ ವರ್ಷ ಹರಾಜು ಹಾಕಲಾಗುತ್ತದೆ. ವ್ಯಾಪಾರಸ್ಥರು, ಈ ಹರಾಜಿನಲ್ಲೇ ಹಣ್ಣುಗಳನ್ನು ಖರೀದಿಸುತ್ತಾರೆ. ಕೆಲವರು, ಕಾಲೇಜಿನ ಎದುರಿನ ರಸ್ತೆ ಬದಿಯಲ್ಲೇ ಮಾರಾಟ ಮಾಡುತ್ತಾರೆ ಎಂದು ಕಾಲೇಜಿನ ಆವರಣದಲ್ಲಿರುವ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಶಿವಾನಂದ ಹೊಂಗಲ್ ಹೇಳಿದರು.

ಇಷ್ಟೆಲ್ಲ ವಿಶೇಷಗಳಿರುವ ಈ ಹಲಸಿನ ಕ್ಷೇತ್ರದಲ್ಲಿ ಹಿಂದೆ ಹಣ್ಣುಗಳ ಸಂಸ್ಕರಣೆ, ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ ಯಂತಹ ಶ್ರುತ ಪ್ರಯತ್ನಗಳು ನಡೆದಿವೆ. 'ಹಲಸಿನ ಪ್ರವಾಸೋದ್ಯಮ' ಆರಂಭಿಸುವ ಚಿಂತನೆಯೂ ಮೊಳೆತಿದ್ದನ್ನು ಕಾಲೇಜಿನ ಸಿಬ್ಬಂದಿ ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಈಗಲೂ ಪ್ರತಿವರ್ಷ ಕ್ಷೇತ್ರ ಭೇಟಿಗಾಗಿ ನೂರಾರು ರೈತರು, ವಿದ್ಯಾರ್ಥಿಗಳು ಬರುತ್ತಾರೆ. ಹೀಗಾಗಿ, ಹಳೆಯ ಎಲ್ಲ ಪ್ರಯತ್ನಗಳನ್ನು ಮುಂದುವರಿಸಲು, ಹೊಸ ಚಿಂತನೆಗಳನ್ನು ಜಾರಿ ಮಾಡಲು ಇದು ಸಕಾಲವಾಗಿದೆ. ❖

ಕಡಿಮೆ ಅಂಟು, ಕಿತ್ತಳೆ ಬಣ್ಣ

ತೋಟಗಾರಿಕೆ ವಿದ್ಯಾಲಯ ಅಭಿವೃದ್ಧಿಪಡಿಸಿರುವ 'ಕೃಷ್ಣಪ್ರಭ ಮರೀಗೌಡ ಆರೆಂಜ್' ತಳಿಯ ಹಲಸಿನ ತೊಳೆಗಳು ಕಿತ್ತಳೆ ಬಣ್ಣದ್ದಾಗಿವೆ. ಹೆಚ್ಚಿನ ಸಿಹಿ ಅಂಶ ಹೊಂದಿದೆ. ಒಂದು ಮರ ವರ್ಷಕ್ಕೆ 50 ರಿಂದ 60 ಹಣ್ಣುಗಳನ್ನು ಕೊಡುತ್ತದೆ. ಒಂದೊಂದು ಹಣ್ಣಿನಲ್ಲಿ 140ರಿಂದ 160 ತೊಳೆಗಳಿರುತ್ತವೆ.

'ಕೃಷ್ಣಪ್ರಭ ಟಮಕ ಗಮ್‌ಲೆಸ್ ತಳಿ'ಯ ಹಲಸಿನ ಹಣ್ಣು ಕಡಿಮೆ ಅಂಟನ್ನು ಹೊಂದಿದೆ. ತೊಳೆಗಳು ತಿಳಿ ಹಳದಿ ಬಣ್ಣದವು. ಒಂದು ಮರ ವರ್ಷಕ್ಕೆ 50 ರಿಂದ 80 ಹಣ್ಣುಗಳನ್ನು ಕೊಡುತ್ತದೆ. ಪ್ರತಿ ಹಣ್ಣಿನಲ್ಲಿ 170 ರಿಂದ 150 ತೊಳೆಗಳಿರುತ್ತವೆ.

'ಕೃಷ್ಣಪ್ರಭ ಟಮಕ ಸೂಪರ್', ಹಳದಿ ಬಣ್ಣದ ತೊಳೆಗಳನ್ನು ಹೊಂದಿದೆ. ತೊಳೆಗಳ ಗಾತ್ರವೂ ಅಧಿಕ. ಅಧಿಕ ರುಚಿಯ (ಜೇನುತುಪ್ಪದಂತಹ ರಸದ) ತೊಳೆಗಳನ್ನು ಹೊಂದಿದೆ. ಒಂದು ಮರ ವರ್ಷಕ್ಕೆ 60 ರಿಂದ 80 ಹಣ್ಣುಗಳನ್ನು ಕೊಡುತ್ತದೆ. ಪ್ರತಿ ಹಣ್ಣಲ್ಲಿ 148ರಿಂದ 160 ತೊಳೆಗಳಿರುತ್ತವೆ.

ನೂತನ ತಳಿಗಳ ಕುರಿತ ಹೆಚ್ಚಿನ ಮಾಹಿತಿಗಾಗಿ: 7026112404

ಕೃಷ್ಣಪ್ರಭ ಮರೀಗೌಡ ಆರೆಂಜ್ ತಳಿ

ಎಲ್ಲೆಲ್ಲೂ ಹಲಸು... ಕಾಲೇಜಿನ ಆವರಣದ ತುಂಬಾ ಹಲಸಿನ ಮರಗಳ ಕಾನು

ಚಿತ್ರಗಳು: ಕೃಷ್ಣ ಎಂ.ಆರ್., ಕೋಲಾರ

ರಾಯಚೂರಿನ ಐತಿಹಾಸಿಕ ಕೋಟೆ

• ಈರಣ್ಣ ಬೆಂಗಾಲಿ

'ಕರ್ನಾಟಕ ಒಂದು, ಹಲವು ಜಗತ್ತುಗಳು' ಎಂಬ ಮಾತಿದೆ. ಇದರಂತೆ ನಮ್ಮ ನಾಡಿನಲ್ಲಿ ನೋಡುವಂತಹ ಪ್ರೇಕ್ಷಣೀಯ ಸ್ಥಳಗಳು ಸಾಲು ಸಾಲು ಇವೆ. ಪ್ರತಿಯೊಂದು ಜಿಲ್ಲೆ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದೆ. ಇದರಂತೆ ವಿಶೇಷವಾಗಿ ಕರ್ನಾಟಕದ ರಾಯಚೂರು ಜಿಲ್ಲೆಯು ವಿಭಿನ್ನತೆಯಿಂದ ಕೂಡಿದೆ. ಇದು ಕಲೆ, ಸಾಹಿತ್ಯ, ಸಂಸ್ಕೃತಿ, ಭೌಗೋಳಿಕವಾಗಿ ಅಲ್ಲದೆ ಐತಿಹಾಸಿಕವಾಗಿಯೂ ಗಮನ ಸೆಳೆಯುತ್ತಿದೆ.

ರಾಯಚೂರು ಜಿಲ್ಲೆಯ ಉತ್ತರಕ್ಕೆ ಕೃಷ್ಣಾ ಮತ್ತು ದಕ್ಷಿಣಕ್ಕೆ ತುಂಗಭದ್ರಾ ನದಿಗಳು ಹರಿಯುತ್ತಿವೆ. ಎರಡು ನದಿಗಳ ಮಧ್ಯ ಇರುವ ರಾಯಚೂರು ಜಿಲ್ಲೆಯು ಇರ್ದೊರೆ ನಾಡು, ಎಡೆದೊರೆ ನಾಡು ಮತ್ತು ದೋ ಅಬ್ ಪ್ರದೇಶವೆಂದು ಖ್ಯಾತಿಯನ್ನು ಪಡೆದಿದೆ. ವಿಶೇಷವಾಗಿ ರಾಯಚೂರಿನ ನೆಲದಲ್ಲಿ ಈಗಲೂ ಐತಿಹಾಸಿಕ ಕುರುಹುಗಳು ಹೆಜ್ಜೆ ಹೆಜ್ಜೆಗೆ ಸಿಗುತ್ತವೆ. ರಾಯಚೂರು ಇತಿಹಾಸದ ನೆಲೆ ಎಂದು ಸಾರಿ ಸಾರಿ ಹೇಳುತ್ತವೆ.

ರಾಯಚೂರು ನಗರದ ಬಸ್ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆಯೇ ಬೆಟ್ಟ ಕಾಣುತ್ತದೆ. ಇದನ್ನು 'ಗುಬ್ಬೇರ ಬೆಟ್ಟ' ಎಂದು ಕರೆಯುವರು. ಐತಿಹಾಸಿಕವಾದ ಈ ಬೆಟ್ಟದ ಮೇಲೊಂದು ಕಲ್ಲಿನಲ್ಲಿ ಮಾಡಿದ ಸ್ಮಾರಕ ಇದೆ. ಇದು ಕಾವಲು ಕೋಟೆಯಂತೆ ಇದ್ದು, ಬೆಟ್ಟದ ತುತ್ತ ತುದಿಯಲ್ಲಿ ಕೋಟೆ ಕಟ್ಟಿ, ಇದರ ಮೂಲಕ ಶತ್ರುಗಳ ಚಲನವಲನವನ್ನು ಗುರುತಿಸಿ ಸದೆ ಬಡೆಯುವ ವ್ಯವಸ್ಥೆಯನ್ನು ಹೊಂದಿದ್ದರು. ಬೆಟ್ಟದ ಮೇಲಿನ ಈ ಕಟ್ಟಡವನ್ನು 'ಬಾಲ ಹಿಸ್ಸಾರ್' ಎಂದು ಕರೆಯಲಾಗುತ್ತದೆ. ಬಾಲ ಹಿಸ್ಸಾರ್ ಎಂದರೆ ಎತ್ತರದ ಕೋಟೆ ಎಂದರ್ಥ.

ಗುಬ್ಬೇರ ಬೆಟ್ಟ ಹತ್ತಲು ಎರಡು ಕಡೆ ಮೆಟ್ಟಿಗಳಿದ್ದು, ಬೆಟ್ಟ ಹತ್ತುವಾಗ ಎರಡು ದ್ವಾರಗಳು ಕಾಣಸಿಗುತ್ತವೆ. ಮೊದಲ ದ್ವಾರವು ಉತ್ತರಕ್ಕೆ ಮುಖ ಮಾಡಿದೆ. ಎರಡನೆಯ ದ್ವಾರವು ದಕ್ಷಿಣಕ್ಕೆ ಮುಖ ಮಾಡಿದೆ. ಬೆಟ್ಟದ ಮೇಲೆ ಶಿಥಿಲಗೊಂಡ ಕೋಟೆ, ಬೃಹತ್ ತೋಪು, ಇಸ್ಲಾಂ ಶೈಲಿಯ ಕಟ್ಟಡ, ಚೌಕಾಕಾರದ ದೊಡ್ಡ ಕಟ್ಟೆ, ಮಂಟಪದ ಅವಶೇಷಗಳಿವೆ, ಹಾಗೆಯೇ ಐದು ಗೋರಿಗಳಿವೆ.

ಬೆಟ್ಟದ ಮೇಲಿನ ಇತಿಹಾಸದ ಕುರುಹುಗಳ ಕುರಿತು ವಿವರವಾಗಿ ಹೇಳಬೇಕೆಂದರೆ ಬೆಟ್ಟದ ಮೇಲೆ ದಕ್ಷಿಣಕ್ಕೆ ಇರುವ ಮುಖ್ಯ ಕಟ್ಟಡಕ್ಕೆ ಕಮಾನುಗಳಿವೆ. ಇದರ ಛಾವಣಿ ಗುಮ್ಮಟ ಆಕಾರದಲ್ಲಿದೆ. ಕಟ್ಟಡದ ಒಳಗೆ ಉತ್ತರಕ್ಕೆ ಮೂರು ಕಮಾನುಗಳಲ್ಲಿ, ಮೂರು ಕಿಂಡಿಗಳಿವೆ. ಇವುಗಳ ಮೂಲಕ ವೈರಿಗಳನ್ನು ಹತ್ತಿಕ್ಕಲು ಸಾಧ್ಯವಾಗುತ್ತಿತ್ತು. ಕಟ್ಟಡದ ಇತರ ಭಾಗಗಳಲ್ಲಿಯೂ ಕಿಂಡಿಗಳಿದ್ದು ಅವುಗಳನ್ನು ಇಂದಿನವರು ಮುಚ್ಚಿದ್ದಾರೆ. ಈ ಮುಖ್ಯ ಕಟ್ಟಡದ ಬಲಗಡೆ ಚಿಕ್ಕ ಮಸೀದಿಯಂತಹ ಕಟ್ಟಡವಿದ್ದು ಇದಕ್ಕೆ ಮಿನಾರುಗಳಿದ್ದು, ಇದು ಕೂಡ ಶಿಥಿಲಾವಸ್ಥೆಯಲ್ಲಿದೆ. ಅದೇ ರೀತಿ ಮುಖ್ಯ ಕಟ್ಟಡದ ಎಡಗಡೆ ನಾಲ್ಕು ಕಲ್ಲಿನ ಸ್ತಂಭಗಳ ಮಂಟಪವಿದೆ. ಇದು ದೇವಾಲಯದ ಕುರುಹನ್ನು ಸೂಚಿಸುತ್ತದೆ ಅಥವಾ ಇವುಗಳನ್ನು ಯಾವುದಾದರೂ ದೇವಾಲಯದಿಂದ ಇಲ್ಲಿಗೆ ತಂದಿರಬೇಕು. ಇದಕ್ಕೆ ಗಾರೆಯ ಛಾವಣಿಯಿದ್ದು, ಹೂ, ಬಳ್ಳಿಗಳ ಚಿತ್ತಾರವನ್ನು ಬಿಡಿಸಲಾಗಿದೆ. ಅಪೂರ್ಣವಾಗಿ ಕೆತ್ತಿದ ಕುಳಿತ ಬಸವಣ್ಣನ ಶಿಲ್ಪವು ಮುಖ್ಯ ಕಟ್ಟಡದ ಕಮಾನುಗಳ ಕಿಂಡಿಯ ಮೂಲಕ ನೋಡಿದರೆ ಬೆಟ್ಟದ ಕಲ್ಲುಗಳ ಮಧ್ಯೆ ಇರುವುದನ್ನು ಕಾಣಬಹುದು.

ಕೋಟೆ ಮೇಲಿರುವ ಕಟ್ಟಡ



ಗುಬ್ಬೇರ ಬೆಟ್ಟದ ಮೇಲಿನ ಐತಿಹಾಸಿಕ ಕೋಟೆ

ಕೋಟೆಯೊಳಗಿನಿಂದ ಕಾಣುವ ರಾಯಚೂರು

ಮುಖ್ಯ ಕಟ್ಟಡದ ಮುಂದೆಯೇ ಚೌಕಾಕಾರದ ದೊಡ್ಡ ಕಟ್ಟೆಯೊಂದು ಇದೆ. ಇದು ಆಗ ಕೊಳವಾಗಿತ್ತೆಂದು ಊಹಿಸಲಾಗಿದೆ. ಈ ಕಟ್ಟೆಯ ಮುಂದೆ ಮೂವ್ವತ್ತೆರಡು ಅಡಿ ಸುತ್ತಳತೆಯ ವೃತ್ತಾಕಾರದ ಕಟ್ಟೆಯಿದ್ದು, ಈ ಕಟ್ಟೆಯ ಮಧ್ಯೆ ಜನರ ಗಮನ ಸೆಳೆಯುವ ಬೃಹದಾಕಾರದ ತೋಪು ಇದೆ. ಆಗ ತೋಪು 360 ಡಿಗ್ರಿಯಲ್ಲಿ ತಿರುಗಿ ಶತ್ರುಗಳ ಸಂಹಾರ ಮಾಡಲು ನೆರವಾಗುತ್ತಿತ್ತು. ಈಗ ಇದು ಒಂದುಕಡೆ ಬಿದ್ದಿದೆ. ಇದು ಇಪ್ಪತ್ತು ಅಡಿಯ ಉದ್ದವಿದ್ದು, ಮುಂದೆ ಐದು ಇಂಚು ಮತ್ತು ಹಿಂದೆ ನಾಲ್ಕು ಅಡಿ ಸುತ್ತಳತೆ ಇದ್ದು, ಟನ್ ಗಟ್ಟಲೆ ಭಾರವಿದೆ. ಇದನ್ನು ಅದ್ಹೇಗೆ ಬೆಟ್ಟದ ತುದಿಗೆ ತಂದರು ಎಂಬುದು ಗಮನಾರ್ಹ ಸಂಗತಿಯಾಗಿದೆ.

ಇದೇ ಗುಬ್ಬೇರ ಬೆಟ್ಟದ ಪಶ್ಚಿಮಕ್ಕೆ ಐದು ಗೋರಿಗಳಿವೆ. ಈ ಗೋರಿಗಳು ಪಂಚ ಕನ್ಯೆಯರಾಗಿದ್ದು, ಇದು ಪಾಂಚ ಬೀಬಿ ಪಹಾಡ ಎಂದು ಕೆಲವರು ಕರೆದರೆ, ಮತ್ತೆ ಕೆಲವರು ಇದನ್ನು ಪಂಚಲಿಂಗೇಶ್ವರ ದೇವಾಲಯ ಎಂದು ಕರೆಯುವರು. ಗುಬ್ಬೇರ ಬೆಟ್ಟದ ಸ್ಮಾರಕಗಳು ಶಿಥಿಲಾವಸ್ಥೆಯಲ್ಲಿದ್ದು, ಇವುಗಳನ್ನು ಉಳಿಸುವ ಕಾರ್ಯವಾಗಬೇಕಿದೆ. ಐತಿಹಾಸಿಕ ಗುಬ್ಬೇರ ಬೆಟ್ಟವನ್ನು ಸುಲಭವಾಗಿ ಹತ್ತಲು ಖಾಸ ಬಾವಿಯ ಎದುರುಗಡೆ ಮೆಟ್ಟಿಲುಗಳಿವೆ. ಅದೇ ರೀತಿ ಗಂಗಾ ನಿವಾಸದ ಎದುರಿಗೆ ಮೆಟ್ಟಿಲುಗಳಿದ್ದು, ಗುಬ್ಬೇರ ಬೆಟ್ಟ ಹತ್ತಿ ಅಲ್ಲಿನ ಐತಿಹಾಸಿಕ ಕುರುಹುಗಳನ್ನು ನೋಡಬಹುದು. ಬೆಟ್ಟದ ಮೇಲಿಂದ ರಾಯಚೂರು ನಗರದ ವಿಹಂಗಮ ನೋಟ ಮನಮೋಹಕವಾಗಿರುತ್ತದೆ. ದೂರದ ಶಕ್ತಿನಗರದ ವಿದ್ಯುತ್ ಚಿಮಣಿಗಳು, ಪುಟ್ಟದಾಗಿ ಕಾಣುವ ಖಾಸಬಾವಿ, ಮಾವಿನಕರೆ, ಜಿಲ್ಲಾ ಕ್ರೀಡಾಂಗಣ, ನಗರದ ಲಕ್ಷಾಂತರ ಮನೆಗಳ ಹರಡಿರುವಿಕೆ, ದೂರದ ಸಾಲು ಸಾಲು ಬೆಟ್ಟ, ನಿಸರ್ಗವನ್ನು ನೋಡುವುದೇ ಚೆಂದ. ❖

ಮುನ್ನೋಟ 29-06-2025 ರಿಂದ 05-07-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಹಣ ಸಂಪಾದನೆಯ ವಿಷಯದಲ್ಲಿ ಹೆಚ್ಚು ತಲೆಕೆಡಿಸಿಕೊಳ್ಳುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಮಧ್ಯವರ್ತಿಗಳಾಗಿ ಕೆಲಸವನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಕಾಲ. ಕಾಡುತ್ತಿದ್ದ ರೋಗಗಳು ಈಗ ದೂರವಾಗುತ್ತವೆ. ನೀವು ಅಪೇಕ್ಷೆಪಡದಿದ್ದರೂ ಸಂಗಾತಿಯ ಸಹಕಾರ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಕೆಲವು ವಿಷಯಗಳಲ್ಲಿ ನಿರುತ್ಸಾಹಿಗಳಾಗಿರುವಿರಿ. ಆದಾಯವು ಉತ್ತಮವಾಗಿರುತ್ತದೆ. ಕೃಷಿಭೂಮಿಯನ್ನು ಕೊಳ್ಳುವ ಯೋಗವಿದೆ. ಮಕ್ಕಳಿಂದ ನಿಮ್ಮ ಕೆಲಸಗಳಿಗೆ ಸಹಕಾರ ದೊರೆಯುತ್ತದೆ. ದೇಹದ ಆರೋಗ್ಯದ ಕಡೆಗೆ ಗಮನವಿರಲಿ. ಸೌಂದರ್ಯವರ್ಧಕಗಳಿಂದ ಹಾನಿಯಾಗುವ ಸಾಧ್ಯತೆಗಳಿವೆ. ಸಂಸಾರದಲ್ಲಿ ಕಾವೇರಿದ ಮಾತುಗಳು ಬರಬಹುದು. ಸರ್ಕಾರದಿಂದ ಅನಿರೀಕ್ಷಿತ ಸಹಾಯ ಸಿಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನೀವು ಎಲ್ಲರಿಂದಲೂ ಗೌರವವನ್ನು ಬಯಸುತ್ತೀರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ನಿಮ್ಮ ಮಾತಿನಲ್ಲಿ ಹೆಚ್ಚು ವ್ಯಾವಹಾರಿಕವಾಗಿ ಇರುತ್ತದೆ. ಸಹೋದರಿಯರು ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಪಡಿಸಬಹುದು. ವ್ಯಾಪಾರದಲ್ಲಿ ಲಾಭವನ್ನು ನಿರೀಕ್ಷೆ ಮಾಡಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ನಿಮ್ಮದೇ ಆದ ತಪ್ಪುಗಳಿಂದ ಶರೀರಕ್ಕೆ ಗಾಯವಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಬಹಳ ಬುದ್ಧಿವಂತಿಕೆಯಿಂದ ಮಾತನಾಡಿ ಎಲ್ಲರನ್ನೂ ಸೆಳೆಯುವಿರಿ. ಆದಾಯವು ಕಡಿಮೆ ಇರುತ್ತದೆ. ಭೂ ಸಂಬಂಧಿ ವ್ಯಾಪಾರಗಳಲ್ಲಿ ಅಷ್ಟು ಪ್ರಗತಿ ಇರುವುದಿಲ್ಲ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಸಿಗುವುದು ಕಡಿಮೆ. ಪಿತ್ತ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಆರೋಗ್ಯಕ್ಕಾಗಿ ಸ್ವಲ್ಪ ಹಣ ಖರ್ಚಾಗುತ್ತದೆ. ಸಂಗಾತಿಯ ಕಡೆಯ ಹಿರಿಯರಿಂದ ನಿಮಗೆ ಹೆಚ್ಚು ಅನುಕೂಲವಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಮನಸ್ಸು ಗೊಂದಲದ ಗೂಡಾಗಿರುತ್ತದೆ. ಆದಾಯವು ಕಡಿಮೆ ಇದ್ದು, ಖರ್ಚು ಹೆಚ್ಚಿರುತ್ತದೆ. ಕೆಲ ಯೋಜನೆಗಳು ಈಗ ಫಲ ಕೊಡಲಾರಂಭಿಸುತ್ತವೆ. ಬಂಧುಗಳ ವಿರೋಧವನ್ನು ಎದುರಿಸಬೇಕಾಗಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಸಿಗುವ ಸಾಧ್ಯತೆಗಳಿವೆ. ಕೆಲವರಿಗೆ ನರ ದೌರ್ಬಲ್ಯ ಕಾಡಬಹುದು. ಈಗ ನೀವು ವಿದೇಶದಲ್ಲಿರುವ ನಿಮ್ಮ ಸಂಗಾತಿಯನ್ನು ಹೋಗಿ ಕೂಡಿಕೊಳ್ಳಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಬೇರೆಯವರನ್ನು ಮಣಿಸಲು ನೀವು ಬಳಸುತ್ತಿದ್ದ ಮಾರ್ಗಗಳನ್ನೇ ಇತರರು ನಿಮ್ಮ ಮೇಲೆ ಬಳಸುತ್ತಾರೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಮಾತಿನಿಂದಲೇ ಬಂಧುಗಳ ವೈರತ್ವವನ್ನು ಕಟ್ಟಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಸಂಗಾತಿಯ ಉದಾಸೀನ ಮನೋಭಾವ ಮುಜುಗರವನ್ನು ಉಂಟು ಮಾಡುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಹೆಚ್ಚು ಹಣ ಮಾಡುವ ಬಗ್ಗೆ ಸಾಕಷ್ಟು ಆಲೋಚನೆ ಮಾಡುವಿರಿ. ಆದಾಯ ಕಡಿಮೆ ಇರುತ್ತದೆ. ಗುರು ಹಿರಿಯರ ಸಹಕಾರ ಕಡಿಮೆಯಾಗಬಹುದು. ವಿದೇಶದಲ್ಲಿ ಓದಬೇಕೆನ್ನುವವರಿಗೆ ಅನುಕೂಲಕರ ವಾತಾವರಣವಿದೆ. ಮಕ್ಕಳಿಂದ ಯಾವುದೇ ರೀತಿಯ ಸಹಾಯ ದೊರೆಯುವುದಿಲ್ಲ. ರಾಜಕಾರಣಿಗಳಿಗ ಜನಬೆಂಬಲ ಕಡಿಮೆಯಾಗುವ ಸಾಧ್ಯತೆಗಳಿವೆ. ಸಂಗಾತಿಯಿಂದ ಆರ್ಥಿಕ ಸಹಕಾರ ದೊರೆಯುತ್ತದೆ. ಸಂಗಾತಿಯ ಖರ್ಚು ಹೆಚ್ಚಾಗುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಅತಿಯಾದ ಆಲಸಿತನ ವಾರದ ಆರಂಭದಲ್ಲಿ ಇರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ವಿದೇಶದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿರುವವರಿಗೆ ಲಾಭವಿರುತ್ತದೆ. ಸ್ತ್ರೀಯರ ಅಲಂಕಾರಿಕ ವಸ್ತುಗಳನ್ನು ತಯಾರಿಸುವವರಿಗೆ ಬೇಡಿಕೆ ಕಡಿಮೆಯಾಗಬಹುದು. ಸಂಗಾತಿಯ ಗಳಿಕೆ ಕಡಿಮೆಯಾಗುವ ಸಾಧ್ಯತೆಯಿದೆ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅಡೆತಡೆಗಳಿರುತ್ತವೆ. ಹಿರಿಯರ ವ್ಯವಹಾರಗಳಲ್ಲಿ ನಿಮಗೆ ಅವಕಾಶ ದೊರೆತು, ಲಾಭ ಹೆಚ್ಚುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಗಂಭೀರವಾದ ನಡವಳಿಕೆ ಇರುತ್ತದೆ. ಆದಾಯವು ಕಡಿಮೆ ಇರುತ್ತದೆ. ಆಸ್ತಿ ವಿಚಾರದಲ್ಲಿ ಸಾಕಷ್ಟು ಎಚ್ಚರಿಕೆಯಿರಲಿ, ದಾಖಲಾತಿಗಳಲ್ಲಿ ಮೋಸವಾಗುವ ಸಾಧ್ಯತೆಗಳಿವೆ. ಹಳೆಯ ಸಾಲಗಳು ಈಗ ವಸೂಲಾಗಬಹುದು. ಬಹುಕಾಲದ ಆರೋಗ್ಯ ಸಮಸ್ಯೆಗಳು ಈಗ ಪರಿಹಾರವಾಗುತ್ತವೆ. ಸಂಗಾತಿಯಿಂದ ಸ್ವಲ್ಪ ಮಟ್ಟಿನ ಸಹಕಾರ ದೊರೆಯುತ್ತದೆ. ಗಣಿಗಾರಿಕೆ ಮಾಡುವವರಿಗೆ ಹೆಚ್ಚು ಲಾಭವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಬೃಹತ್ತಾದ ಯೋಜನೆಗಳನ್ನು ಜಾರಿಗೊಳಿಸಲು ಯೋಚನೆ ಮಾಡುವಿರಿ. ಆದಾಯವು ಕಡಿಮೆ ಇದ್ದು, ಶ್ರಮಪಟ್ಟು ಆದಾಯವನ್ನು ಹೆಚ್ಚಿಸಿಕೊಳ್ಳುವಿರಿ. ಮಹಿಳೆಯರ ಸಹಕಾರ ದೊರೆಯುತ್ತದೆ. ಕೇಶಾಲಂಕಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಕಟ್ಟಡ ನಿರ್ಮಾಣಕಾರರಿಗೆ ಆದಾಯ ಕಡಿಮೆಯಾಗುತ್ತದೆ. ಜೀರ್ಣ ಕ್ರಿಯೆ ಸಮಸ್ಯೆ ಇದ್ದವರು ಸರಿಯಾಗಿ ಚಿಕಿತ್ಸೆ ತೆಗೆದುಕೊಳ್ಳಿ. ಕಲ್ಲು ಗಣಿಗಾರಿಕೆ ಮಾಡುವವರಿಗೆ ಲಾಭ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರಿಗೆ ವಿದೇಶಿ ವ್ಯಾಮೋಹ ಹೆಚ್ಚಾಗುತ್ತದೆ. ಆದಾಯವು ಕಡಿಮೆ ಇದ್ದು, ಸ್ವಲ್ಪ ಆರ್ಥಿಕ ಸಮಸ್ಯೆಗಳು ಎದುರಾಗಬಹುದು. ಸಿನಿಮಾ ನಟರಿಗೆ ಆದಾಯ ಹೆಚ್ಚುವ ಸಾಧ್ಯತೆಗಳಿವೆ. ಮೇಕಪ್ ಮಾಡುವವರ ಆದಾಯ ಹೆಚ್ಚುತ್ತದೆ. ಆಸ್ತಿ ವ್ಯವಹಾರಗಳಲ್ಲಿ ಅತಿಯಾದ ಆತುರಬೇಡ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವುದರ ಜತೆಗೆ ಬಯಸಿದ ಕೋರ್ಸ್ ದೊರೆಯುತ್ತದೆ. ನರ ಸಂಬಂಧಿ ದೋಷಗಳಿರುವವರು ಎಚ್ಚರವಹಿಸಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಒಂದು ರೀತಿ ನಿಷ್ಕ್ರಿಯರಾದಂತೆ ಇರುವಿರಿ. ಆದಾಯ ಉತ್ತಮವಾಗಿದ್ದು ಅನವಶ್ಯ ಖರ್ಚುಗಳು ಹೆಚ್ಚಾಗುತ್ತವೆ. ನಿಮ್ಮ ನಡವಳಿಕೆಯಲ್ಲಿ ಹಣದ ಮದ ಕಾಣುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಕಾಲ. ತೆರಿಗೆ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಆಯುಧಗಳಿಂದ ಗಾಯವಾಗಬಹುದು ಎಚ್ಚರ ವಹಿಸಿ. ಸಂಗಾತಿಯಿಂದ ಸಾಕಷ್ಟು ಸಹಕಾರ ದೊರೆಯುತ್ತದೆ.

ಪದಬಂಧ 2898

ಮೇಲಿನಿಂದ ಕೆಳಕ್ಕೆ

1. ಪೈಲ್ವಾನರು ಇಳಿಯುವ ಕುಸ್ತಿ ಮೈದಾನ, ಸಾಧುಗಳ ಗುಂಪು 3
2. ಹೆಸರಲ್ಲೇ ಕೆಟ್ಟ ಯೋಧನೆಂಬ ಸಂಕೇತ ಪಡೆದ ಧೃತರಾಷ್ಟ್ರನ ಜೇಷ್ಠ ಪುತ್ರ 4
3. ಸರ್ವರಿಗೂ ಸಂಬಂಧಿಸಿದ ವಿಷಯ, ಕೆಲಸ, ರಜೆ.. 4
4. ಹಾಡಿನ ಜೊತೆ ಬೆರೆಯುವ ಆಂಗ್ಲಭಾಷೆಯ ಲಯ 3
6. ಈತನೊಬ್ಬ ವ್ಯಾಪಾರಿ 3
8. ಜಾಲಿ ಮರದ ಕಾಡು 3
9. ಆಡಳಿತ ಹೀಗೆ ಗಾಜಿನಂತೆ ಸ್ಪಷ್ಟವಾಗಿರಬೇಕು 5
11. ವಿಷಯವನ್ನು ಕೂಲಂಕಷವಾಗಿ ಮಂಥನ ಮಾಡಿರುವವ 5
15. ಕನ್ನಡದಲ್ಲಿ ಮಾಡುವ ಆಜ್ಞಾ 3
17. ಹೆಣ್ಣುಮಕ್ಕಳ ತಾಯಿಮನೆ 3
19. ತೇಜೋಮಯ ಲಕ್ಷ್ಮೀ ಪ್ರಿಯ 4
20. ಹರಿಯುತ್ತಾ ಬರುವ ದಶರಾಥಾತ್ಮಜ 4
21. ಉಸಿರನ್ನು ಹಿಡಿಯಬಹುದಾದ ಮಡಿಕೆ 3
24. ತಪ್ಪು ಮಾಡಿದ್ದಕ್ಕೆ ವಿಧಿಸಲಾದ ದಂಡ 3

ಎಡದಿಂದ ಬಲಕ್ಕೆ

1. ಸಾವನ್ನು ಗೆಲ್ಲಲು ಸುಧೆಯ ಒಂದು ತೊಟ್ಟು 5
3. ಅಂಬಿಕಾತನಯರ ಸಿದ್ಧಿಮಾರ್ಗದ ಊರ ಪ್ರದೇಶ 5
5. ಎದೆಯ ಒಂದು ಬಡಿತದ ಶಬ್ಧ 2
7. ಧರಿಸಿ ಧಾರಣೆಯ ರೂಪಕೊಟ್ಟ ಭೂಮಿ 3
8. ಬ್ರೆಡ್ ಬಟರ್ ಜೊತೆ ಹಣ್ಣಿನರಸದ ಸಿಹಿ ಲೇಪ 2
9. ಮಧುವಿಲ್ಲದ ಕುಡಿತ 2
10. ಕಲ್ಪನೆ ಆವರಿಸುವ ಕಾವ್ಯಕರ್ತೃ 2
12. ಕ್ರೂರ ಹಾಗೂ ಕಟು 3
13. ಒಬ್ಬರ ಕೆಳಗೆ ಮಾಡಬೇಕಾದ ನಿರಂತರ ಸೇವೆ 3
14. ಪರಮಾತ್ಮ ಕಾಲಕಾಲಕ್ಕೆ ಎತ್ತಿರುವ ಹತ್ತು ರೂಪಗಳು 5
15. ಮತ್ತೊಬ್ಬರಿಗೆ ಮಾದರಿಯಾಗಬಹುದಾದದ್ದು 3
16. ಮೋಸಕ್ಕೆ ಒಳಗಾದವ 3
18. ಕೈಯಿಂದ ಕಟ್ಟುವ ಸುಂಕ 2
20. ದ್ರೋಣರನ್ನು ದಾರಿತಪ್ಪಿಸಿದ ಧರ್ಮರಾಜನಾಡಿದ ಪದ 2
21. ಪಂಚ ಪಾಂಡವರ ಮಹಾತಾಯಿ 2
22. ವಿರಳವಾದ ಪಾಂಡು ಸತಿ ಒಂದು ನಮೂನೆಯ ಆದರ್ಶ 3
23. ದಾಖಲೆಗೆ ಸಹಿ 2
25. ಊಹೆಗೆ ನಿಲುಕದ್ದು 5
26. ಗೃಹದ ಮೇಲೊಂದು ಗೃಹ 5



ಪದಬಂಧ ಉತ್ತರ -2897

ಮೇಲಿಂದ ಕೆಳಕ್ಕೆ

1. ಅರುಂಧತಿ 3.ನೇತ್ರಾವತಿ 5.ಮಿತಸಂಸಾರ 7.ತಹತಹ 9.ಸಾವಿರಾರು 11.ರಚನಕಾರ 14.ಹಣದೊಡತಿ 17.ಜೋರುಧ್ವನಿ 18.ರುಚಿಕರ 20.ವರಾಹರೂಪ 21.ರಕ್ತದಾನ 22.ಟಪಟಪ

ಎಡದಿಂದ ಬಲಕ್ಕೆ

1.ಅಪಘಾತ 2.ತಿಮಿರಹರ 3.ನೇರಪ್ರಸಾರ 4.ತಿಳಿಸಾರು 6.ಸಂವಿಧಾನ 8.ಹರಿಹರರು 10.ರಾಮತಾರಕ 12.ಚರಣ 13.ಕಾರ್ಮೋಡ 14.ಹನಿಗವನ 15.ದೊಡ್ಡದೇಹ 16.ತಿರುಗುಪಟ 17.ಜೋಕುಮಾರ 19.ರಸಾಧಿಪ

ಮೌನ ಬಿಂಬಗಳ ಮಾತಿನಾಳ





ಭಾರತಿ ಸಾಗರ್ ಅವರ ಕಲಾಕೃತಿಗಳು

• ರೂಪಾ ಕೆ.ಎಂ.

ಪ್ರಕೃತಿ ಬರೆದ ಚಿತ್ತಾರಗಳನ್ನೆಲ್ಲ ತುಸು ಮೌನದಲ್ಲಿಯೂ, ತುಸು ಕುಂಚದಲ್ಲಿಯೂ ಇಷ್ಟಿಷ್ಟೆ ಬಣ್ಣ ಬೆರೆಸಿ ಅರ್ಥ ಮಾಡಿಕೊಳ್ಳುವುದು ಕಲೆಯೇ? ಎಂದು ಭಾರತಿ ಸಾಗರ್ ಅವರ ಕಲಾಕೃತಿಗಳನ್ನು ಕಂಡಾಗ ಎನಿಸುವುದು ಸುಳ್ಳಲ್ಲ. ಆಳವಾದ ಮೌನವು ಬರೆಯುವ ಭಾಷ್ಯವು 'ಭಾರ' ಎನಿಸುವ ಮಾತುಗಳಿಂದ ಸದಾ ದೂರ. ಭೋರ್ಗರೆಯುವ ಕಡಲಿನಂಥ ಬದುಕಿನಲ್ಲಿ ಆಗಾಗ್ಗೆ ಮೂಡುವ ಮೌನದ ಬಿಂಬಗಳಲ್ಲಿ ಇಣುಕಿದರೆ, ನಮ್ಮೊಳಗೆ ನಾವು ಇಳಿದು, ಕಳೆದು ಹೋಗುವಷ್ಟು ಅರ್ಥವಾಗಬಹುದು. ಆದರೆ, ತೇಲುಮಾತಿನಲ್ಲಿ ಒಡಮೂಡಿದ ಬಿಂಬವು ಒಡಕಲು ಬಿಂಬವಾಗಿ ಚದುರಿ ಹೋಗುವುದೇ ಹೆಚ್ಚು. ಭಾರತಿ ಸಾಗರ್ ಅವರ ಕಲಾಕೃತಿಗಳಲ್ಲಿರುವ ಪಾತ್ರಗಳಲ್ಲಿರುವ ಮೌನದ ಮುದ್ರೆಯೇ ಹೆಚ್ಚು ಮಾತನಾಡುತ್ತದೆ. ಇದು ಈ ಕಲಾಕೃತಿಗಳ ಅಗ್ಗಳಿಕೆ.

ನಿರ್ಭಾವುಕ ಎನಿಸುವ ಹಲವು ಪಾತ್ರಗಳನ್ನು ಆಳಕ್ಕಿಳಿದು ನೋಡಿದಾಗ ಅದು ತನ್ನೊಳಗೆ ಅಡಗಿಸಿಟ್ಟುಕೊಂಡ ಕೋಲಾಹಲವನ್ನೇ ತೆರೆದಿಡುತ್ತದೆ. ಅಷ್ಟು ಸಶಕ್ತ ಪರಿಕಲ್ಪನೆಯಲ್ಲಿ ಭಾರತಿ ಅವರ ಕಲಾಕೃತಿಗಳು ಮೈದಾಳಿವೆ.

ಹಸಿರು ರಾಶಿಯ ಮಧ್ಯೆ ಕುಕ್ಕುರುಗಾಲಿನಲ್ಲಿ ಕುಳಿತ ನೀಳ ದೇಹದ ಹುಡುಗನೊಬ್ಬನ ಆಡದೇ ಉಳಿದ ಮಾತುಗಳನ್ನು, ತುಮುಲಗಳನ್ನು ಬಹಳ ಆಸ್ಥೆಯಿಂದ ಗುಬ್ಬಿಮರಿ ಕೇಳುತ್ತಿರುವಂತೆ ಭಾಸವಾಗುತ್ತದೆ. ಕೇಳ್ಮೆ ಮತ್ತು ತಾಳ್ಮೆ ಎಂಬುದು ಪ್ರಕೃತಿಯ ಸಹಜ ಗುಣಗಳು. ಮನುಷ್ಯ ಸದಾಕಾಲ ಎಲ್ಲರ ಮಧ್ಯೆ ತಾನು ಸುಭಗ ಎಂದು ತೋರ್ಪಡಿಸುವ ಉದ್ದೇಶದಿಂದ ಬಂದ ಗುಣಗಳೇನಲ್ಲ. ಸಹಜವಾಗಿರುವುದು ಎಂದಿಗೂ ಚೆಲುವಾಗಿರುತ್ತದೆ ಮತ್ತು ಅಷ್ಟೆ ದೃಢವಾಗಿರುತ್ತದೆ ಎಂಬುದನ್ನು ನಿರೂಪಿಸುತ್ತದೆ ಈ ಕಲಾಕೃತಿ.

ಇನ್ನೊಂದು ಕಲಾಕೃತಿಯಲ್ಲಿ ಸಂಕಟದಲ್ಲಿರುವ ಶ್ವೇತವಸ್ತ್ರಧಾರಿ ಹೆಣ್ಣೊಬ್ಬಳು ಕಾರ್ಗತ್ತಲ್ಲಿನಂಥ ತನ್ನೊಡಲ ನೋವನ್ನು ತನ್ನ ಕಣ್ಣಿನ ಭಾಷೆಯಲ್ಲಿಯೇ ಶ್ವೇತಬಣ್ಣದ ಹಕ್ಕಿಗೆ ರವಾನಿಸುವಂತೆ ಅನಿಸುತ್ತದೆ. ಬಣ್ಣಗಳು ಇಲ್ಲಿ ಬದುಕಿನ ವೈರುಧ್ಯಗಳನ್ನು ಚಂದಗೆ ಕಟ್ಟಿಕೊಡಲು ಪ್ರಯತ್ನಿಸಿವೆ. ಈ ಕಲಾಕೃತಿಗಳಲ್ಲಿರುವ ಒಟ್ಟು ಸಾಮ್ಯತೆಯೇ ಪ್ರಕೃತಿಯೊಂದಿಗಿನ ಅನುಬಂಧ. ಕೇಳಲು, ಹೇಳಲು ಯಾರು ಇಲ್ಲದ ಅಸಹಾಯಕತೆಯಲ್ಲಿಯೂ ಪ್ರಕೃತಿಯ ವೈವಿಧ್ಯಮಯ ಜೀವಗಳೇ ಜೀವನಾಡಿಗಳಾಗುವುದು ಒಂದು ಬಗೆಯ ಆನಂದಾತೀತವೇ ಆಗಿದೆ. ಅಷ್ಟರಮಟ್ಟಿಗೆ ಪ್ರಕೃತಿ ದಯಾಮಯಿ. ಅದನ್ನು ಕುಂಚ ಭಾಷೆಯಲ್ಲಿ ಹೇಳಿದ್ದಾರೆ ಭಾರತಿ ಅವರು.

ಹಕ್ಕಿ–ಮನುಷ್ಯ, ಮನುಷ್ಯ–ಮರ ಇವು ವಾದಿ–ಸಂವಾದಿಯಾಗಿ ನೋಡುಗರಲ್ಲಿ ಹಲವು ಪ್ರಶ್ನೆಗಳನ್ನು ಮೂಡಿಸುತ್ತವೆ. ಊರ ಹೆಬ್ಬಾಗಿಲಿನ ಮುಂದೆ ನಿಂತ ಕಾಷಾಯ ವಸ್ತ್ರಧಾರಿಯ ಕೈಯಲ್ಲಿ ಹೂವು ಅರಳಿದಂತೆ ಕಾಣುವ ಪಾರಿವಾಳದ ಕಣ್ಣುಗಳು, ಕಾಷಾಯಧಾರಿಯ ಕರುಣಾರಸ ಉಕ್ಕಿಸುವ ಕಣ್ಣುಗಳೆರಡೂ ಧಾವಂತದ ಹಾದಿಯಲ್ಲಿ ಕಳೆದುಕೊಂಡ 'ಕರುಣಾರಸ'ವನ್ನು ಕಲಾಸಕ್ತರಲ್ಲಿ ನೆನಪಿಸಿದರೆ ಆಶ್ಚರ್ಯವೇನಿಲ್ಲ. ಕಾಫಿಯೋ, ಟೀಯೋ ಅಥವಾ ಕಷಾಯವೋ ಏನನ್ನೋ ಹೀರುತ್ತಿರುವ ಇಬ್ಬರು ತರುಣಿಯರು ತಮ್ಮ ಅಂತರಂಗದಲ್ಲಿ ಬಚ್ಚಿಟ್ಟುಕೊಂಡ ಹಲವು ಕಥೆಗಳು, ತುಟಿಯವರೆಗೂ ಬಂದು, ಅವುಗಳನ್ನೆ ಮತ್ತೆ ತಾವೇ ಹೀರಿ, ಒಳಗೆ ಎಳೆದುಕೊಳ್ಳುತ್ತಿದ್ದಾರೇನೋ ಎನ್ನುವಂತೆ ಕಾಣುತ್ತದೆ. ಈ ತರುಣಿಯರ ಸಂಭಾಷಣೆಯನ್ನು ಕದ್ದು ಆಲಿಸುವಂತೆ ಕಾಣುವ ಕೆಲ ಅಸ್ಪಷ್ಟ ನೆರಳುಗಳ ಚಿತ್ರಣವು ಒಟ್ಟು ಕಲಾಕೃತಿಗೆ ನಿಗೂಢ ಸ್ಪರ್ಶವನ್ನು ನೀಡಿದೆ.

ಕಾಗದ ಮತ್ತು ಕ್ಯಾನ್ವಾಸ್ ಮೇಲೆ ಡ್ರೈ ಪೇಸ್ಟಲ್, ಚಾರ್ಕೋಲ್, ಅಕ್ರಿಲ್ ಪಿಗ್ಮೆಂಟ್‌ಗಳನ್ನು ಬಳಸಿ ಹಲವು ಕಲಾಕೃತಿಗಳನ್ನು ರೂಪಿಸಿದ್ದಾರೆ. ಒಂದೊಂದು ಕಲಾಕೃತಿಯು ಒಂದು ಕಥೆಯ ಸಾರವನ್ನೇ ಅಡಗಿಸಿಟ್ಟುಕೊಂಡಿದೆ. 'ಪ್ರತಿಬಿಂಬ' ಕಲಾಕೃತಿಯಲ್ಲಿರುವ ಪಾತ್ರದ ಭಾವಾಭಿವ್ಯಕ್ತಿಯನ್ನು ಬಹಳ ಸೊಗಸಾಗಿ ಮೂಡಿಸಿದ್ದಾರೆ. ಕೊಂಚ ತುಟಿ ಅಗಲಿಸಿ ನಕ್ಕ ನಗು ಮತ್ತೆ ಮತ್ತೆ ಕಲಾಕೃತಿಯನ್ನು ನೋಡುವಂತೆ ಮಾಡುತ್ತದೆ.

76 ವರ್ಷದ ಭಾರತಿ ಸಾಗರ್ ಅವರು ರಚಿಸಿದ 25ಕ್ಕೂ ಅಧಿಕ ಕಲಾಕೃತಿಗಳು ಬೆಂಗಳೂರಿನ ಲ್ಯಾವೆಲ್ಲಿ ರಸ್ತೆಯ ಎಂಕೆಎಫ್ ಮ್ಯೂಸಿಯಂ ಆಫ್ ಆರ್ಟ್ಸ್‌ನಲ್ಲಿ ಜುಲೈ 2ರವರೆಗೆ ಪ್ರದರ್ಶನಗೊಳ್ಳಲಿದೆ. ❖

ಪ್ರಕೃತಿಯೇ ಉತ್ತರ

ಭಾರತಿ ಅವರ ಕಲಾಕೃತಿಗಳ ಒಟ್ಟಂದದ ಸಾರವೇ ಪ್ರಕೃತಿಯೊಳಗೆ ಮನುಷ್ಯ ಮತ್ತು ಮನುಷ್ಯನೊಳಗೆ ಪ್ರಕೃತಿ. ಅವೆರಡೂ ಒಂದನ್ನೊಂದು ಬಿಟ್ಟು ಇರಲಾರವು. ಜಂಜಡದ ಬದುಕು ಒಡ್ಡುವ ಹಲವು ಪ್ರಶ್ನೆಗಳಿಗೆ ಆತ್ಯಂತಿಕವಾಗಿ ಪ್ರಕೃತಿಯೇ ಉತ್ತರ ಎಂಬುದನ್ನು ಇವರ ಕಲಾಕೃತಿಗಳು ನಿರೂಪಿಸುತ್ತವೆ.

ಚಾಮುಂಡಿ ಬೆಟ್ಟ ಏರದವರು...

10ನೇ ಪುಟದಿಂದ..

ಏಪ್ರಿಲ್ 27 ರಂದು ಪೀಪಲ್‌ಕೋಟಿಯಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾದರು. ಕಳೆದ ವರ್ಷ ಶಾಸ್ತ್ರಕಾಲ್‌ನಲ್ಲಿ ಚಾರಣ ಮಾಡುವಾಗ ಬೆಂಗಳೂರಿನ ಒಂಬತ್ತು ಮಂದಿ ಮೃತಪಟ್ಟಿದ್ದ ಕಾರಣಕ್ಕೆ ವೈದ್ಯಕೀಯ ತಪಾಸಣೆ ಚಾರಣಕ್ಕೂ ಮೊದಲು ಕಡ್ಡಾಯವಾಗಿತ್ತು. ಪರೀಕ್ಷೆ ನಂತರ ಚಮೋಲಿ ಜಿಲ್ಲೆಯ ಜೋಶಿಮಠ ಪ್ರದೇಶದಲ್ಲಿರುವ ತುಗಾಸಿ ಬೇಸ್‌ಕ್ಯಾಂಪ್ ಅನ್ನು ತಲುಪಿದರು. ಅಲ್ಲಿಂದ ಚಾರಣ ಆರಂಭವಾಯಿತು. ಹಿಮಾಲಯದ ಹಸಿರು ಕಣಿವೆಯ ಸೌಂದರ್ಯ ಸವಿಯುತ್ತಾ, ಗುಲಿಂಗ್ ಕ್ಯಾಂಪ್ ತಲುಪಿದರು. ಅಲ್ಲಿಂದ 11,014 ಅಡಿ ಎತ್ತರದ ಖುಲ್ಹಾರ್ ಕ್ಯಾಂಪ್‌ನತ್ತ ಹೊರಟರು. ರಾತ್ರಿ ಅಲ್ಲಿಯೇ ಉಳಿದುಕೊಂಡರು. ಮೇ 1 ರಂದು ಆಮ್ಲಜನಕದ ಸಿಲಿಂಡರ್ ಹೊತ್ತು 25 ಕಿಲೋಮೀಟರ್ ವೇಗದಲ್ಲಿ ಬೀಸುತ್ತಿದ್ದ ಹಿಮಗಾಳಿ ಭೇದಿಸುತ್ತಾ ಮುಂಜಾನೆಯಿಂದಲೇ ಖುಲ್ಹಾರದಿಂದ 13,989 ಅಡಿ ಎತ್ತರದ 'ಕೌರಿ ಟಾಪ್' ಶಿಖರಕ್ಕೆ ನಡೆಯುತ್ತಾ ಸಾಗಿದರು. ಮಧ್ಯಾಹ್ನ 12.30ಕ್ಕೆ ಶಿಖರದ ತುದಿ ತಲುಪಿದಾಗ ಆದ ಸಂತಸ ಅಷ್ಟಿಷ್ಟಲ್ಲ. ಎಲ್ಲ ಮಕ್ಕಳು ತ್ರಿವರ್ಣ ಧ್ವಜ ಹಿಡಿದು ಸಂಭ್ರಮಿಸಿದರು. ಕಾರ್ಮಿಕ ದಿನವನ್ನೂ ಆಚರಿಸಿದರು!

'ಶಿಖರದಲ್ಲಿ ನಿಂತು ತ್ರಿಶೂಲ, ಹರ್ಡಿಯೊಲ್, ದೌನಗಿರಿ, ಚಂಗಬಂಗ್, ಹನುಮಾನ್, ಖುಷಿಕೋಟ್, ನಂದಾದೇವಿ, ರೌಂತಿ, ಬೆತರ್‌ತೋಲಿ ಹಿಮಲ್, ಗೌರಿ ಪರ್ವತ, ಹಾತಿ ಪರ್ವತ ಸೇರಿದಂತೆ ವಿವಿಧ ಶಿಖರಗಳನ್ನು ಏರುತ್ತಿದ್ದ ಪರ್ವತಾರೋಹಿಗಳನ್ನು ನೋಡಿದ ಮಕ್ಕಳು ಖುಷಿಯಿಂದ ಕುಣಿದರು. ಅದೊಂದು ಸಾರ್ಥಕ ಅನುಭವವಾಗಿತ್ತು. ಕಣ್ಣುಗಳು ತುಂಬಿಬಂದವು. ಸಂಜೆ ವೇಳೆಗೆ ಬೇಸ್ ಕ್ಯಾಂಪ್‌ಗೆ ವಾಪಸ್ ಆದೆವು' ಎಂದು ಸೋಲಂಕಿ ವಿವರಿಸಿದರು.

ಕೇವಲ ಇಪ್ಪತ್ತು ದಿನಗಳ ಕಠಿಣ ತರಬೇತಿಯ ಬಲದೊಂದಿಗೆ ಈ ಮಕ್ಕಳು ಹಿಮಾಲಯ ಏರಿ ಸಾಹಸ ಮೆರೆದರು. ಹತ್ತಾರು ವರ್ಷ ಚಾರಣ ಮಾಡಿದವರು ಈ ಮಕ್ಕಳ ದೈಹಿಕ ಮತ್ತು ಮನೋಬಲಕ್ಕೆ ಹುಬ್ಬೇರಿಸಿದರು.

ಪೌರಕಾರ್ಮಿಕರ ಮಕ್ಕಳಾದ ಪ್ರೀತಂ, ಚೇತನ್ ಬಾಬು, ಕುಮಾರ್, ಪ್ರೇಮ್, ಅಶ್ವಿನ್, ನಿತ್ಯಶ್ರೀ, ಪಲ್ಲವಿ, ಎಸ್.ಪುನೀತ್ ಅವರ ಹೃದಯದಲ್ಲಿ 'ಹಿಮಾಲಯ' ಎಂಬುದು ಈಗ ಅತ್ಯಾಪ್ತ. ಅವರ ಕಾಲಿನ ಮೀನಖಂಡಗಳು ಯಾವುದೇ ಚಾರಣ ಮಾಡುವಷ್ಟು ಕಸುವು ಪಡೆದಿವೆ. ಯಾತ್ರೆಯಲ್ಲಿ ಸಿಕ್ಕ ಅಗಾಧ ಅನುಭವಗಳೊಂದಿಗೆ ಮರಳಿ ಬಂದಿರುವ ಅವರನ್ನು ನೋಡಿದ ಪೋಷಕರು, ಗೆಳೆಯರು, 'ಚಾಮುಂಡಿ ಬೆಟ್ಟ ಹತ್ತಲೂ ಕಷ್ಟಪಡುತ್ತಿದ್ದವರು ಹಿಮಾಲಯದ ತುದಿ ಏರಿ ಬಂದರಲ್ಲ' ಎಂದು ಹೆಮ್ಮೆ ಪಡುತ್ತಿದ್ದಾರೆ.

ಪೌರಕಾರ್ಮಿಕ ದಂಪತಿ ಜಯರಾಮು– ನಾಗವೇಣಿ, 'ನಾವ್ ಕಾಸ್ಮೀರ, ಹಿಮಾಲಯವನ್ನು ಟೀವೀಲಿ ನೋಡಿವಿ ಅಷ್ಟೆ. ನಮ್ಮಂತೋರು ಅಲ್ಲಿಗೆ ಹೋಗಕ್ಕೆ ಆಗದ್ದಾ? ಮಗ್ಳು ನಿತ್ಯಾ ಅದ್ನೆಲ್ಲ ಕಣ್ಣಾರೆ ನೋಡ್ಕಂಡು ಬಂದವ್ಳೆ. ಅವ್ಳು ನೋಡವ್ಳೆ ಅಂದ್ರೆ ನಾವೂ ನೋಡ್ದಂಗೆ' ಎಂದು ಹೆಮ್ಮೆಪಟ್ಟರು.

'ಚಾರಣಕ್ಕೆ ತರಬೇತಿ ಆರಂಭ ಆದಾಗ ಕುಕ್ಕರಹಳ್ಳಿ ಕೆರೆಯಲ್ಲಿ ಒಂದೇ ಸಮನೆ ಓಡಿ ವಾಂತಿ ಮಾಡಿಕೊಂಡಿದ್ದೆ. ಹಿಮಾಲಯ ಏರಲು ಸಾಧ್ಯವಿಲ್ಲ ಅಂದುಕೊಂಡಿದ್ದೆ. ಈಗ ಹಿಮವನ್ನು ನೋಡಿ ಬಂದ ಖುಷಿಯಿದೆ' ಎನ್ನುತ್ತಾಳೆ ನಿತ್ಯಶ್ರೀ.

ಕನಸಿನಲ್ಲೂ ಊಹಿಲಾಗದ ಇಂಥ ನೂರಾರು ನೆನಪು, ಅನುಭವಗಳನ್ನು ಮೈಸೂರಿನ 'ಟೈಗರ್ ಅಡ್ವೆಂಚರ್ ಫೌಂಡೇಷನ್' ಪೌರಕಾರ್ಮಿಕರ ಮಕ್ಕಳು, ಮಾವುತರು–ಕಾವಾಡಿಗಳು, ಗಸ್ತು ಸಿಬ್ಬಂದಿಗೆ ಕಟ್ಟಿಕೊಟ್ಟಿದೆ. 'ಇವರು ಯಾವುದನ್ನು ಕನಸು ಅಂದುಕೊಂಡಿದ್ದರೋ ಅದು ನನಸಾಗಿದೆ. ಭ್ರಮೆ ಅಂದುಕೊಂಡಿದ್ದು ವಾಸ್ತವವಾಗಿದೆ. ಇಂಥದ್ದೇ ಅನುಭವ ತಬ್ಬಲಿ ಸಮುದಾಯದ ಮಕ್ಕಳಿಗೂ ಸಿಗುವಂತಾಗಲಿ ❖

ಚಾರಣದ ಜೊತೆಗೆ ಪ್ರವಾಸ ಸುಖ

'ಮೇ 3 ರಂದು ಬದ್ರಿನಾಥ ದರ್ಶನ ಮಾಡಿ, 4 ರಂದು ಹೃಷಿಕೇಶಕ್ಕೆ ವಾಪಸ್ ಬಂದೆವು. 5ರಂದು ಅಮೃತಸರಕ್ಕೆ ಹೋದೆವು. ಗೋಲ್ಡನ್ ಟೆಂಪಲ್, ಜಲಿಯನ್ ವಾಲಾಬಾಗ್ ತೋರಿಸಿದೆವು. ಫಿರೋಜ್‌ಪುರ್‌ನ ಪಾಕ್ ಗಡಿಯನ್ನು ನೋಡುವುದಿತ್ತು. 'ಆಪರೇಷನ್ ಸಿಂದೂರ' ಸೇನಾ ಕಾರ್ಯಾಚರಣೆ ಆರಂಭವಾಗುವ ಸನ್ನಿವೇಶವಿದ್ದರಿಂದ ಗಡಿ ಮುಚ್ಚಲಾಗಿತ್ತು. ಹೀಗಾಗಿ ವಾಪಸಾಗುವ ಯೋಚನೆ ಮಾಡಿದೆವು. ಯುದ್ಧ ಭೀತಿ ಕಾರಣ ಬೆಂಗಳೂರಿಗಿದ್ದ ನೇರ ವಿಮಾನ ರದ್ದಾಗಿತ್ತು. ಬಸ್‌ನಲ್ಲಿ ದೆಹಲಿ ತಲುಪಿದೆವು. ಹೆಚ್ಚುವರಿ ಖರ್ಚು ಬಿತ್ತು. ಆದರೆ, ಮಕ್ಕಳ ಸುರಕ್ಷತೆಯಷ್ಟೇ ನಮಗೆ ಮುಖ್ಯವಾಗಿತ್ತು' ಎಂದರು ಸೋಲಂಕಿ.

'ಇಂಥ ಸವಾಲಿನ ಯಾತ್ರೆಯ ಅನುಭವ ಹಿಂದೆಂದೂ ಆಗಿರಲಿಲ್ಲ. ಚಾರಣಕ್ಕೆ ₹ 11.55 ಲಕ್ಷ ಖರ್ಚಾಯಿತು. ಲೇಡಿಸ್ ಸರ್ಕಲ್ ಇಂಡಿಯಾ, ದಿಯಾ ಫೌಂಡೇಶನ್ ನೆರವಾದವು. ಅಲ್ಲದೇ, ಅಮೆರಿಕ, ಇಸ್ರೇಲ್ ಸೇರಿದಂತೆ ವಿವಿಧ ದೇಶಗಳಲ್ಲಿನ 165 ಪರ್ವತಾರೋಹಿ ಸ್ನೇಹಿತರೂ ಸಹಕಾರ ನೀಡಿದರು' ಎಂದು ನೆನಪಿಸಿದರು.

ಪೌರಕಾರ್ಮಿಕ ಮಕ್ಕಳ ಹಿಮಾಲಯ ಚಾರಣ

ಕಥೆ
ವಿನಾಯಕ.ಎಲ್.ಪಟಗಾರ ಅವರ ವಿಲಕ್ಷಣ
prajavani.net/short-story

ಕವನ
ವಿರೇಶ ನಾಯಕ ಅವರ ಕಾಲಕ್ಕೆ ಗಡಿಗಳ ಹಂಗಿಲ್ಲ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ದೀವಿನಾಡು

ದೀವಿನಾಡು (ನಾ). ದ್ವೀಪದ ಪ್ರದೇಶ
ಸುಗ್ರೀವನು ರಾಮನೊಂದಿಗೆ ಸಂಭಾಷಿಸುತ್ತ ಲಂಕೆಯ ಬಗ್ಗೆ ಹೇಳುವಾಗ, ಕುವೆಂಪು ಅವರು ಆ ಲಂಕಾ ದ್ವೀಪವನ್ನು 'ದೀವಿನಾಡು' ಪದದಿಂದ ಹೀಗೆ ಬಣ್ಣಿಸಿದ್ದಾರೆ.

**'ಕೇಳಿಬಲ್ಲೆವು ಲಂಕೆಯಂ, ತೆಂಕಣದ ಕಡಲ
ನಡುವಣ ದೀವಿನಾಡಂ'**

ಕೆಂಬಕ್ಕಿ

ಕೆಂಬಕ್ಕಿ (ನಾ). ಕೆಂಪು ಬಣ್ಣದ ಪಕ್ಷಿ
ಸುಗ್ರೀವನು ರಕ್ತವಸ್ತ್ರ, ಕೆಂಪು ಹೂ, ಕೆಂಪು ಬಣ್ಣದ ಪಕ್ಷಿಗಳ ಗರಿಗಳಿಂದ ಅಲಂಕೃತನಾಗಿ ಬಂದ ಎಂದು ಬಣ್ಣಿಸುವಾಗ ಕುವೆಂಪು ಅವರು 'ಕೆಂಬಕ್ಕಿ' ಪದ ಹೀಗೆ ಪ್ರಯೋಗಿಸಿದ್ದಾರೆ:

**'ಕೆಂಬಣ್ಣವೂಗಳಿಂ ಕೆಂಬಕ್ಕಿ ಗರಿಗಳಿಂ
ವ್ಯೋಮಾಭ ರೋಮಮಯ ದೇಹಮನಲಂಕರಿಸಿ.'**

ತಿಮಿರಕುಂತಲೆ

ತಿಮಿರಕುಂತಲೆ (ನಾ). ಕತ್ತಲಂತ ಕಡುಕಪ್ಪಾದ ಕೂದಲು
ಚಿತ್ರಾಂಗದೆಯು 'ನಿನ್ನೊಡನೆ ನಲಿದಾಡಿದ ಈ ದೀನ ಕಾನನ ಕುಸುಮವನ್ನು ಹೇ ಕಾಂತನೇ ಮರೆಯದಿರು; ತೊರೆಯದಿರು!' ಎಂದು ಅರ್ಜುನನಿಗೆ ಹೇಳುವಳು. ತನ್ನ ಹಣೆಯನ್ನು ಅವನ ಪಾದಕ್ಕೆ ಚಾಚುವಳು. ಆಗ ಆ ನವಯೌವ್ವನದ ತರುಣಿಯ ಕತ್ತಲೆಯಂತೆ ಕಡುಕಪ್ಪಾದ ಕೂದಲನ್ನು ಕುವೆಂಪು ಅವರು 'ತಿಮಿರ ಕುಂತಲೆ' ಪದದಿಂದ ಬಣ್ಣಿಸಿದ್ದಾರೆ.

ಮೊದಲ ಓದು

ಹೊಸ ಹೊಳಹಿನ ಒಳನೋಟಗಳು



ಜೈನ ಧರ್ಮ 63 ಒಳನೋಟಗಳು
ಲೇ: ದೇವದತ್ತ ಪಟ್ಟನಾಯಕ
ಕನ್ನಡಕ್ಕೆ: ಪದ್ಮರಾಜ ದಂಡಾವತಿ
ಪ್ರ: ಅರವಿಂದ ಇಂಡಿಯಾ
ಸಂ: 9886296550

ಜೈನ ಧರ್ಮದ ಒಳಹೊಳಹುಗಳನ್ನು ಭಾರತೀಯ ಇತಿಹಾಸ, ಪುರಾಣ, ಮಹಾಕಾವ್ಯಗಳೊಂದಿಗೆ ಸರಳವಾಗಿ ವಿವರಿಸಲಾಗಿದೆ. ಜೈನ ಧರ್ಮವೆಂದರೆ ಅಹಿಂಸೆಯನ್ನು ಪ್ರತಿಪಾದಿಸಿದ ಧರ್ಮ. ಎರಡು ಪಂಗಡಗಳು ಎಂದು ತಿಳಿದವರಿಗೆ ಈ ಪುಸ್ತಕದಿಂದ ಇನ್ನಷ್ಟು ಮಾಹಿತಿ ಸರಳವಾಗಿ ಪ್ರಾಪ್ತವಾಗುತ್ತದೆ. ತೇರಾಪಂಥಿ, ಬೀಸ್ ಪಂಥಿಗಳು ಅದ್ಹೇಗೆ ದಿಗಂಬರ ಪಂಗಡದಲ್ಲಿಯೇ ಕವಲು ಒಡೆದಿವೆ? ಜೈನ ಮಹಾಭಾರತ ಏನು ಹೇಳುತ್ತದೆ? ಇದು ಮೂಲ ಭಾರತದ ಕತೆಯಿಂದ ಹೇಗೆ ಭಿನ್ನವಾಗಿದೆ? ಜೈನ ರಾಮಾಯಣದ ಸ್ವರೂಪ ಹೇಗಿದೆ? ಇದರಲ್ಲಿರುವ ಭಿನ್ನ ಕತೆಗಳೇನು? ಸಂಕ್ಷಿಪ್ತವಾಗಿ ವಿವರಿಸುತ್ತಲೇ ಜೈನ ಧರ್ಮದ ಒಳ ಮರ್ಮಗಳನ್ನು ಹೇಳುತ್ತವೆ. ಆರ್ಯರು, ಶಕರು, ಮುಂತಾದ ಒಳ ಪಂಗಡಗಳನ್ನು ವಿವರಿಸುತ್ತಲೇ ಜೈನ ಧರ್ಮದ ಒಳನೋಟಗಳನ್ನು ಒದಗಿಸಿಕೊಡುತ್ತದೆ.

ದೇವದತ್ತ ಪಟ್ಟನಾಯಕ ಅವರು ಎಂದಿನಂತೆ ಕತೆ ಹೇಳುವ ಶೈಲಿಯಲ್ಲಿಯೇ ಮಾಹಿತಿಯನ್ನು ನಿರೂಪಿಸುತ್ತ ಹೋಗಿದ್ದಾರೆ. ಕತೆ, ಕಾವ್ಯ, ಪುರಾಣ ಮತ್ತು ಜನಪದ ಎಲ್ಲವನ್ನೂ ಸಮ್ಮಿಳಿಸುತ್ತಲೇ ಚರಿತ್ರೆಯನ್ನೂ ಆಸಕ್ತಿಕರ ಮಾಡಬಹುದು ಎಂಬಂಥ ಅವರ ಶೈಲಿ ಕನ್ನಡದಲ್ಲಿಯೂ ಸಹಜವಾಗಿಯೇ ಒಡಮೂಡಿದೆ. ಎಲ್ಲಿಯೂ ಅನುವಾದ ಓದುತ್ತಿರುವ ಅನುಭವ ಆಗುವುದಿಲ್ಲ. ಚಿತ್ರಗಳು ಗಮನ ಸೆಳೆಯುತ್ತವೆ. ಓದುಗರ ಆಸಕ್ತಿಯನ್ನು ಹಿಡಿದಿಡುತ್ತವೆ. ಪುಸ್ತಕ ಆರಂಭಿಸುವುದಷ್ಟೇ ಓದುಗನ ಕೆಲಸ. ಭಾಷೆ, ಶೈಲಿ ಮತ್ತು ಮಾಹಿತಿ, ಅನುವಾದಕರ ನಿರೂಪಣೆ ಪುಸ್ತಕ ಬಿಡದಂತೆ ಮುಗಿಸಿಕೊಳ್ಳುತ್ತದೆ. ಓದುವುದು ಮುಗಿದ ನಂತರ ಇನ್ನಷ್ಟು ಉಳಿಯಿತು, ಓದುವುದು, ತಿಳಿಯುವುದು ಎಂಬ ಕುತೂಹಲವನ್ನೂ ಉಳಿಸುತ್ತದೆ.

ಪು: 316 ₹375

ಕಾಯ ಬಿಟ್ಟು ಮಾಯ ಸೇರಿದ ದೈವಗಳ ಕಥೆ



ಸತ್ಯೊಲು
ಲೇ: ನವೀನ್ ಸೂರಿಂಜೆ
ಪ್ರ: ಅಹರ್ನಿಶಿ
ಸಂ: 9449174662

ಇಹಕ್ಕೂ ಪರಕ್ಕೂ, ಲೌಕಿಕತೆಗೂ ಅಲೌಕಿಕತೆಗೂ ಒದಗಿ ಬರುವ 'ಕಾಯ ಬಿಟ್ಟು ಮಾಯ ಸೇರಿದ' ಹಲವು ದೈವಗಳ ಮೂಲ ಐತಿಹ್ಯವನ್ನು ಕಟ್ಟಿಕೊಟ್ಟಿದ್ದಾರೆ ನವೀನ್ ಸೂರಿಂಜೆ. 'ಹತ್ತು ತಾಯ ಮಕ್ಕಳನ್ನು ಒಂದೇ ಮಡಿಲಲ್ಲಿ ಹಾಕಿ ಪೊರೆಯುವ ಶಕ್ತಿ ನಾನು' ಎಂದು ಹೇಳುವ ದೈವದ ಮಾತು, ಜಾತಿ, ಧರ್ಮ, ಮತ, ಅವನು–ಅವಳು ಎಂಬ ಭೇದವೇ ಇಲ್ಲ ಎಂಬುದನ್ನು ಮತ್ತೆ ಮತ್ತೆ ಸಾರುತ್ತದೆ. ಅರಸರ ದೌರ್ಜನ್ಯವನ್ನು ಮೆಟ್ಟಿ ನಿಂತ, ಆಯಾ ಕಾಲಕ್ಕೆ ಉಂಟಾದ ಹಲವು ಶೋಷಣೆಗಳ ವಿರುದ್ಧ ಹೋರಾಟ ಮಾಡಿದ ತುಳುನಾಡಿನ ಕ್ರಾಂತಿಕಾರಿಗಳು ಕಾಲಾನಂತರದಲ್ಲಿ ಮಾಯಕ ಶಕ್ತಿಯಾಗಿ ಜನರ ನಂಬಿಕೆಯನ್ನೂ ಬದುಕನ್ನೂ ಪೊರೆಯುತ್ತಿವೆ.

ಸದಾ ಅಸಹಾಯಕರ ಪರವಾಗಿ ಇರುವಂತೆ ಕಾಣುವ ದೈವದ ನಡೆಯು ದೀನರಲ್ಲಿ ಮತ್ತೆ ಮತ್ತೆ ಆತ್ಮವಿಶ್ವಾಸವನ್ನು ಹೆಚ್ಚಿಸುವ 'ಬೆನ್ನಿಗೆ' ನಿಂತ ಶಕ್ತಿಯಾಗಿಯೂ ನೋಡಬಹುದು. ದೈವ ಆರಾಧನಾ ಪರಂಪರೆಯನ್ನು ವೈಭವೀಕರೀಸಲು ಹೋಗಿಲ್ಲ. ಬದಲಿಗೆ ಈ ಪರಂಪರೆ ಹುಟ್ಟಿದ ಪರಿ ಮತ್ತು ಅದು ಜನರೊಳಗೆ ಬೆರೆತ ರೀತಿಯನ್ನು ಸರಳವಾಗಿ ತಿಳಿಸಿರುವುದು ಈ ಪುಸ್ತಕದ ವಿಶೇಷತೆ. ಶ್ರಮಿಕರ ಜನಪದ ಐತಿಹ್ಯವಷ್ಟೆ ಅಲ್ಲದೇ, ಜನಮಾನಸದಲ್ಲಿ ಆಳವಾಗಿ ಬೇರೂರಿರುವ ದೈವದೆಡೆಗಿನ ನಂಬಿಕೆಗಳನ್ನು ಒಡೆಯಲು ಶ್ರಮಪಡುತ್ತಿರುವ ಪ್ರಸ್ತುತ ಪರಿಸ್ಥಿತಿಯಲ್ಲಿನ ಕೋಮುಶಕ್ತಿಗಳ ಬಗ್ಗೆಯೂ ಸೂರಿಂಜೆ ವಿವರಣೆ ನೀಡಿದ್ದಾರೆ.

ನಿಗೂಢತೆಯನ್ನು ತನ್ನೊಡಲಲ್ಲಿ ಇಟ್ಟುಕೊಂಡಿರುವ, ಅತಿ ಮಾನುಷ ಶಕ್ತಿಯ ದೈವದ ಮಾತುಗಳಲ್ಲಿ ತಾಯಿಯಂತೆ ಕುಟುಂಬವನ್ನು ನಂಬಿದವರನ್ನು ಪೊರೆಯುವ ನಡೆಯನ್ನು ಕಾಣಬಹುದು. ಕರಾವಳಿಯಲ್ಲಿ ಪ್ರಬಲವಾಗುತ್ತಿರುವ 'ಕೋಮುಶಕ್ತಿ' ಹತ್ತು ತಾಯಿಯ ಮಕ್ಕಳನ್ನು ಪೊರೆಯಬಲ್ಲ 'ದೈವ' ಶಕ್ತಿಯ ಮುಂದೆ ಮಣಿಯಲೇಬೇಕು ಎಂಬುದನ್ನು ಉದಾಹರಣೆ ಸಹಿತ ವಿವರಿಸಿದ್ದಾರೆ. ಬಹುಜನರ ಜನಪದ ಸಂಸ್ಕೃತಿಯಷ್ಟೆ ಅಲ್ಲದೇ ಬದುಕಿನ ಭಾಗವಾಗಿರುವ ಹಲವು ದೈವಗಳು, ಅವುಗಳ ಮೂಲಸ್ಥಾನ ಮತ್ತು ದರ್ಶನದ ಸಮಯದಲ್ಲಿ ದೈವವಾಡುವ ಮಾತುಗಳು, ಪಾಡ್ದನಗಳಲ್ಲಿರುವ ಮಹತ್ವದ ಸಾಲಿನ ವಿವರಣೆಯನ್ನು ನೀಡಲಾಗಿದೆ. ತುಳಿತಕ್ಕೆ ಒಳಗಾದ ಸಮುದಾಯಗಳ ಆಚರಣೆಯಲ್ಲಿರುವ ಕೆಲವು ಕಟ್ಟುಪಾಡುಗಳನ್ನು ಪ್ರಶ್ನಿಸಿ, ಸಮಾನತೆಯ ಆಶಯವನ್ನು ಬಹಳ ಗಟ್ಟಿಧ್ವನಿಯಲ್ಲಿಯೇ ಪ್ರತಿಪಾದಿಸಿದ್ದಾರೆ ಸೂರಿಂಜೆ.

ಪು: 174 ₹200

ಜಿಎಸ್‌ಟಿ ಪಾಲಿನ ಸಂಘರ್ಷದ ಆಳ ಅಗಲ

ಒಕ್ಕೂಟವೋ ತಿಕ್ಕಾಟವೋ
ಲೇ: ಬಿ. ಶ್ರೀಪಾದ ಭಟ್
ಪ್ರ: ಕ್ರಿಯಾ ಮಾಧ್ಯಮ,
ಸಂ: 9036082005

ವಸಾಹತು ಆಡಳಿತದ ಹಿಡಿತದಿಂದ ಸ್ವಾತಂತ್ರ್ಯಗೊಂಡ ಭಾರತ, ರಾಜಕೀಯವಾಗಿ ಒಕ್ಕೂಟ ವ್ಯವಸ್ಥೆಯನ್ನು ತನ್ನದನ್ನಾಗಿಸಿತು. ಆ ಮೂಲಕ ಭಿನ್ನ ಭಾಷೆ, ವೈವಿಧ್ಯ ಸಂಸ್ಕೃತಿಗಳಲ್ಲಿ ಏಕತೆಯ ಸ್ವರೂಪವನ್ನು ಸಾಧಿಸಿತು. ಅದಕ್ಕಾಗಿ ತನ್ನದೇ ಆದ ಸಂವಿಧಾನವನ್ನು ರಚಿಸಿಕೊಂಡು ಭೌತಿಕ ಮತ್ತು ಭಾವನಾತ್ಮಕ ಸ್ಪಷ್ಟ ಭಾಷ್ಯವನ್ನೂ ಬರೆಯಿತು. ಭಾರತ ದೇಶ ಒಕ್ಕೂಟದ ರೂಪುಗೊಳ್ಳುವ ಚಾರಿತ್ರಿಕ ಸಂದರ್ಭ, ಈಗ ಅಲ್ಲಿ ಕೇಳುತ್ತಿರುವ ಸಂಘರ್ಷದ ಧ್ವನಿಯ ಆಳ ಅಗಲವನ್ನು ಲೇಖಕ ಬಿ. ಶ್ರೀಪಾದ ಭಟ್ ಇಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಭಾರತದ ಒಕ್ಕೂಟ ವ್ಯವಸ್ಥೆ ಎನ್ನುವುದು ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕದಂತೆ ಅಲ್ಲ. ಕೇಂದ್ರದ ಆಡಳಿತಕ್ಕೆ ಒಳಪಡುವ ಭಾಷಾವಾರು ರಾಜ್ಯ ವ್ಯವಸ್ಥೆಯನ್ನು ಸಂವಿಧಾನ ಅಂಗೀಕರಿಸಿದೆ. ರಾಜ್ಯ ಕೇಂದ್ರಗಳ ನಡುವೆ ಅಧಿಕಾರ ಹಂಚಿಕೆ ಮತ್ತು ಕಾನೂನಾತ್ಮಕ ಪರಿಹಾರಗಳನ್ನು ಅದು ಸ್ಪಷ್ಟವಾಗಿ ಗುರುತಿಸಿದೆ. ಆದರೂ ಅಂತಿಮವಾಗಿ ರಾಜ್ಯದ ಮೇಲೆ ನಿಯಂತ್ರಣದ ಅಧಿಕಾರವನ್ನು ಕೇಂದ್ರಕ್ಕೆ ಸಂವಿಧಾನ ನೀಡಿದೆ. ತೆರಿಗೆ ಸುಧಾರಣೆಯಲ್ಲಿ ಜಿಎಸ್‌ಟಿ ಜಾರಿಗೊಳಿಸಿದ ನಂತರ ದಕ್ಷಿಣದ ರಾಷ್ಟ್ರಗಳಲ್ಲಿ ಅದರಲ್ಲೂ ಕರ್ನಾಟಕಕ್ಕೆ ಅನ್ಯಾಯ ಆಗಿದೆ ಎನ್ನುವ ಕೂಗು ದೊಡ್ಡದಾಗಿ ಕೇಳಿಬಂದಿದೆ. ಆ ಧ್ವನಿಗೆ ತಾರ್ಕಿಕ ವಿವರಣೆಯನ್ನು ಈ ಕೃತಿಯಲ್ಲಿ ಲೇಖಕ ನೀಡಿದ್ದಾರೆ.

ಸಮಕಾಲೀನ ರಾಜಕೀಯ ಮತ್ತು ಆರ್ಥಿಕ ವಿವರವನ್ನು ವಿಶ್ಲೇಷಣಾತ್ಮಕ ದೃಷ್ಟಿಯಲ್ಲಿ ನೋಡಿದ್ದಾರೆ. ಎರಡು ಭಾಗದಲ್ಲಿ 16 ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ಮೊದಲ ಭಾಗ 'ರಾಜಕೀಯ ಒಕ್ಕೂಟ'ದಲ್ಲಿ 'ಪ್ರಜಾಪ್ರಭುತ್ವ ಮತ್ತು ಸಂವಿಧಾನ: ಮುಂದಣ ದಾರಿ ಯಾವುದು?', 'ಮೋದಿ 1.0 ಮತ್ತು 2.0 ಸರ್ಕಾರಗಳ ರಾಷ್ಟ್ರೀಯ ಒಕ್ಕೂಟ ವ್ಯವಸ್ಥೆ: ನಿರಂಕುಶ ಪ್ರಭುತ್ವ', 'ಇಡಿ ಮತ್ತು ಪಿಎಂಎಲ್‌ಎ– ಪಂಜರದ ಗಿಣಿ ಮತ್ತು ಕರಾಳ ಕಾಯ್ದೆ' ಸೇರಿ ಎಂಟು ಲೇಖನಗಳನ್ನು ಒಳಗೊಂಡಿದೆ.

ಆರ್ಥಿಕ, ರಾಜಕೀಯ ವಿಷಯ ಮಾತ್ರವಲ್ಲದೆ ಭಾಷೆ ಮತ್ತು ಶಿಕ್ಷಣ ವ್ಯವಸ್ಥೆಯ ಭಿನ್ನ ಸ್ವರದ ಆಳ ಅಗಲವನ್ನು ಲೇಖಕ ತಮ್ಮ ಅರಿವಿನ ವಿಸ್ತಾರದಲ್ಲಿ ಸೆರೆ ಹಿಡಿಯುವ ಪ್ರಯತ್ನವನ್ನು ಮಾಡಿದ್ದಾರೆ.

ಪು: 156 ₹170

ಜೀವ ವೈವಿಧ್ಯತೆಯ ತಾಣ ಕಪ್ಪತಗುಡ್ಡ

ನಮ್ಮದೇ ನಾಡಿನ ಗದಗ ಜಿಲ್ಲೆಯ ಕಪ್ಪತಗುಡ್ಡ ಜೀವವೈವಿಧ್ಯತೆಯ ತಾಣವಾಗಿದೆ. ಇದು ಅಮೂಲ್ಯ ಗಿಡಮೂಲಿಕೆಗಳು, ಪ್ರಾಣಿ ಪಕ್ಷಿಗಳಿಗೆ ಆಶ್ರಯವಾಗಿದೆ. ಈ ಗುಡ್ಡವನ್ನು ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದೂ ಇಲ್ಲಿಯ ಜನರು ಅಭಿಮಾನದಿಂದ ಕರೆಯುತ್ತಾರೆ. ಇಲ್ಲಿಗೆ ಸಂಶೋಧಕರು, ಚಾರಣ ಪ್ರಿಯರು, ಪ್ರವಾಸಿಗರು ಹೆಚ್ಚಾಗಿ ಭೇಟಿ ಕೊಡುತ್ತಾರೆ.

• ಶಿವನಗೌಡ ಪೊಲೀಸ್ ಪಾಟೀಲ್ ನವಲಹಳ್ಳಿ

ಗದಗ ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣ ಕಪ್ಪತಗುಡ್ಡದ ವೈಯ್ಯಾರ ಪ್ರಕೃತಿಯ ಹಚ್ಚಹಸಿರ ಸೊಬಗಿನ ಸೆಳೆತದ ನಡುವೆ ಇನ್ನೇನು ಆಗಸಕ್ಕೆ ತಾಗಿಬಿಡುತ್ತೆ ಎನ್ನುವಂತಿದೆ. ಬಯಲು ಸೀಮೆಯ ಸಹ್ಯಾದ್ರಿ ಎಂದು ಕರೆಸಿಕೊಳ್ಳುವ ಕಪ್ಪತಗುಡ್ಡದ ಮೇಲೆ ಬೀಸುವ ತಂಗಾಳಿ, ಚದುರುವ ಮೋಡಗಳು ಸೂಜಿಗಲ್ಲಿನಂತಹ ಸೆಳೆತ ಹೊಂದಿವೆ. ಸಮುದ್ರ ಮಟ್ಟದಿಂದ 750 ಮೀಟರ್ ಎತ್ತರದಲ್ಲಿರುವ ಕಪ್ಪತಗುಡ್ಡ, ಶುದ್ಧಗಾಳಿಗೆ ಹೆಸರಾಗಿದೆ. ವಿಹಾರ ಮತ್ತು ಟ್ರೆಕ್ಕಿಂಗ್‌ಗೆ ಹೇಳಿ ಮಾಡಿಸಿದಂತಿದೆ ಈ ಗುಡ್ಡ. ಮಳೆಗಾಲದಲ್ಲಿ ಇದರ ಚೆಂದಕ್ಕೆ ಮನಸೋಲದ ಮನಸ್ಸುಗಳೇ ಇಲ್ಲ!

ಹೆಚ್ಚು ಜನರಿಗೆ ಪರಿಚಯವಿಲ್ಲದ, ಓಡಾಡಲು ಬಹುತೇಕರು ಅಂಜುವಂತಹ ಕಪ್ಪತಗುಡ್ಡ ಇಡೀ ದಿನದ ಚಾರಣಕ್ಕೆ ಹೇಳಿ ಮಾಡಿಸಿದಂತಿದೆ. ಗುಡ್ಡದ ನಿರ್ಜನ ಅಂಗಳದಲ್ಲಿ ಮಕ್ಕಳಂತೆ ನಾಲ್ಕು ದಿಕ್ಕಿಗೂ ಎಷ್ಟೆಲ್ಲ ಓಡಾಡಿದೆವು ಎಂದರೆ, ಹೆಚ್ಚು ಕಡಿಮೆ ಕಪ್ಪತಗುಡ್ಡದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೂ! ಅಲ್ಲಿ ಸಿಗುವ 'ಕಲ್ಲು ಮಾವು' ಸಸ್ಯದ ಎಲೆಯ ಸಾರಿನ ರುಚಿಯನ್ನು ಉಂಡವರ ಬಾಯಲ್ಲೇ ಕೇಳಬೇಕು. ಎತ್ತರದ ಕಲ್ಲಿನ ಪಡಕಿಗೇ ಒತ್ತಿಕೊಂಡೇ ಬೆಳೆವ ಈ ಸಸ್ಯದಂತಹ ನೂರಾರು ಅಪರೂಪದ ಅಡುಗೆಗೆ ಬಳಸಬಹುದಾದ ಸಸ್ಯರಾಶಿಯ ಮಡಿಲು ನಮ್ಮ ಕಪ್ಪತಗಿರಿ ಸಾಲು. 'ಬ್ರಹ್ಮಕಾಂತಿ', 'ತುರುಬು ಚಂದಿರ', 'ವಿಷ್ಣು ಕಾಂತಿ', 'ಗೋರೆ ಹುಲ್ಲು' ಇಂತಹ ವಿಶಿಷ್ಟ ಸಸ್ಯಗಳನ್ನು ಅರಸಿ ಕಪ್ಪತಗುಡ್ಡಕ್ಕೆ ಪ್ರತಿ ವರ್ಷ ನೂರಾರು ಸಾಧು, ಸಂತರು ಬರುತ್ತಲೇ ಇರುತ್ತಾರೆ. ಮಳೆಗಾಲವಷ್ಟೇ ಅಲ್ಲದೇ, ಬೇಸಿಗೆಯಲ್ಲೂ ಅಮೂಲ್ಯ ಗಿಡಮೂಲಿಕೆ ಅರಸಿ ಇಲ್ಲಿಗೆ ಬರುವವರ ಸಂಖ್ಯೆ ಕಡಿಮೆ ಏನಲ್ಲ. ಪ್ರತೀ ಮಳೆಗಾಲದ ಮೊದಲ ಮಳೆಯ ನಂತರ ಗುಡ್ಡದ ಕೆಂಪು ಮಣ್ಣಿನಡಿ ಗಪ್ಪನೆ ಕೂತ ಗಡ್ಡೆಗಳೆಲ್ಲ ಚಿಗುರೊಡೆಯುತ್ತವೆ. 'ಸವಳಕ್ಕ', 'ಮಧುನಾಶಿನಿ' ಎಂಬ ಬಳ್ಳಿ ಮತ್ತದರ ಗಡ್ಡೆ ಬಲು ಅಪರೂಪದ್ದು. ಇಂತಹ ಅಸಂಖ್ಯ ಸಸ್ಯಪ್ರಭೇದ ಇಲ್ಲಿವೆ.

ಕೆಂಪು ಮಣ್ಣಿನ ಹುಡಿಯ ಕಪ್ಪತಗುಡ್ಡದ ಪ್ರತೀ ಸರವಿಗೂ ಒಂದೊಂದು ಐತಿಹ್ಯವಿದೆ. ಇಲ್ಲಿನ ಗುಹೆಗಳ ಒಳಗೆ ಕಲ್ಲು ಸಂದಿಗಳಿಗೆ ಅಂಟಿಕೊಂಡು ಸಿಗುವ 'ಕಲ್ಲು ಧೂಪ' ಹೆಚ್ಚು ಚಿಕಿತ್ಸಕ ಗುಣವುಳ್ಳದ್ದು. ಗುಡ್ಡದ ಒಡಲಲಿ ಆರೇಳು ಕಿಲೋಮೀಟರ್ ನಡೆಯುತ್ತಾ 'ಮಂಜಿನ ದೋಣಿ' ತಲುಪಿದರೆ ಅದೊಂದು ಐತಿಹ್ಯದ ಸ್ಥಳ. ಎಷ್ಟೋ ಸಾಧು ಸಂತರು ಕೇವಲ ಜಪ, ಅನುಷ್ಠಾನಕ್ಕಾಗಿ ಬರುವ ಆಲದಮರದ ಬಿಳಲಿನಿಂದ ಇಳಿದು ಅದರಿಂದಲೇ ಮೇಲೆ ಬರುವ ಏಕೈಕ ದಾರಿಯಿರುವ ಮಹತ್ವದ ಸ್ಥಳ ಅದು. ಹೆಚ್ಚಿನ ಪ್ರವಾಸಿಗರಿಗೆ ಅಲ್ಲಿಯವರೆಗೆ ಓಡಾಡಲು ನಾಲ್ಕು ಗುಂಡಿಗೆ ಬೇಕು ಎನ್ನುವಂತಹ ದಾರಿ ಅದು.

ಕಪ್ಪತಗುಡ್ಡದ ನಾಲ್ಕು ಮೂಲೆಗೂ ಗೋಲಗೇರಿ ಮಠ, ನಂದಿವೇರಿ ಮಠ, ಹಳೇ ಮಠ... ಹೀಗೆ ಹಲವು ಮಠಗಳಿವೆ. ಒಂದು ಕಾಲದಲ್ಲಿ ಪಶು ಸಂಗೋಪನೆಗೆ ನಂದಿವೇರಿ ಮಠ ರಾಜ್ಯದಲ್ಲೇ ಹೆಸರುವಾಸಿಯಾಗಿತ್ತು. ತೋಂಟದ ಸಿದ್ಧಲಿಂಗೇಶ್ವರ ಶ್ರೀಗಳು ಇರುವ ತನಕ ಕಪ್ಪತಗುಡ್ಡದ ಬಗೆಗೆ ವಿಶೇಷ ಕಾಳಜಿವಹಿಸಿದ್ದರು. ಅಗತ್ಯ ಬಿದ್ದಾಗ ಅವರು ಕಪ್ಪತಗಿರಿ ಉಳಿಸಿಕೊಳ್ಳಲು ಬೀದಿಗಿಳಿದದ್ದು ಉಂಟು. ಪ್ರತೀ ವರ್ಷ ಬೆಂಕಿಗೆ ಸಿಕ್ಕು ಸಾವಿರಾರು ಹೆಕ್ಟೆರ್ ಸುಟ್ಟರೂ ಅದೇ ವರ್ಷದ ಮಳೆಗಾಲಕ್ಕೆ ಕಪ್ಪತಗುಡ್ಡ ಕಡು ಹಸಿರ ಬಣ್ಣವನ್ನೇ ಮೈಗೆಲ್ಲ ಬಳೆದುಕೊಂಡಂತೆ ಚಿಗುರೊಡೆಯುತ್ತದೆ. ಪಡಿಯಲಿ ಚೂರು ಹೊತ್ತು ಕೂತು ಕಪ್ಪತ ಮಲ್ಲೇಶ್ವರ ಮಠದಲ್ಲಿ ಚಾರಣ. ಈ ವರ್ಷವು ಮೋಡಗಳನ್ನು ಹಿಡಿದೆಳೆದು ಕೆಳಗೆ ಕೆಡವಿದಂತೆ ಆಗೀಗ ಮೋಡ-ಗುಡ್ಡದ ಗುದಮುರಗಿ ಇಡೀ ದಿನ ನಡೆದೇ ಇತ್ತು.

ನಮ್ಮ ಕಪ್ಪತಗುಡ್ಡವನ್ನು ಈಗ ಉಳಿಸಿಕೊಳ್ಳುವುದರ ಜೊತೆಗೆ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತಂದು ಬಿಸಾಡುವ ಬಹುತೇಕ ನಗರ ಪ್ರದೇಶದ ಜನರಿಂದ ಉಳಿಸಿಬೇಕಿರುವುದು ಸದ್ಯದ ಅಗತ್ಯ. ಅರಣ್ಯ ಇಲಾಖೆ ಈ ಬಗೆಗೆ ಮುತುವರ್ಜಿ ವಹಿಸಿದರೆ ಈಗಾಗಲೇ ಸಾಕಷ್ಟು ವೃದ್ಧಿಯಾಗಿರುವ ಗುಡ್ಡದ ಪ್ರಾಣಿ ಸಂಕುಲ ಸಹ ಕಪ್ಪತಗುಡ್ಡದ ಪ್ರತಿ ಮೂಲೆಯಿಂದ ಹೆಚ್ಚೆಚ್ಚು ಕೇಕೆ ಹಾಕಬಹುದು. ಕಪ್ಪತಗುಡ್ಡದ ಮಡಿಲಲಿ ಹೆಚ್ಚಿದ ವನ್ಯಜೀವಿಗಳ ಸಂತತಿ, ಉತ್ತರ ಕರ್ನಾಟಕದ ಸಹ್ಯಾದ್ರಿ ಎನಿಸಿರುವ ಕಪ್ಪತಗುಡ್ಡದಲ್ಲಿ ವನ್ಯಜೀವಿಗಳ ಸಂಖ್ಯೆ ವೃದ್ಧಿಸಿರುವುದು, ಅರಣ್ಯ ಇಲಾಖೆ ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿದೆ. ಇದೇ ಮೊದಲ ಬಾರಿಗೆ ಅತಿ ಅಪರೂಪದ ಪ್ರಾಣಿಗಳಾದ ಚಿಂಕಾರ ಹಾಗೂ ರೆಸ್ಟಿ ಸ್ಪಾಟೆಡ್ ಬೆಕ್ಕುಗಳು ಇಲ್ಲಿ ಕಂಡು ಬಂದಿವೆ. ಕಪ್ಪತಗುಡ್ಡ ವನ್ಯಜೀವಿಧಾಮವು ಗದಗ, ಮುಂಡರಗಿ ಹಾಗೂ ಶಿರಹಟ್ಟಿ ತಾಲ್ಲೂಕಿನಲ್ಲಿ ಸುಮಾರು 65 ಕಿಲೋಮೀಟರ್ ಉದ್ದಕ್ಕೆ ಚಾಚಿಕೊಂಡಿದೆ. ಕಪ್ಪತಗುಡ್ಡವನ್ನು ವನ್ಯಜೀವಿಧಾಮ ಎಂದು ಘೋಷಣೆ ಮಾಡಿದ ನಂತರ ಇಲ್ಲಿ ಸಸ್ಯ ಹಾಗೂ ವನ್ಯಜೀವಿಗಳ ಸಂತತಿ ನಿಧಾನವಾಗಿ ವೃದ್ಧಿಸುತ್ತಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ಕಪ್ಪತಗುಡ್ಡದಲ್ಲಿರುವ ಸಸ್ಯಾಹಾರಿ ಮತ್ತು ಮಾಂಸಾಹಾರಿ ಪ್ರಾಣಿಗಳ ನೆಲೆ ಕಂಡುಹಿಡಿಯಲು ಈವರೆಗೆ ಯಾವುದೇ ವೈಜ್ಞಾನಿಕ ಅಧ್ಯಯನ ನಡೆದಿರಲಿಲ್ಲ. ಈ ಹಿನ್ನೆಲೆಯಲ್ಲಿ ಡೆಹರಾಡೂನ್‌ನ ಭಾರತೀಯ ವನ್ಯಜೀವಿ ಸಂಸ್ಥೆ, ದಾಂಡೇಲಿಯ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ವನ್ಯಜೀವಿ ಘಟಕದ ಸಿಬ್ಬಂದಿ ನೆರವಿನಿಂದ ಮೇ 7ರಿಂದ ಜುಲೈ 15ರವರೆಗೆ ಕಪ್ಪತಗುಡ್ಡ ವನ್ಯಜೀವಿಧಾಮದಲ್ಲಿ ಪ್ರಾಥಮಿಕ ಅಧ್ಯಯನ ನಡೆಸಲಾಗಿದೆ. ಇದರಿಂದ ನಮಗೆ ಅಚ್ಚರಿಯ ಫಲಿತಾಂಶ ಲಭಿಸಿದ್ದು, ಕಪ್ಪತಗುಡ್ಡದಲ್ಲಿ ಎಷ್ಟೆಲ್ಲಾ ವೈವಿಧ್ಯದ ಪ್ರಾಣಿಗಳಿವೆ ಎಂಬುದು ಆಶ್ಚರ್ಯ ತರಿಸಿದೆ' ಎಂದು ಡಿಸಿಎಫ್ ದೀಪಿಕಾ ಬಾಜಪೇಯಿ ತಿಳಿಸಿದ್ದಾರೆ.

'ಸೈನ್ ಸರ್ವೆ ವಿಧಾನದಲ್ಲಿ 128 ಕಿಲೋಮೀಟರ್ ಸಂಚರಿಸಿ ಪ್ರಾಣಿಗಳ ಮಲದ ನಮೂನೆ, ಮರ ಮತ್ತು ಅರಣ್ಯ ಪ್ರದೇಶದಲ್ಲಿ ಪ್ರಾಣಿಗಳು ಪರಚಿದ ಗುರುತುಗಳನ್ನು ವೀಕ್ಷಿಸಲಾಗಿದೆ. ಲೈನ್ಸ್ ಟ್ರಾನ್ಸಕ್ಟ್ ವಿಧಾನದಲ್ಲಿ ಪ್ರಾಣಿಗಳ ಸಂಚಾರ ಮಾರ್ಗ ಗಮನಿಸಲಾಗಿದೆ. ಜತೆಗೆ ಕ್ಯಾಮೆರಾ ಟ್ರ್ಯಾಪ್ ವಿಧಾನದಲ್ಲಿ ಕಪ್ಪತಗುಡ್ಡದಲ್ಲಿ 98 ಕ್ಯಾಮೆರಾ ಅಳವಡಿಸಿ 30 ದಿನ ನಿರಂತರ ವೀಕ್ಷಣೆ ಮಾಡಲಾಗಿದೆ. ಈ ಮೂರು ವಿಧಾನಗಳಿಂದ ಪ್ರಾಣಿಗಳ ಸಂತತಿ ಸಂಖ್ಯೆ, ಅವುಗಳ ನೆಲೆ ಹಾಗೂ ಆಹಾರ ಪದ್ಧತಿಯನ್ನು ಅಧ್ಯಯನ ಮಾಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಕಪ್ಪತಗುಡ್ಡದಲ್ಲಿ ಹಿಂದೆ ಎಷ್ಟು ಸಂಖ್ಯೆಯಲ್ಲಿ ಪ್ರಾಣಿಗಳಿದ್ದವು ಎಂಬುದಕ್ಕೆ ಮೂಲ ದಾಖಲೆಗಳಿಲ್ಲ. ಸಮೀಕ್ಷೆಗಳು ನಡೆದಿಲ್ಲ. ಆದರೆ, ಕಪ್ಪತಗುಡ್ಡ ವನ್ಯಜೀವಿಧಾಮ ಎಂದು ಘೋಷಣೆಯಾದ ನಂತರ ಹೆಚ್ಚಿನ ಅನುದಾನ ಸಿಗುತ್ತಿರುವುದು, ಕಾಡಿನ ರಕ್ಷಣೆಗೆ ಸಿಬ್ಬಂದಿ ಸಂಖ್ಯೆ ಹೆಚ್ಚಿಸಿರುವುದು, ಕುಡಿಯುವ ನೀರಿನ ಹೊಂಡಗಳ ನಿರ್ಮಾಣ, ಕಾಡ್ಗಿಚ್ಚಿನಿಂದ ಅರಣ್ಯ ರಕ್ಷಣೆಗೆ ಒತ್ತು ನೀಡಿರುವುದು, ಕಳ್ಳಬೇಟೆ ನಿಯಂತ್ರಣ ಮೊದಲಾದ ಕಾರಣಗಳಿಂದ ಪ್ರಾಣಿಗಳ ಸಂತತಿ ಹೆಚ್ಚಿದೆ. ಮುಂದಿನ ಐದತ್ತು ವರ್ಷಗಳಲ್ಲಿ ಪ್ರಾಣಿಗಳ ಸಂಖ್ಯೆ ಇನ್ನೂ ಹೆಚ್ಚಳವಾಗುವ ನಿರೀಕ್ಷೆ ಇದೆ' ಎಂದಿದ್ದಾರೆ ದೀಪಿಕಾ ಬಾಜಪೇಯಿ.

ಮಾನವ ಹಸ್ತಕ್ಷೇಪ ಕಡಿಮೆ ಆಗಿದ್ದರಿಂದ ಕಾಡು ಬೆಳೆದಿದೆ. ಕಾಡು ವೃದ್ಧಿಸುತ್ತಿರುವುದರಿಂದ ಪ್ರಾಣಿಗಳ ಸಂಖ್ಯೆ ಹೆಚ್ಚುತ್ತಿದೆ. ಅರಣ್ಯ ಇಲಾಖೆಯವರು ಜನರ ಸಹಕಾರ ಪಡೆದು ಕಪ್ಪತಗುಡ್ಡಕ್ಕೆ ಇನ್ನೂ ಹೆಚ್ಚಿನ ಕಾವಲು ಹಾಕಬೇಕು. ಕಾಳಜಿ ಮಾಡಬೇಕು.

ವೈಜ್ಞಾನಿಕ ಸಮೀಕ್ಷೆಯಿಂದ ಕಪ್ಪತಗುಡ್ಡ ಪ್ರದೇಶದಲ್ಲಿ ಕತ್ತೆಕಿರುಬ, ಚಿರತೆ, ನರಿ, ತೋಳ, ಕಾಡುಬೆಕ್ಕು, ಚುಕ್ಕೆ ಜಿಂಕೆ, ಕೃಷ್ಣಮೃಗ, ಮೂರು ಜಾತಿಯ ಹುಲ್ಲೆಗಳು ಸೇರಿದಂತೆ ಹಲವು ಜಾತಿಯ ಪ್ರಾಣಿಗಳು ಹಾಗೂ ಪಕ್ಷಿಗಳು, ಸರೀಸೃಪಗಳು ಕಂಡುಬಂದಿವೆ. ನಿಸರ್ಗ ಅದ್ಭುತ ತಾಣವನ್ನು ಉಳಿಸಿ ಬೆಳೆಸುವುದು ನಮ್ಮಗಳ ಮೇಲಿದೆ. ❖

ಬಂಗಾರವಾದ ಬಂಜರು ನೆಲ...

10ನೇ ಪುಟದಿಂದ...
ಇದೀಗ ವರ್ಷಕ್ಕೆ ಎರಡು ಮೂರು ಬೆಳೆ ಬೆಳೆಯಲು ಅನುಕೂಲವಾಗಿದೆ. ಅಲ್ಲದೇ, ಬಂಜರು ಇದ್ದ ನೆಲವನ್ನೂ ಉಳುಮೆ ಮಾಡಿ ಬಹುತೇಕ ರೈತರು ಬೇಸಾಯ ಮಾಡಿ ಆರ್ಥಿಕವಾಗಿ ಸ್ಥಿತಿವಂತರಾಗುವತ್ತ ಹೆಜ್ಜೆ ಇಟ್ಟಿದ್ದಾರೆ.

ಚಿಕ್ಕೋಡಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಾಗಿದ್ದ ಮಂಜುನಾಥ ಜನಮಟ್ಟಿ, ಸೇವಾ ನಿವೃತ್ತಿ ಹೊಂದಿರುವ ಕೃಷಿ ಅಧಿಕಾರಿ ಎಸ್.ಎಚ್. ಜಾತಗಾರ, ಮುಂತಾದವರ ಇಚ್ಛಾಶಕ್ತಿಯಿಂದ ಇಂತಹದೊಂದು ಅಭೂತಪೂರ್ವ ಕಾರ್ಯ ಸಾಕಾರಗೊಳ್ಳಲು ಸಾಧ್ಯವಾಗಿದೆ. ಬೆಟ್ಟಗುಡ್ಡಗಳಲ್ಲಿ ನಿರ್ಮಿಸಿದ ಚೆಕ್ ಡ್ಯಾಂಗಳಲ್ಲಿ ನೀರು ನಿಲ್ಲುತ್ತಿದ್ದು, ಹಳ್ಳ ಕೊಳ್ಳಗಳಿಗೆ ಅಡ್ಡಲಾಗಿ ಕಟ್ಟಿರುವ ನಾಲಾ ಬಂಡ್‌ಗಳಿಂದಾಗಿ ಅಂತರ್ಜಲಮಟ್ಟ ಹೆಚ್ಚುತ್ತಿದೆ.

'ನಾಲಾ ಬಂಡ್, ಚೆಕ್ ಡ್ಯಾಂ ನಿರ್ಮಾಣದಿಂದ ನಮ್ಮೂರಿನಲ್ಲಿ ಕೊಳವೆಬಾವಿ, ತೆರೆದ ಬಾವಿಗಳಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ. ಇದರಿಂದ ಕೃಷಿ ಮಾಡಲು ರೈತರಿಗೆ ಅನುಕೂಲವಾಗಿದ್ದಲ್ಲದೇ, ಕುಡಿಯುವ ನೀರಿನ ಸಮಸ್ಯೆಯೂ ನೀಗಿದೆ' ಎಂದು ಕೋಥಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಜಿತೇಂದ್ರ ಪಾಟೀಲ ಹೇಳುತ್ತಾರೆ.

ಹಿರೇಕೋಡಿ ಉಪ ಜಲಾನಯನ ಯೋಜನೆಯ ಅವಧಿ 2022 ರಿಂದ 2025ರ ಮಾರ್ಚ್‌ಗೆ ಕೊನೆಗೊಂಡಿದೆ. ಈ ಮೂರು ವರ್ಷಗಳ ಅವಧಿಯಲ್ಲಿ ವಿವಿಧ ಕಾಮಗಾರಿ, ಸ್ವ ಉದ್ಯೋಗ ಕೈಗೊಳ್ಳಲು ಸಹಾಯಧನ, ತರಬೇತಿ, ಅರಣ್ಯೀಕರಣ ಹೊರಗುತ್ತಿಗೆ ನೌಕರರಿಗೆ ಸಂಬಳ ಸೇರಿದಂತೆ ಒಟ್ಟು ₹ 13.62 ಕೋಟಿ ವೆಚ್ಚ ಮಾಡಲಾಗಿದೆ. ಯೋಜನೆಯ ಅನುಷ್ಠಾನ ಅವಧಿಯಲ್ಲಿ 3680 ರೈತರು ಈ ಯೋಜನೆಯ ಲಾಭ ಪಡೆದುಕೊಂಡಿದ್ದಾರೆ. ನೀರು ಸಂರಕ್ಷಣೆ ಹಾಗೂ ಮಣ್ಣಿನ ಸವಕಳಿ ತಡೆ ಪರಿಣಾಮವಾಗಿ ವರ್ಷದಿಂದ ವರ್ಷಕ್ಕೆ ಕೃಷಿ ಯೋಗ್ಯ ಭೂಮಿ ಹೆಚ್ಚಾಗುತ್ತಿದೆ. 2024ರಲ್ಲಿ ಕೇಂದ್ರ ಸರ್ಕಾರದ ಯೋಜನೆ ಅನುಷ್ಠಾನ ಪರಿಶೀಲನೆ ಮಾಡಲು ಬಂದಿದ್ದ ಅಧಿಕಾರಿಗಳು ಈ ಯೋಜನೆಯ ಯಶಸ್ವಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

> **ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಪರಿಣಾಮ ಆರು ಸಾವಿರ ಹೆಕ್ಟೇರ್ ಜಮೀನು ಬೇಸಿಗೆಯಲ್ಲೂ ಹಸಿರು ಹೊದ್ದು ನಿಲ್ಲಲು ಸಾಧ್ಯವಾಗಿದೆ**
>
> **ಎಚ್.ಡಿ. ಕೋಳೆಕರ,** ಉಪ ನಿರ್ದೇಶಕ ಕೃಷಿ ಇಲಾಖೆ

ಯೋಜನೆ ವ್ಯಾಪ್ತಿಯ ಬೆಟ್ಟಗುಡ್ಡದಿಂದ ಕೂಡಿದ ಬಂಜರು ಭೂಮಿಯು ಇದೀಗ 240 ಹೆಕ್ಟೇರ್ ಪ್ರದೇಶದಲ್ಲಿ ಮಾವು, ಪೇರಲ, ಲಿಂಬೆ, ತೆಂಗು, ಚಿಕ್ಕು, ನುಗ್ಗೆ ಮುಂತಾದ ಗಿಡಗಳಿಂದ ಕಂಗೊಳಿಸುತ್ತಿದೆ. 245 ಹೆಕ್ಟೇರ್ ಪ್ರದೇಶದಲ್ಲಿ ಮಹಾಗಣಿ, ಅರಳಿ, ತೇಗ ಮುಂತಾದ ಗಿಡಗಳಿಂದ ಕೂಡಿದ ಕಿರುಕಾಡು ಬೆಳೆಸಲಾಗಿದೆ. ಹಸಿರು ಹೊದ್ದು ನಿಂತ ಬೆಟ್ಟ ಇದೀಗ ಪ್ರಾಣಿ ಪಕ್ಷಿ ಸಂಕುಲಕ್ಕೆ ಸ್ವರ್ಗವಾಗಿದೆ. ಕೃಷಿ ಇಲಾಖೆಯ ಅಧಿಕಾರಿಗಳ ಕರ್ತವ್ಯ ಪ್ರಜ್ಞೆ ಹಾಗೂ ಸ್ಥಳೀಯ ರೈತರ ಆಸಕ್ತಿದಾಯಕ ಪಾಲ್ಗೊಳ್ಳುವಿಕೆಯಿಂದ ಇಷ್ಟೆಲ್ಲ ಸಾಧ್ಯವಾಗಿದೆ. ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಹಿಗ್ಗಿನ ಮಗ್ಗಿ ಮೊತ್ತ

ಉದಾ:

12
24
36
48
60
72
84
96
108
120
660

ಯಾವುದಾದರೊಂದು ಮಗ್ಗಿ ಬರೆಯಿರಿ. ಆ ಹತ್ತು ಸಂಖ್ಯೆಗಳ ಮೊತ್ತವನ್ನು ಅರೆಕ್ಷಣದಲ್ಲಿ ಹೇಳಿಬಿಡಬಹುದು. ನೀವು ಮಾಡಬೇಕಾದುದು ಇಷ್ಟೆ: ಮಗ್ಗಿಯ ಮೊದಲ ಸಂಖ್ಯೆಗೆ 55ರಿಂದ ಗುಣಿಸಿದರೆ ಅದರ ಮೊತ್ತ ಸಿಗುತ್ತದೆ.

ತಂತ್ರ: 12 ಮೊದಲ ಸಂಖ್ಯೆ. ಈ ಸಂಖ್ಯೆಗೆ 55ರಿಂದ ಗುಣಿಸಿದರೆ:

12X55 = 660

ಈಗ ಹತ್ತೂ ಸಂಖ್ಯೆ ಕೂಡಿಸಿ ಖಾತ್ರಿ ಮಾಡಿಕೊಳ್ಳಿ. ಬೇರೆ ಮಗ್ಗಿಗಳನ್ನೂ ಈ ರೀತಿ ಬರೆದು ನೋಡಿ

ತಿಳಿ ಸಾರು

ಇವುಗಳನ್ನು ಯಾರು, ಯಾವಾಗ ಕಂಡುಹಿಡಿದರು?

ಟೆಲಿಫೋನ್	ಗ್ರಾಹಮ್ ಬೆಲ್	1876
ಟೆಲಿವಿಷನ್ (ಮೆಕ್ಯಾನಿಕಲ್)	ಜಾನ್ ಲಾಗಿ ಬೇಯರ್ಡ್	1926
ಕ್ಷಕಿರಣ	ವಿಲ್ಹೆಲ್ಮ್ ಕಾನ್‌ರಾಡ್ ರಾಂಟ್‌ಗನ್	1895
ಬಾಲ್‌ಪಾಯಿಂಟ್ ಪೆನ್	ಜಾನ್ ಜೆ.ಲಾಡ್	1888
ಲೇಸರ್	ಥಿಯೊಡೋರ್ ಎಚ್. ಮೈಮನ್	1960

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಯಮ	+	ರಸ	+	ಸ	=	
2	ಉತ್ತು	+	ಗುರು	+	ಸು	=	
3	ಕಲೆ	+	ಜಡ	+	ಬೀ	=	
4	ಪ್ರತಿ	+	ಗರ	+	ಪ	=	
5	ಆಗ	+	ಸಾರ	+	ಳ	=	

ಬೆಪ್ಪಾದ ಗುಂಡ!



ಗುಂಡನ ಮನೆಯ ತಡೆಗೋಡೆಯಾಚೆ ಜನರು, ಪ್ರಾಣಿಗಳು ಮೂತ್ರವಿಸರ್ಜನೆ ಮಾಡಿ ದುರ್ನಾತ ಬೀರುತ್ತಿತ್ತು. ಇದರಿಂದ ಬೇಸತ್ತ ಗುಂಡ ಒಂದು ದಿನ ಹತ್ತಾರು ಬಕೆಟ್ ನೀರು ತಂದು ಆ ಪ್ರದೇಶವನ್ನು ಸ್ವಚ್ಛಗೊಳಿಸಿ 'ಮೂತ್ರ ವಿಸರ್ಜನೆ ಮಾಡಬೇಡಿ' ಎಂಬ ಪೋಸ್ಟರ್ ಅಂಟಿಸಿದ. ಪೋಸ್ಟರ್ ಅಂಟಿಸಿದ ಗುಂಡ ಗೇಟ್ ಒಳಗೆ ಪ್ರವೇಶಿಸಿದ್ದನಷ್ಟೇ ಅಷ್ಟರಲ್ಲಿ ಅಲ್ಲಿಗೆ ಬಂದ ಒಂದು ನಾಯಿ ಸ್ವಚ್ಛಗೊಳಿಸಿದ ಪ್ರದೇಶದಲ್ಲೇ ಮೂತ್ರ ವಿಸರ್ಜನೆ ಮಾಡಿತು. ಇದನ್ನು ಕಂಡ ಗುಂಡ ಬೆಪ್ಪಾದ!

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಅಪೂರ್ಣ ಪದಗಳನ್ನು ಚಿತ್ರರಂಗದ ನಟ-ನಟಿಯರ ಹೆಸರುತುಂಬಿ ಪೂರ್ಣಗೊಳಿಸಿ

1		ಗಣಿತ
2		ಮಹಾರಾಜ
3		ಸಮಾರಂಭ
4		ಮಾಡು
5		ಲೋಕ
6		ಗಂಗಾ
7		ಜಿಲ್ಲೆ
8		ರ ವಚನಗಳು
9		ಸೇರಿದಾಗ
10		ನಗರ
11	ಗಾಂಧಿ	
12	ತಾಯಿ	

ಇಂಗ್ಲಿಷ್‌ನಲ್ಲೊಂದು ವಿನೋದ ವಾಕ್ಯ

ಇಲ್ಲಿರುವ ವಾಕ್ಯ ಓದಿ ನೋಡಿ. ಇದು ತುಂಬಾ ಸ್ವಾರಸ್ಯವಾಗಿದೆ. ಎಡದಿಂದ ಓದಿದಾಗ ಹೇಗಿರುತ್ತದೋ ಹಾಗೆಯೇ ಯಾವೊಂದು ಪದವೂ ವ್ಯತ್ಯಾಸವಾಗದೇ ಕೊನೆಯಿಂದ ಓದಿದರೂ ಇರುತ್ತದೆ.

RATS LIVE ON NO EVIL STAR

ಸಣ್ಣಾಟ ಕಡ್ಡಿ ಆಟ

ಇಲ್ಲಿ ಒಂದು ಬೆಂಕಿ ಕಡ್ಡಿ ಸೇರಿಸಿ ಸಮೀಕರಣ ಸರಿ ಮಾಡಿ

29X5 =



ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿರುವ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ:
1.ನೇರಳೆಹಣ್ಣು
2.ಮನದಮಾತು
3.ಕರಿದತಿಂಡಿ 4.ಕಲಬೆರಕೆ
5.ಸೋನಿಯಾಗಾಂಧಿ

ಜಾಣಪದ ಆಟ:
1.ನಗರವಾಸಿ 2.ಮಾನವಕುಲ
3.ಹಯವದನ 4.ಕರಿಗಡಬು
5.ಜಲಾನಯನ
6.ಕಾಯಕಯೋಗಿ
7.ಕಲಾಭವನ 8.ಸರಿಸುಮಾರು
9.ಮಣ್ಣುಹರಡು
10.ಸಹಕರಿಸು

ಗಾದೆಮಾತು:
ಸಂಕಟ ಬಂದಾಗ ವೆಂಕಟರಮಣ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಅಧೀಕ್ಷಾ ಬಿ.ಎಂ.
ಹೊಸದುರ್ಗ

ರೇವತಿ ಶ್ಯಾಯನ್ನವರ
ಧಾರವಾಡ

ಗೌರಿಕಾ ಸಿ.
ಹೊನ್ನಾಳಿ

ನವನೀತ್ ಗೌಡ ಯು.
ಶಿರಾ

ಲೇಖಪ್ರಭಾ ಎಸ್.
ಮೈಸೂರು

ದೇವು ಕೆ.ಗೌಡ.
ತುಮಕೂರು

ಅಂಬಿಕಾ, ವಿಜಯಕುಮಾರಿ ಮೇಲುಗೈ

ಇಂಡಿಯನ್ ಓಪನ್ ಅಥ್ಲೆಟಿಕ್ ಕೂಟ: ಪಲ್ಲವಿ ಪಾಟೀಲಗೆ ಬೆಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಅಂಬಿಕಾ ಶನಿವಾರ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಓಪನ್ ಅಥ್ಲೆಟಿಕ್ ಕೂಟದ ಮಹಿಳೆಯರ ವಿಭಾಗದ ಶಾಟ್‌ಪಟ್‌ನಲ್ಲಿ ಚಿನ್ನದ ಪದಕ ಗೆದ್ದರು.

ಬೆಳಿಗ್ಗೆ ನಡೆದ ಶಾಟ್‌ಪಟ್ ಸ್ಪರ್ಧೆಯಲ್ಲಿ ಅಂಬಿಕಾ 14.14 ಮೀಟರ್ಸ್ ದೂರ ಎಸೆತದ ಸಾಧನೆ ಮಾಡಿದರು. ಇದೇ ವಿಭಾಗದಲ್ಲಿ ಕರ್ನಾಟಕದ ಬೃಂದಾ ಗೌಡ ಅವರು ಕಂಚಿನ ಪದಕ ಪಡೆದರು.

ಮಹಿಳೆಯರ 400 ಮೀಟರ್ಸ್ ಓಟದಲ್ಲಿ ಕರ್ನಾಟಕದ ಜಿ.ಕೆ. ವಿಜಯಕುಮಾರಿ ಅವರು 53.34 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮೇಲುಗೈ ಸಾಧಿಸಿದರು. ಹೈಜಂಪ್‌ನಲ್ಲಿ ಕರ್ನಾಟಕದ ಪಲ್ಲವಿ ಪಾಟೀಲ ಮತ್ತು ಬಿ. ಸುಪ್ರಿಯಾ ಅವರು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಪುರುಷರ 100 ಮೀ ಓಟದಲ್ಲಿ ಕರ್ನಾಟಕದ ಆರ್ಯನ್ ಮನೋಜ್ ಅವರು ಬೆಳ್ಳಿ ಪದಕ ಪಡೆದರು. ರೈಲ್ವೆಸ್ ತಂಡದ ತಮಿಳ್ ಅರಸು ಅವರು ಮೊದಲ ಸ್ಥಾನ ಗಳಿಸಿದರು. 200 ಮೀ ಓಟದಲ್ಲಿ ಕರ್ನಾಟಕದ ಅಭಿನ್ ದೇವಾಡಿಗ ಕಂಚು ಪಡೆದರು.

ಫಲಿತಾಂಶಗಳು: ಪುರುಷರು: 100 ಮೀ ಓಟ: ತಮಿಳ್ ಅರಸು ಎಸ್ (ರೈಲ್ವೆಸ್; 10.46ಸೆ)–1, ಆರ್ಯನ್ ಮನೋಜ್ (ಕರ್ನಾಟಕ; 10.62ಸೆ)–2, ವಿಭಾಸ್ಕರ್ ಕುಮಾರ್ (ಬಿಹಾರ; 10.63ಸೆ)–3.

200 ಮೀ ಓಟ: ಶುಭಂ (ಹರಿಯಾಣ; 21.25ಸೆ) ಹಾಗೂ ತಮಿಳ್ ಅರಸು ಎಸ್ (ರೈಲ್ವೆಸ್; 21.25ಸೆ) –1, ಅಭಿನ್ ದೇವಾಡಿಗ (ಕರ್ನಾಟಕ; 21.28ಸೆ)–3

400 ಮೀ ಹರ್ಡಲ್ಸ್: ರಕ್ಷಿತ್ ರವೀಂದ್ರನ್ (ಎನ್‌ಸಿಒಇ, ಬೆಂಗಳೂರು; 52.74ಸೆ)–1, ಕುನಾಲ್ ಕುಮಾರ್ (ಪಿಎಸ್‌ಸಿ; 52.78ಸೆ)–2, ಎಲ್. ಶರಭೇಶ್ವರ್ (ತಮಿಳುನಾಡು; 53.01ಸೆ)–3

ಹೈಜಂಪ್: ಸರ್ವೇಶ್ ಅನಿಲ್ ಕುಶಾರೆ (ಮಹಾರಾಷ್ಟ್ರ; 2.21 ಮೀ) –1, ತೇಜಸ್ವಿನ್ ಶಂಕರ್ (ಜೆಎಸ್‌ಡಬ್ಲ್ಯು; 2.19 ಮೀ)–2, ಆದರ್ಶ ರಾಮ್ (ತಮಿಳುನಾಡು; 2.13ಮೀ)–3.

ಲಾಂಗ್‌ಜಂಪ್: ಮೊಹಮ್ಮದ್ ಅನೀಸ್ ಯಾಹ್ಯಾ (ರಿಲಯನ್ಸ್; 7.93ಮೀ)–1, ಸನ್ನಿ ಕುಮಾರ್ (ಬಿಹಾರ; 7.90ಮೀ)–2, ಪಿ. ಡೇವಿಡ್ (ಎನ್‌ಸಿಒಇ, ಬೆಂಗಳೂರು; 7.78ಮೀ)–3

ಮಹಿಳೆಯರು: 100 ಮೀ ಓಟ: ಅಭಿನಯಾ ರಾಜರಾಜನ್ (ಎನ್‌ಸಿಒಇ; ತಿರುವನಂತಪುರ; 11.55ಸೆ)–1, ಎಸ್.ಎಸ್. ಸ್ನೇಹಾ (ಕರ್ನಾಟಕ; 11.63ಸೆ)–2, ಏಂಜೆಲ್ ಸಿಲ್ವಿಯಾ ಎಂ (ಎನ್‌ಸಿಒಇ; ಬೆಂಗಳೂರು; 11.71ಸೆ)–3.

200ಮೀ ಓಟ: ಏಂಜೆಲ್ ಸಿಲ್ವಿಯಾ (ಎನ್‌ಸಿಒಇ ಬೆಂಗಳೂರು; 23.81ಸೆ)–1, ವಿ. ಸುಧೀಕ್ಷಾ (ಎನ್‌ಸಿಒಇ, ಬೆಂಗಳೂರು; 24.32ಸೆ)–2, ಶಿವಾನಿ ಸೈನಿ (ಉತ್ತರಪ್ರದೇಶ; 24.40ಸೆ)–3

400 ಮೀ ಓಟ: ಜಿ.ಕೆ. ವಿಜಯಕುಮಾರಿ (ಕರ್ನಾಟಕ; 53.34ಸೆ)–1, ದಿವ್ಯಾಂಬಾ ಮಹೇಂದ್ರ(ಗುಜರಾತ್)–2,ಜಿಸ್ನಾ ಮ್ಯಾಥ್ಯೂ (ಕೇರಳ)–3

100 ಮೀ ಹರ್ಡಲ್ಸ್: ಸಿ. ಅಂಜಲಿ (ಕೇರಳ: 13.65ಸೆ)–1, ಪ್ರಾಂಜಲಿ ದಿಲೀಪ್ ಪಾಟೀಲ (ಜೆಎಸ್‌ಡಬ್ಲ್ಯು; 13.83ಸೆ)–2, ಕೆ. ನಂದಿನಿ (ತಮಿಳುನಾಡು; 13.85ಸೆ)–3

ಮಹಿಳೆಯರ ಹೈಜಂಪ್‌ನಲ್ಲಿ ಬೆಳ್ಳಿ ಪದಕ ಪಡೆದ ಕರ್ನಾಟಕದ ಪಲ್ಲವಿ ಪಾಟೀಲ

ಪುರುಷರ ಹೈಜಂಪ್‌ನಲ್ಲಿ ಚಿನ್ನದ ಸಾಧನೆ ಮಾಡಿದ ಮಹಾರಾಷ್ಟ್ರದ ಸರ್ವೇಶ್ ಅನಿಲ್ ಕುಶಾರೆ ಚಿತ್ರಗಳು: ಎಸ್‌.ಕೆ. ದಿನೇಶ್

ಶಾಟ್‌ಪಟ್: ವಿ. ಅಂಬಿಕಾ (ಕರ್ನಾಟಕ; 14.14ಮೀ)–1, ತುಫೈಲ್ ಸುಲ್ತಾನ್ ಖಾನ್ (ಛತ್ತೀಸಗಡ; 12.70 ಮೀ)–2, ಬೃಂದಾ ಗೌಡ (ಕರ್ನಾಟಕ; 12.59 ಮೀ)–3.

ಹೈಜಂಪ್ : ಗೋಪಿಕಾ ಕೆ (ತಮಿಳುನಾಡು; 1.80ಮೀ)–1, ಪಲ್ಲವಿ ಪಾಟೀಲ (ಕರ್ನಾಟಕ; 1.76ಮೀ)–2, ಎಸ್. ಬಿ. ಸುಪ್ರಿಯಾ (ಕರ್ನಾಟಕ; 1.74ಮೀ)–3

ಟ್ರಿಪಲ್ ಜಂಪ್: ಎನ್.ವಿ. ಶೀನಾ (ಕೇರಳ; 13.05ಮೀ)–1, ನಿಮಿಷಾ ಧ್ಯಾಮ (ಜೆಎಸ್ ಡಬ್ಲ್ಯು; 12.88ಮೀ)–2, ಶಾರ್ವರಿ ಅವಿನಾಶ್ ಪಾರು (ಜೆಎಸ್‌ಡಬ್ಲ್ಯು; 12.76ಮೀ)–3.

ಹೈಜಂಪ್: ಸರ್ವೇಶ್ ಪ್ರಥಮ, ತೇಜಸ್ವಿನ್‌ಗೆ ಬೆಳ್ಳಿ

ತೇಜಸ್ವಿನ್

ಅಗ್ರಮಾನ್ಯ ಹೈಜಂಪ್ ಅಥ್ಲೀಟ್ ತೇಜಸ್ವಿನ್ ಶಂಕರ್ ಅವರನ್ನು ಇಲ್ಲಿ ನಡೆದ ಸ್ಪರ್ಧೆಯಲ್ಲಿ ಮಹಾರಾಷ್ಟ್ರದ ಸರ್ವೇಶ್ ಅನಿಲ್ ಕುಶಾರೆ ಹಿಂದಿಕ್ಕಿದರು.

ಶನಿವಾರ ನಡೆದ ಸ್ಪರ್ಧೆಯಲ್ಲಿ ಸರ್ವೇಶ್ ಅವರು 2.21 ಮೀಟರ್ಸ್ ಎತ್ತರ ಜಿಗಿದ ಸಾಧನೆ ಮಾಡಿದರು. ಜೆಎಸ್‌ಡಬ್ಲ್ಯು ತಂಡವನ್ನು ಪ್ರತಿನಿಧಿಸಿದ್ದ ತೇಜಸ್ವಿನ್ (2.19ಮೀ) ಅಲ್ಪ ಅಂತರದಲ್ಲಿ ಹಿಂದುಳಿದರು. ಎರಡನೇ ಸ್ಥಾನ ಪಡೆದರು. ತಮಿಳುನಾಡಿದ ಆದರ್ಶ್ ರಾಮ್ ಕಂಚು ಪಡೆದರು.

ತೇಜಸ್ವಿನ್ ಅವರು ಕಳೆದ ಕೆಲವು ವರ್ಷಗಳಿಂದ ಡಿಕ್ಯಾತಲಾನ್‌ನಲ್ಲಿ ಸ್ಪರ್ಧಿಸುತ್ತಿದ್ದಾರೆ. ಈಚೆಗಷ್ಟೇ ಗುಮಿಯಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಡೆಕಾಥ್ಲಾನ್‌ನಲ್ಲಿ ಬೆಳ್ಳಿ ಪದಕ ಪಡೆದಿದ್ದರು.

ಏಷ್ಯನ್ ಸ್ನೂಕರ್: ಭಾರತಕ್ಕೆ ಚಿನ್ನ

ಕೊಲಂಬೊ (ಪಿಟಿಐ): ಪಂಕಜ್ ಅಡ್ವಾನಿ, ಆದಿತ್ಯ ಮೆಹ್ತಾ ಮತ್ತು ಬ್ರಿಜೇಶ್ ಧಮಾನಿ ಅವರಿದ್ದ ಭಾರತ ತಂಡವು ಎಸಿಬಿಎಸ್ ಏಷ್ಯನ್ ಸ್ನೂಕರ್ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿತು.

ಇಲ್ಲಿನ ಮೂರ್ಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಭಾರತ ತಂಡವು 3–1ರಿಂದ ಮಲೇಷ್ಯಾ ತಂಡವನ್ನು ಮಣಿಸಿತು. ಇದೇ ತಂಡವು ಎರಡು ವರ್ಷಗಳ ಹಿಂದೆ ಇರಾನ್‌ನಲ್ಲಿ ಚಿನ್ನದ ಪದಕವನ್ನು ಜಯಿಸಿತ್ತು.

ಆರಂಭದಲ್ಲಿ ನಡೆದ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಬ್ರಿಜೇಶ್ ಧಮಾನಿ 58(52)–68ರಿಂದ ಥೋರ್ ಶುವಾನ್ ಲಿಯಾಂಗ್ ಎದುರು ಸೋಲುಕಂಡರು.

ಪಂಕಜ್ ಅಡ್ವಾನಿ 66 (51)–25ರಿಂದ ಲಿಮ್ ಕಾಕ್ ಲಿಯಾಂಗ್ ಎದುರು ಜಯ ಸಾಧಿಸಿದರು.

ಡಬಲ್ಸ್‌ನಲ್ಲಿ ಪಂಕಜ್ ಮತ್ತು ಧಮಾನಿ ಜೋಡಿ 76 (60)–33ರಿಂದ ಥೋರ್ ಶುವಾನ್, ಲಿಮ್ ಕಾಕ್ ಜೋಡಿಯನ್ನು ಸೋಲಿಸಿದರು. ಅಂತಿಮವಾಗಿ ಪಂಕಜ್ 58-1ರಿಂದ ಥೋರ್ ಶುವಾನ್ ಅವರನ್ನು ಮಣಿಸಿದರು.

ಆದಿತ್ಯಾ ಮೆಹ್ತಾ ಅವರು ಕುತ್ತಿಗೆ ನೋವಿನಿಂದಾಗಿ ಹಾಂಗ್‌ಕಾಂಗ್ ಎದುರಿನ ಸೆಮಿಫೈನಲ್ ಪಂದ್ಯದಲ್ಲಿ ಆಡಿರಲಿಲ್ಲ.

ಟ್ರೋಫಿಯೊಂದಿಗೆ (ಎಡದಿಂದ) ಬ್ರಿಜೇಶ್ ಧಮಾನಿ, ಅಶೋಕ್ ಶಾಂಡಿಲ್ಯ, ಪಂಕಜ್ ಅಡ್ವಾನಿ ಹಾಗೂ ಆದಿತ್ಯ ಮೆಹ್ತಾ



ಚೀನಾ ಎದುರು ಸೋಲು: ಮಹಿಳಾ ತಂಡಕ್ಕೆ ಹಿಂಬಡ್ತಿ

ಬರ್ಲಿನ್ (ಪಿಟಿಐ): ಭಾರತ ಮಹಿಳಾ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಶನಿವಾರ ಚೀನಾ ತಂಡಕ್ಕೆ 0–3 ಗೋಲುಗಳಿಂದ ಸೋತಿತು. ಇದು ಭಾರತ ತಂಡಕ್ಕೆ ಯುರೋಪಿಯನ್ ಲೆಗ್‌ನಲ್ಲಿ ಸತತ ಏಳನೇ ಸೋಲು.

ಭಾರತ 15 ಪಂದ್ಯಗಳಿಂದ 10 ಸೋತಿದ್ದು 10 ಪಾಯಿಂಟ್‌ಗಳೊಡನೆ ಲೀಗ್ ಪಟ್ಟಿಯಲ್ಲಿ ಕೊನೆಯ (9ನೇ) ಸ್ಥಾನಕ್ಕಿಳಿದು ಹಿಂಬಡ್ತಿ ಖಾತರಿಪಡಿಸಿಕೊಂಡಿತು. ಚೀನಾ (25 ಪಾಯಿಂಟ್ಸ್) ನಾಲ್ಕನೇ ಸ್ಥಾನದಲ್ಲಿದೆ.

ಪ್ರೊ ಲೀಗ್‌ನಿಂದ ಹೊರಬಿದ್ದಿರುವ ಭಾರತ, ಎಫ್‌ಐಎಚ್‌ನ ಎರಡನೇ ಸ್ತರವಾದ ಎಫ್‌ಐಎಚ್ ನೇಷನ್ಸ್ ಕಪ್‌ನಲ್ಲಿ ಆಡಬೇಕಾಗಿದೆ.

ಇಂಗ್ಲೆಂಡ್ ಶನಿವಾರ ಇನ್ನೊಂದು ಪಂದ್ಯಲ್ಲಿ ಜರ್ಮನಿ ಮೇಲೆ 1–0 ಯಿಂದ ಗೆದ್ದು ಎಂಟನೇ ಸ್ಥಾನ ಖಚಿತಪಡಿಸಿಕೊಂಡಿತು.

ಚೆನ್ ಯಾಂಗ್ (21ನೇ ನಿಮಿಷ) ಮತ್ತು ಝೂಂಗ್ ಯಿಂಗ್ (26ನೇ ನಿಮಿಷ) ಅವರು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಾಗಿ ಪರಿವರ್ತಿಸಿದರು. ಅನ್ಹುಲ್ ಯು (45ನೇ ನಿಮಿಷ) ಫೀಲ್ಡ್ ಗೋಲು ಗಳಿಸಿ ಗೆಲುವಿನ ಅಂತರ ಹೆಚ್ಚಿಸಿದರು. ಭಾರತ ಭಾನುವಾರ ನಡೆಯುವ ರಿವರ್ಸ್ ಲೆಗ್‌ನಲ್ಲಿ ಚೀನಾ ವಿರುದ್ಧ ಮತ್ತೆ ಆಡಲಿದೆ.

ಸ್ಮೃತಿ ಮಂಧಾನ ಚೊಚ್ಚಲ ಶತಕ • ಪದಾರ್ಪಣೆಯಲ್ಲಿ ಮಿಂಚಿದ ಶ್ರೀಚರಣಿ

ಭಾರತ ಶುಭಾರಂಭ: ಇಂಗ್ಲೆಂಡ್‌ಗೆ ನಿರಾಶೆ

ನಾಟಿಂಗ್‌ಹ್ಯಾಮ್ (ಪಿಟಿಐ): ಚುಟುಕು ಮಾದರಿಯ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಶತಕ ಹೊಡೆದ ಸ್ಮೃತಿ ಮಂದಾನ ಹಾಗೂ ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ಸ್ಪಿನ್ನರ್ ಶ್ರೀಚರಣಿ ಅವರ ಆಟದ ಬಲದಿಂದ ಭಾರತ ಶುಭಾರಂಭ ಮಾಡಿತು.

ಶನಿವಾರ ಇಲ್ಲಿ ನಡೆದ ಇಂಗ್ಲೆಂಡ್ ಎದುರಿನ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡ 97 ರನ್‌ಗಳಿಂದ ಇಂಗ್ಲೆಂಡ್ ಎದುರು ಜಯಿಸಿತು. ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಹಂಗಾಮಿ ನಾಯಕಿಯೂ ಆಗಿರುವ ಮಂದಾನ (112; 62ಎಸೆತ) ಅವರ ಶತಕದ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 5ಕ್ಕೆ210 ರನ್ ಗಳಿಸಿತು. ಇದಕ್ಕುತ್ತರವಾಗಿ ಇಂಗ್ಲೆಂಡ್ ತಂಡಕ್ಕೆ 14.5 ಓವರ್‌ಗಳಲ್ಲಿ 113 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಎಡಗೈ ಸ್ಪಿನ್ನರ್ ಶ್ರೀಚರಣಿ ನಾಲ್ಕು ವಿಕೆಟ್ ಗಳಿಸಿ ಆತಿಥೇಯ ತಂಡವನ್ನು ನಿಯಂತ್ರಿಸಿದರು. ಇಂಗ್ಲೆಂಡ್ ತಂಡದ ನ್ಯಾಟ್ ಶಿವರ್ ಬ್ರಂಟ್ (66; 42ಎ, 4X10) ಅವರು ಅರ್ಧಶತಕ ಗಳಿಸಿದರು.

ಟಾಸ್ ಗೆದ್ದ ಇಂಗ್ಲೆಂಡ್ ಮಹಿಳಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಮೃತಿ ಮತ್ತು ಶಫಾಲಿ ವರ್ಮಾ (20;22ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 77 ರನ್ ಕಲೆಹಾಕಿದರು. ಲಯ ಕಂಡುಕೊಳ್ಳುವ ಪ್ರಯತ್ನದಲ್ಲಿರುವ ಶಫಾಲಿ ಮತ್ತೊಮ್ಮೆ ದೊಡ್ಡ ಮೊತ್ತ ಕಲೆಹಾಕುವಲ್ಲಿ ವಿಫಲರಾದರು.

ಆದರೆ ಸ್ಮೃತಿ ಮಾತ್ರ ಅಮೋಘ ಬ್ಯಾಟಿಂಗ್ ಮಾಡಿದರು. ಮಹಿಳಾ ಟಿ20 ಮಾದರಿಯಲ್ಲಿ ದೊಡ್ಡ ವೈಯಕ್ತಿಕ ಸ್ಕೋರ್ ದಾಖಲಿಸಿದರು. ಈ ಹಾದಿಯಲ್ಲಿ ಅವರು ಹರ್ಮನ್‌ಪ್ರೀತ್ ಕೌರ್ (103 ರನ್) ಅವರನ್ನು ಹಿಂದಿಕ್ಕಿದರು. ಮಂದಾನ ಅವರಿಗೆ ಇದು ವೈಯಕ್ತಿಕ ಶ್ರೇಷ್ಠ ಸ್ಕೋರ್ ಕೂಡ ಹೌದು. ಈ ಹಿಂದೆ ಅವರ ವೈಯಕ್ತಿಕ ಸ್ಕೋರ್ 87 ರನ್‌ಗಳಾಗಿದ್ದವು.

ಶಫಾಲಿ ಔಟಾದ ನಂತರ ಮಂದಾನ ಅವರಿಗೆ ಹರ್ಲೀನ್ ಡಿಯೊಲ್ (43; 23ಎಸೆತ) ಉತ್ತಮ ಜೊತೆ ನೀಡಿದರು. ಹರ್ಲೀನ್ ಅವರು 26 ರನ್ ಗಳಿಸಿದ್ದ ಸಂದರ್ಭದಲ್ಲಿ ಡ್ಯಾನಿ ವೈಟ್ ಹಾಜ್ ಅವರಿಂದ ಒಂದು 'ಜೀವದಾನ' ಪಡೆದರು. ಇದರಿಂದಾಗಿ ಹರ್ಲೀನ್ ಮತ್ತು ಸ್ಮೃತಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 94 ರನ್ ಸೇರಿಸಿದರು.

ಆದರೆ ಮಂದಾನ ಮಾತ್ರ ಬೀಡುಬೀಸಾಗಿ ಬ್ಯಾಟಿಂಗ್ ಮಾಡಿದರು. ಎದುರಾಳಿ ಫೀಲ್ಡರ್‌ಗಳಿಗೆ ಯಾವುದೇ ಅವಕಾಶವನ್ನೂ ಕೊಡಲಿಲ್ಲ. ಎಡಗೈ ಸ್ಪಿನ್ನರ್ ಲಿನ್ಸೆ ಸ್ಮಿತ್ ಅವರು ಹಾಕಿದ ನಾಲ್ಕನೇ ಓವರ್‌ನಲ್ಲಿ ಮೂರು ಬೌಂಡರಿ ಬಾರಿಸಿದ ಸ್ಮಿತ್ ತಮ್ಮ ರನ್ ಗಳಿಕೆಯ ವೇಗವನ್ನು ಹೆಚ್ಚಿಸುತ್ತಲೇ ಸಾಗಿದರು.

ಆತಿಥೇಯ ತಂಡದ ಮತ್ತೊಬ್ಬ ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಅವರು ಬೌಲಿಂಗ್ ಮಾಡಿದ ಏಳನೇ ಓವರ್‌ನಲ್ಲಿ ಎರಡು ಸಿಕ್ಸರ್ ಬಾರಿಸಿದರು. ಸ್ಮೃತಿ ಅವರು ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ನ್ಯಾಟ್ ಶಿವರ್ ಬ್ರಂಟ್ ಅವರಿಗೆ ಕ್ಯಾಚಿತ್ತರು.

ಅದಕ್ಕೂ ಮುನ್ನ ರಿಚಾ ಘೋಷ್ (12 ರನ್) ಔಟಾದರು. ಜಿಮಿಮಾ ರಾಡ್ರಿಗಸ್ ಖಾತೆಯನ್ನೂ ತೆರೆಯದೇ ನಿರ್ಗಮಿಸಿದರು. ಇವರಿಬ್ಬರ ವಿಕೆಟ್‌ಗಳನ್ನು ಲಾರೆನ್ ಬೆಲ್ ಅವರು ತಮ್ಮ ಒಂದೇ ಓವರ್‌ನಲ್ಲಿ ಕಬಳಿಸಿದರು. ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್ ಗಳಲ್ಲಿ 5ಕ್ಕೆ210 (ಶಫಾಲಿ ವರ್ಮಾ 20, ಸ್ಮೃತಿ ಮಂದಾನ 112, ಹರ್ಲೀನ್ ಡಿಯೊಲ್ 43, ಲಾರೆನ್ ಬೆಲ್ 27ಕ್ಕೆ3) ಇಂಗ್ಲೆಂಡ್: 14.5 ಓವರ್‌ಗಳಲ್ಲಿ 113 (ನ್ಯಾಟ್ ಶಿವರ್ ಬ್ರಂಟ್ 66, ಶ್ರೀಚರಣಿ 12ಕ್ಕೆ4, ದೀಪ್ತಿ ಶರ್ಮಾ 32ಕ್ಕೆ2, ರಾಧಾ ಯಾದವ್ 15ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 97 ರನ್‌ಗಳ ಜಯ.

ಪಂದ್ಯದ ಆಟಗಾರ್ತಿ: ಸ್ಮೃತಿ ಮಂದಾನ

ಭಾರತದ ಸ್ಮೃತಿ ಮಂದಾನ ಶತಕ ಸಂಭ್ರಮ ಎಪಿ/ಪಿಟಿಐ ಚಿತ್ರ

ಲಂಕಾಗೆ ಇನಿಂಗ್ಸ್ ಜಯ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾ ತಂಡ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಶನಿವಾರ ಭೋಜನ ವಿರಾಮದ ಒಳಗೆ ಬಾಂಗ್ಲಾದೇಶ ತಂಡವನ್ನು ಇನಿಂಗ್ಸ್ ಮತ್ತು 78 ರನ್‌ಗಳಿಂದ ಸೋಲಿಸಿ ಎರಡು ಪಂದ್ಯಗಳ ಸರಣಿಯನ್ನು 1–0 ಯಿಂದ ಜಯಿಸಿತು.

ಮೊದಲ ಇನಿಂಗ್ಸ್‌ನಲ್ಲಿ ವಿಕೆಟ್ ಪಡೆಯಲು ವಿಫಲರಾಗಿದ್ದ ಎಡಗೈ ಸ್ಪಿನ್ನರ್ ಪ್ರಭಾತ್ ಜಯಸೂರ್ಯ ಎರಡನೇ ಇನಿಂಗ್ಸ್‌ನಲ್ಲಿ 18 ಓವರು ಗಳಲ್ಲಿ 56 ರನ್ನಿಗೆ 5 ವಿಕೆಟ್ ಪಡೆದು ಆತಿಥೇಯ ತಂಡದ ಗೆಲುವಿನಲ್ಲಿ ಮಿಂಚಿದರು. ಇನಿಂಗ್ಸ್ ಸೋಲು ತಪ್ಪಿಸಲು 211 ರನ್ ಗುರಿ ಹೊಂದಿದ್ದ ಬಾಂಗ್ಲಾ 133 ರನ್‌ಗಳಿಗೆ ಆಟ ಮುಗಿಸಿತು.

ಈ ಪಂದ್ಯದಲ್ಲಿ 158 ರನ್ ಹೊಡೆದ ಮತ್ತು ಸರಣಿಯಲ್ಲಿ 369 ರನ್ ಕಲೆಹಾಕಿದ ಪಥುಮ್ ನಿಸಾಂಕ ಅವರು ಪಂದ್ಯದ ಪುರುಷೋತ್ತಮ ಮತ್ತು ಸರಣಿಯ ಸರ್ವೋತ್ತಮ ಗೌರವಕ್ಕೆ ಪಾತ್ರರಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 247, ಶ್ರೀಲಂಕಾ: 458; ಎರಡನೇ ಇನಿಂಗ್ಸ್: ಬಾಂಗ್ಲಾದೇಶ: 44.2 ಓವರುಗಳಲ್ಲಿ 133 (ಮುಷ್ಫಿಕುರ್ ರಹೀಂ 26; ಪ್ರಭಾತ್ ಜಯಸೂರ್ಯ 56ಕ್ಕೆ5, ಧನಂಜಯ ಡಿ ಸಿಲ್ವ 13ಕ್ಕೆ2).

ವೈಫಲ್ಯದ ಹೊಣೆ ಹೊರುವೆ: ಪ್ರಸಿದ್ಧ

ಪ್ರಸಿದ್ಧ ಕೃಷ್ಣ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಮೊದಲ ಟೆಸ್ಟ್‌ನಲ್ಲಿ ತಮ್ಮ ವೈಫಲವ್ಯನ್ನು ಒಪ್ಪಿಕೊಂಡಿರುವ ಭಾರತ ತಂಡದ ವೇಗದ ಬೌಲರ್ ಪ್ರಸಿದ್ಧ ಕೃಷ್ಣ ಅವರು ತಾವು ಸರಿಯಾದ ಲೆಂಗ್ತ್ ಕಂಡುಕೊಳ್ಳುವಲ್ಲಿ ಎಡವಿರುವುದಾಗಿ ಹೇಳಿದ್ದಾರೆ. ಆದರೆ ಬೌಲಿಂಗ್ ಉದ್ದಕ್ಕೂ ಮಿತವ್ಯಯಿ ಆಗಿರಲು ಪ್ರಯತ್ನಿಸಿದ್ದೆ ಎಂದೂ ಹೇಳಿದ್ದಾರೆ.

ಲೀಡ್ಸ್ ಟೆಸ್ಟ್‌ನಲ್ಲಿ 200ಕ್ಕೂ ಹೆಚ್ಚು ರನ್ ತೆತ್ತಿರುವ ಪ್ರಸಿದ್ಧ ಅವರನ್ನು ಕೆಲವು ಮಾಜಿ ಆಟಗಾರರು ಕಟುವಾಗಿ ಟೀಕಿಸಿದ್ದರು. ಭಾರತ ಮೊದಲ ಟೆಸ್ಟ್ ಪಂದ್ಯವನ್ನು 5 ವಿಕೆಟ್‌ಗಳಿಂದ ಸೋತಿತ್ತು.

'ಮೊದಲ ಇನಿಂಗ್ಸ್‌ನಲ್ಲಿ ನಾನು ಅಂದುಕೊಂಡಿದ್ದ ಕ್ಕಿಂತಲೂ ಹೆಚ್ಚು ಶಾರ್ಟ್ ಎಸೆತಗಳನ್ನು ಪ್ರಯೋಗಿಸಿದೆ. ಎರಡನೇ ಇನಿಂಗ್ಸ್‌ನಲ್ಲಿ ಸ್ವಲ್ಪ ಸುಧಾರಿಸಿದ್ದೆ. ಪಿಚ್ ಸ್ವಲ್ಪ ನಿಧಾನಗತಿಯಲ್ಲಿತ್ತು. ನಾನು ಬಯಸಿದ ಲೆಂಗ್ತ್‌ನಲ್ಲಿ ಬೌಲಿಂಗ್ ಮಾಡಲಾಗಲಿಲ್ಲ. ಆದರೆ ನೆಪ ಹೇಳುವುದಿಲ್ಲ. ವೃತ್ತಿಪರನಾಗಿ ನಾನು ಉತ್ತಮವಾಗಿ ಬೌಲಿಂಗ್ ಮಾಡಬೇಕಿತ್ತು. ವೈಫಲ್ಯವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವೆ. ಮುಂದಿನ ಸಲ ಉತ್ತಮವಾಗಿ ಬೌಲಿಂಗ್ ಮಾಡುವೆ' ಎಂದು ಅವರು ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

ಮೊದಲ ಇನಿಂಗ್ಸ್‌ನಲ್ಲಿ ಪ್ರಸಿದ್ಧ ಅವರು 20 ಓವರುಗಳಲ್ಲಿ 6.40ರ ಇಕಾನಮಿಯಲ್ಲಿ 128 ರನ್ ಕೊಟ್ಟಿದ್ದರು. ಕನಿಷ್ಠ 20 ಓವರುಗಳ ಬೌಲಿಂಗ್‌ನಲ್ಲಿ ಇದು ಭಾರತದ ಬೌಲರ್ ಒಬ್ಬರ ಅತಿ ಕಳಪೆ ನಿರ್ವಹಣೆಗಳಲ್ಲಿ ಒಂದಾಗಿದೆ. ಅವರು ಓಲಿ ಪೋಪ್, ಹ್ಯಾರಿ ಬ್ರೂಕ್ ಮತ್ತು ಜೇಮಿ ಸ್ಮಿತ್ ವಿಕೆಟ್‌ಗಳನ್ನು ಪಡೆದಿದ್ದರು.

ಅದರಲ್ಲೂ ಎರಡನೇ ಇನಿಂಗ್ಸ್‌ನಲ್ಲಿ ಎರಡು ಓವರುಗಳ ಅಂತರದಲ್ಲಿ ಜಾಕ್ ಕ್ರಾಲಿ ಮತ್ತು ಪೋಪ್ ವಿಕೆಟ್‌ಗಳನ್ನು ಪಡೆದು ಇಂಗ್ಲೆಂಡ್‌ಗೆ ತಿರುಗೇಟು ನೀಡುವ ಆಸೆ ಚಿಗುರಿಸಿದ್ದರು. ಆದರೆ 15 ಓವರುಗಳಲ್ಲಿ 92 ರನ್ ಕೊಟ್ಟು ದುಬಾರಿಯಾದರು.

'ಪ್ರತಿ ಬಾರಿ ಬೌಲಿಂಗ್‌ಗೆ ಇಳಿಯು ವಾಗ ಮೇಡನ್ ಮಾಡಬೇಕೆಂದು ಮನಸ್ಸಿನಲ್ಲಿರು-ತ್ತಿತ್ತು. ಆದರೆ ಔಟ್‌ಫೀಲ್ಡ್ ವೇಗವಾಗಿತ್ತು. ನನ್ನ ಬೌಲಿಂಗ್ ಪರಿಪೂರ್ಣವಾಗಿರಲಿಲ್ಲ. ಕೆಲವು ಎಜ್‌ಗಳು ಬೌಂಡರಿಯಾದವು. ನಂತರ ಬ್ಯಾಟರ್‌ಗಳು ನನ್ನನ್ನು ಗುರಿಯಾಗಿಸಿದರು' ಎಂದು ಒಪ್ಪಿಕೊಂಡರು.

ಕೆಳಕ್ರಮಾಂಕದ ಬ್ಯಾಟರ್‌ಗಳ ತಾಲೀಮು: 'ಕೆಳಕ್ರಮಾಂಕದ ಬ್ಯಾಟರ್‌ಗಳಾಗಿ ನಾವು ಹೆಚ್ಚು ಅಭ್ಯಾಸ ನಡೆಸುತ್ತಿದ್ದೇವೆ. ನಮ್ಮ ನೆಟ್ ಸೆಷನ್‌ನಲ್ಲಿ ಇದನ್ನು ಗಮನಿಸಬಹುದು' ಎಂದರು.

ಜೋಶ್ ಹ್ಯಾಜಲ್‌ವುಡ್ ದಾಳಿಗೆ ಕುಸಿದ ವೆಸ್ಟ್ ಇಂಡೀಸ್

ಆಸ್ಟ್ರೇಲಿಯಾಕ್ಕೆ ಸುಲಭ ಗೆಲುವು

ಬ್ರಿಜ್‌ಟೌನ್ (ಬಾರ್ಬಾಡೋಸ್), (ಎಪಿ): ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ (43ಕ್ಕೆ5) ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಆಸ್ಟ್ರೇಲಿಯಾ ತಂಡ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ವೆಸ್ಟ್ ಇಂಡೀಸ್ ತಂಡವನ್ನು ಮೂರೇ ದಿನಗಳ ಒಳಗೆ 159 ರನ್‌ಗಳಿಂದ ಸೋಲಿಸಿತು.

ಪಂದ್ಯದ ಮೂರನೇ ದಿನವಾದ ಶುಕ್ರವಾರ ಗೆಲ್ಲಲು 301 ರನ್‌ಗಳ ಸವಾಲು ಎದುರಿಸಿದ್ದ ವೆಸ್ಟ್ ಇಂಡೀಸ್ 33.4 ಓವರುಗಳಲ್ಲಿ 141 ರನ್‌ಗಳಿಗೆ ಕುಸಿಯಿತು.

ಒಂದು ಹಂತದಲ್ಲಿ 88 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿದ್ದ ರೋಸ್ಟನ್ ಚೇಸ್ ಬಳಗ ಕೊನೆಯಲ್ಲಿ ಪ್ರತಿರೋಧ ತೋರಿತು. ಜಸ್ಟಿನ್ ಗ್ರೀವ್ಸ್ (ಔಟಾಗದೇ 38, 53ಎ) ಮತ್ತು ಶಮರ್ ಜೋಸೆಫ್ (44, 22ಎ, 4x4, 6x4) ಒಂಬತ್ತನೇ ವಿಕೆಟ್‌ಗೆ 55 ರನ್ ಸೇರಿಸಿದ್ದರಿಂದ ಪಂದ್ಯ ಹೆಚ್ಚುವರಿ ಅವಧಿಗೆ ಬೆಳೆಯಿತು.

ಎರಡೂ ಇನಿಂಗ್ಸ್‌ಗಳಲ್ಲಿ ಅರ್ಧ ಶತಕ (59 ಮತ್ತು 61) ಬಾರಿಸಿದ ಮಧ್ಯಮ ಕ್ರಮಾಂಕದ ಬ್ಯಾಟರ್ ಟ್ರಾವಿಸ್ ಹೆಡ್ ಪಂದ್ಯದ ಆಟಗಾರ ಗೌರವಕ್ಕೆ ಪಾತ್ರರಾದರು.

ಮೂರು ಟೆಸ್ಟ್‌ಗಳ ಸರಣಿಯ ಎರಡನೇ ಪಂದ್ಯ ಗ್ರೆನಡಾದ ಸೇಂಟ್ ಜಾರ್ಜಸ್‌ನಲ್ಲಿ ಜುಲೈ 3ರಂದು ಆರಂಭವಾಗಲಿದೆ.

ಸ್ಕೋರುಗಳು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 180; ವೆಸ್ಟ್ ಇಂಡೀಸ್: 190; ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 81.5 ಓವರುಗಳಲ್ಲಿ 310 (ಟ್ರಾವಿಸ್ ಹೆಡ್ 61, ಬ್ಯೂ ವೆಬ್‌ಸ್ಟರ್ 63, ಅಲೆಕ್ಸ್ ಕ್ಯಾರಿ 65; ಶಮರ್ ಜೋಸೆಫ್ 87ಕ್ಕೆ5); ವೆಸ್ಟ್ ಇಂಡೀಸ್: 33.4 ಓವರುಗಳಲ್ಲಿ 141 (ಜಸ್ಟಿನ್ ಗ್ರೀವ್ಸ್ ಔಟಾಗದೇ 38, ಶಮರ್ ಜೋಸೆಫ್ 44; ಜೋಶ್ ಹ್ಯಾಜಲ್‌ವುಡ್ 43ಕ್ಕೆ5, ನಥಾನ್ ಲಯನ್ 20ಕ್ಕೆ2).

ವೆಸ್ಟ್ ಇಂಡೀಸ್ ವಿರುದ್ಧ ಎರಡನೇ ಇನಿಂಗ್ಸ್‌ನಲ್ಲಿ ಐದು ವಿಕೆಟ್‌ಗಳನ್ನು ಪಡೆದ ಜೋಶ್ ಹ್ಯಾಜಲ್‌ವುಡ್ ಸಂಭ್ರಮ ಎಪಿ/ ಪಿಟಿಐ ಚಿತ್ರ

ಹಾಕಿ ಜೂನಿಯರ್ ವಿಶ್ವಕಪ್: 'ಬಿ' ಗುಂಪಿನಲ್ಲಿ ಭಾರತ

ಲುಸಾನ್ (ಸ್ವಿಜರ್ಲೆಂಡ್) (ಪಿಟಿಐ): ಭಾರತ ತಂಡವು, ಎಫ್‌ಐಎಚ್ ಹಾಕಿ ಪುರುಷರ ಜೂನಿಯರ್ ವಿಶ್ವಕಪ್‌ನಲ್ಲಿ ಬದ್ಧ ಎದುರಾಳಿ ಪಾಕಿಸ್ತಾನ, ಚಿಲಿ ಮತ್ತು ಸ್ವಿಜರ್ಲೆಂಡ್ ಜೊತೆ 'ಬಿ' ಗುಂಪಿನಲ್ಲಿ ಸ್ಥಾನ ಪಡೆದಿದೆ. ಈ ಚಾಂಪಿಯನ್‌ಷಿಪ್ ಚೆನ್ನೈ ಮತ್ತು ಮಧುರೈನಲ್ಲಿ ನ. 28 ರಿಂದ ಡಿ. 10ರವರೆಗೆ ನಡೆಯಲಿದೆ.

'ಡ್ರಾ' ಸಮಾರಂಭವು ಇಲ್ಲಿನ ವಿಶ್ವ ಹಾಕಿ ಫೆಡರೇಷನ್ ಪ್ರಧಾನ ಕಚೇರಿಯಲ್ಲಿ ಶನಿವಾರ ನಡೆಯಿತು. ಮೊದಲ ಬಾರಿ ಈ ಕೂಟದಲ್ಲಿ 24 ತಂಡಗಳು ಭಾಗ ವಹಿಸುತ್ತಿವೆ. ಆರು ಗುಂಪುಗಳಲ್ಲಿ ಈ ತಂಡಗಳನ್ನು ತಲಾ ನಾಲ್ಕರಂತೆ ವಿಂಗಡಿಸಲಾಗಿದೆ.

ಜರ್ಮನಿ 2023ರಲ್ಲಿ ನಡೆದ ಜೂನಿಯರ್ ವಿಶ್ವಕಪ್ ಫೈನಲ್‌ನಲ್ಲಿ ಫ್ರಾನ್ಸ್ ತಂಡವನ್ನು ಸೋಲಿಸಿ 7ನೇ ಬಾರಿ ಚಾಂಪಿಯನ್ ಆಗಿತ್ತು.